ಹುಬ್ಬಳ್ಳಿ
ಬುಧವಾರ, 18 ಮಾರ್ಚ್ 2026
ಸಂಪುಟ 15, ಸಂಚಿಕೆ 359, ಪುಟಗಳು 12
■ಹುಬ್ಬಳ್ಳಿ ■ಬೆಂಗಳೂರು ■ಮಂಗಳೂರು ■ಶಿವಮೊಗ್ಗ ₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

# ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಐಸಿಸ್ ನಂಟು: ಬಿಡಿಎಸ್ ವಿದ್ಯಾರ್ಥಿ ಸೆರೆ | 02
ಸಂಸತ್ತಲ್ಲಿ ಪೋಸ್ಟರ್ ಪ್ರದರ್ಶಿಸುವಂತಿಲ್ಲ | 02
ಮಕ್ಕಳಿಗೆ ಉತ್ತಮ ಶಿಕ್ಷಣ ಅತ್ಯವಶ್ಯ | 02

### ಶುಭ ದಿನ

ಕಲಿಯುಗಾಬ್ಧ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಕೃಷ್ಣ ಪಕ್ಷ, ತಿಥಿ: ಚತುರ್ದಶಿ, ನಕ್ಷತ್ರ: ಪೂರ್ವಭಾದ್ರ

### ದಿನದ ಮಾತು

ಜ್ಞಾನವು ಮನಸ್ಸು ಮತ್ತು ಹೃದಯವನ್ನು ಪರಿಶುದ್ಧಗೊಳಿಸುವುದು.
▲ ರಾಮಕೃಷ್ಣ ಪರಮಹಂಸ

### ಗೆದ್ದೋನು ಸೋತ, ಸೋತವನು ಸತ್ತು ಗೆದ್ದ

ಖಾರಾ ಬಾತ್
• ವಿನಾಯಕ ಭಟ್ಟ ಮೂರೂರು
• ಪುಟ ೬

### ಕಿರುಸುದ್ದಿ

## ಲೋಕಾ ಬಲೆಗೆ ಬಿದ್ದ ಪಿಡಿಒ ಮಂಜುಳಾ ಆತ್ಮಹತ್ಯೆ ಯತ್ನ

• **ಮೈಸೂರು:** ನೀರುಗಂಟಿಗೆ ಬಾಕಿ ಸಂಬಳ ನೀಡಲು 25 ಸಾವಿರ ರೂ. ಲಂಚ ಪಡೆಯುತ್ತಿದ್ದ ಹುಣಸೂರು ತಾಲೂಕಿನ ಮುಳ್ಳೂರು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ(ಪಿಡಿಒ) ಮಂಜುಳಾ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ. ದಾಳಿ ವೇಳೆ ಹರಿತವಾದ ಆಯುಧದಿಂದ ಕೈ ಕೊಯ್ದುಕೊಂಡು ಆತ್ಮಹತ್ಯೆಗೆ ಯತ್ನಿಸಿದ ಘಟನೆಯೂ ನಡೆದಿದೆ.
• ಪುಟ ೪

## ಇಂದಿನಿಂದ ರಾಜ್ಯಾದ್ಯಂತ ಎಸ್‌ಎಸ್‌ಎಲ್‌ಸಿ ಪರೀಕ್ಷೆ

• **ಬೆಂಗಳೂರು:** ಇಂದಿನಿಂದ (ಮಾ.18) ರಾಜ್ಯಾದ್ಯಂತ ಎಸ್‌ಎಸ್‌ಎಲ್‌ಸಿ ಪರೀಕ್ಷೆಯು ಆರಂಭವಾಗಲಿದ್ದು, ಶಿಕ್ಷಣ ಇಲಾಖೆಯು ಸಿಸಿ ಕ್ಯಾಮೆರಾ ಕಣ್ಗಾವಲಿನಲ್ಲಿ ಕಟ್ಟುನಿಟ್ಟಿನ ಭದ್ರತೆಯೊಂದಿಗೆ ಪರೀಕ್ಷಾ ಕೇಂದ್ರಗಳು ಸಿದ್ಧಗೊಂಡಿವೆ. ಮೊದಲ ದಿನ ಪ್ರಥಮ ಭಾಷೆ ವಿಷಯದ ಪರೀಕ್ಷೆ ನಡೆಯಲಿದೆ. ಪರೀಕ್ಷೆಗೆ ಒಟ್ಟು 9,02,899 ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದಾರೆ.
• ಪುಟ ೪

## ಗುಜರಾತ್ ಸಿಎಂಗೆ ಏನಾಸಂ ವರದಿ ಸಲ್ಲಿಸಿದ ಸಮಿತಿ
• ಪುಟ ೭

## ಎನ್‌ಎಚ್‌ಆರ್‌ಸಿ ನೋಟಿಸ್ ಕೆಡಿ ಅಶ್ಲೀಲ ಹಾಡು ಸ್ಥಗಿತ
• ಪುಟ ೭

## ಅಕ್ರಮ ಮದ್ಯ ತಡೆಗೆ ಹೊಸ ಕಾಯ್ದೆ?
• ಪುಟ ೫

## ರಾಜ್ಯಸಭೆಯಲ್ಲಿ ಬಹುಮತದತ್ತ ಎನ್‌ಡಿಎ
• ಪುಟ ೭

## ಕನ್ನಡಿಗರಿಗೆ ಕೇಂದ್ರ ದ್ರೋಹ: ಸಿದ್ದರಾಮಯ್ಯ
• ಪುಟ ೪

## ಸವಾಲು ಎದುರಿಸಿ ಬೆಳೆದ ಆರ್‌ಎಸ್‌ಎಸ್
• ಪುಟ ೪

ಅಫ್ಘಾನ್ ಸೇನಾ ನೆಲೆಗಳ ಮೇಲೆ ಪಾಕ್ ವೈಮಾನಿಕ ದಾಳಿ

# ಅಮಾನುಷ ದಾಳಿ




• **ಇಸ್ಲಾಮಾಬಾದ್:** ಅಫ್ಘಾನಿಸ್ತಾನದ ಮಿಲಿಟರಿ ನೆಲೆಗಳು ಮತ್ತು ಭಯೋತ್ಪಾದಕ ಮೂಲಸೌಕರ್ಯಗಳ ಮೇಲೆ ಪಾಕಿಸ್ತಾನ ವೈಮಾನಿಕ ದಾಳಿ ನಡೆಸಿದೆ. ಈ ವೇಳೆ ಕಾಬೂಲ್‌ನಲ್ಲಿರುವ ಆಸ್ಪತ್ರೆ ಗುರಿಯಾಗಿಸಿ ಪಾಕ್ ನಡೆಸಿದ ದಾಳಿಯಲ್ಲಿ ಕನಿಷ್ಠ 400 ಮಂದಿ ಮೃತಪಟ್ಟಿದ್ದಾರೆ. 250ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಸುಮಾರು 2,000 ಹಾಸಿಗೆಗಳ ಸಾಮರ್ಥ್ಯವಿರುವ ದೊಡ್ಡ ಆಸ್ಪತ್ರೆಗೆ ಮಂಗಳವಾರ ರಾತ್ರಿ ಸುಮಾರು 9 ಗಂಟೆ ವೇಳೆಗೆ ದಾಳಿ ನಡೆದಿದ್ದು, ಅಫ್ಘಾನಿಸ್ತಾನದ ಇತಿಹಾಸದಲ್ಲೇ ಇದು ಅತ್ಯಂತ ಭೀಕರ ಘಟನೆಗಳಲ್ಲಿ ಒಂದಾಗಿ ದಾಖಲಾಗಿದೆ.

**ಆಪರೇಷನ್ ಗಜಬ್ ಲಿಲ್ ಹಕ್:** ಫೆ.26ರಂದು ಪ್ರಾರಂಭವಾದ ಆಪರೇಷನ್ ಗಜಬ್ ಲಿಲ್ ಹಕ್‌ನ ಭಾಗವಾಗಿ ಕಾಬೂಲ್ ಮತ್ತು ನಂಗರ್‌ಹಾರ್‌ನಲ್ಲಿ ಈ ದಾಳಿ ನಡೆಸಲಾಗಿದೆ ಎಂದಿರುವ ಪಾಕ್ ಮಾಹಿತಿ ಸಚಿವ ಅತ್ತಾವುಲ್ಲಾ ತರಾರ್ ತಾಂತ್ರಿಕ ಬೆಂಬಲ ಮೂಲಸೌಕರ್ಯ, ಮದ್ದುಗುಂಡು ಡಿಪೋಗಳು ಮತ್ತು 252 ತಾಲಿಬಾನ್ ಪೋಸ್ಟ್‌ಗಳನ್ನು ನಾಶಪಡಿಸಲಾಗಿದೆ ಎಂದಿದ್ದಾರೆ. ಈವರೆಗೆ 684 ಅಫ್ಘಾನ್ ತಾಲಿಬಾನ್ ಕಾರ್ಯಕರ್ತರು ಕೊಲ್ಲಲ್ಪಟ್ಟಿದ್ದಾರೆ ಮತ್ತು 912 ಮಂದಿ ಗಾಯಗೊಂಡಿದ್ದಾರೆ. 229 ಟ್ಯಾಂಕ್‌ಗಳು ಮತ್ತು ಶಸ್ತ್ರಸಜ್ಜಿತ ವಾಹನಗಳು ಸೇರಿದಂತೆ ದೊಡ್ಡ ಪ್ರಮಾಣದ ಮಿಲಿಟರಿ ಆಸ್ತಿಗಳನ್ನು ಹತ್ತಿಕ್ಕಲಾಗಿದೆ ಎಂದು ವರದಿಯಾಗಿದೆ.

**ನಾಗರಿಕರ ಸಾವು ತಿರಸ್ಕರಿಸಿದ ಪಾಕ್:** ನಾಗರಿಕ ಸಾವು-ನೋವುಗಳ ಬಗ್ಗೆ ಕೇಳಿಬಂದಿರುವ ಆರೋಪಗಳನ್ನು ಪಾಕಿಸ್ತಾನದ ಮಾಹಿತಿ ಸಚಿವಾಲಯ ತಿರಸ್ಕರಿಸಿದೆ. ➡ಪುಟ ೪

### ಪ್ರತಿದಾಳಿ ಎಚ್ಚರಿಕೆ

ಪಾಕಿಸ್ತಾನದ ಬಾಂಬ್ ದಾಳಿಯು ಕಾಬೂಲ್‌ನಲ್ಲಿರುವ ಮಾದಕ ವ್ಯಸನ ಮುಕ್ತ ಕೇಂದ್ರವನ್ನು ಗುರಿಯಾಗಿಸಿ ಕೊಂಡಿದೆ ಎಂದು ಅಫ್ಘಾನ್ ಸರ್ಕಾರದ ವಕ್ತಾರ ಹಮ್ದುಲ್ಲಾ ಫಿತ್ರಾತ್ ಆರೋಪಿಸಿದ್ದಾರೆ. ಅಫ್ಘಾನ್ ಅಧಿಕಾರಿಗಳ ಪ್ರಕಾರ, ಕನಿಷ್ಠ 400 ಜನರು ಕೊಲ್ಲಲ್ಪಟ್ಟಿದ್ದಾರೆ ಮತ್ತು 250 ಜನರು ಗಾಯ ಗೊಂಡಿದ್ದಾರೆ. ಈ ದಾಳಿ 3,000 ರೋಗಿಗಳನ್ನು ಹೊಂದಿದ್ದ ಸಂಕೀರ್ಣದ ಐದು ಬ್ಲಾಕ್‌ಗಳನ್ನು ನಾಶ ಪಡಿಸಿದೆ. ಈ ಆಕ್ರಮಣಕ್ಕೆ ಬಲವಾದ ಪ್ರತಿಕ್ರಿಯೆ ನೀಡಲಾಗುವುದು ಎಂದು ತಿಳಿಸಲಾಗಿದೆ.

### ಅನಾಗರಿಕ, ಹೇಡಿತನದ ಕೃತ್ಯ: ಭಾರತ ಖಂಡನೆ

• **ಹೊಸದಿಲ್ಲಿ:** ಅಫ್ಘಾನಿಸ್ತಾನದ ರಾಜಧಾನಿ ಕಾಬೂಲ್‌ನಲ್ಲಿರುವ ಆಸ್ಪತ್ರೆ ಮೇಲೆ ಪಾಕಿಸ್ತಾನ ನಡೆಸಿದ ವೈಮಾನಿಕ ದಾಳಿಯನ್ನು ಭಾರತ ತೀವ್ರವಾಗಿ ಖಂಡಿಸಿದ್ದು, ಈ ದಾಳಿಯನ್ನು ಅನಾಗರಿಕ ಮತ್ತು ಹೇಡಿತನದ ಕೃತ್ಯ ಎಂದು ಆಕ್ರೋಶ ವ್ಯಕ್ತಪಡಿಸಿದೆ. ಆಸ್ಪತ್ರೆಯನ್ನು ಗುರಿಯಾಗಿಸಿಕೊಂಡು ನಡೆಸಿದ ಈ ದಾಳಿ ಪಾಕಿಸ್ತಾನದ ಆಕ್ರಮಣಕಾರಿ ನಡೆ ಆಗಿದ್ದು, ಅಫ್ಘಾನಿಸ್ತಾನದ ಸಾರ್ವಭೌಮತ್ವದ ಮೇಲೆ ದಾಳಿ ಎಂದು ಭಾರತದ ವಿದೇಶಾಂಗ ಸಚಿವಾಲಯ ಹೇಳಿದೆ. ಇದು ಪ್ರಾದೇಶಿಕ ಶಾಂತಿ ಮತ್ತು ಸ್ಥಿರತೆಗೆ ಗಂಭೀರ ಬೆದರಿಕೆಯಾಗಿದೆ ಎಂದು ತಿಳಿಸಿದೆ. ಪವಿತ್ರ ರಂಜಾನ್ ತಿಂಗಳಲ್ಲಿ ಇಂತಹ ದಾಳಿ ನಡೆದಿರುವುದು ಅತ್ಯಂತ ಖಂಡನೀಯ. ಶಾಂತಿ, ಕರುಣೆ ಮತ್ತು ಆತ್ಮಪರಿಶೀಲನೆಯ ಕಾಲದಲ್ಲಿ ಆಸ್ಪತ್ರೆ ಹಾಗೂ ರೋಗಿಗಳನ್ನು ಗುರಿಯಾಗಿಸುವುದಕ್ಕೆ ಯಾವುದೇ ನೈತಿಕ ಸಮರ್ಥನೆ ಇಲ್ಲ ಎಂದು ಪಾಕಿಸ್ತಾನ ವಿರುದ್ಧ ಭಾರತ ಆಕ್ರೋಶ ವ್ಯಕ್ತಪಡಿಸಿದೆ.

### ಪ್ರತೀಕಾರದ ಪ್ರತಿಜ್ಞೆ ಮಾಡಿದ ಇರಾನ್

• **ಟೆಹ್ರಾನ್:** ಇರಾನ್‌ನ ಸರ್ವೋಚ್ಚ ನಾಯಕ ಮೊಜ್ತಬಾ ಖಮೇನಿ ಮಧ್ಯಸ್ಥಿಕೆ ರಾಷ್ಟ್ರಗಳ ಕದನ ವಿರಾಮ ಪ್ರಸ್ತಾಪಗಳನ್ನು ತಿರಸ್ಕರಿಸಿದ್ದಾರೆ. ಅಮೆರಿಕ ಮತ್ತು ಇಸ್ರೇಲ್‌ನಿಂದ ಪರಿಹಾರ ಪಡೆಯುವುದು ಅಥವಾ ಅವುಗಳ ಆಸ್ತಿ ನಾಶಪಡಿಸುವ ಇರಾನ್‌ನ ಗುರಿಯನ್ನು ಅವರು ಪುನರುಚ್ಚರಿಸಿದ್ದಾರೆ. • ವಿವರ ಪುಟ ೭

### ಇಸ್ರೇಲ್ ದಾಳಿ: ಇರಾನ್ ಭದ್ರತಾ ಮುಖ್ಯಸ್ಥ ಹತ!



• **ಜೆರುಸಲೇಂ:** ಇಸ್ರೇಲ್ ಮಿಲಿಟರಿ ನಡೆಸಿದ ರಾತ್ರಿವೇಳೆಯ ನಿಖರ ದಾಳಿಯಲ್ಲಿ ಇರಾನ್‌ನ ಭದ್ರತಾ ಮುಖ್ಯಸ್ಥ ಅಲಿ ಲಾರಿಜಾನಿ ಹತರಾಗಿದ್ದಾರೆ ಎಂದು ಇಸ್ರೇಲ್ ರಕ್ಷಣಾ ಸಚಿವ ಇಸ್ರೇಲ್ ಕಾಟ್ಜ್ ಹೇಳಿದ್ದಾರೆ. • ವಿವರ ಪುಟ ೭

ನಿಗದಿತ ಸಮಯಕ್ಕೆ ಮಾಹಿತಿ ಒದಗಿಸಲು ಸೂಚನೆ

# ಸದನಕ್ಕೆ ಸಿಕ್ಕ ಉತ್ತರದ ವಿವರ ನೀಡಿದ ಸ್ಪೀಕರ್



• **ವಿಧಾನಸಭೆ:** ಸಚಿವರು ಹಾಗೂ ಅಧಿಕಾರಿಗಳು ಶಾಸಕರಿಗೆ ಸರಿಯಾಗಿ ಉತ್ತರ ನೀಡುತ್ತಿಲ್ಲ ಎಂದು ಬೇಸರದಿಂದ ಸೋಮವಾರ ಸಭಾತ್ಯಾಗ ಮಾಡಿದ್ದ ಸ್ಪೀಕರ್ ಯು.ಟಿ. ಖಾದರ್, ಮಂಗಳವಾರ ಯಾವ ಯಾವ ಇಲಾಖೆಯಿಂದ ಎಷ್ಟೆಷ್ಟು ಉತ್ತರಗಳು ಸಲ್ಲಿಸಲ್ಪಟ್ಟಿವೆ ಎಂದು ಸದನಕ್ಕೆ ವಿವರಿಸಿದರು.

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ 22 ಗಮನ ಸೆಳೆಯುವ ಸೂಚನೆಗೆ 6 ಉತ್ತರ, ಆರ್ಥಿಕ ಇಲಾಖೆ 33ಕ್ಕೆ 6 ಉತ್ತರ ನೀಡಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಇಲಾಖೆ 9ಕ್ಕೆ ಒಂದೂ ಉತ್ತರ ನೀಡಿಲ್ಲ. ಯುವ ಸಬಲೀಕರಣ ಇಲಾಖೆ 10ಕ್ಕೆ ಒಂದೇ ಒಂದು ಉತ್ತರ ನೀಡಿಲ್ಲ, ಸಹಕಾರ ಇಲಾಖೆ 12ಕ್ಕೆ ಒಂದೂ ಉತ್ತರ ನೀಡಿಲ್ಲ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಒಂದಕ್ಕೆ ಒಂದು ಉತ್ತರ ನೀಡಿದೆ. ಜಲಸಂಪನ್ಮೂಲ ಇಲಾಖೆ 33ಕ್ಕೆ 4, ನಗರಾಭಿವೃದ್ಧಿ ಇಲಾಖೆ 23ಕ್ಕೆ 8 ಉತ್ತರಗಳನ್ನು, ಒಳಾಡಳಿತ 35ಕ್ಕೆ 26 ಉತ್ತರಗಳನ್ನು, ಕಾನೂನು ಇಲಾಖೆ 5ಕ್ಕೆ 3 ಉತ್ತರಗಳನ್ನು, ಪ್ರವಾಸೋದ್ಯಮ ಇಲಾಖೆ 25ಕ್ಕೆ ಒಂದು ಉತ್ತರವನ್ನು, ಸಣ್ಣ ನೀರಾವರಿ ಇಲಾಖೆ 19ಕ್ಕೆ 13 ಉತ್ತರಗಳನ್ನು ನೀಡಿದೆ. ಮಾಹಿತಿ ತಂತ್ರಜ್ಞಾನ ಇಲಾಖೆ 2 ಗಮನ ಸೆಳೆಯುವ ಪ್ರಶ್ನೆಗೆ ಉತ್ತರ ನೀಡಿದೆ ಎಂದು ಸಭಾಧ್ಯಕ್ಷರು ತಿಳಿಸಿದರು.

ಈ ಕುರಿತು ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳು ನಿಗದಿತ ಸಮಯಕ್ಕೆ ಉತ್ತರಗಳನ್ನು ನೀಡಲು ಗಮನಹರಿಸುವಂತೆ ಸೂಚಿಸಿದರು.

> **ಸಚಿವರು ಹಾಗೂ ಅಧಿಕಾರಿಗಳು ಶಾಸಕರ ಪ್ರಶ್ನೆಗಳಿಗೆ ಉತ್ತರಿಸದೆ ಇರುವುದಕ್ಕೆ ಸಭಾಧ್ಯಕ್ಷರು ತೀವ್ರ ಅಸಮಾಧಾನ ವ್ಯಕ್ತಪಡಿಸಿರುತ್ತಾರೆ. ಆದ್ದರಿಂದ ತಮ್ಮ ಇಲಾಖೆಯ ವತಿಯಿಂದ ಉತ್ತರಿಸಬೇಕಾದ ಪ್ರಶ್ನೆಗಳಿಗೆ ಉತ್ತರವನ್ನು ಸಕಾಲದಲ್ಲಿ ವಿಧಾನಮಂಡಲಕ್ಕೆ ಕಳುಹಿಸದೇ ಇರುವ ಬಗ್ಗೆ ಇಲಾಖಾ ಕಾರ್ಯದರ್ಶಿಗಳ ವಿವರಣೆಯನ್ನು ತಕ್ಷಣ ನೀಡಲು ಸೂಚಿಸಿದ್ದೇನೆ.**
> ■ ಸಿದ್ದರಾಮಯ್ಯ, ಮುಖ್ಯಮಂತ್ರಿ

### ಸಚಿವರಿಗೆ ಸಿಎಂ ಪತ್ರ

ಶಾಸಕರಿಗೆ ಸಚಿವರು ಉತ್ತರ ನೀಡದ ಹಿನ್ನೆಲೆಯಲ್ಲಿ ಸಭಾಧ್ಯಕ್ಷ ಖಾದರ್ ಅಸಮಾಧಾನ ವ್ಯಕ್ತಪಡಿಸಿದ ಬೆನ್ನಲ್ಲೇ ಸಿಎಂ ಸಿದ್ದರಾಮಯ್ಯ ಎಲ್ಲ ಸಚಿವರಿಗೆ ಪತ್ರ ಬರೆದಿದ್ದಾರೆ. ಈ ಪತ್ರದಲ್ಲಿ 1ನೇ ಅಧಿವೇಶನದಿಂದ 9ನೇ ಅಧಿವೇಶನದವರೆಗೆ ಉತ್ತರ ಬಾರದಿರುವ ಇಲಾಖಾವಾರು ಪ್ರಶ್ನೆಗಳ ಪಟ್ಟಿಯನ್ನು ಮತ್ತು ದಿನಾಂಕ:16.03.2026ರಂದು ನಡೆದ ಸದನ ಸಭೆಯಲ್ಲಿ 245 ಪ್ರಶ್ನೆಗಳಲ್ಲಿ ಇದುವರೆಗೂ 90 ಪ್ರಶ್ನೆಗಳಿಗೆ ಮಾತ್ರ ಉತ್ತರವನ್ನು ಒದಗಿಸಿರುವುದು ಕಂಡು ಬಂದಿರುತ್ತದೆ (ಪಟ್ಟಿ ಲಗತ್ತಿಸಿದೆ). ತಮ್ಮ ಇಲಾಖೆಗೆ ಸಂಬಂಧಿಸಿದಂತೆ ಸದನದಲ್ಲಿ ಉತ್ತರಿಸಲು ಬಾಕಿ ಇರುವ ಪ್ರಶ್ನೆಗಳಿಗೆ ಉತ್ತರಗಳನ್ನು ಇದುವರೆಗೂ ಕಳುಹಿಸದೇ ಇರುವುದು ವಿಧಾನಸಭಾ ಸದಸ್ಯರುಗಳು ಸದನದಲ್ಲಿ ಚರ್ಚಿಸಲು ಅನಾನುಕೂಲತೆಯನ್ನುಂಟುಮಾಡುತ್ತದೆ. ➡ಪುಟ ೪

### 8 ಐಎಎಸ್ ಅಧಿಕಾರಿಗಳಿಗೆ ಶೋಕಾಸ್ ನೋಟಿಸ್
• ಪುಟ ೪

ದಿಢೀರ್ ಬದಲಾಯ್ತು ಹವಾಮಾನ | ಸಿಡಿಲಿಗೆ ರೈತ ಬಲಿ

# ಬಿರುಗಾಳಿಸಹಿತ ಆಲಿಕಲ್ಲು ಮಳೆ



• **ಬೆಂಗಳೂರು:** ರಾಜ್ಯದ ಹಲವು ಜಿಲ್ಲೆಗಳಲ್ಲಿ ವಾತಾವರಣ ಏಕಾಏಕಿ ಬದಲಾವಣೆಯಾಗಿದ್ದು, ಹಲವು ಜಿಲ್ಲೆಗಳಲ್ಲಿ ಬಿರುಗಾಳಿ, ಆಲಿಕಲ್ಲು ಸಹಿತ ಭಾರೀ ಮಳೆಯಾಗಿದೆ. ಮಂಗಳವಾರ ಕಿತ್ತೂರು ಮತ್ತು ಕಲ್ಯಾಣ ಕರ್ನಾಟಕ ಪ್ರದೇಶಗಳ ಹಲವು ಭಾಗಗಳಲ್ಲಿ ಗುಡುಗುಸಹಿತ ಮಳೆಯಾಗಿದೆ. ಧಾರವಾಡ, ವಿಜಯಪುರ, ವಿಜಯನಗರ, ಕಲಬುರಗಿ, ಕೊಡಗು, ಚಾಮರಾಜನಗರ, ಬೆಂಗಳೂರಿನ ಹಲವೆಡೆ ವ್ಯಾಪಕ ಮಳೆಯಾಗಿದೆ.

ಉತ್ತರ ಕರ್ನಾಟಕದ ಹೆಚ್ಚಿನ ಭಾಗಗಳಲ್ಲಿ ಗರಿಷ್ಠ ತಾಪಮಾನ 40 ಡಿಗ್ರಿ ಸೆಲ್ಸಿಯಸ್ ತಲುಪಿತ್ತು. ಸಂಜೆ ಸುರಿದ ಮಳೆಯು ಈ ಪ್ರದೇಶಗಳಲ್ಲಿ ವಾತಾವಾರಣ ಸ್ವಲ್ಪ ತಂಪಾಯಿತು. ಹುಮ್ನಾಬಾದ್ ಮತ್ತು ಚಿಟಗುಪ್ಪ ತಾಲೂಕುಗಳ ಅನೇಕ ಭಾಗಗಳಲ್ಲಿ ಗುಡುಗು ಸಹಿತ ಮಧ್ಯಮ ಮಳೆಯಾಗಿದೆ. ➡ಪುಟ ೪

### 24 ಗಂಟೆಯಲ್ಲಿ ಮತ್ತಷ್ಟು ಮಳೆ
• ಪುಟ ೪

ಗುಜರಾತ್ ತಲುಪಿದ 2ನೇ ಎಲ್‌ಪಿಜಿ ವಾಹಕ ನೌಕೆ ನಂದಾದೇವಿ

# ದೇಶದ ಅನಿಲ ಆತಂಕ ಇನ್ನಷ್ಟು ಇಳಿಕೆ

• **ಅಹ್ಮದಾಬಾದ್:** ಪಶ್ಚಿಮ ಏಷ್ಯಾದ ಸಂಘರ್ಷ ಮುಂದುವರಿದಿರುವ ನಡುವೆಯೇ, ಭಾರತದ 2ನೇ ಎಲ್‌ಪಿಜಿ ವಾಹಕ ನೌಕೆ 'ನಂದಾದೇವಿ' ಇರಾನ್ ಬಳಿಯ ಅಪಾಯಕಾರಿ ಹಾರ್ಮುಜ್ ಜಲಸಂಧಿಯನ್ನು ದಾಟಿ ಸುರಕ್ಷಿತವಾಗಿ ಗುಜರಾತಿನ ವಡ್ನೀರ್ ಬಂದರನ್ನು ಬಂದು ತಲುಪಿದೆ. ಈ ನೌಕೆ 46,500 ಮೆಟ್ರಿಕ್ ಟನ್ ದ್ರವೀಕೃತ ಪೆಟ್ರೋಲಿಯಂ ಗ್ಯಾಸ್ ಹೊತ್ತು ಬಂದಿದೆ. ಇದರೊಂದಿಗೆ ಭಾರತ ಹೊಂದಿದ್ದ ಅನಿಲ ಕುರಿತ ಆತಂಕ ಇನ್ನಷ್ಟು ತಗ್ಗಿದಂತಾಗಿದೆ.

ಇದಕ್ಕೂ ಮುನ್ನ ಭಾರತೀಯ ನೌಕೆ ಶಿವಾಲಿಕ್ ಸೋಮವಾರ ಮುಂದ್ರಾ ಬಂದರಿಗೆ ಆಗಮಿಸಿತ್ತು. ಇದರ ಬೆನ್ನಿಗೇ ಇದೀಗ 'ನಂದಾದೇವಿ' ಕೂಡ ದೇವಭೂಮಿ ದ್ವಾರಕಾ ಜಿಲ್ಲೆಯಲ್ಲಿನ ವಡ್ನೀರ್ ಬಂದರಿನಲ್ಲಿ ಲಂಗರು ಹಾಕಿದೆ. ಇದೀಗ ಈ ನೌಕೆಯಿಂದ ಎಲ್‌ಪಿಜಿ ಸರಕನ್ನು ಇನ್ನೊಂದು ನೌಕೆ ಬಿಡಬ್ಲ್ಯು ಬಿರ್ಚ್‌ಗೆ ವರ್ಗಾಯಿಸುವ ಪ್ರಕ್ರಿಯೆ ನಡೆದಿದೆ ಎಂದು ದೀನದಯಾಳ್




ಬಂದರು ಪ್ರಾಧಿಕಾರದ ಅಧ್ಯಕ್ಷ ಸುಶೀಲ್ ಕುಮಾರ್ ಸಿಂಗ್ ತಿಳಿಸಿದ್ದಾರೆ. ಈ ನೌಕೆ ಭಾಗಶಃ ಅನಿಲವನ್ನು ತಮಿಳುನಾಡಿನ ಎಣ್ಣೂರ್ ಬಂದರು ಮತ್ತು ಪಶ್ಚಿಮ ಬಂಗಾಳದ ಹಲ್ದಿಯಾ ಬಂದರು ಹಾಗೂ ಪೂರ್ವದ ಕರಾವಳಿಗೆ ವಿತರಿಸಲಿದೆ. ➡ಪುಟ ೪

# ಹುದ್ದೆ ಭರ್ತಿ ಆಗ್ರಹಿಸಿ ಪ್ರತಿಭಟನೆ

» ಸರ್ಕಾರದ ವಿರುದ್ಧ ಘೋಷಣೆ
» ವಿದ್ಯಾರ್ಥಿಗಳ ಬಂಧನ, ಬಿಡುಗಡೆ

• **ಬೆಳಗಾವಿ:** ಖಾಲಿ ಹುದ್ದೆ ಭರ್ತಿ ಸೇರಿದಂತೆ ವಿವಿಧ ಬೇಡಿಕೆ ಈಡೇರಿಸಲು ಆಗ್ರಹಿಸಿ ಬೃಹತ್ ಪ್ರತಿಭಟನೆ ನಡೆಸಿದ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಸಂಘಟನೆಯ ವಿದ್ಯಾರ್ಥಿಗಳನ್ನು ಪೊಲೀಸರು ಬಂಧಿಸಿ ನಂತರ ಬಿಡುಗಡೆಗೊಳಿಸಿದರು. ಎಬಿವಿಪಿ ಕಾರ್ಯಕರ್ತರು ನಗರದ ಸರ್ದಾರ್ ಮೈದಾನದಿಂದ ಮಂಗಳವಾರ ಪಾದಯಾತ್ರೆ ಮೂಲಕ ಚನ್ನಮ್ಮ ವೃತ್ತಕ್ಕೆ ಆಗಮಿಸಿದ ಪ್ರತಿಭಟನಾಕಾರರು ಚನ್ನಮ್ಮ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆ ಸ್ಥಳಕ್ಕೆ ಬೆಳಗಾವಿ ಜಿಲ್ಲಾಧಿಕಾರಿ ಮಹಮ್ಮದ್ ರೋಷನ್ ಬರಬೇಕೆಂದು ಎಬಿವಿಪಿ ಕಾರ್ಯಕರ್ತರು ಪಟ್ಟುಹಿಡಿದರು. ಯಾವುದೇ ಅನುಮತಿ ಇಲ್ಲದೆ ಪ್ರತಿಭಟನೆಗೆ ಅವಕಾಶ ಕೊಡುವುದಿಲ್ಲ ಎಂದು ಪೊಲೀಸರು ಮನವರಿಕೆ ಮಾಡುವ ಕೆಲಸ ಮಾಡಿದರು. ➡ಪುಟ ೪

ಕ್ಷೇತ್ರೀಯ ಕಾರ್ಯವಾಹ ನಾ. ತಿಪ್ಪೇಸ್ವಾಮಿ ಮಾಹಿತಿ

# ಆರೆಸ್ಸೆಸ್‌ನಿಂದ ಹಿಂದು ಧರ್ಮದ ಪುನರುತ್ಥಾನ, ಸಮಾಜ ಸಂಘಟನೆ

• **ಬೆಂಗಳೂರು:** ಹಿಂದು ಧರ್ಮ ಎಂದಿಗೂ ನಶಿಸುವುದಿಲ್ಲ, ಇದು ಒಳಗೊಳ್ಳುವಿಕೆಯ ತತ್ವವನ್ನು ಹೊಂದಿದೆ. ಸಾವಿರಾರು ವರ್ಷಗಳಿಂದ ಅನೇಕ ಸವಾಲುಗಳನ್ನು ಎದುರಿಸಿಯೂ ಹಿಂದು ಧರ್ಮ ಉಳಿದುಕೊಂಡಿದೆ. ರಾಷ್ಟ್ರೀಯ ಸ್ವಯಂಸೇವಕ ಸಂಘ(ಆರ್‌ಎಸ್‌ಎಸ್) ಕೇವಲ ಧರ್ಮದ ಪುನರುತ್ಥಾನ ಮತ್ತು ಸಮಾಜ ಸಂಘಟಿಸುವ ಕೆಲಸ ಮಾಡುತ್ತಿದೆ ಎಂದು ಆರ್‌ಎಸ್‌ಎಸ್‌ನ ಕ್ಷೇತ್ರೀಯ ಕಾರ್ಯವಾಹ ನಾ.ತಿಪ್ಪೇಸ್ವಾಮಿ ಹೇಳಿದರು.

ರಾಷ್ಟ್ರೀಯ ಸ್ವಯಂಸೇವಕ ಸಂಘದ ವಾರ್ಷಿಕ ನೀತಿ ನಿರೂಪಕ ಮಹಾಸಭೆ ಅಖಿಲ ಭಾರತೀಯ ಪ್ರತಿನಿಧಿ ಸಭೆಯ ಕುರಿತು ರಾಷ್ಟ್ರೋತ್ಥಾನ ಪರಿಷತ್‌ನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ವರ್ಷಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ವಿಜಯದಶಮಿ ಉತ್ಸವ ನಡೆದಿದ್ದು, ಆರ್‌ಎಸ್‌ಎಸ್‌ಗೆ ನೂರು ವರ್ಷದ ಹಿನ್ನೆಲೆಯಲ್ಲಿ ನಡೆದ ಹಿಂದು ಸಮಾಜೋತ್ಸವ ಮತ್ತು ಗೃಹಸಂಪರ್ಕ ಅಭಿಯಾನಕ್ಕೆ ಅಭೂತಪೂರ್ವ ಬೆಂಬಲ ವ್ಯಕ್ತವಾಗಿದೆ. ಆರ್‌ಎಸ್‌ಎಸ್ ಕಾರ್ಯ ಚಟುವಟಿಕೆಗಳ ಬಗ್ಗೆ ಕೋಟ್ಯಂತರ ಮಂದಿ ಮೆಚ್ಚಿಕೊಂಡಿದ್ದಾರೆ. ➡ಪುಟ ೪




### ಕರ್ನಾಟಕದಲ್ಲಿ ನಡೆದ ವಿಶೇಷ ಕಾರ್ಯಕ್ರಮ

ಕರ್ನಾಟಕ ದಕ್ಷಿಣ ಪ್ರಾಂತದಲ್ಲಿ 18ರಿಂದ 25 ವರ್ಷದೊಳಗಿನ ಯುವಕರಿಗಾಗಿ ನವೋನ್ಮೇಷ ಕಾರ್ಯಕ್ರಮ 48 ಸ್ಥಾನಗಳಲ್ಲಿ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಯುವಕರಿಗೆ ಸಂಘದ ಕುರಿತು ಮಾಹಿತಿ ನೀಡಲಾಯಿತು. ➡ಪುಟ ೪

## ವಿದ್ಯುತ್ ತಗುಲಿ ಹುಲಿ ಸಾವು

**ಗುಂಡ್ಲುಪೇಟೆಯ ಪಡಗೂರಲ್ಲಿ ದುರಂತ**

• **ಗುಂಡ್ಲುಪೇಟೆ:** ತಾಲೂಕಿನ ಪಡಗೂರು ಗ್ರಾಮದಲ್ಲಿನ ಅಡವಿ ಮಠಕ್ಕೆ ಹೊಂದಿಕೊಂಡಂತೆ ಇರುವ ಜಮೀನೊಂದರಲ್ಲಿ ವಿದ್ಯುತ್ ಪ್ರವಹಿಸಿ ಒಂದೂವರೆ ಅಥವಾ ಎರಡು ವರ್ಷದ ಹೆಣ್ಣು ಹುಲಿ ಮೃತಪಟ್ಟಿರುವ ಘಟನೆ ನಡೆದಿದೆ.

ಆಂಧ್ರ ಮೂಲದ ರವೀಶ್ ಎಂಬುವರಿಗೆ ಪಡಗೂರು ಗ್ರಾಮದಲ್ಲಿ ಜಮೀನು ಹೊಂದಿದ್ದು ಈ ಜಮೀನನ್ನು ಗ್ರಾಮದ ಪರಮೇಶ್ವರಪ್ಪ ಎಂಬುವರು ಗುತ್ತಿಗೆ ಪಡೆದು ವ್ಯವಸಾಯ ಮಾಡುತ್ತಿದ್ದರು. ಫಸಲು ರಕ್ಷಣೆಗಾಗಿ ಅಕ್ರಮವಾಗಿ ಜಮೀನಿನ ಸುತ್ತ ಹಾಕಲಾಗಿದ್ದ ವಿದ್ಯುತ್ ಬೇಲಿ ಸ್ಪರ್ಶಿಸಿ ಸಾವಿಗೀಡಾಗಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ. ➡ಪುಟ ೪

## ಕಿರುಸುದ್ದಿ

### ಶಿಲಾ ಮಂದಿರ ಉದ್ಘಾಟನೆ ನಾಳೆ

**ಹುಬ್ಬಳ್ಳಿ:** ಇಲ್ಲಿನ ಉಣಕಲ್ಲ ಸದ್ಗುರು ಸಿದ್ದೇಶ್ವರ ಸ್ವಾಮೀಜಿ ಯುಗಾದಿ ಜಾತ್ರಾ ಮಹೋತ್ಸವ ಅಂಗವಾಗಿ ಮಾ. 19 ರಂದು ನೂತನ ಶಿಲಾ ಮಂದಿರ ಉದ್ಘಾಟನೆ, ಶಿಲಾ ಮೂರ್ತಿಗಳ ಪ್ರಾಣ ಪ್ರತಿಷ್ಠಾಪಣೆ ಹಾಗೂ ರಥೋತ್ಸವ ಹಮ್ಮಿಕೊಳ್ಳಲಾಗಿದೆ ಎಂದು ಸದ್ಗುರು ಸಿದ್ದೇಶ್ವರ ಸ್ವಾಮಿಯವರ ಹೊಸಮಠ ಟ್ರಸ್ಟ್ ಅಧ್ಯಕ್ಷ ರಾಜಣ್ಣ ಕೊರವಿ ತಿಳಿಸಿದರು. ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ ಗದ್ದುಗೆಗೆ ರುದ್ರಾಭಿಷೇಕ ಮತ್ತು ಮಹಾಪೂಜೆ ಜರುಗುವುದು. ಬೆಳಗ್ಗೆ 10.30ಕ್ಕೆ ಸದ್ಗುರು ಸಿದ್ದೇಶ್ವರಸ್ವಾಮಿ ಕೈಲಾಸ ಮಂಟಪದಲ್ಲಿ ಹುಬ್ಬಳ್ಳಿ ರುದ್ರಾಕ್ಷಿ ಮಠದ ಬಸವಲಿಂಗ ಶ್ರೀಗಳ ಅಧ್ಯಕ್ಷತೆಯಲ್ಲಿ ಉಣಕಲ್ಲ ಗುರುಸಿದ್ದಯ್ಯ ಹಿರೇಮಠ ಹಾಗೂ ಸವಣೂರು ಮಹಾಂತಯ್ಯ ಹಿರೇಮಠ ಪೌರೋಹಿತ್ಯದಲ್ಲಿ ಸಾಮೂಹಿಕ ವಿವಾಹ ನೆರವೇರಲಿವೆ. ಸಂಜೆ 5.30ಕ್ಕೆ ರಥೋತ್ಸವ ಜರುಗಲಿದೆ. ಹುಕ್ಕೇರಿ ಬಸವಬೆಳವಿ ಚರಂತೇಶ್ವರ ವಿರಕ್ತಮಠದ ಶರಣಬಸವ ದೇವರು, ಕೊಪ್ಪಳ ಗವಿಸಿದ್ದೇಶ್ವರ ಮಠದ ಅಭಿನವ ಗವಿಸಿದ್ದೇಶ್ವರ ಶ್ರೀಗಳು, ರಬಕವಿ ಬ್ರಹ್ಮಾನಂದಮಠದ ಗುರುಸಿದ್ದೇಶ್ವರ ಶ್ರೀ, ಉಪ್ಪಿನಬೆಟಗೇರಿಯ ಕುಮಾರ ವಿರೂಪಾಕ್ಷ ಶ್ರೀ, ಬಾಳೇಹೊನ್ನೂರಿನ ಪ್ರಸನ್ನ ರೇಣುಕಾ ವೀರಸೋಮೇಶ್ವರ ಶ್ರೀ, ಸಾಗರದ ಮುರುಘಾಮಠದ ಮುರುಘರಾಜೇಂದ್ರ ಶ್ರೀ, ಶಿರಹಟ್ಟಿ ಸಂಸ್ಥಾನ ಮಠದ ಫಕೀರದಿಂಗಾಲೇಶ್ವರ ಶ್ರೀ, ಹುಬ್ಬಳ್ಳಿ ರುದ್ರಾಕ್ಷಿ ಮಠದ ಬಸವಲಿಂಗ ಶ್ರೀ, ಆದಿಚುಂಚನಗಿರಿಯ ಡಾ. ನಿರ್ಮಲಾನಂದನಾಥ ಶ್ರೀಗಳಿಂದ ಪ್ರವಚನ ನಡೆಯಲಿದೆ ಎಂದರು. ಮಾ.19 ರಿಂದ 23ರ ವರೆಗೆ ಬಯಲುಗಣ ಕುಸ್ತಿಗಳು ನಡೆಯಲಿವೆ. 23ರಂದು ಸಂಜೆ 7 ಗಂಟೆಗೆ ಮಹಾರಥದ ಕಳಸ ಅವರೋಹಣ ಕಾರ್ಯಕ್ರಮ ನಡೆಯಲಿದ್ದು, ಅಂದು ಬೆಳಗ್ಗೆ 7 ಗಂಟೆಗೆ ಎತ್ತಿನಖಾಲಿ ಗಾಡಿ ಓಡಿಸುವ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ ಎಂದರು. ಟ್ರಸ್ಟ್ ಪದಾಧಿಕಾರಿ ರಾಮಣ್ಣ ಪದ್ಮಣ್ಣವರ, ಗುರುಸಿದ್ದಪ್ಪ ಬೆಂಗೇರಿ, ಎಸ್.ಐ. ನೇಕಾರ, ಗುರು ಹಿರೇಮಠ, ಗುರುಸಿದ್ದಪ್ಪ ಮೆಣಸಿನಕಾಯಿ, ಹನಮಂತಪ್ಪ ವಗ್ಗರ ಇದ್ದರು.

### ಅತಿಕ್ರಮಣ ತೆರವು

**ಹುಬ್ಬಳ್ಳಿ:** ಸರ್ಕಾರಿ ಗೋಮಾಳ ಜಾಗವನ್ನು ಸಾರ್ವಜನಿಕರು ಅತಿಕ್ರಮಣ ಮಾಡಿಕೊಂಡು ನಿರ್ಮಿಸಿದ್ದ ಮನೆ, ಗುಡಿಸಲು ಹಾಗೂ ಶೆಡ್‌ಗಳನ್ನು ತಾಲೂಕಾಡಳಿತ ತೆರವುಗೊಳಿಸಿದ ಘಟನೆ ಮಂಗಳವಾರ ತಾಲೂಕಿನ ಅಂಚಟಗೇರಿ ಗ್ರಾಮದ ಅಗ್ರಹಾರ ತಿಮ್ಮಸಾಗರ ಗ್ರಾಮದಲ್ಲಿ ನಡೆದಿದೆ.

ಗ್ರಾಮೀಣ ತಹಶೀಲ್ದಾರ್ ಜೆ.ಬಿ. ಮಜ್ಜಗಿ ನೇತೃತ್ವದಲ್ಲಿ ಜೆಸಿಬಿ ಬಳಸಿ, ಶೆಡ್, ಗುಡಿಸಲು ತೆರವು ಮಾಡಲಾಯಿತು. ಸಾರ್ವಜನಿಕರು ಗ್ರಾಮದ 21 ಎಕರೆ ಗೋಮಾಳ ಜಾಗದಲ್ಲಿ 3 ಎಕರೆ ಜಾಗವನ್ನು ಅತಿಕ್ರಮಿಸಿದ್ದರು. ಕೆಲವರು ಮನೆಗಳ ನಿರ್ಮಿಸಿಕೊಂಡಿದ್ದರು. ಇನ್ನೂ ಕೆಲವರ ತಮ್ಮ ಜಾಗವೆಂದು ಕಲ್ಲುಗಳನ್ನು ಇಟ್ಟಿದ್ದರು. ಇವುಗಳನ್ನುತೆರವುಗೊಳಿಸುವಂತೆ ತಾಲೂಕಾಡಳಿತ ಹಲವಾರು ಬಾರಿ ಎಚ್ಚರಿಕೆ ನೀಡಿತ್ತು. ಅತಿಕ್ರಮಣದಾರರ ನಿರ್ಲಕ್ಷ್ಯದ ಹಿನ್ನೆಲೆಯಲ್ಲಿ ಹತ್ತಾರು ವರ್ಷಗಳಿಂದ ವಾಸವಿದ್ದ ನಿವಾಸಿಗಳು ಈ ವೇಳೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಅಧಿಕಾರಿಗಳ ಮತ್ತು ಅವರ ನಡುವೆ ವಾಗ್ವಾದ ನಡೆಯಿತು. ಪರ್ಯಾಯ ಜಾಗ ನೀಡುವಂತೆ ಅಧಿಕಾರಿಗಳನ್ನು ವಿನಂತಿಸಿದರು. ಮುಖಂಡ ಮತ್ತಣ್ಣ ಶಿವಳ್ಳಿ ಸ್ಥಳಕ್ಕೆ ಬಂದು, ನಿವಾಸಿಗಳ ಪರವಾಗಿ ಮಾತನಾಡಿ, ತಾಲೂಕು ಪಂಚಾಯತಿ ಸಾಮಾನ್ಯ ಸಭೆಯಲ್ಲಿ ಠರಾವು ಪಾಸಾಗಿ, 21 ಫಲಾನುಭವಿಗಳಿಗೆ ಇಲ್ಲ ಮನೆ ಕಟ್ಟಿಕೊಳ್ಳಲು ಸೂಚನೆ ನೀಡಲಾಗಿದೆ. ಹೀಗಾಗಿ ಇಲ್ಲಿ ಯಾವುದೇ ಮನೆಗಳನ್ನು ಕೆಡುವಲು ಅವಕಾಶ ನೀಡುವುದಿಲ್ಲ ಎಂದರು. ಈ ಕುರಿತು ಗ್ರಾಮೀಣ ತಹಶೀಲ್ದಾರ್ ಜೆ.ಬಿ. ಮಜ್ಜಗಿ ಪ್ರತಿಕ್ರಿಯಿಸಿ, ಸರ್ಕಾರಿ ಗೋಮಾಳ ಜಾಗವನ್ನು ಅತಿಕ್ರಮಿಸಿಕೊಂಡು ಕೆಲವರು ಮನೆಗಳನ್ನು ನಿರ್ಮಿಸಿಕೊಂಡಿದ್ದರು. ಸರ್ಕಾರದ ಸೂಚನೆ ಹಾಗೂ ನಿಯಮಾವಳಿ ಪ್ರಕಾರ ಅವುಗಳನ್ನು ತೆರವು ಮಾಡುತ್ತೇವೆ. ಮತ್ತೆ ಎಲ್ಲೆಲ್ಲಿ ಅತಿಕ್ರಮಣವಾಗಿದೆ ಎಂದು ಪರಿಶೀಲಿಸಿ, ಅವುಗಳನ್ನು ನಮ್ಮ ಸುಪರ್ದಿಗೆ ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದರು.

### ಡಿಸಿಪಿ ಆಗಿ ಶ್ರುತಿ



**ಹುಬ್ಬಳ್ಳಿ:** ಹು-ಧಾ. ಪೊಲೀಸ್ ಕಮೀಷನರೇಟ್‌ನ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಉಪ ಪೊಲೀಸ್ ಆಯುಕ್ತ (ಡಿಸಿಪಿ)ರಾಗಿ ಶ್ರುತಿ ಎನ್.ಎಸ್. ನಿಯುಕ್ತಿಗೊಂಡಿದ್ದಾರೆ. ರಾಜ್ಯ ಸರ್ಕಾರವು ಡಿಸಿಪಿ ಮಹಾನಿಂಗ ನಂದಗಾಂವಿ ಅವರನ್ನು ಫೆ. 16ರಂದು ಲೋಕಾಯುಕ್ತಕ್ಕೆ ವರ್ಗಾವಣೆ ಮಾಡಿತ್ತು. ಅದಿನಿಂದ ಈ ಹುದ್ದೆಯನ್ನು ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ರವೀಶ ಸಿ.ಆರ್. ಅವರೇ ನಿಭಾಯಿಸುತ್ತಿದ್ದರು. ನಂದಗಾಂವಿ ಅವರಿಂದ ಒಂದು ತಿಂಗಳಿನಿಂದ ತೆರವಾಗಿದ್ದ ಸ್ಥಾನಕ್ಕೆ ಶ್ರುತಿ ಎನ್.ಎಸ್. ಅವರನ್ನು ನಿಯುಕ್ತಿಗೊಳಿಸಿ ಸರ್ಕಾರ ಆದೇಶಿಸಿದೆ. 2019ರ ಬ್ಯಾಚ್‌ನ ಐಪಿಎಸ್ ಅಧಿಕಾರಿಯಾಗಿರುವ ಶ್ರುತಿ ಎನ್.ಎಸ್. ಅವರು ಸದ್ಯ ರಾಜ್ಯ ಗುಪ್ತಚರ ಇಲಾಖೆಯಲ್ಲಿ ಪೊಲೀಸ್ ಅಧೀಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

## ನಿಧನಸುದ್ದಿ

### ಸಕರಾಂ ನಾಯ್ಕ ರಾಣೆ



**ಹುಬ್ಬಳ್ಳಿ:** ಹುಬ್ಬಳ್ಳಿ-ಧಾರವಾಡ ಕೊಂಕಣ ಮರಾಠಾ ಸಮಾಜದ ಮಾರ್ಗದರ್ಶಕ ಹಾಗೂ ಹಿರಿಯರು ನಿವೃತ್ತ ವಿಶೇಷ ಜಿಲ್ಲಾಧಿಕಾರಿ ಸಕರಾಂ ನಾಯ್ಕ ರಾಣೆ(83) ಧಾರವಾಡದ ವಿದ್ಯಾಗಿರಿಯ ತಮ್ಮ ನಿವಾಸದಲ್ಲಿ ನಿಧನರಾದರು.

ಮೃತರು ಪತ್ನಿ ಹಾಗೂ ಓರ್ವ ಪುತ್ರ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಸಕರಾಂ ನಾಯ್ಕ ರಾಣೆ ನಿಧನಕ್ಕೆ ಶಾಸಕ ಅರವಿಂದ ಬೆಲ್ಲದ, ಸಮಾಜದ ಅಧ್ಯಕ್ಷ ರವಿ ನಾಯಕ, ಕಾರ್ಯದರ್ಶಿ ಸುರೇಂದ್ರ ಗಾಂವ್ಕರ್ ಸಂತಾಪ ಸೂಚಿಸಿದ್ದಾರೆ.



ಹುಬ್ಬಳ್ಳಿ: ಉತ್ತರ ಕರ್ನಾಟಕ ಆಟೋ ರಿಕ್ಷಾ ಚಾಲಕರ ಸಂಘ, ಹುಬ್ಬಳ್ಳಿ ಆಟೋ ರಿಕ್ಷಾ ಮಾಲೀಕರ ಹಾಗೂ ಚಾಲಕರ ಸಂಘದ ವತಿಯಿಂದ ನಟ ಪುನೀತ್‌ರಾಜಕುಮಾರ್ ಅವರ ಜನ್ಮದಿನ ಆಚರಿಸಲಾಯಿತು.

## ಭೂಸ್ವಾಧೀನ ಪ್ರಕ್ರಿಯೆ ಶೀಘ್ರ ಪೂರ್ಣಗೊಳಿಸಿ

**ಹುಬ್ಬಳ್ಳಿ:** ಹುಬ್ಬಳ್ಳಿ-ಬೆಳಗಾವಿ ನಡುವೆ ಕಿತ್ತೂರು ಮಾರ್ಗವಾಗಿ ನಿರ್ಮಾಣವಾಗಲಿರುವ ಹೊಸ ರೈಲ್ವೆ ಯೋಜನೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಭೂಸ್ವಾಧೀನ ಪ್ರಕ್ರಿಯೆಯನ್ನು ತ್ವರಿತಗೊಳಿಸಿ ಕಾಮಗಾರಿಯನ್ನು ಶೀಘ್ರವಾಗಿ ಆರಂಭಿಸಲು ಅನುಕೂಲ ಮಾಡಬೇಕು ಎಂದು ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆಯ ಅಧ್ಯಕ್ಷ ಜಿ.ಕೆ. ಆದಪ್ಪಗೌಡರ ಅವರು ರಾಜ್ಯ ಸರ್ಕಾರಕ್ಕೆ ಮನವಿ ಮಾಡಿದ್ದಾರೆ. ಈ ಕುರಿತು ಪ್ರಕಟಣೆಗೆ ತಿಳಿಸಿದ ಅವರು, ವಿಶೇಷವಾಗಿ ಉತ್ತರ ಕರ್ನಾಟಕದ ಸಮಗ್ರ ಆರ್ಥಿಕ ಅಭಿವೃದ್ಧಿಗೆ ಈ ರೈಲ್ವೆ ಸಂಪರ್ಕ ಪ್ರಮುಖ ಉತ್ತೇಜನ ನೀಡಲಿದೆ. ಕೈಗಾರಿಕೆಗಳ ವಿಸ್ತರಣೆ, ವ್ಯಾಪಾರ ವೃದ್ಧಿ ಹಾಗೂ ಉದ್ಯೋಗಾವಕಾಶಗಳ ಹೆಚ್ಚಳಕ್ಕೆ ಸಹಕಾರಿಯಾಗಲಿದೆ ಎಂದಿದ್ದಾರೆ. ಧಾರವಾಡ-ಕಿತ್ತೂರು-ಬೆಳಗಾವಿ ನಡುವಿನ ಈ ಹೊಸ ರೈಲ್ವೆ ಮಾರ್ಗ ನಿರ್ಮಾಣಕ್ಕೆ ಅಗತ್ಯವಿರುವ ಭೂಸ್ವಾಧೀನ ಪ್ರಕ್ರಿಯೆಗೆ ಸುಮಾರು 300 ಕೋಟಿ ರೂ.ಗಳನ್ನು ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಬಜೆಟ್‌ನಲ್ಲಿ ಘೋಷಣೆ ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ಭೂಸ್ವಾಧೀನ ಪ್ರಕ್ರಿಯೆಯನ್ನು ಶೀಘ್ರವಾಗಿ ಪೂರ್ಣಗೊಳಿಸುವುದರ ಜೊತೆಗೆ ರೈಲ್ವೆ ಇಲಾಖೆಯೊಂದಿಗೆ ಸಮನ್ವಯ ಸಾಧಿಸುವ ಮೂಲಕ ಮಹತ್ವದ ಈ ಯೋಜನೆಯ ಕಾಮಗಾರಿ ತ್ವರಿತಕ್ರಮಕ್ಕೆಗೊಳ್ಳಬೇಕು ಎಂದು ತಿಳಿಸಿದ್ದಾರೆ. ಶೀಘ್ರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ಮನವಿ ಸಲ್ಲಿಸಲಾಗುವುದು. ಜೊತೆಗೆ ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಮತ್ತು ಬೃಹತ್ ಹಾಗೂ ಮಧ್ಯಮ ಕೈಗಾರಿಕೆ ಮತ್ತು ಮೂಲಭೂತ ಸೌಕರ್ಯ ಸಚಿವ ಎಂ.ಬಿ. ಪಾಟೀಲ್ ಅವರನ್ನು ಭೇಟಿ ಮಾಡಿ ಯೋಜನೆಯ ಅನುಷ್ಠಾನಕ್ಕೆ ಅಗತ್ಯ ಅನುಕೂಲತೆ ಒದಗಿಸಿಕೊಡುವಂತೆ ಮನವಿ ಮಾಡಿಕೊಳ್ಳಲಾಗುವುದು ಎಂದು ಸಂಸ್ಥೆ ತಿಳಿಸಿದೆ.



ಧಾರವಾಡ: ಕನ್ನಡ ಸಾಹಿತ್ಯ ಪರಿಷತ್‌ನ ಧಾರವಾಡ ಜಿಲ್ಲಾ 18ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಆಯ್ಕೆಯಾದ ಹಿರಿಯ ಮಹಿಳಾ ಸಾಹಿತಿ ಡಾ. ಹೇಮಾ ಪಟ್ಟಣಶೆಟ್ಟಿ ಅವರಿಗೆ ಕಸಾಪದಿಂದ ಅಧಿಕೃತವಾಗಿ ಆಹ್ವಾನ ನೀಡಿ, ಗೌರವಿಸಲಾಯಿತು. ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಡಾ.ಲಿಂಗರಾಜ ಅಂಗಡಿ, ಸಾಹಿತಿ ಡಾ.ಸಿದ್ಧಲಿಂಗ ಪಟ್ಟಣಶೆಟ್ಟಿ, ಪ್ರೊ. ಕೆ.ಎಸ್.ಕೌಜಲಗಿ, ಮಹಾಂತೇಶ ನರೇಗಲ್ಲ, ಡಾ.ಶರಣಪ್ಪ ಕೊಟಗಿ, ಮೇಘಾ ಹುಕ್ಕೇರಿ, ಪ್ರಮಿಳಾ ಜಕ್ಕಣ್ಣವರ, ಡಾ. ವೀಣಾ ಬಿರಾದಾರ, ರಾ.ರಾಮಚಂದ್ರ ಕುಲಕರ್ಣಿ, ಬಿ.ಜಿ.ಬಾರ್ಕಿ ಇದ್ದರು.

## ಜಿಲ್ಲೆಯಲ್ಲಿ 105 ಪರೀಕ್ಷಾ ಕೇಂದ್ರ | 29,568 ವಿದ್ಯಾರ್ಥಿಗಳಿಂದ ನೋಂದಣಿ

# ಇಂದಿನಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆ ಪ್ರಾರಂಭ

**ಧಾರವಾಡ:** ಪ್ರಸಕ್ತ 2025-26ನೇ ಸಾಲಿನ ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆ ಮಾ. 18 ರಿಂದ ಏ.2ರವರೆಗೆ ಜಿಲ್ಲಾದ್ಯಂತ ಒಟ್ಟು 105 ಪರೀಕ್ಷಾ ಕೇಂದ್ರಗಳಲ್ಲಿ ನಡೆಯಲಿದ್ದು, ಈಗಾಗಲೇ ಸಾರ್ವಜನಿಕ ಶಿಕ್ಷಣ ಇಲಾಖೆಯ ಸಕಲ ಸಿದ್ಧತೆ ಪೂರ್ಣಗೊಳಸಿದೆ.

ಜಿಲ್ಲಾಧಿಕಾರಿ ಹಾಗೂ ಜಿಪಂ ಸಿಇಒ ಮಾರ್ಗದರ್ಶನದಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆ ಸುಸೂತ್ರ ನಡೆಸಲು ಇಲಾಖೆಯು ಸಿದ್ಧತೆ ಪೂರ್ಣಗೊಳಿಸಿದೆ. ಪರೀಕ್ಷೆಗಳಲ್ಲಿ ಯಾವುದೇ ಅಕ್ರಮಗಳು, ನಕಲು ನಡೆಯದಂತೆ ಮುನ್ನೆಚ್ಚರಿಕೆ ಕ್ರಮಗಳು ತೆಗೆದುಕೊಂಡಿದೆ.

ಪರೀಕ್ಷಾ ಕೇಂದ್ರಗಳು: ಸುಗಮ ಪರೀಕ್ಷೆಗಳಿಗೆ ಧಾರವಾಡ ನಗರ-16, ಧಾರವಾಡ ಗ್ರಾಮೀಣ 17 ಮತ್ತು ಹುಬ್ಬಳ್ಳಿ ನಗರ-33, ಹುಬ್ಬಳ್ಳಿ ಗ್ರಾಮೀಣ-13, ಕಲಘಟಗಿ-9, ನವಲಗುಂದ-9, ಕುಂದಗೋಳ ತಾಲೂಕು 8 ಸೇರಿದಂತೆ ಒಟ್ಟು 105 ಪರೀಕ್ಷಾ ಕೇಂದ್ರಗಳನ್ನು ತೆರಲಾಗಿದೆ.

**ಪರೀಕ್ಷಾ ಅಧಿಕಾರಿಗಳು:** ಸುಸೂತ್ರ ಪರೀಕ್ಷೆಗಾಗಿ 105 ಮುಖ್ಯ ಅಧೀಕ್ಷಕರು, 46 ಮಾರ್ಗಾಧಿಕಾರಿಗಳು, 105 ಪ್ರಶ್ನೆ ಪತ್ರಿಕೆ ಪಾಲಕರು, 105 ಜಾಗೃತ ದಳದ ಅಧಿಕಾರಿಗಳು, 105 ಮೊಬೈಲ್ ಫೋನ್ ಸ್ವಾಧೀನಾಧಿಕಾರಿಗಳು, 1455 ಕೊಠಡಿ ಮೇಲ್ವಿಚಾರಕರನ್ನು ನೇಮಿಸಲಾಹಿದೆ.

**ಕ್ಯಾಮೆರಾ ಅಳವಡಿಕೆ:** ಜಿಲ್ಲೆಯ ಪ್ರತಿಯೊಂದು ಪರೀಕ್ಷಾ ಕೇಂದ್ರಗಳ ಪ್ರತಿ ಕೊಠಡಿಗಳಿಗೆ ಸಿಸಿಟಿವಿಗಳ ಕ್ಯಾಮೆರಾ ಅಳವಡಿಸಲಾಗಿದೆ.

**ನಿಷೇಧಾಜ್ಞೆ ಜಾರಿ**

ಪರೀಕ್ಷೆಗಳ ದಿನದಂದು ಪರೀಕ್ಷಾ ಕೇಂದ್ರಗಳ ಸುತ್ತ 200 ಮೀಟರ್ ವರೆಗೂ ಕಲಂ 144 ಮೂಲಕ ನಿಷೇಧಾಜ್ಞೆ ಜಾರಿಗೊಳಿಸಿದೆ. ಇದಲ್ಲದೇ, ಕೇಂದ್ರದ ಸುತ್ತಮುತ್ತ ಝರಾಕ್ಸ್ ಅಂಗಡಿ, ಪ್ರಿಂಟರ್ ಶಾಪ್ ತೆರೆಯದಂತೆ ಸೂಚನೆ ನೀಡಲಾಗಿದೆ. ಪರೀಕ್ಷೆಗಳ ದಿನ ಪ್ರಥಮ ಚಿಕಿತ್ಸಕರು (ದಾದಿ) ನೇಮಿಸಿದೆ. ಪರೀಕ್ಷೆಗಳ ದಿನ ವಿದ್ಯುತ್ ವ್ಯತ್ಯಯ ಉಂಟಾಗದಂತೆ ಕ್ರಮ ವಹಿಸಿದೆ. ಗ್ರಾಮೀಣ-ಇತರೆ ಪ್ರದೇಶಗಳಿಂದ ಬರುವ ಮಕ್ಕಳಿಗೆ ತೊಂದರೆ ಆಗದಂತೆ ಕ್ರಮ ವಹಿಸಿದೆ.

**29,568 ವಿದ್ಯಾರ್ಥಿಗಳು**

ಬೆಳಗ್ಗೆ 10ರಿಂದ ಮಧ್ಯಾಹ್ನ 1.15 ಪರೀಕ್ಷಾ ಸಮಯವಾಗಿದೆ. 105 ಪರೀಕ್ಷಾ ಕೇಂದ್ರಗಳಿದ್ದು, 26,171ಹೊಸ ವಿದ್ಯಾರ್ಥಿಗಳು, 2,295 ಪುನರಾವರ್ತಿ 142 ಬಾಹ್ಯ ಹಳೇ ಪುನರಾವರ್ತಿ, 960 ಬಾಹ್ಯ ಹೊಸ ಪುನರಾವರ್ತಿ ಸೇರಿದಂತೆ ಒಟ್ಟು 29,568 ವಿದ್ಯಾರ್ಥಿಗಳು ಪರೀಕ್ಷೆ ಎದುರಿಸಲಿದ್ದಾರೆ.

ಪರೀಕ್ಷಾಕೇಂದ್ರದಲ್ಲಿಪರೀಕ್ಷಾ ಕಾರ್ಯ ವೀಕ್ಷಣೆಗೂ ಜಿಲ್ಲೆಯ ಎಲ್ಲ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿಗಳಲ್ಲಿ ವೆಬ್‌ಕಾಸ್ಟಿಂಗ್ ವ್ಯವಸ್ಥೆ ಸಹ ಮಾಡಿದೆ.



**ಎಸ್ಸೆಸ್ಸೆಲ್ಸಿ ಪರೀಕ್ಷಾ ವೇಳಾಪಟ್ಟಿ**

| ದಿನಾಂಕ | ವಿಷಯ |
|---|---|
| ಮಾ.18 | ಪ್ರಥಮ ಭಾಷೆ |
| ಮಾ.23 | ವಿಜ್ಞಾನ |
| ಮಾ.25 | ಇಂಗ್ಲಿಷ್ |
| ಮಾ.28 | ಗಣಿತ |
| ಮಾ.30 | ಹಿಂದಿ, ಇತರೆ ತೃತೀಯ ಭಾಷೆ |
| ಏ.2 | ಸಮಾಜ ವಿಜ್ಞಾನ |

ಜಿಲ್ಲೆಯಾದ್ಯಂತ ಮಾ.18ರಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆಗಳಿಗೆ 105 ಪರೀಕ್ಷಾ ಕೇಂದ್ರ ಸಿದ್ಧಪಡಿಸಿದೆ. ಪಾರದರ್ಶಕ ಪರೀಕ್ಷೆ ನಡೆಸಲು ಸೂಚಿಸಿದೆ. ಅಕ್ರಮ ತಡೆಗಾಗಿ ಸಿಸಿ ಟಿವಿ ಹಾಗೂ ವೆಬ್‌ಕಾಸ್ಟಿಂಗ್ ಅಳವಡಿಸಿಕೆಗೂ ಆದೇಶಿಸಿದೆ.
■ **ಸ್ನೇಹಲ್ ಆರ್.**, ಜಿಲ್ಲಾಧಿಕಾರಿ

ಗ್ರಾಮೀಣ ಪ್ರದೇಶಗಳಿಂದ ಪರೀಕ್ಷಾ ಕೇಂದ್ರಗಳಿಗೆ ಬರುವ ಮಕ್ಕಳಿಗೆ ಉಚಿತ ಪ್ರಯಾಣಕ್ಕೆ ಸಾರಿಗೆ ಸಂಸ್ಥೆ ಬಸ್‌ನಲ್ಲಿ ಅವಕಾಶ ನೀಡಲಾಗಿದೆ. ಪ್ರವೇಶ ಪತ್ರ ತೋರಿಸಿ, ಬರಬಹುದು.
■ **ಎಸ್.ಎಸ್. ಕೆಳದಿಮಠ**, ಡಿಡಿಪಿಐ, ಧಾರವಾಡ

## ನೂತನ ಕಟ್ಟಡ ಕಾಮಗಾರಿಗೆ ಭೂಮಿಪೂಜೆ



**ಹುಬ್ಬಳ್ಳಿ:** ಇಲ್ಲಿಯ ಅಮರಗೋಳದ ಎಪಿಎಂಸಿ ಆವರಣದಲ್ಲಿ ತಾಲೂಕು ಕೃಷಿಕ ಸಮಾಜದ 1 ಕೋಟಿ ವೆಚ್ಚದಲ್ಲಿ ನೂತನ ಕಟ್ಟಡ ಕಾಮಗಾರಿಗೆ ಭೂಮಿಪೂಜೆಯನ್ನು ಶಾಸಕ ಎನ್.ಎಚ್. ಕೋನರಡ್ಡಿ ಹಾಗೂ ಶಾಸಕ ಮಹೇಶ ಟೆಂಗಿನಕಾಯಿ ನೆರವೇರಿಸಿದರು.

ಬಳಿಕ ಮಾತನಾಡಿದ ಶಾಸಕ ಎನ್.ಎಚ್. ಕೋನರಡ್ಡಿ, ಈಗಾಗಲೇ ನವಲಗುಂದ ವಿಧಾನಸಭಾ ಕ್ಷೇತ್ರದ ಹುಬ್ಬಳ್ಳಿ ಗ್ರಾಮೀಣ, ನವಲಗುಂದ ತಾಲೂಕು ಹಾಗೂ ಅಣ್ಣಿಗೇರಿ ತಾಲೂಕಿನಲ್ಲಿ ಕೃಷಿಕ ಸಮಾಜದಿಂದ ತಲಾ 10 ಲಕ್ಷ ನಿವೇಶನ ಖರೀದಿಸಲು ಅಂದಿನ ರಾಜ್ಯ ಕೃಷಿಕ ಸಮಾಜದ ಅಧ್ಯಕ್ಷ ಬಿ.ಕೆ. ಮಂಜುನಾಥಗೌಡ ಅವರು ಅನುದಾನ ಬಿಡುಗಡೆ ಮಾಡಿ ನಿವೇಶನ ಖರೀದಿಸಲಾಗಿದೆ. ಇದಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಅವರು 5 ಲಕ್ಷ ರೂ. ಸಹಾಯ ಮಾಡಿದ್ದಾರೆ. ತಲಾ ಅಂದಾಜು 1 ಕೋಟಿ ರೂ. ವೆಚ್ಚದಲ್ಲಿ ಮೊದಲನೇ ಹಂತದಲ್ಲಿ ಸಂಸದರ, ಶಾಸಕರ ಪ್ರದೇಶಾಭಿವೃದ್ಧಿ ಅನುದಾನ ಪಡೆದು ಮೂರು ಕಡೆ ಕಟ್ಟಡ ಕಾಮಗಾರಿ ಪ್ರಾರಂಭಿಸುತ್ತೇವೆ ಎಂದರು.

ಹುಬ್ಬಳ್ಳಿ ಕೃಷಿಕ ಸಮಾಜದ ಕಟ್ಟಡಕ್ಕೆ ಸ್ಥಳೀಯ ಶಾಸಕ ಮಹೇಶ ಟೆಂಗಿನಕಾಯಿ ಅವರು 10 ಲಕ್ಷ ರೂ. ಮೊದಲನೇ ಹಂತದಲ್ಲಿ ಬಿಡುಗಡೆ ಮಾಡುತ್ತೇನೆ, ನಂತರ ಮತ್ತೇ 10 ಲಕ್ಷ ಬಿಡುಗಡೆ ಮಾಡುತ್ತೇವೆ ಎಂದು ಭರವಸೆ ನೀಡಿದರು.

ಮಹಾನಗ ಪಾಲಿಕೆ ಮಹಾಪೌರ ಜ್ಯೋತಿ ಪಾಟೀಲ ಮಾತನಾಡಿ, ಮಹಾನಗರ ಪಾಲಿಕೆಯಿಂದ ಅನುದಾನ ನೀಡಲು ಅವಕಾಶ ಇದ್ದರೆ ಸಭೆಯಲ್ಲಿ ಮಂಡಿಸಿ ನಿರ್ಧಾರ ತೆಗೆದುಕೊಳ್ಳುತ್ತೇನೆ ಎಂದರು. ಹುಬ್ಬಳ್ಳಿ ಎಪಿಎಂಸಿ ಮಾಜಿ ಅಧ್ಯಕ್ಷ ಮಂಜುನಾಥ ಮುದರಡ್ಡಿ ಅವರು ಕಟ್ಟಡ ನಿರ್ಮಿಸಲು4 ಗುಂಟೆ ನಿವೇಶನ ಮಂಜೂರು ಮಾಡಿದ್ದಕ್ಕೆ ಕೃಷಿಕ ಸಮಾಜದವರು ಅಭಿನಂದಿಸಿದರು. ಕರ್ನಾಟಕ ಪ್ರದೇಶ ಕೃಷಿಕ ಸಮಾಜದ ಅಧ್ಯಕ್ಷ ನಗರದ ಮಹದೇವಪ್ಪ ಮಾತನಾಡಿದರು. ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷ ಮಲ್ಲನಗೌಡ ಪಾಟೀಲ, ರಾಜ್ಯ ನಿರ್ದೇಶಕ ಅರವಿಂದ ಕಟಗಿ, ಜಿಲ್ಲಾ ಗ್ಯಾರಂಟಿ ಸಮಿತಿ ಅಧ್ಯಕ್ಷ ಎಸ್.ಆರ್. ಪಾಟೀಲ, ಹುಬ್ಬಳ್ಳಿ ಅಧ್ಯಕ್ಷ ಗುರುನಾಥಗೌಡ ಮಾದಾಪುರ, ನಗರ ಅಧ್ಯಕ್ಷ ಕರಬಸಪ್ಪ ಬೆಟಗೇರಿ, ರಾಜ್ಯ ಕೃಷಿಕ ಸಮಾಜದ ಮಾಜಿ ಅಧ್ಯಕ್ಷ ಸಿದ್ರಾಮಪ್ಪ ಪಾಟೀಲ, ವಡಗೂರು ಡಿ.ಎಲ್. ನಾಗರಾಜ, ಮಹಾನಗರ ಪಾಲಿಕೆ ಸದಸ್ಯ ಮಲ್ಲಿಕಾರ್ಜುನ ಗುಂಡೂರ, ಮುಖಂಡರಾದ ರಾಜಶೇಖರ ಮೆಣಸಿನಕಾಯಿ, ಮಲ್ಲಿಕಾರ್ಜುನ ಹೊರಕೇರಿ, ಗದಿಗೆಪ್ಪ ಕಳ್ಳಿಮನಿ ಇದ್ದರು.

## ಖಾಲಿ ಹುದ್ದೆಗಳ ನೇಮಕದಲ್ಲಿ ಅಕ್ರಮ: ಆರೋಪ

**ಧಾರವಾಡ:** ಕರ್ನಾಟಕ ವಿಶ್ವವಿದ್ಯಾಲಯದ ಮಾಧ್ಯಮಿಕ-ಪ್ರಾಥಮಿಕ ಕನ್ನಡ ಶಾಲೆಯ ಖಾಲಿ ಹುದ್ದೆಗಳ ನೇಮಕದಲ್ಲಿ ಅಕ್ರಮ ನಡೆದಿದೆ ಎಂದು ಆರೋಪಿಸಿ, ದಲಿತ ಸಂಘಸಂಸ್ಥೆಗಳ ಮಹಾಮಂಡಳ ಕವಿವಿಯಲ್ಲಿ ಪ್ರತಿಭಟನೆ ನಡೆಸಿವೆ.

ಅಂಬೇಡ್ಕರ್ ಅಧ್ಯಯನ ಪೀಠದಿಂದ ಕವಿವಿ ಆಡಳಿತ ಕಚೇರಿವರೆಗೆ ಮೆರವಣಿಗೆ ನಡೆಸಿದ ಪ್ರತಿಭಟನಾಕಾರರು, ನೇಮಕಾತಿ ರದ್ದುಗೊಳಿಸುವಂತೆ ಆಗ್ರಹಿಸಿದರು.

ಕವಿವಿಯ ಮಾಧ್ಯಮಿಕ-ಪ್ರಾಥಮಿಕ ಕನ್ನಡ ಶಾಲೆಯ ವಿವಿಧ ವಿಷಯಗಳ ಶಿಕ್ಷಕ ಹುದ್ದೆಗಳ ಭರ್ತಿಗೆ 2023ರಲ್ಲಿ ಅರ್ಜಿ ಆಹ್ವಾನಿಸಿತ್ತು. ಈ ಹುದ್ದೆಗಳಿಗೆ 2026ರಲ್ಲಿ ಮಾ.12ಕ್ಕೆ ಸಂದರ್ಶನ ನಡೆಸಿರುವುದಂತೂ ನಿಯಮ ಬಾಹಿರ. ಸಂದರ್ಶನದ ವೇಳೆ ಕುಲಸಚಿವರ ನಡೆ ಸಂಶಯಾಸ್ಪದದಿಂದ ಕೂಡಿದೆ. ಹುದ್ದೆಗಳ ನೇಮಕಾತಿಯಲ್ಲಿ ಅಧಿಕಾರ ದುರ್ಬಳಕೆ ಜೊತೆಗೆ ಭ್ರಷ್ಟಾಚಾರ, ಸ್ವಜನ ಪಕ್ಷಪಾತ ಕಾಣುತ್ತಿದೆ. ಇದಕ್ಕೆ ಕುಲಪತಿಗಳು ಕೈ ಜೋಡಿಸಿದ್ದಾಗಿ ಗಂಭೀರವಾದ ಆಪಾದನೆ ಮಾಡಿದರು. ಆಯ್ಕೆಯಾದ ಅಭ್ಯರ್ಥಿಗಳ ಸಿಂಧುತ್ವ, ಅಂಕಪಟ್ಟಿ, ಪೊಲೀಸ್ ಪರಿಶೀಲನೆ ಮತ್ತು ಸೇವಾನುಭವ ಪ್ರಮಾಣ ಪತ್ರ ಪರಿಶೀಲಿಸಿಲ್ಲ, ಸಿಂಡಿಕೇಟ್ ಸಭೆಯಲ್ಲಿ ಒಪ್ಪಿಗೆ ಸಹ ಪಡೆಯದೆ, ತರಾತುರಿಯಲ್ಲಿ ಆಯ್ಕೆ ಪಟ್ಟಿಯನ್ನು ಪ್ರಕಟಿಸಿದ್ದಾಗಿ ಪ್ರತಿಭಟನಾಕಾರರು ದೂರಿದರು. ಅಂತಿಮ ಆಯ್ಕೆಪಟ್ಟಿ ತಡೆ ಹಿಡಿದು, ಉನ್ನತ ಮಟ್ಟದ ತನಿಖೆಯೂ ನಡೆಸಬೇಕಿದೆ. ತಪಿತಸ್ಥರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಬೇಕು. ಈ ನೇಮಕಾತಿ ಆದೇಶ ರದ್ದುಗೊಳಿಸಿ, ಹೊಸದಾಗಿ ನೇಮಕಾತಿ ಆದೇಶ ಹೊರಡಿಸಲು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಕೃವಿವಿ ಸಿಂಡಿಕೇಟ್ ಸದಸ್ಯ ರವಿ ಮಾಳಗೇರ, ಪರಮೇಶ್ವರ ಕಾಳೆ, ಎಂ.ಅರವಿಂದ, ವಿಶ್ವನಾಥ ಚಿಂತಾಮಣಿ, ಪ್ರೊ. ಸುಭಾಷ ನಾಟೀಕಾರ, ರವೀಂಧ್ರ ಕಲ್ಯಾಣಿ, ಮಾರುತಿ ದೊಡ್ಡಮನಿ, ಶಂಕರ ಪಾತ್ರದ ಸೇರಿ ಅನೇಕರು ಪಾಲ್ಗೊಂಡಿದ್ದರು.

ಕರ್ನಾಟಕ ಪಬ್ಲಿಕ್ ಸ್ಕೂಲ್ 2023ರಲ್ಲಿ ಶಿಕ್ಷಕರ ನೇಮಕಾತಿಗೆ ಅರ್ಜಿ ಕರೆದಿತ್ತು. 440 ಅರ್ಜಿಗಳು ಬಂದಿದ್ದವು. 2024ರಲ್ಲಿ ಪ್ರವೇಶ ಪರೀಕ್ಷೆ ನಡೆದಿವೆ. ಇದರಲ್ಲಿ 63 ಜನ ಅರ್ಹರಿಗೆ 1.5 ಮಾದರಿ ಬ್ಲಾಕ್ ಬೋರ್ಡ್ ಟೆಸ್ಟ್ ಮಾಡಿದೆ. ಎಲ್ಲವೂ ರೋಸ್ಟರ್ ಪ್ರಕಾರವೇ ನಡೆದಿದೆ. ಸದ್ಯ ದಾಖಲೆಗಳು, ಸಿಂಧುತ್ವದ ಪರಿಶೀಲಿಸಿದ ನಂತರ ಸಿಂಡಿಕೇಟ್ ಒಪ್ಪಿದ ನೇಮಕಾತಿ ಆದೇಶ ನೀಡುವುದು ಬಾಕಿ ಉಳಿದಿದೆ.
■ **ಡಾ. ಎ.ಎಂ.ಖಾನ್**, ಧಾರವಾಡ ಕವಿವಿ ಕುಲಪತಿ




## ಕಾಲ ಕಾಲಕ್ಕೆ ಆಧ್ಯಾತ್ಮಿಕ ಚಿಂತನೆ ಅವಶ್ಯ: ಶಿವಯೋಗಿ ಶಿವಾಚಾರ್ಯ ಸ್ವಾಮೀಜಿ

**ಕುಂದಗೋಳ:** ಶ್ರದ್ಧಾ, ಭಕ್ತಿ ಮಾನವೀಯ ಮೌಲ್ಯಗಳನ್ನು ಹೆಚ್ಚಿಸುತ್ತವೆ. ಆ ನಿಟ್ಟಿನಲ್ಲಿ ಮಾನವ ಮಹಾದೇವನಾಗುವ ಚಿಂತನೆ ಮೈಗೂಡಿಸಿಕೊಳ್ಳಬೇಕು. ಅಂದಾಗ ಬದುಕು ಸಾರ್ಥಕವಾಗುತ್ತದೆ ಎಂದು ರಾಣೇಬೆನ್ನೂರಿನ ಶನೇಶ್ವರ ಮಠದ ಶಿವಯೋಗಿ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಅವರು ತಾಲೂಕಿನ ಕೂಬಿಹಾಳ ಗ್ರಾಮದ ಬಸವಣ್ಣ ದೇವರ ಜಾತ್ರಾ ಮಹೋತ್ಸವ ಅಂಗವಾಗಿ ನೂತನ ಬಸವಣ್ಣ, ಗಣಪತಿ, ಸುಬ್ರಮಣ್ಯ ಮೂರ್ತಿ ಪ್ರಾಣ ಪ್ರತಿಷ್ಠಾಪನೆ ಹಾಗೂ ಪ್ರವಚನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಜೇಡರ ದಾಸಿಮಯ್ಯನವರ ವಚನದ ಸಾರದಂತೆ ಮನುಷ್ಯನ ಒಡಲೆಂಬ ಬಂಡಿಗೆ ಸಂಸ್ಕಾರದ ಕೀಲು ಬೇಕು ಎಂಬಂತೆ ಕಾಲ ಕಾಲಕ್ಕೆ ಇಂತಹ ಆಧ್ಯಾತ್ಮಿಕ ಚಿಂತನೆಗಳು ಜರುಗಬೇಕು ಎಂದರು.

ದೇಬಸ್ಥಾನ ಟ್ರಸ್ಟ್ ಕಮಿಟಿ ಅಧ್ಯಕ್ಷ ಉಮೇಶ ಹೆಬಸೂರ ಮಾತನಾಡಿ, ಐದು ದಿನಗಳು ಅಧ್ಯಾತ್ಮಿಕ ಪ್ರವಚನ ಸಹಿತ ಇನ್ನಿತರ ಎಲ್ಲಾ ಧಾರ್ಮಿಕ ಕಾರ್ಯಕ್ರಮಗಳ ಜರುಗುವವು. ಮಾ.19ರಂದು ಸಂಜೆ 5 ಗಂಟೆಗೆ ಬಸವೇಶ್ವರ ಮಹಾ ರಥೋತ್ಸವ ಜರುಗುವುದೆಂದು ಹೇಳಿದರು. ಪ್ರಾಸ್ತಾವಿಕವಾಗಿ ಈಶ್ವರಪ್ಪ ಸವಣೂರು, ವಿರೇಶ ಪ್ರಳಯಕಲ್ಮಠ ಮಾತನಾಡಿದರು. ಮಲ್ಲಿಕಾರ್ಜುನಯ್ಯ ಕಟಗಿಹಳ್ಳಿಮಠ, ಈಶ್ವರಪ್ಪ ಸವಣೂರ, ಸಿದ್ದಪ್ಪ ರಡ್ಡೇರ, ಫಕೀರಪ್ಪ ರಡ್ಡೇರ, ಬಸವರಾಜ ದೇಶಪಾಂಡೆ, ರಾಮಣ್ಣ ಸಂಶಿ, ಶೇಖರಗೌಡ ಶಿರಕೋಳ, ವಿರುಪಾಕ್ಷಪ್ಪ ರಡ್ಡೇರ, ವಿರೂಪಾಕ್ಷಯ್ಯ ಕುಮಾರಗೊಪ್ಪ, ನಾಗನಗೌಡ ಹುಡೇದ ಇದ್ದರು. ಶಿವಲಿಂಗಪ್ಪ ಸವಣೂರು ತಂಡದಿಂದ ಸಂಗೀತ ಕಾರ್ಯಕ್ರಮ ಜರುಗಿತು. ಶಿಕ್ಷಕ ರಾಜು ಮಡಿವಾಳರ ನಿರೂಪಿಸಿದರು.



## ಸಮಕಾಲೀನ ಸಮಸ್ಯೆಗಳಿಗೆ ಸಾಹಿತ್ಯ ಸ್ಪಂದಿಸಲಿ: ಸ್ನೇಹಾ ಭೂಸನೂರ

**ಹುಬ್ಬಳ್ಳಿ:** ಪುರುಷನಿಗೆ ಸಮಾನವಾಗಿ ಮಹಿಳೆ ನಡೆಯುತ್ತಿದ್ದರೂ ಆಕೆಯನ್ನು ನೋಡುವ ದೃಷ್ಟಿಕೋನ ಬದಲಾಗಿಲ್ಲ, ಇಂದಿಗೂ ಲಕ್ಷಾಂತರ ಹೆಣ್ಣುಮಕ್ಕಳಿಗೆ ಜ್ಞಾನದ ಬಾಗಿಲು ತೆರೆದಿಲ್ಲ ಎಂದು ಸಾಹಿತಿ ಸ್ನೇಹಾ ವಿ. ಭೂಸನೂರ ತಿಳಿಸಿದರು.

ಇಲ್ಲಿನ ಲಿಂಗರಾಜನಗರ ಸಾಂಸ್ಕೃತಿಕ ಸಮುದಾಯ ಭವನದಲ್ಲಿ ನಡೆದ ಹುಬ್ಬಳ್ಳಿ ನಗರ ತಾಲೂಕು 11ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸಾಮಾಜಿಕ ಮಾಧ್ಯಮಗಳಿಂದಾಗಿ ಬರಹಗಾರರಿಗೆ ಹೆಚ್ಚು ಅವಕಾಶಗಳು ದೊರೆಯುತ್ತಿವೆ. ಬರೆಯುವವರ ಸಂಖ್ಯೆಯೂ ಹೆಚ್ಚಾಗುತ್ತಿದೆ. ಆದರೆ ಗುಣಮಟ್ಟ ಕಂಡು-ಬರುತ್ತಿಲ್ಲ, ಸಮಕಾಲೀನ ಸಮಸ್ಯೆಗಳಿಗೆ ಸಾಹಿತ್ಯ ಸ್ಪಂದಿಸುತ್ತಿಲ್ಲ ಎಂದರು.

ಸಮ್ಮೇಳನ ಕಲಬುರಗಿಯ ಉದ್ಘಾಟಿಸಿದ ಸಾಹಿತಿ ಜಯಶ್ರೀ ವೀರಣ್ಣ ದಂಡೆ ಮಾತನಾಡಿ, ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಯೋಗ್ಯತೆಯನ್ನು ಶರಣರುವಚನ ಸಾಹಿತ್ಯದ ಮೂಲಕ 12ನೇ ಶತಮಾನದಲ್ಲೇ ತಂದುಕೊಟ್ಟಿದ್ದಾರೆ. ಕನ್ನಡ ಇಂದಿಗೂ ಚಾಲನೆಯಲ್ಲಿರಲು ಬಸವಾದಿ ಶರಣರು ಅಂದು ನೀಡಿದ ಕೊಡುಗೆಯೇ ಕಾರಣ ಎಂದರು. ಈ ವೇಳೆ ಪ್ರಾಥಮಿಕ ಹಂತದಲ್ಲಿ 7 ನೇ ತರಗತಿಯ ವರೆಗೆ ಕನ್ನಡ ಮಾಧ್ಯಮ ಕಡ್ಡಾಯಗೊಳಿಸಬೇಕು. ಕೇಂದ್ರ ಸರ್ಕಾರ ಸ್ಪರ್ಧಾತ್ಮ ಪರೀಕ್ಷೆ ಬರೆಗೆ ಕನ್ನಡ ಭಾಷೆಯಲ್ಲಿ ಅವಕಾಶ ನೀಡಬೇಕು. ಹುಬ್ಬಳ್ಳಿಯಲ್ಲಿ ಕನ್ನಡ ಸಾಹಿತ್ಯ ಭವನ ನಿರ್ಮಿಸಬೇಕು ಎಂದು ನಿರ್ಣಯ ತೆಗೆದುಕೊಳ್ಳಲಾಯಿತು. ಸಮ್ಮೇಳ-ಸಮ್ಮೇಳನಾಧ್ಯಕ್ಷರಿಗೆ ಧ್ವಜ ಹಸ್ತಾಂತರಿಸಿದ ನಿಕಟಪೂರ್ವ ಅಧ್ಯಕ್ಷ ಕೆ.ಎಸ್. ಕೌಜಲಗಿ ಮಾತನಾಡಿದರು. ಕೃತಿ ಬಿಡುಗಡೆ: ಕೃಷ್ಣಸಖಿ ನಾಗರತ್ನ ಅವರ 'ನೋವಲ್ಲರಳಿದ ಹೂ ನಗು', ಸ್ನೇಹಾ ಭೂಸನೂರ ಸಂಪಾದಿತ- ಪಂ. ಗುರುಬಸವಾಚಾರ್ಯ ಹಿರೇಮಠ ವಿರಚಿತ 'ವಚನ ಸಂಗೀತ', ಶಾಂತಾ ಕೆ. ಬಸವರಾಜ ಅವರ 'ಬಸವೇಶ್ವರ-ಸಂಪುಟ 5', ಅನುಪಮ ಅದಾಪೂರ ಅವರ 'ಬೇವೂರ ಜನಪದ ಹಾಡುಗಳು' ಹಾಗೂ ಸ್ನೇಹಾ ಭೂಸನೂರ ಅವರ 'ಬಿಸಿಲುಂಡ ಅರಿಶಿನ' ಕೃತಿಯ ಇಂಗ್ಲಿಷ್ ಆವೃತ್ತಿಯನ್ನು ಬಿಡುಗಡೆ ಮಾಡಲಾಯಿತು. ಕಸಾಪ ಜಿಲ್ಲಾಧ್ಯಕ್ಷ ಲಿಂಗರಾಜ ಅಂಗಡಿ, ಪೊಲೀಸ್ ಅಧಿಕಾರಿ ಜ್ಯೋತಿರ್ಲಿಂಗ್ ಹೊನಕಟ್ಟಿ, ಬೀದರ್‌ನ ಬಸವಗಿರಿಯ ಬಸವ ಸೇವಾ ಪ್ರತಿಷ್ಠಾನದ ಅಧ್ಯಕ್ಷೆ ಗಂಗಾಂಬಿಕಾ ಅಕ್ಕ, ವಿಶ್ವಭಾರತಿ ಬಾಲಕಿಯರ ಪ್ರೌಢಶಾಲೆ ಕಾರ್ಯಾಧ್ಯಕ್ಷ ವೆಂಕಣ್ಣ ಕಿರೇಸೂರ, ಕಟ್ಟಿಮಂಗಳಾದೇವಿ ಮಹಿಳಾ ಮಂಡಳದ ಅಧ್ಯಕ್ಷೆ ಲತಾ ಉಮರಾಣಿ, ಪ್ರೊಬಸ್ ಕ್ಲಬ್ ಅಧ್ಯಕ್ಷ ಎಂ.ಜಿ. ಸಜ್ಜನರ, ಸಮುದಾಯ ಭವನ ಅಧ್ಯಕ್ಷ ಜಿ.ಬಿ. ಕಲಕೋಟಿ, ಕೋಳಿವಾಡ ಗ್ರಾನೈಟ್ಸ್‌ನ ಶಂಕರ ಕೋಳಿವಾಡ, ಕನ್ನಡ ಸಾಹಿತ್ಯ ಪರಿಷತ್ ಹುಬ್ಬಳ್ಳಿ ನಗರ ತಾಲೂಕು ಘಟಕದ ಅಧ್ಯಕ್ಷೆ ವಿದ್ಯಾ ವಂಟಮುರಿ ಇದ್ದರು.



## ಧರ್ಮಸ್ಥಳ ಸರ್ವರ ಪವಿತ್ರ ಕೇಂದ್ರ




**ಧಾರವಾಡ:** ಧರ್ಮಸ್ಥಳ ಸರ್ವ ಧರ್ಮೀಯರ ಪವಿತ್ರ ಧಾರ್ಮಿಕ ಕೇಂದ್ರ. ಇದು ಅನೇಕ ಸಮಾಜಮುಖಿ ಕೆಲಸಗಳಿಂದ ಜಗತ್ತಿನಲ್ಲಿ ಹೆಸರುವಾಸಿಯಾಗಿದೆ ಎಂದು ರಂಗಕರ್ಮಿ ಡಾ.ಶಶಿಧರ ನರೇಂದ್ರ ಹೇಳಿದರು.

ನಗರದ ಜೆಎಸ್‌ಎಸ್ ಸಂಸ್ಥೆಯಲ್ಲಿ ನಡೆದ ಸಾಹಿತ್ಯ-ಸಂಸ್ಕೃತಿ ರಾಜ್ಯ ಮಟ್ಟದ ವಿಚಾರ ಸಂಕಿರಣದಲ್ಲಿ ಸರ್ವಧರ್ಮ ಸಮನ್ವಯ ಕೇಂದ್ರ: ಶ್ರೀಕ್ಷೇತ್ರ ಧರ್ಮಸ್ಥಳ ವಿಷಯ ಕುರಿತು ಅವರು ಮಾತನಾಡಿದರು.

ಧರ್ಮಸ್ಥಳ ವಿಶಿಷ್ಟ ಕ್ಷೇತ್ರ. ಅನ್ನದಾನ, ವಿದ್ಯಾದಾನ, ಆರೋಗ್ಯ ಮತ್ತು ಅಭಯ ದಾನಗಳಿಂದ ಜಾತಿ-ಮತ ಬೇಧವಿಲ್ಲದೆ ಜನರ ಒಳಿತಿಗಾಗಿ ಸೇವೆ ಸಲ್ಲಿಸುತ್ತಿರುವ ಶ್ರದ್ಧಾಭಕ್ತಿಯ ಕೇಂದ್ರವಾಗಿದೆ ಎಂದರು.

ಮೂಲತಃ ಕುಡುಮಾ ಎಂದು ಕರೆಯುವ ಶ್ರೀಕ್ಷೇತ್ರ ಮುನ್ನಡೆಸುವ ಜವಾಬ್ದಾರಿ ವಂಶಪರಂಪರೆಯ ಜೈನ ಸಮಾಜದ ಹೆಗ್ಗಡೆ ಕುಟುಂಬ, ಈಗಿನ ರಾಜರ್ಷಿ ಡಾ.ವೀರೇಂದ್ರ ಹೆಗ್ಗಡೆ ಧರ್ಮಾಧಿಕಾರಿ ಎಂದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಧ್ಯಾಪಕಿ ಡಾ.ವೀಣಾ ಹೂವಾರ, ಧರ್ಮಸ್ಥಳ ಮೇಲು-ಕೀಳು ಎನ್ನದೇ ಸ್ವಸಹಾಯ ಗುಂಪುಗಳ ಮೂಲಕ ಮಹಿಳಾ ಸಬಲೀಕರಣಕ್ಕೆ ಶ್ರಮಿಸಿ, ಯಶಸ್ಸನ್ನು ಕಂಡಿದೆ ಎಂದರು.ತನುಜಾ ರೋಖಡೆ ನಿರೂಪಿಸಿದರು. ಡಾ. ಜಿನದತ್ತ ಹಡಗಲಿ ವಂದಿಸಿದರು.

## ವಿರೂಪಾಕ್ಷೇಶ್ವರ ಜಾತ್ರಾ ಮಹೋತ್ಸವ: ಲವಣಗಿರಿ ಉತ್ಸವ ಕಾರ್ಯಕ್ರಮ

**ಉಪ್ಪಿನಬೆಟಗೇರಿ:** ಜೇನು ಸವಿ ಉಂಡರೆ ಆನಂದ ಸಿಗುವುದು, ಬೆಳದಿಂಗಳ ಆಟವಾಡಿದರೆ ಮನಸ್ಸು ಪರಿವರ್ತನೆಆಗುವುದು ಎಂದು ಕಲ್ಲೂರ ಆರೋಢ ಆಶ್ರಮದ ಮಾತೋಶ್ರೀ ಲಲಿತಮ್ಮನವರು ಹೇಳಿದರು.

ಅವರು ವಿರೂಪಾಕ್ಷೇಶ್ವರ ಜಾತ್ರಾ ಮಹೋತ್ಸವ ಅಂಗವಾಗಿ ಮಂಗಳವಾರದಂದು ನಡೆದ ಲವಣಗಿರಿ ಉತ್ಸವ ಕಾರ್ಯಕ್ರಮದಲ್ಲಿ ಸಾನ್ನಿಧ್ಯ ವಹಿಸಿ ಮಾತನಾಡಿದರು.

ನಂದಿಕೇಶ್ವರ ಪಂಡಿತ ವೀರೇಶ್ವರ ಶಾಸ್ತ್ರಿಗಳು ನಾಲ್ಕನೇ ದಿನದಲ್ಲಿ ಬರುವ ಶರಣ ಆಮುಗೆ ದೇವಯ್ಯ ಜೀವನ ದರ್ಶನ ಪ್ರವಚನದಲ್ಲಿ ಸತ್ಯ ಶುದ್ಧ ಕಾಯಕ ಮಾಡುತ್ತಾ ನಿತ್ಯ ಲಿಂಗಾರ್ಚನೆ,ಜಂಗಮರಿಗೆ ಸದಾ ದಾಸೋಹ ಹಾಗೂ ಶರಣ ಸಂಸ್ಕೃತಿ ಅಳವಡಿಸಿಕೊಂಡು ಹೋಗುತ್ತಿದ್ದರು. ನಮ್ಮಧರ್ಮದಲ್ಲಿ ಯಾವಾಗಲೂ ನಿಷ್ಠೆ ಇರಬೇಕು ಎಂದರು. ಧಾರವಾಡ ಜಿಲ್ಲಾ ಜರ್ನಲಿಸ್ಟ್ ಗಿಲ್ಡ್ ಅಧ್ಯಕ್ಷ ಡಾ. ಬಸವರಾಜ ಹೊಂಗಲ ಮಾತನಾಡಿ, ರೈತರು ಹೆಚ್ಚಾಗಿ ಸಾವಯವ ಕೃಷಿಯನ್ನೇ ಮಾಡಬೇಕು. ಅದರಲ್ಲಿರುವ ಒಳ್ಳೆಯ ಪೋಷಕಾಂಶದಿಂದ ಶರೀರಕ್ಕೆ ಅವಶ್ಯವಿರುವ ಆಹಾರ ನಮಗೆ ಸಿಗುತ್ತದೆ ಎಂದರು. ಮೂರು ಸಾವಿರ ವಿರಕ್ತಮಠದ ಕುಮಾರ ವಿರೂಪಾಕ್ಷ ಸ್ವಾಮೀಜಿ ಮಾತನಾಡಿ, ಪುರಾಣ ಪ್ರವಚನ ಮುಖಾಂತರ ತಂದೆ ತಾಯಿಗಳು ಮಕ್ಕಳಿಗೆ ಸಂಸ್ಕಾರ, ರೈತರಿಗೆ ಸಾವಯವ ಕೃಷಿ ಮತ್ತು ನಾವು ಸಮಾಜದಲ್ಲಿ ಹೇಗೆ ಬಾಳಬೇಕು ಎಂದು ಪತ್ರಕರ್ತರು ಜನರಿಗೆ ತಿಳಿಸಿಕೊಟ್ಟರು ಎಂದರು. ಸೋಮೇಶ್ವರ ಸಹಕಾರಿ ಸಕ್ಕರೆ ಫ್ಯಾಕ್ಟರಿ ನಿರ್ದೇಶಕ ಮಲ್ಲಣ್ಣಾ ಅಷ್ಟಗಿ ಮಾತನಾಡಿದರು. ಹಿರಿಯ ಪತ್ರಕರ್ತ ನಿಜಗುಣಿ ದಿಂಡಲಕೊಪ್ಪ,ಬಸವರಾಜ ಅಂಗಡಿ, ಮಂಜು ಗಿರಿಯಾಲ, ಮಂಜುನಾಥ ಅಂಗಡಿ, ಚನ್ನಬಸಪ್ಪ ಲಗಮಣ್ಣವರ, ಪ್ರವೀಣ ಓಂಕಾರಿ, ಶಿವಪ್ರಭು ಈಸರಗೊಂಡ, ಪ್ರಕಾಶ ಹೂಗಾರ, ರಮೇಶ ಓರಣಕರ, ಶ್ರೀಶೈಲ ಗೌರಿಮಠ ಹಾಗೂ ಹನುಮನಹಾಳ, ಲೋಕೂರ, ನನಗುಂಡಿಕೊಪ್ಪ,ಉಪ್ಪಿನಬೆಟಗೇರಿ ಗ್ರಾಮದ ಹಿರಿಯರನ್ನು ವಿಶ್ವಗುರು ಬಸವಣ್ಣನವರ ಸನ್ಮಾನಿಸಲಾಯಿತು. ಉಪ್ಪಿನಬೆಟಗೇರಿ ಪತ್ರಕರ್ತರ ಬಳಗ ಹಾಗೂ ಶರಣ ಮಹಾದೇವಪ್ಪ ಹೊಸೆಟ್ಟಿ ಪ್ರಸಾದ ಸೇವೆ ಸಲ್ಲಿಸಿದರು. ಸಂಜಯ ಕೊಡಿ ಸ್ವಾಗತಿಸಿದರು. ಶಿಕ್ಷಕ ರಮೇಶ ಮಡಿವಾಳರ ನಿರ್ವಹಿಸಿದರು. ಮಾ.18 ರಂದು ಲವಣಗಿರಿ ಉತ್ಸವದ ಐದನೇ ದಿನದಂದು ಉರಿಲಿಂಗ ಪೆದ್ದಿ ಕಾಳವ್ವೆ ಜೀವನ ದರ್ಶನ ಪ್ರವಚನದಲ್ಲಿ ಸಾನ್ನಿಧ್ಯ ಗರಗ ಉತ್ತರಾಧಿಕಾರಿ ಆತ್ಮಾರಾಮ ಸ್ವಾಮೀಜಿ, ಅಧ್ಯಕ್ಷತೆ ಕೆ.ಎನ್. ಬುದ್ನಿ, ಮುಖ್ಯ ಅತಿಥಿಗಳಾದ ಧಾರವಾಡ ಖ್ಯಾತ ಡಾ. ಎಸ್.ಆರ್. ರಾಮನಗೌಡರ, ಧಾರವಾಡ ರುದ್ರ ಬಳಗದ ಪಾರ್ವತಿ ಹಾಲಭಾವಿ,ವಿಶ್ವ ಹಿಂದೂ ಪರಿಷತ್ ಜಿಲ್ಲಾ ಉಪಾಧ್ಯಕ್ಷ ಬಸವರಾಜ ಕೌಜಲಗಿ, ಬೆಳಗಾವಿ ಕೆಎಲ್‌ಇ ನಿವೃತ್ತ ಕಾರ್ಯದರ್ಶಿ ಚಂದ್ರಶೇಖರ ಎನ್. ನಾಯಕರ, ನಿವೃತ್ತ ಶಿಕ್ಷಕ ಕಾಶಪ್ಪ ದೊಡವಾಡ, ಗರಗ ಗ್ರಾಮದ ಮಹೇಶ ಹೆಬ್ಬಳ್ಳಿ ಆಗಮಿಸಿವರು.



## ಮೃತ ಫಲಾನುಭವಿಗಳ ಹೆಸರು ಕೈಬಿಡಿ



**ಕುಂದಗೋಳ:** ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯಿಂದ ಜನತಾ ದರ್ಶನ ಜರುಗಿತು.

ಪಟ್ಟಣದ ವಿವಿಧ ಇಲಾಖೆಗಳ ಸರ್ಕಾರಿ ಸಂಕೀರ್ಣದಲ್ಲಿ ನಡೆದ ಜನತಾ ದರ್ಶನದಲ್ಲಿ ಸಾರಿಗೆ ಸಮಸ್ಯೆ, ಗೃಹಲಕ್ಷ್ಮೀ ಸಮಸ್ಯೆ, ವಿದ್ಯುತ್ ಸಮಸ್ಯೆಗಳಿಗೆ ಜನರಿಂದ ಅಹವಾಲು ಕೇಳಿ ಬಂದವು, ಜನರು ಸಮಸ್ಯೆಗಳ ಮನವಿ ಸಲ್ಲಿಸಿದರು. ಬಳಿಕ ನಡೆದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸಭೆಯಲ್ಲಿ ಗೃಹಲಕ್ಷ್ಮೀ ಯೋಜನೆಯಲ್ಲಿ ಮೃತ ಫಲಾನುಭವಿಗಳ ಹೆಸರುಗಳನ್ನು ಪಟ್ಟಿಯಿಂದ ಹೊರಗಿಡಬೇಕು ಹಾಗೂ ಅನ್ನಭಾಗ್ಯ ಯೋಜನೆ ಅಕ್ಕಿ ಕಾಳಸಂತೆಯಲ್ಲಿ ಮಾರಾಟ ಪಡೆಯುವ ಅಂಗಡಿ ಮುಂಗಟ್ಟುಗಳ ವಿರುದ್ಧ ಕ್ರಮಕ್ಕೆ ಸದಸ್ಯರಿಂದ ಆಗ್ರಹ ಕೇಳಿ ಬಂದವು. ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ತಾಲೂಕಾಧ್ಯಕ್ಷ ಸತೀಶ ಕೊಬ್ಬಯ್ಯನವರು ಮಾತನಾಡಿ, ಇಲಾಖೆಯ ಅಧಿಕಾರಿಗಳ ಇದನ್ನ ಸರಿ ಪಡಿಸಿ ಕ್ರಮಕ್ಕೆಗೊಳ್ಳುವಂತೆ ಹೇಳಿದರು.

ಹೆಸ್ಕಾಂ ಇಲಾಖೆ ಅಧಿಕಾರಿಗಳು ಕೃಷಿ ಜಮೀನಿನಲ್ಲಿ ಜೋತು ಬಿದ್ದ ವಯರ್‌ಗಳನ್ನು ಸರಿಪಡಿಸಿ ಮಳೆಗಾಲದಲ್ಲಿ ತೊಂದರೆಯಾಗದಂತೆ ಕ್ರಮ ವಹಿಸಲು ಸೂಚಿಸಲಾಯಿತು. ಸತೀಶ ಕೊಬ್ಬಯ್ಯನವರ, ತಾಪಂ ಇಒ ಪ್ರಶಾಂತ ತುರಕಾಣಿ ಹಾಗೂ ಸಮಿತಿ ಸದಸ್ಯರು, ತಾಲೂಕು ಮಟ್ಟದ ಅಧಿಕಾರಿಗಳಿದ್ದರು.

### ಪ್ರಮುಖ ರಾಜಕೀಯ ಪಕ್ಷದಿಂದ ಘೋಷಣೆಯಾಗದ ಅಭ್ಯರ್ಥಿಗಳು

# ಕುತೂಹಲ ಕೆರಳಿಸಿದ ಅಭ್ಯರ್ಥಿಗಳ ಘೋಷಣೆ

▸ ಜಗದೀಶ ಎಂ.ಗಾಣಿಗೇರ

**ಬಾಗಲಕೋಟೆ:** ಬಾಗಲಕೋಟೆ ವಿಧಾನಸಭೆ ಮತಕ್ಷೇತ್ರದ ಉಪಚುನಾವಣೆಗೆ ದಿನಾಂಕ ಘೋಷಣೆಯಾಗುತ್ತಿದ್ದಂತೆ ಕಾರ್ಯಕರ್ತರಲ್ಲಿ ಹುಮ್ಮಸ್ಸು ಮೂಡಿದರೂ ಅಭ್ಯರ್ಥಿಗಳು ಯಾರಾಗುತ್ತಾರೆಂಬ ಕುತೂಹಲ ಎರಡೂ ಪಕ್ಷದಲ್ಲಿ ಮೂಡಿದೆ.

**ನಾಮಪತ್ರ ಸಲ್ಲಿಸಲು ಆರು ದಿನ ಬಾಕಿ**

ಬಾಗಲಕೋಟೆ ವಿಧಾನಸಭಾ ಮತಕ್ಷೇತ್ರದ ಶಾಸಕರಾಗಿದ್ದ ಎಚ್.ವೈ. ಮೇಟಿಯವರು ನಿಧನರಾದ ಬಳಿಕ ನಡೆಯುತ್ತಿರುವ ಉಪಚುನಾವಣೆ ದಿನಾಂಕ ಘೋಷಣೆಯಾಗಿದೆ. ಆದರೂ ಎರಡೂ ಪಕ್ಷದಲ್ಲಿ ಅಭ್ಯರ್ಥಿ ಘೋಷಣೆ ಬಾಕಿ ಇದ್ದು ಕಾಂಗ್ರೆಸ್, ಬಿಜೆಪಿ ಪಕ್ಷದಿಂದ ಯಾರು ಅಭ್ಯರ್ಥಿಯಾಗುತ್ತಾರೆ ಎಂಬುದು ಮಾತ್ರ ನಿಗೂಢವಾಗಿದೆ.

**ಮೇಟಿ ಕುಟುಂಬದವರಲ್ಲಿ ಗೊಂದಲ:** ದಿ.ಶಾಸಕ ಎಚ್.ವೈ.ಮೇಟಿಯವರು ಕುಟುಂಬದಲ್ಲಿ ಟಿಕೆಟ್ ಗೊಂದಲ ಮತ್ತಷ್ಟು ಉಲ್ಬಣಗೊಳ್ಳುತ್ತಿದೆ. ಇತ್ತೀಚಿಗೆ ಕಾಂಗ್ರೆಸ್ ಜಿಲ್ಲಾಧ್ಯಕ್ಷರು, ಚುನಾವಣಾ ಉಸ್ತುವಾರಿಗಳು ಯಾರೂ ಟಿಕೆಟ್ ಕುರಿತು ಬಹಿರಂಗ ಹೇಳಿಕೆ ನೀಡಬಾರದು ಎಂದು ಎಚ್ಚರಿಕೆಯನ್ನು ನೀಡಿದ್ದರು. ಆದರಂತೆ ಗೊಂದಲ ಕೂಡ ಸ್ವಲ್ಪ ದಿನ ತಣ್ಣಗಾಗಿತ್ತು. ಆದರೆ, ಈಗ ಮತ್ತೆ ಕಳೆದ ಎರಡು ದಿನಗಳಿಂದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಗಳು ತಮಗೂ ಟಿಕೆಟ್ ಕೊಡಿ ಎಂದು ಧ್ವನಿ ಎತ್ತುತ್ತಿದ್ದಾರೆ.

ಮಲ್ಲಿಕಾರ್ಜುನ ಮೇಟಿ, ಉಮೇಶ ಮೇಟಿಯವರು ಪತ್ರಿಕಾಗೋಷ್ಠಿ ಯೊಂದರಲ್ಲಿ ಇತ್ತೀಚಿಗೆ ಹೇಳಿಕೆ ನೀಡುವ ಮೂಲಕ ಮೇಟಿಯವರ ಕುಟುಂಬದಲ್ಲಿ ಯಾವುದೇ ಟಿಕೆಟ್ ಗೊಂದಲ ಇಲ್ಲ, ಯಾರಿಗೆ ಟಿಕೆಟ್ ಕೊಟ್ಟರೂ ಕಾಂಗ್ರೆಸ್ ಪರವಾಗಿ ಕೆಲಸ ಮಾಡುತ್ತೇವೆ ಎನ್ನುವ ಜತೆಗೆ ನಮ್ಮ ತಂದೆಯವರು ಕ್ಷೇತ್ರಕ್ಕೆ ಒಳ್ಳೆಯ ಕೆಲಸ ಮಾಡಿದ್ದನ್ನು ಗಮನದಲ್ಲಿಟ್ಟುಕೊಂಡು ಪಕ್ಷದ ಹೈಕಮಾಂಡ್ ನಮ್ಮ ಕುಟುಂಬದವರಿಗೆ ಟಿಕೆಟ್ ನೀಡುತ್ತಾರೆ ನಿರೀಕ್ಷೆ ಇದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದರು. ಮೇಟಿಯವರ ಕುಟುಂಬಕ್ಕೆ ಟಿಕೆಟ್ ನೀಡಬೇಕು ಎಂದು ಬಹುತೇಕ ಮತಕ್ಷೇತ್ರದ ಕಾರ್ಯಕರ್ತರು, ಮುಖಂಡರ ಅಭಿಪ್ರಾಯ ಒಂದೇ ಆಗಿದೆ. ನಮ್ಮ ತಂದೆಯವರು ಆದರ್ಶ ವ್ಯಕ್ತಿಯಾಗಿದ್ದರು ಅವರಂತೆ ಕ್ಷೇತ್ರದ ಅಭಿವೃದ್ಧಿ ಮಾಡಲು ಉಪಚುನಾವಣೆಯಲ್ಲಿ ಸ್ಪರ್ಧೆ ಮಾಡಲು ನಾನೂ ಆಕಾಂಕ್ಷಿ ಎಂದು ಮೇಟಿಯವರು ಪುತ್ರಿ ಮಹಾದೇವಿ ಮೇಟಿಯವರು ಸಾಮಾಜಿಕ ಜಾಲತಾಣದ ಮೂಲಕ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆದರೆ, ಕಾಂಗ್ರೆಸ್ ಪಕ್ಷದ ಹೈಕಮಾಂಡ್ ಮಾತ್ರ ಇನ್ನೂ ಅಭ್ಯರ್ಥಿ ಘೋಷಣೆ ಮಾಡುವುದನ್ನು ವಿಳಂಬ ಮಾಡಿದರೆ ದಿನಕ್ಕೊಬ್ಬರು ಆಕಾಂಕ್ಷಿಗಳು ಹುಟ್ಟಿಕೊಳ್ಳುವುದರಲ್ಲಿ ಸಂದೇಹ ಇಲ್ಲ.

**ಬಿಜೆಪಿಯಲ್ಲಿ ಟಿಕೆಟ್ ಆಕಾಂಕ್ಷಿಗಳು ಕಡಿಮೆ:** ಬಾಗಲಕೋಟೆ ಮತಕ್ಷೇತ್ರದ ಕಳೆದ ವಿಧಾನಸಭೆಯಲ್ಲಿ ಪರಾಜಿತರಾಗಿದ್ದ ವೀರಣ್ಣ ಚರಂತಿಮಠವರಿಗೆ ಈ ಬಾರಿ ಟಿಕೆಟ್ ಸಿಗುವ ನಿರೀಕ್ಷೆ ಇದೆ ಎಂದು ಬಿಜೆಪಿ ಕಾರ್ಯಕರ್ತರು ಹೇಳುತ್ತಿದ್ದಾರೆ. ಆದರೆ, ಬಿಜೆಪಿ ಪಕ್ಷದಲ್ಲಿ ಅಷ್ಟೊಂದು ಪೈಪೋಟಿ, ಆಕಾಂಕ್ಷಿಗಳು ಇಲ್ಲ, ಟಿಕೆಟ್ ಯಾರಿಗೆ ಕೊಟ್ಟರೂ ಬಿಜೆಪಿ ನಾಯಕರು, ಕಾರ್ಯಕರ್ತರು ಒಟ್ಟಾಗಿ ಕೆಲಸ ಮಾಡುತ್ತೇವೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

### ಬದಲಾವಣೆ ಬಯಸಿದರೆ ಅವಕಾಶ ನೀಡಿ



**ಬಾಗಲಕೋಟೆ:** ಹಿರಿಯ ನಾಯಕ ಶಾಸಕ ಎಚ್.ವೈ.ಮೇಟಿ ಅಗಲಿಕೆ ಬಹಳಷ್ಟು ನೋವು ತಂದಿದೆ. ಈ ಸ್ಥಾನಕ್ಕೆ ನಡೆಯುತ್ತಿರುವ ಉಪ ಚುನಾವಣೆಗೆ ಅವರ ಕುಟುಂಬದಲ್ಲಿ ಯಾರಿಗೆ ಟಿಕೆಟ್ ನೀಡಿದರು ನನ್ನ ಸಂಪೂರ್ಣ ಬೆಂಬಲವಿದೆ. ಪಕ್ಷವು ಬದಲಾವಣೆ ಬಯಸಿ ಬೇರೆಯವರಿಗೆ ಅವಕಾಶ ನೀಡುವುದಾದರೇ ನನನ್ನು ಮೊದಲ ಆದ್ಯತೆಯಾಗಿ ಪರಿಗಣಿಸಬೇಕು ಎಂದು ಕೆಪಿಸಿಸಿ ಮಹಿಳಾ ಘಟಕದ ಮಾಜಿ ಅಧ್ಯಕ್ಷೆ ರಕ್ಷಿತಾ ಭರತ ಕುಮಾರ ಈಟಿ ತಿಳಿಸಿದ್ದಾರೆ. ಎಚ್.ವೈ.ಮೇಟಿ ಅವರ ಕುಟುಂಬದಲ್ಲಿ ಜನಿಸಿಲ್ಲ, ಆದರೇ ತಮ್ಮ ಕುಟುಂಬದ ಸದಸ್ಯರಂತೆ ಕಾಣಿದ್ದಾರೆ. ರಾಜಕೀಯ ಹಾಗೂ ಪಕ್ಷದಲ್ಲಿ ಈ ಮಟ್ಟಿಗೆ ಬೆಳೆಯುವಲ್ಲಿ ಎಚ್.ವೈ.ಮೇಟಿ ಅವರು ಬೆನ್ನೆಲುಬಾಗಿ ನಿಂತಿದ್ದರು. ಕಳೆದ 17 ವರ್ಷಗಳಿಂದ ಪಕ್ಷದಲ್ಲಿ ಸಾಮಾನ್ಯ ಕಾರ್ಯಕರ್ತರಾಗಿ, ಏಳು ವರ್ಷ ಮಹಿಳಾ ಘಟಕದ ಜಿಲ್ಲಾಧ್ಯಕ್ಷರಾಗಿ ಪ್ರಮಾಣಿಕ ಸೇವೆ ಸಲ್ಲಿಸಿದ್ದೇನೆ. ಉಪ ಚುನಾವಣೆಯಲ್ಲಿ ಮೇಟಿ ಅವರ ಕುಟುಂಬಕ್ಕೆ ಟಿಕೆಟ್ ನೀಡಲು ಪಕ್ಷ ನಿರ್ಧಾರ ಮಾಡಿದರೇ ನನ್ನ ಬೆಂಬಲ ಇದೆ. ಬೇರೆಯವರಿಗೆ ಅವಕಾಶ ನೀಡುವ ಹಾಗೇ ಪಕ್ಷದ ವರಿಷ್ಠರು ಮುಂದು ವರೆದಲ್ಲಿ ನನಗೆ ಅವಕಾಶ ನೀಡಬೇಕು ಅಂತ ಮನವಿ ಮಾಡಿದ್ದಾರೆ.

ದಿಗಂತ ವಿಶೇಷ

### ಮಾಜಿ ಉಪಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ ಆರೋಪ

# ಸ್ಪೀಕರ್ ಸಭಾತ್ಯಾಗ ಸರ್ಕಾರದ ವೈಫಲ್ಯಕ್ಕೆ ಕನ್ನಡಿ



**ಕಲಬುರಗಿ:** ರಾಜ್ಯದಲ್ಲಿನ ಕಾಂಗ್ರೆಸ್ ಸರ್ಕಾರದ ಆಡಳಿತದ ಪರಿಸ್ಥಿತಿತುಂಬಾಸ್ಪಷ್ಟವಾಗಿರಾಜ್ಯದ ಜನರು ನಿನ್ನೆ ನೋಡಿದ್ದು, ರಾಜ್ಯದ ಇತಿಹಾಸದಲ್ಲೇ ವಿಧಾನಸಭಾ ಸ್ಪೀಕರ್ ಸಭಾ ತ್ಯಾಗ ಮಾಡಿದ್ದು ನಾನಂತೂ ನನ್ನ ಜೀವಮಾನದಲ್ಲಿ ನೋಡಿಲ್ಲ, ನಾನಲ್ಲಬೇರೆ ಯಾರೂ ಸಹ ನೋಡಿಲ್ಲ ಎಂದು ಮಾಜಿ ಉಪಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ಹೇಳಿದರು.

ನಗರರ ಐವನ್ ಶಾಹಿ ಅತಿಥಿ ಗೃಹದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಹಿಂದೆ ರಮೇಶ್ ಕುಮಾರ್ ಅವರು ಸಿಟ್ಟಾಗಿದ್ರೂ ಹೊರತು, ಸಭಾತ್ಯಾಗ ಮಾಡಿರಲಿಲ್ಲ. ಸದನದಲ್ಲಿ ಪ್ರಶ್ನೆಗಳಿಗೆ ಉತ್ತರ ಕೊಡ್ತಾ ಇಲ್ಲ, ಮಂತ್ರಿಗಳಿಲ್ಲ ಎಂದಾದ ಮೇಲೆ ಹೌಸ್ ಆದರೂ ಏಕೆ ಬೇಕು ಇವರಿಗೆ. ಸದನದಲ್ಲಿ ಮಂತ್ರಿಗಳ ಉಪಸ್ಥಿತಿಯಿಲ್ಲ ಎಂದು ಬೇಸರಗೊಂಡು ಸಭಾತ್ಯಾಗ ಮಾಡಿದ್ದು, ಸಿಎಂ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಆಡಳಿತದ ಒಂದು ಕನ್ನಡಿಯಾಗಿದೆ ಎಂದು ಹೇಳಿದರು.

ಕಾಂಗ್ರೆಸ್ ಸರ್ಕಾರದಲ್ಲಿ ಎಲ್ಲರೂ ಅಧಿಕಾರದ ದಾಹಕ್ಕಾಗಿ ಹಪಾಹಪಿಯಾಗಿ ಕೆಲಸ ಮಾಡುತ್ತಿದ್ದಾರೆ. ರಾಜ್ಯದ ಶ್ರೀಸಾಮಾನ್ಯರ ಪರಿಸ್ಥಿತಿ ಅಧೋಗತಿ ಎಂದ ಅವರು, ಕೈ ಸರ್ಕಾರದ ನೀತಿಗಳ ವಿರುದ್ಧ ರಾಜ್ಯದ ಜನರು ಜಾಗ್ರತರಾಗಬೇಕು ಎಂದರು.

> ರಾಜ್ಯದಲ್ಲಿ ನಡೆಯಲಿರುವ ಉಪ ಚುನಾವಣೆಯಲ್ಲಿ ನಾನು ಯಾವುದೇ ಪಕ್ಷದ ಪರ ಪ್ರಚಾರಕ್ಕೆ ಹೋಗುವುದಿಲ್ಲ, ಆದರೆ, ಕ್ಷೇತ್ರದ ಮತದಾರರಲ್ಲಿ ನಾನು ವಿನಂತಿ ಮಾಡುವುದೊಂದೆ, ಹಿಂದುತ್ವವನ್ನು ಬೆಂಬಲಿಸುವ ಪಕ್ಷಕ್ಕೆ ಬೆಂಬಲಿಸಿ ಎಂದು ಹೇಳುತ್ತೇನೆ.
> ■ ಕೆ.ಎಸ್.ಈಶ್ವರಪ್ಪ, ಮಾಜಿ ಡಿಸಿಎಂ

**ಸಚಿವ ಪ್ರಿಯಾಂಕ್ ಖರ್ಗೆ ಇನ್ನೂ ಎಳಸು**

ಕೇವಲ ತಂದೆಯ ಇನ್ಫ್ಲೂಲೆನ್ಸ್ ಮೇಲೆ ಬೆಳೆದಿರುವ ಸಚಿವ ಪ್ರಿಯಾಂಕ್ ಖರ್ಗೆ ಇನ್ನೂ ಎಳಸು ಇದ್ದಂತೆ. ದೇಶದ ಮಾಜಿ ಪ್ರಧಾನಿಗಳಾದ ಇಂದಿರಾ ಗಾಂಧಿ, ರಾಜೀವ್ ಗಾಂಧಿ ಅವರಿಂದಲೇ ಆರೆಸ್ಸೆಸ್ ಬ್ಯಾನ್ ಮಾಡಲು ಸಾಧ್ಯವಾಗಿಲ್ಲ.

ಸಚಿವ ಖರ್ಗೆಗೆ ಇದು ದೂರಿನ ಮಾತು ಎಂದು ಮಾಜಿ ಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ಹೇಳಿದ್ದಾರೆ.

ಕಾಂಗ್ರೆಸ್ ಆಡಳಿತದಲ್ಲಿ ಕೇವಲ ಮುಸ್ಲಿಂ ತುಷ್ಟೀಕರಣ ರಾಜಕೀಯ ನಡೆಯುತ್ತಿದೆ. ಇತ್ತೀಚೆಗೆ ಸಿಎಂ ಸಿದ್ದರಾಮಯ್ಯ ಅವರು ಮಂಡಿಸಿದ ದಾಖಲೆಯ ಬಜೆಟ್‌ನಲ್ಲಿ 1000 ಕೋಟಿ ಉರ್ದು ಶಾಲೆಗಳ ಅಭಿವೃದ್ಧಿಗೆ ನೀಡಲಾಗಿದೆ. ಮುಸ್ಲಿಂ ವೃದ್ಧರಿಗೆ ವೃದ್ಧಾಶ್ರಮ, 3 ಲಕ್ಷ ನಿರುದ್ಯೋಗ ಯುವಕರಿಗೆ, ಹಜ್ ಭವನ, ಸಾಲಕ್ಕೆ ಬಡ್ಡಿ ಮನ್ನಾ ಏಕೆ. ಸಿಎಂ ಸಿದ್ದರಾಮಯ್ಯ ಅವರಿಗೆ ದಲಿತರು, ಹಿಂದುಳಿದ ವರ್ಗದವರು ಕಾಣಲಿಲ್ಲವೇ ಎಂದು ಪ್ರಶ್ನಿಸಿದರು.

ನಾನು ಬಿಜೆಪಿಯಿಂದ ದೂರ ಇದ್ದಿದ್ದಕ್ಕೆ ನನಗೆ ಅಖಿಲೇಶ್ ಯಾದವ್ ಹಾಗೂ ಕಾಂಗ್ರೆಸ್ ಪಕ್ಷದವರು ಬಹಳ ಸಲ ಕರೆದಿದ್ದಾರೆ. ಆದರೆ,ನಾನು ಹೋಗಲಿಲ್ಲ, ಯಾಕಂದರೆ ನನ್ನ ಮೈಯಲ್ಲಿ ಆರೆಸ್ಸೆಸ್ ರಕ್ತ ಹರಿಯುತ್ತಿದೆ. ನಾನು ಹುಟ್ಟಿನಿಂದಲೇ ಬಿಜೆಪಿಯ ನಿಷ್ಠಾವಂತ ಕಾರ್ಯಕರ್ತ. ನಾನೆನಿದ್ದರೂ ಬಿಜೆಪಿಗೆ ಮರಳಿ ಹೋಗುತ್ತೇನೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

## ಕಿರುಸುದ್ದಿ

### ಬಳ್ಳಾರಿಗೆ ಇಂದು ರಾಜ್ಯಪಾಲರ ಭೇಟಿ

**ಬಳ್ಳಾರಿ:** ಕರ್ನಾಟಕ ರಾಜ್ಯದ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ಮಾ.18ರಂದು ಬಳ್ಳಾರಿ ಜಿಲ್ಲೆಗೆ ಪ್ರವಾಸ ಹಮ್ಮಿಕೊಂಡಿದ್ದಾರೆ.

ಮಾ.18 ರಂದು ಬೆಳಗ್ಗೆ ಬೆಂಗಳೂರಿನ ಲೋಕ ಭವನದಿಂದ ಎಚ್.ಎ.ಎಲ್ ವಿಮಾನ ನಿಲ್ದಾಣಕ್ಕೆ ಆಗಮಿಸಿ, ವಿಶೇಷ ವಿಮಾನದ ಮೂಲಕ ಬಳ್ಳಾರಿಯ ತೋರಣಗಲ್ಲು ಜಿಂದಾಲ್ ವಿಮಾನ ನಿಲ್ದಾಣಕ್ಕೆ ಆಗಮಿಸುವರು. ನಂತರ ಬೆಳಗ್ಗೆ 7.30ಕ್ಕೆ ಬಳ್ಳಾರಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಕೇಂದ್ರ (ಬಿಎಂಸಿಆರ್ ಸಿ) ಮೈದಾನದಲ್ಲಿ ಹಮ್ಮಿಕೊಂಡಿರುವ 'ನಶಾಮುಕ್ತ ಭಾರತ-ಯುವ ಶುದ್ಧಿ ಅಭಿಯಾನ' ಕಾರ್ಯಕ್ರಮ ಉದ್ಘಾಟನೆ ನೆರವೇರಿಸಲಿದ್ದಾರೆ. ಬಳಿಕ ತೋರಣಗಲ್ಲು ಜಿಂದಾಲ್ ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದ ಮೂಲಕ ಮರಳಿ ಬೆಂಗಳೂರಿಗೆ ಪ್ರಯಾಣಿಸಲಿದ್ದಾರೆ ಎಂದು ತಿಳಿಸಿದ್ದಾರೆ.

### ಡಾ.ಸಮೃದ್ಧಿ ಗಡ್ಡದ ರಾಜ್ಯಕ್ಕೆ ಪ್ರಥಮ

**ಚಡಚಣ:** ಡಾ. ಸಮೃದ್ಧಿ ಗಡ್ಡದ ಅವರು 2025ನೇ ಸಾಲಿನ ಸೆಪ್ಟೆಂಬರ್-ಅಕ್ಟೋಬರ್ ತಿಂಗಳಿನಲ್ಲಿ ನಡೆದ ವೈದ್ಯಕೀಯ ಸ್ನಾತಕೋತ್ತರ ಪರೀಕ್ಷೆಯ ಎಂ.ಎಸ್. ಜನರಲ್ ಸರ್ಜರಿಯಲ್ಲಿ ಶೇ.81ರಷ್ಟು ಅಂಕ ಪಡೆದು ರಾಜ್ಯದ ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾಲಯ ಬೆಂಗಳೂರು ನಡೆಸಿದ ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದು, ಚಿನ್ನದ ಪದಕ ಪಡೆದಿದ್ದಾರೆ.



ಡಾ. ಸಮೃದ್ಧಿಯವರು ದಾವಣಗೆರೆಯ ಜಗದ್ಗುರು ಜಯದೇವ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ವ್ಯಾಸಂಗ ಮಾಡುತ್ತಿದ್ದರು. ಇವರು ಪ್ರಾಥಮಿಕ ಶಿಕ್ಷಣದಿಂದ ಇಲ್ಲಿಯವರೆಗೂ ಪ್ರತಿಭಾವಂತ ವಿದ್ಯಾರ್ಥಿನಿಯಾಗಿದ್ದು, ಪ್ರತಿ ಹಂತದಲ್ಲಿಯೂ ಪ್ರಥಮ ಸ್ಥಾನವನ್ನು ಪಡೆಯುತ್ತಾ ಬಂದಿದ್ದಾರೆ. ಇವರು ವಿಜಯಪುರ ಜಿಲ್ಲೆಯ ಹೊರ್ತಿ ಗ್ರಾಮದವರಾಗಿದ್ದು, ರೇವಪ್ಪ ಹಾಗೂ ಮಹಾದೇವಿ ಗಡ್ಡದ ದಂಪತಿಯ ಏಕೈಕ ಸುಪುತ್ರಿಯಾಗಿದ್ದಾರೆ.

ಇವರು ದಾವಣಗೆರೆಯ ವೈದ್ಯಕೀಯ ಕಾಲೇಜಿನ ಬಾಪೂಜಿ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರದಲ್ಲಿ ವೈದ್ಯಕೀಯ ಸೇವೆಯಲ್ಲಿ ಕಾರ್ಯ ಪ್ರವೃತ್ತರಾಗಿದ್ದಾರೆ. ಇನ್ನೂ ಹೆಚ್ಚಿನ ವ್ಯಾಸಂಗ ಮಾಡಿ ವೈದ್ಯಕೀಯ ಕ್ಷೇತ್ರದಲ್ಲಿ ಸಾಧನೆ ಮಾಡುವ ಹಂಬಲವನ್ನು ಹೊಂದಿದ್ದಾರೆ.

## ರೈಲ್ವೆ ಮುಂಬಡ್ತಿ ಪರೀಕ್ಷೆಯಲ್ಲಿ ಕನ್ನಡ ಕಡೆಗಣನೆ: ಪ್ರತಿಭಟನೆ



**ಹುಬ್ಬಳ್ಳಿ:** ರೈಲ್ವೆ ಮುಂಬಡ್ತಿ ಪರೀಕ್ಷೆಯಲ್ಲಿ ಕನ್ನಡ ಭಾಷೆ ಕಡೆಗಣಿಸಿರುವುದನ್ನು ವಿರೋಧಿಸಿ ನಗರದಲ್ಲಿ ಕರವೇ ಮುಖಂಡರು ಹಾಗೂ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮಂಗಳವಾರ ರೈಲ್ವೆ ನೇಮಕಾತಿ ಸೆಲ್(ಆರ್‌ಆರ್‌ಸಿ) ಕೇಂದ್ರಕ್ಕೆ ಮುತ್ತಿಗೆ ಹಾಕಿ ಆಕ್ರೋಶ ವ್ಯಕ್ತಪಡಿಸಿದರು. ಈ ಹಿನ್ನೆಲೆ ಪರೀಕ್ಷೆ ರದ್ದುಗೊಂಡಿತು. ಕನ್ನಡ ಭಾಷೆಯನ್ನು ರೈಲ್ವೆ ಇಲಾಖೆಯ ಮುಂಬಡ್ತಿ ಪರೀಕ್ಷೆಯಲ್ಲಿ ಕಡೆಗಣಿಸಲಾಗಿದೆ. ರೈಲ್ವೆ ಅಧಿಕಾರಿಗಳ ಈ ಧೋರಣೆ ಖಂಡನೀಯ. ಕನ್ನಡ ಭಾಷೆಯಲ್ಲಿಯೇ ಪರೀಕ್ಷೆ ನಡೆಸಬೇಕು ಎಂದು ಆಗ್ರಹಿಸಿ ಕೇಂದ್ರ ಸಚಿವ ವಿ.ಸೋಮಣ್ಣ ಅವರ ಗಮಕ್ಕೆ ತರಲಾಗಿತ್ತು. ಅವರು ಕನ್ನಡ ಭಾಷೆಯಲ್ಲಿ ಪರೀಕ್ಷೆ ನಡೆಸುವುದಾಗಿ ಭರವಸೆ ನೀಡಿದ್ದರು.

ಅಷ್ಟೇ ಅಲ್ಲದೇ 2025 ಸೆಪ್ಟಂಬರ್ ತಿಂಗಳಲ್ಲಿ ರೈಲ್ವೆ ಮುಂಬಡ್ತಿ ಪರೀಕ್ಷೆಗಾಗಿ ಅಧಿಸೂಚನೆ ಹೊರಡಿಸಿದಾಗ ಕನ್ನಡ, ಹಿಂದಿ, ಇಂಗ್ಲಿಷ್ ಭಾಷೆಯಲ್ಲಿ ಪರೀಕ್ಷೆ ನಡೆಸುವುದಾಗಿ ತಿಳಿಸಿತ್ತು. ಆದರೆ, ಈಗ ಪರೀಕ್ಷೆಯಲ್ಲಿ ಕನ್ನಡ ಭಾಷೆ ಕೈಬಿಟ್ಟು ಆಂಗ್ಲ ಹಾಗೂ ಹಿಂದಿ ಭಾಷೆಯಲ್ಲಿ ಮಾತ್ರ ನಡೆಸುವ ಆದೇಶ ಹೊರಡಿಸಿರುವುದು ಖಂಡನೀಯ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕನ್ನಡಿಗರು ಉನ್ನತ ಹುದ್ದೆಗಳಲ್ಲಿ ಹೋಗದಂತೆ ತಡೆಯುವ ಕುತಂತ್ರ ನಡೆಯುತ್ತಿದೆ. ಯಾವುದೇ ಕಾರಣಕ್ಕೂ ಈ ಪರೀಕ್ಷೆ ಬರೆಯಲು ಅವಕಾಶ ನೀಡುವುದಿಲ್ಲ, ಹಾಗೊಂದು ವೇಳೆ ಪರೀಕ್ಷೆ ನಡೆಸಿದಲ್ಲಿ ಕನ್ನಡ ಭಾಷೆಯಲ್ಲಿ ನಡೆಸಬೇಕು ಎಂದು ಪಟ್ಟುಹಿಡಿದರು.

ಆರ್‌ಆರ್‌ಸಿ ಚೇರ್‌ಮನ್ ಆಸಿಫ್ ಅನ್ಸಾರಿ ಸ್ಥಳಕ್ಕೆ ಆಗಮಿಸಿ ಮಾತನಾಡಿ, ಇದು ರೈಲ್ವೆ ಬೋರ್ಡ್‌ನಿಂದ ಆಗಿರುವ ಕೆಲಸ. ನಮ್ಮ ಕೈಯಲ್ಲಿ ಇರುವುದಿಲ್ಲ. ನಿಮ್ಮ ಸಮಸ್ಯೆ ಕುರಿತು ಬೋರ್ಡ್‌ನ ಗಮನಕ್ಕೆ ತರುತ್ತೇನೆ. ಈಗ ಪರೀಕ್ಷೆ ನಡೆಸಲು ಅವಕಾಶ ಕೊಡಿ ಎಂದು ಮನವಿ ಮಾಡಿದರು. ಇದಕ್ಕೆ ಒಪ್ಪದ ಪ್ರತಿಭಟನಾಕಾರರು ಯಾವುದೇ ಕಾರಣಕ್ಕೂ ಪರೀಕ್ಷೆ ನಡೆಸಲು ಅವಕಾಶ ನೀಡುವುದಿಲ್ಲ ಎಂದು ಪಟ್ಟು ಹಿಡಿದರು.

ಕೊನೆಗೆ ಪ್ರತಿಭಟನೆಗೆ ಮಣಿದ ಆಸಿಫ್ ಅನ್ಸಾರಿ ಪರೀಕ್ಷೆ ರದ್ದುಗೊಳಿಸಿದ್ದು, ಮುಂದೆ ಮತ್ತೊಂದು ದಿನಾಂಕ ನಿಗದಿಗೊಳಿಸಿ ಪರೀಕ್ಷೆ ನಡೆಸಲಾಗುವುದು ಎಂದು ಭರವಸೆ ನೀಡಿದರು. ಕರವೇ ಜಿಲ್ಲಾ ಘಟಕದ ಧಾರವಾಡ ಜಿಲ್ಲಾಧ್ಯಕ್ಷರಾದ ಹನುಮಂತಪ್ಪ ಮೇಟಿ, ಸಾಗರ್ ಗಾಯಕವಾಡ್, ಗದಗ ಜಿಲ್ಲಾಧ್ಯಕ್ಷ ಹನಮಂತಪ್ಪ ಅಬ್ಬಿಗೇರಿ, ಕೊಪ್ಪಳ ಜಿಲ್ಲಾಧ್ಯಕ್ಷ ಬಿ. ಗಿರೀಶಾನಂದ, ಹಾವೇರಿ ಜಿಲ್ಲಾಧ್ಯಕ್ಷ ಗಿರೀಶ ಬಾರ್ಕಿ, ರಾಜ್ಯ ಕಾರ್ಯದರ್ಶಿ ರೆಹಮಾನ ಹೊಳಿ, ರಾಜ್ಯ ಸಂಚಾಲಕ ರುದ್ರೇಶ ಹವಳದ, ಕರಿಬಸಯ್ಯ, ಸಂಗನಗೌಡ ನರಗುಂದ ಇದ್ದರು.

ಹುಬ್ಬಳ್ಳಿ ವಿಭಾಗ ಮತ್ತು ಪ್ರಧಾನ ಕಚೇರಿಯ ಸಿಬ್ಬಂದಿಯ ಮಾರ್ಚ್ 17 ಮತ್ತು 18, 2026 ರಂದು ನಿಗದಿಯಾಗಿದ್ದ ಕಂಪ್ಯೂಟರ್ ಆಧಾರಿತ ಪರೀಕ್ಷೆಗಳನ್ನು ಮುಂದೂಡಲಾಗಿದೆ. ಪರೀಕ್ಷೆ ನಡೆಸುವ ಹೊಸ ದಿನಾಂಕ ನಂತರ ತಿಳಿಸಲಾಗುವುದು ಎಂದು ನೈರುತ್ಯ ರೈಲ್ವೆ ಪ್ರಕಟಣೆಗೆ ತಿಳಿಸಿದೆ.

### ಕೃಷಿ ಉತ್ಸವದಲ್ಲಿ ಗ್ರಾಮೀಣ ಕ್ರೀಡೆಗಳ ರೋಮಾಂಚನ

# ಕಲ್ಲು ಎತ್ತುವ ಸ್ಪರ್ಧೆಯಲ್ಲಿ ಶಕ್ತಿ ಪ್ರದರ್ಶನ



**ಚಿಕ್ಕೋಡಿ:** ನಿಪ್ಪಾಣಿ ಶ್ರೀ ಹಾಲಸಿದ್ದನಾಥ ಸಹಕಾರಿ ಸಕ್ಕರೆ ಕಾರ್ಖಾನೆ ಮತ್ತು ಜೊಲ್ಲೆ ಗ್ರೂಪ್ ವತಿಯಿಂದ ಆಯೋಜಿಸಲಾದ ಭವ್ಯ ಕೃಷಿ ಉತ್ಸವದಲ್ಲಿ ಅಪ್ಪಟ ಗ್ರಾಮೀಣ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ವಿವಿಧ ಕ್ರೀಡಾ ಸ್ಪರ್ಧೆಗಳು ಜರುಗಿದವು. ಅದರಲ್ಲೂ ಯುವಕರ ಶಕ್ತಿ, ಧೈರ್ಯ ಮತ್ತು ಸಾಮರ್ಥ್ಯವನ್ನು ತೋರಿಸುವ ಸಂಗ್ರಾಮ ಕಲ್ಲು ಎತ್ತುವ ಸ್ಪರ್ಧೆ ಹಾಗೂ ಗುಂಡುಕಲ್ಲು ಎತ್ತುವ ಸ್ಪರ್ಧೆ ಪ್ರೇಕ್ಷಕರಲ್ಲಿ ಭಾರೀ ಉತ್ಸಾಹ ಮೂಡಿಸಿತು.

ಕ್ವಿಂಟಲ್ ತೂಕದ ಭಾರೀ ಕಲ್ಲುಗಳನ್ನು ಯುವಪೈಲವಾನರು ಕ್ಷಣಾರ್ಧದಲ್ಲಿ ಹೆಗಲ ಮೇಲೆ ಎತ್ತಿ ತೋರಿಸಿದ ದೃಶ್ಯ ಸಾವಿರಾರು ಜನರನ್ನು ರೋಮಾಂಚಗೊಳಿಸಿತು. ನಿಧಾನವಾಗಿ ನಶಿಸಿ ಹೋಗುತ್ತಿರುವ ಇಂತಹ ಪಾರಂಪರಿಕ ಗ್ರಾಮೀಣ ಕ್ರೀಡೆಗಳನ್ನು ಮತ್ತೆ ಜೀವಂತಗೊಳಿಸುವ ಉದ್ದೇಶದಿಂದ ಈ ಸ್ಪರ್ಧೆಗಳನ್ನು ಆಯೋಜಿಸಲಾಗಿದ್ದು, ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ತಮ್ಮ ಸಾಮರ್ಥ್ಯ ಪ್ರದರ್ಶಿಸಿದರು. ಗುಂಡುಕಲ್ಲು ಎತ್ತುವ ಸ್ಪರ್ಧೆಯಲ್ಲಿ ಮುದ್ದೇಬಿಹಾಳ ತಾಲೂಕಿನ ಬಿಲ್ಲೂರ ಗ್ರಾಮದ ಶೇಖಪ್ಪ ಬಸಪ್ಪ ಯಲವಾರ ಪ್ರಥಮ ಸ್ಥಾನ ಪಡೆದು ಗಮನ ಸೆಳೆದರು. ಶೆಗುಣಿಸಿಯ ಅಮೃತ ಗೂಡನವರ ದ್ವಿತೀಯ ಸ್ಥಾನ ಹಾಗೂ ಸಂಗಣ್ಣ ಗೂಡನವರ ತೃತೀಯ ಸ್ಥಾನ ಪಡೆದು ಬಹುಮಾನಗಳನ್ನು ತಮ್ಮದಾಗಿಸಿಕೊಂಡರು.

ಇದೇ ವೇಳೆ ನಡೆದ ಸಂಗ್ರಾಮ ಕಲ್ಲು ಎತ್ತುವ ಸ್ಪರ್ಧೆಯಲ್ಲಿ ಆಸಂಗಿ ಗ್ರಾಮದ ಅಪಜಲ್ ಮುಜಾವರ ಕ್ವಿಂಟಲ್ ತೂಕದ ಕಲ್ಲು ಎತ್ತಿ ಪ್ರಥಮ ಸ್ಥಾನ ಪಡೆದರು. ಯಲ್ಲಮ್ಮ ಸವದತ್ತಿಯ ಸಬೀಬ ಪೈಲವಾನ ದ್ವಿತೀಯ ಸ್ಥಾನ ಗಳಿಸಿದರೆ, ಬಿಸನಾಳ ಗ್ರಾಮದ ಕಿರಣ ಅರಕೆ ತೃತೀಯ ಸ್ಥಾನ ಪಡೆದು ಪ್ರಶಂಸೆಗೆ ಪಾತ್ರರಾದರು.

ಸ್ಪರ್ಧೆಯಲ್ಲಿ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಈ ಸಂದರ್ಭದಲ್ಲಿ ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಅಣ್ಣಾಸಾಹೇಬ ಜೊಲ್ಲೆ, ಶಾಸಕಿ ಶಶಿಕಲಾ ಜೊಲ್ಲೆ, ಕಾರ್ಖಾನೆ ಅಧ್ಯಕ್ಷ ಮಲಗೌಡ ಪಾಟೀಲ, ಜೊಲ್ಲೆಗ್ರೂಪ್ ಉಪಾಧ್ಯಕ್ಷ ಬಸವಪ್ರಸಾದ ಜೊಲ್ಲೆ ಸೇರಿದಂತೆ ಕಾರ್ಖಾನೆ ಆಡಳಿತ ಮಂಡಳಿ ಸಂಚಾಲಕರು ಹಾಗೂ ಅನೇಕ ಗಣ್ಯರು ಉಪಸ್ಥಿತರಿದ್ದರು. ಕೃಷಿ ಉತ್ಸವದ ಅಂಗವಾಗಿ ಆಯೋಜಿಸಲಾದ ಈ ಗ್ರಾಮೀಣ ಕ್ರೀಡೆಗಳು ಯುವಕರಲ್ಲಿ ಉತ್ಸಾಹ ತುಂಬಿದ್ದು, ಗ್ರಾಮೀಣ ಸಂಸ್ಕೃತಿಯ ಉಳಿವಿಗೆ ಸಹಕಾರಿಯಾಗಿವೆ ಎಂದು ಸಾರ್ವಜನಿಕರು ಅಭಿಪ್ರಾಯ ಪಟ್ಟರು.

**ಮನರಂಜನೆ ಕಾರ್ಯಕ್ರಮ**

ಕೃಷಿ ಉತ್ಸವದಲ್ಲಿ ರೈತರು ಮತ್ತು ಸಾರ್ವಜನಿಕರ ಮನರಂಜನೆ ಕಾರ್ಯಕ್ರಮ ಅದ್ದೂರಿಯಾಗಿ ನಡೆಯಿತು. ಜಾನಪದ ಹಾಡಿನ ಸರದಾರ ಶಬ್ಬೀರ ಡಾಂಗೆ ಅವರ ಗ್ರಾಮೀಣ ಭಾಗದ ಬದುಕಿನ ಜಾನಪದ ಹಾಡುಗಳಿಗೆ ಜನ ಕುಣಿದು ಕುಪ್ಪಳಿಸಿದರು. ಎರಡು ಗಂಟೆಗಳ ಕಾಲ ನಡೆದ ಮನರಂಜನಾ ಕಾರ್ಯಕ್ರಮದಲ್ಲಿ ಡಾಂಗೆ ಹಾಡುಗಳಿಗೆ ಜನ ಮನಸೋತ ಹೋದರು.

### ವಿವಿಧ ಬೇಡಿಕೆ ಈಡೇರಿಕೆಗೆ ಎಬಿವಿಪಿ ಪ್ರತಿಭಟನೆ




**ಹುಬ್ಬಳ್ಳಿ:** ರಾಜ್ಯ ಸರ್ಕಾರ ಶಿಕ್ಷಣ ಕ್ಷೇತ್ರದ ಸೌಲಭ್ಯ ಒದಗಿಸಬೇಕು ಹಾಗೂ ವಿವಿಧ ಬೇಡಿಕೆ ಈಡೇರಿಸಬೇಕು ಎಂದು ಆಗ್ರಹಿಸಿ ಅಖಿಲ ಭಾರತ ವಿದ್ಯಾರ್ಥಿ ಪರಿಷತ್ ವತಿಯಿಂದ ನಗರದಲ್ಲಿ ವಿದ್ಯಾರ್ಥಿ ಮುಖಂಡರು ಹಾಗೂ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು.

ಮಂಗಳವಾರ ನಗರದ ಬಿವಿಬಿ ಕಾಲೇಜ್ ಆವರಣದಲ್ಲಿ ಸಮಾವೇಶ ಗೊಂಡ ಪ್ರತಿಭಟನಾಕಾರರು, ರಾಜ್ಯದ ವಿದ್ಯಾರ್ಥಿಗಳ ಸಮಸ್ಯೆ ಬಗೆಹರಿಸುವಂತೆ ಹಾಗೂ ರಾಜ್ಯ ಸರ್ಕಾರದಲ್ಲಿ ಖಾಲಿ ಇರುವ ಸರ್ಕಾರಿ ಹುದ್ದೆಗಳ ನೇಮಕಾತಿ ಶೀಘ್ರದಲ್ಲಿ ಮಾಡಿಕೊಳ್ಳಬೇಕು ಎಂದು ಸರಕಾರಕ್ಕೆ ಆಗ್ರಹಿಸಿದರು.

ರಾಜ್ಯ ಸರ್ಕಾರ ಶಿಕ್ಷಣ ಕ್ಷೇತ್ರಕ್ಕೆ ನೀಡಬೇಕಾದ ಸವಲತ್ತುಗಳನ್ನು ನೀಡುವಲ್ಲಿ ವಿಫಲವಾಗಿದೆ. ಕರ್ನಾಟಕದ ಎಲ್ಲ ವಿಶ್ವವಿದ್ಯಾಲಯಗಳಲ್ಲಿ ಮತ್ತು ಬಹುತೇಕ ಮಹಾವಿದ್ಯಾಲಯಗಳಲ್ಲಿ ಶಿಕ್ಷಕರ ಕೊರತೆ ಇದ್ದು, ವಿದ್ಯಾರ್ಥಿಗಳ ಅಧ್ಯಯನದ ಮೇಲೆ ಪರಿಣಾಮ ಬೀರುತ್ತದೆ. ಹೀಗಾಗಿ ಖಾಲಿ ಇರುವ ಹುದ್ದೆಗಳ ನೇಮಕಾತಿ ಪ್ರಾರಂಭ ಮಾಡಬೇಕು ಎಂದು ಒತ್ತಾಯಿಸಿದರು.

ವಿವಿಧ ಇಲಾಖೆಗಳಿಗೆ ನೇಮಕಾತಿ ಮಾಡುವಾಗ ವಯೋಮಿತಿಯನ್ನು ಸಡಿಲಿಕೆ ಮಾಡಬೇಕು. ವಿಶ್ವವಿದ್ಯಾಲಯ ಗಳಿಗೆ ಅನುದಾನ ನೀಡಬೇಕು. ವಿದ್ಯಾರ್ಥಿಗಳಿಗೆ ಸರಿಯಾದ ಸಮಯಕ್ಕೆ ಫಲಿತಾಂಶ, ಅಂಕಪಟ್ಟಿ ನೀಡಬೇಕು, ಸಮರ್ಪಕವಾಗಿ ವಿದ್ಯಾರ್ಥಿ ವೇತನ ನೀಡಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಎಬಿವಿಪಿ ಧಾರವಾಡ ಜಿಲ್ಲಾ ಸಂಚಾಲಕ ಸಿದ್ಧಾರ್ಥ ಕೋರಿ, ಎಬಿವಿಪಿ ಕರ್ನಾಟಕ ಉತ್ತರ ರಾಜ್ಯ ಕಾರ್ಯದರ್ಶಿ ದರ್ಶನ ಹೆಗಡೆ, ಅನಮೋಲ ಕಲಬುರ್ಗಿ, ಸಿಖಾ ಜೈನ್ ಸೇರಿದಂತೆ ಇತರರು ಇದ್ದರು.

### ಬ್ಯಾಂಕ್ ಖಾತೆ ವಿವರ ಮಾರಲು ಯತ್ನ: ಬಂಧನ

**ಗದಗ:** ವಿದ್ಯಾರ್ಥಿಗಳ ಹೆಸರಿನಲ್ಲಿ ಖಾತೆ ತೆರೆದು, ಕಮಿಷನ್ ಆಸೆಗಾಗಿ ಬ್ಯಾಂಕ್ ಖಾತೆ ವಿವರಗಳನ್ನು ಸೈಬರ್ ಕ್ರೈಂ ವಂಚಕರಿಗೆ ಮಾರಲು ಯತ್ನಿಸಿದ್ದ ಐವರು ಆರೋಪಿಗಳನ್ನು ಇಲ್ಲಿನ ಸೈಬರ್ ಕ್ರೈಂ ಪೊಲೀಸರು ಬಂಧಿಸಿದ್ದು, ಅವರಿಂದ ಮೊಬೈಲ್ ಫೋನ್ ಮತ್ತು ಬ್ಯಾಂಕ್ ಪಾಸ್ ಬುಕ್‌ಗಳನ್ನು ವಶಪಡಿಸಿಕೊಂಡಿದ್ದಾರೆ.

ವಿಜಯನಗರ ಜಿಲ್ಲೆ ಹೂವಿನಹಡಗಲಿ ತಾಲೂಕಿನ ದಸರಹಳ್ಳಿ ತಾಂಡಾದ ವಕದೋತ್ ವಕೀಲ್, ರಾಜಾ ರಠಿನಾಯಕ್, ಗೋವಾದ ಜೀಶಾನ್ ಅನ್ಸಾರಿ, ಆಕಾಶ್ ಹಾಗೂ ಛತ್ತೀಸ್‌ಗಡದ ಸಾಹಿಲ್ ಬಂಧಿತರು.

ವಕದೋತ್ ಮತ್ತು ರಾಜಾ ರಠಿನಾಯಕ್ ಅವರು ಇಲ್ಲಿನ ಮೆಟ್ರಿಕ್ ನಂತರ ವೃತ್ತಿಪರ ಬಾಲಕರ ವಸತಿ ನಿಲಯದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಕೊಡಿಸುವ ಸುಳ್ಳು ಭರವಸೆ ನೀಡಿ ಅವರ ಹೆಸರಿನಲ್ಲಿ ಖಾಸಗಿ ಬ್ಯಾಂಕ್‌ನಲ್ಲಿ ಖಾತೆ ತೆರೆಸಿದ್ದರು.

ಖಾತೆ ತೆರೆಯಲು ಆರಂಭಿಕ ಠೇವಣಿ 2 ಸಾವಿರ ಹಣವನ್ನು ಆರೋಪಿಗಳೇ ನೀಡಿದ್ದರು. ನಂತರ, ಅವರಿಂದ ಬ್ಯಾಂಕ್ ಪಾಸ್‌ಬುಕ್, ಎಟಿಎಂ ಕಾರ್ಡ್, ಇಂಟರ್ ನೆಟ್ ಬ್ಯಾಂಕಿಂಗ್ ವಿವರ ಹಾಗೂ ಖಾತೆಗೆ ಲಿಂಕ್ ಇದ್ದ ಮೊಬೈಲ್ ಸಿಮ್ ಕಾರ್ಡ್ ಪಡೆದುಕೊಂಡಿದ್ದರು. ಈ ವಂಚನೆ ಕುರಿತು ಮಾ.11ರಂದು ಪ್ರಕರಣ ದಾಖಲಾಗಿತ್ತು. ಆರೋಪಿಗಳು ಬ್ಯಾಂಕ್ ಖಾತೆ ವಿವರಗಳನ್ನು ಸೈಬರ್ ವಂಚಕರಿಗೆ ಹಸ್ತಾಂತರ ಮಾಡಲು ಗೋವಾಕ್ಕೆ ಹೋಗುತ್ತಿದ್ದಾಗ ಪೊಲೀಸರು ಅವರನ್ನು ಬಂಧಿಸಿದ್ದಾರೆ. ಆರೋಪಿಗಳನ್ನು ವಿಚಾರಣೆಗೆ ಒಳಪಡಿಸಿದಾಗ ಗೋವಾದಲ್ಲಿದ್ದ ವಂಚಕರ ಮಾಹಿತಿ ಸಿಕ್ಕಿದ್ದು, ಅವರನ್ನೂ ಬಂಧಿಸಿ ಕರೆತಂದಿದ್ದಾರೆ. ಆರೋಪಿಗಳಿಂದ 11 ಮೊಬೈಲ್ ಫೋನ್, ಹಾವೇರಿ ಜಿಲ್ಲೆಯಲ್ಲಿ ತೆರೆಯಲಾದ ಖಾತೆಗಳ ಮೂರು ಬ್ಯಾಂಕ್ ಕಿಟ್, ಗದಗ ಜಿಲ್ಲೆಯಲ್ಲಿ ತೆರೆಯಲಾದ ಐದು ಬ್ಯಾಂಕ್ ಕಿಟ್ ಪತ್ತೆಯಾಗಿವೆ. ಹಲವು ಕಡೆಗಳಲ್ಲಿ ಬ್ಯಾಂಕ್ ಖಾತೆಗಳನ್ನು ತೆರೆದಿರುವುದು ಗೊತ್ತಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಇನ್ನೂ ಮೂವರು ಪ್ರಮುಖ ಆರೋಪಿಗಳಿದ್ದು, ಅವರನ್ನೂ ಬಂಧಿಸಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

# ಕಾಡುಕೋಣಗಳ ಹಾವಳಿ: ಅಪಾರ ಹಾನಿ



**ಶಿರಸಿ:** ತಾಲೂಕಿನ ಕಾಗೇರಿ ಹಾಗೂ ನೇಗಾರು ಗ್ರಾಮಗಳಲ್ಲಿ ಕಳೆದ ಮೂರು ದಿನಗಳಿಂದ ಕಾಡುಕೋಣಗಳ ಹಾವಳಿ ತೀವ್ರಗೊಂಡಿದ್ದು, ಸುಮಾರು ಎಂಟು ಎಕರೆಗೂ ಹೆಚ್ಚು ಕಬ್ಬು, ಹಸಿ ಮೇವು, ದ್ವಿದಳ ಧಾನ್ಯಗಳ ಬೇಸಾಯವನ್ನು ಹಾಳು ಮಾಡಿವೆ. ಸುಮಾರು 3 ಲಕ್ಷ ರೂಪಾಯಿಗೂ ಅಧಿಕ ಭವಿಷ್ಯದ ಬೆಳೆ ಹಾನಿಯಾದಂತೆ ಆಗಿದೆ.

15ಕ್ಕೂ ಹೆಚ್ಚು ಕಾಡುಕೋಣಗಳ ಹಿಂಡು ರೈತರ ಹೊಲಗಳಿಗೆ ನುಗ್ಗಿ ಬೆಳೆಯಬೇಕಿದ್ದ ಬೆಳೆ ಹಾನಿ ಉಂಟು ಮಾಡಿದೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ಹಗಲು-ರಾತ್ರಿ ಎಂಬ ತಾರತಮ್ಯವಿಲ್ಲದೆ ನಡೆಯುತ್ತಿರುವ ಈ ದಾಳಿಯಿಂದ ರೈತರು ಭಯಭೀತರಾಗಿ ತಮ್ಮ ತೋಟದ ಬೆಳೆಗಳಿಗೂ ದಾಂಗುಡಿ ಇಟ್ಟರೆ ಎಂದು ಆತಂಕದಲ್ಲಿ ಇದ್ದಾರೆ.

ಕಾಡುಕೋಣಗಳ ದಾಳಿಯಿಂದ ಹಲವು ರೈತರ ಚಿಗುರುತ್ತಿದ್ದ ಬೆಳೆಗಳು ಸಂಪೂರ್ಣ ಹಾಳಾಗಿವೆ. ಮುಕ್ಕಾಲು ಎಕರೆ ಕಬ್ಬಿನಗದ್ದೆ, ಇನ್ನುಳಿದಂತೆ ಹಸಿಮೆವು ಹಾಗೂ ಧಾನ್ಯದ ಬೆಳೆಗಳು ಸಂಪೂರ್ಣ ನಾಶವಾಗಿವೆ. ಸನ್ನೆಂಪು, ಉದ್ದು, ಬವಡೆ ಸೇರಿದಂತೆ ದ್ವಿದಳ ಧಾನ್ಯ ಬೆಳೆಗಳಿಗೆ ಹಾನಿಯಾಗಿದೆ. ತಿಂಗಳ ಹಿಂದೆ ಗದ್ದೆಯ ಭೂಮಿ ಹದಗೊಳಿಸಿ ಬಿತ್ತನೆ ಮಾಡಿದ್ದ ಬೆಳೆ ಕೈಗೆ ಬರುವ ಮೊದಲೇ ಕಾಡುಮೃಗಗಳ ಪಾಲಿಗೆ ತುತ್ತಾಗಿವೆ.

ನೇಗಾರಿನ ಮಹೇಶ ಗಜಾನನ ಹೆಗಡೆ, ವಿಶ್ವನಾಥ ಮಹಾಬಲೇಶ್ವರ ಹಾಗೂ ಕೃಷ್ಣ ನಾಗ ಪೂಜಾರಿ, ಕಾಗೇರಿಯ ಪರಮೇಶ್ವರ ಅನಂತ ಹೆಗಡೆ, ನರಸಿಂಹ ವೆಂಕಟರಮಣ ಹೆಗಡೆ ಹಾಗೂ ಶ್ರೀಪಾದ ರಾಮಚಂದ್ರ ಹೆಗಡೆ ಅವರ ಕೃಷಿ ಭೂಮಿಯಲ್ಲೂ ಹಾನಿ ಸಂಭವಿಸಿದೆ.

ಹಿಂದಿನ ವರ್ಷಗಳಲ್ಲಿ ಒಂದೆರಡು ಮಾತ್ರ ಕಾಣಿಸುತ್ತಿದ್ದ ಕಾಡುಕೋಣಗಳು, ಈ ಬಾರಿ ಗುಂಪುಗಳಾಗಿ ದಾಳಿ ನಡೆಸುತ್ತಿರುವುದು ರೈತರ ಆತಂಕವನ್ನು ಹೆಚ್ಚಿಸಿದೆ.

ಕಾಗೇರಿ, ನೇಗಾರಿನಲ್ಲಿ ಮಾಡಿದ ಕಾಡುಕೋಣಗಳ ಹಾವಳಿ ಈಗ ಬರೂರು, ಬೆಟ್ಟಕೊಪ್ಪ, ಕುಳವೆ, ಕಾನಮೂಲೆ, ಬೆಳಖಂಡ, ಸೊಪ್ಪಿನಮನೆ, ಕಾನಗೋಡ ಹಾಗೂ ಯಡಹಳ್ಳಿ ಭಾಗಗಳ ರೈತರಿಗೂ ಆತಂಕ ಉಂಟು ಮಾಡುವಂತೆ ಆಗಿದೆ. ಕಾಡುಕೋಣಗಳ ಹಾವಳಿ ಯಿಂದ ತತ್ತರಿಸಿರುವ ರೈತರು ಅರಣ್ಯ ಇಲಾಖೆಗೆ ತಕ್ಷಣ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದ್ದಾರೆ.

ಇನ್ನು ಅರಣ್ಯ ಇಲಾಖೆ ಕಾಡುಕೋಣಗಳನ್ನು ಕಾಡಿಗೆ ಹಿಮ್ಮೆಟ್ಟಿಸಲು ಕಾರ್ಯಾಚರಣೆ ನಡೆಸುವುದು, ಬೆಳೆ ಹಾನಿಗೆ ಸೂಕ್ತ ಪರಿಹಾರ ನೀಡುವುದು ಸೇರಿದಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕೆಂದು ಒತ್ತಾಯಿಸಿದ್ದಾರೆ.

# ಅಂತರ್ ಜಿಲ್ಲಾ 6 ಆರೋಪಿಗಳ ಬಂಧನ



**ರಾಮದುರ್ಗ:** ರಾತ್ರಿ ಸಮಯದಲ್ಲಿ ರೈತರ ಜಮೀನುಗಳಲ್ಲಿನ ಆಡು (ಮೇಕೆ) ಕಳ್ಳತನ ಮಾಡುತ್ತಿದ್ದ ಅಂತರ್ ಜಿಲ್ಲಾ 6 ಕಳ್ಳರನ್ನು ಬಂಧಿಸಿ, ಬಂಧಿತರಿಂದ ಲಕ್ಷಕಿಂತ ಅಧಿಕ ನಗದು, 2 ಕಾರು ಮತ್ತು 2 ಬೈಕ್ ವಶಪಡಿಸಿಕೊಳ್ಳುವಲ್ಲಿ ತಾಲೂಕಿನ ಕಟಕೋಳ ಪೊಲೀಸರು ಯಸ್ವಿಯಾಗಿದ್ದಾರೆ.

ಕಳ್ಳತನಕ್ಕೆ ಸಂಬಂಧಿಸಿದಂತೆ ತಾಲೂಕಿನ ಚುಂಚನೂರ(ಕೊರಕೊಪ್ಪ) ಗ್ರಾಮದ ಅಜ್ಜಪ್ಪ ನಾನಿಂಗಪ್ಪ ಗುಡೆನ್ನವರ, ಕಟಕೋಳದ ಘುರ್ಖಾನ ರಮಜಾನ ಮುಲ್ಲಾ, ಯರಗಟ್ಟಿ ತಾಲೂಕಿನ ಯರಗಟ್ಟಿಯ ಹಣಮಂತ ದುರ್ಗಪ್ಪ ಭಜಂತ್ರಿ, ರಘು ಜಯವಂತ ಕಾರೆಪ್ಪನವರ, ವಿಶಾಲ ಅಶೋಕ ಯಡೂರ ಮತ್ತು ಯರಗಟ್ಟಿ ತಾಲೂಕಿನ ರೈನಾಪೂರದ ಅಲ್ತಾಪ ಮಾಬುಸಾಬ ನಧಾಪ ಎಂಬವರನ್ನು ಬಂಧಿಸಿದ್ದಾರೆ. ಬಂಧಿತರು ಕಟಕೋಳ ಪೊಲೀಸ್ ಠಾಣೆಯ 2 ಪ್ರಕರಣ, ಮುರಗೋಡ ಪೊಲೀಸ್ ಠಾಣೆಯ 2 ಪ್ರಕರಣ, ಕುಲಗೋಡ ಪೊಲೀಸ್ ಠಾಣೆಯ 2 ಪ್ರಕರಣಗಳನ್ನು ಬೈಲಹೊಂಗಲ ಪೊಲೀಸ್ ಠಾಣೆಯ 1 ಪ್ರಕರಣ ಹಾಗೂ ಬಾಗಲಕೋಟ ಜಿಲ್ಲೆಯ ಬೀಳಗಿ ಪೊಲೀಸ್ ಠಾಣೆಯ 2 ಪ್ರಕರಣ ಮತ್ತು ಕೆರೂರ ಪೊಲೀಸ್ ಠಾಣೆಯ 1 ಪ್ರಕರಣ ಹೀಗೆ ಒಟ್ಟು 10 ಪ್ರಕರಣಗಳನ್ನು ಕಟಕೋಳ ಪೊಲೀಸರು ಭೇಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಕಳ್ಳತನಕ್ಕೆ ಉಪಯೋಗಿಸಿದ 4 ಲಕ್ಷ ಹತ್ತು ಸಾವಿರ ಮೌಲ್ಯದ ಟಯೋಟಾ ಕಾರ್ ಎರಡು ಲಕ್ಷ ಮೌಲ್ಯದ ಟಾಟಾ ಜಸ್ಟ ಕಾರ್ ಮತ್ತು ಎರಡು ಬೈಕ್ ವಶಪಡಿಸಿಕೊಂಡಿದ್ದಾರೆ.

ಮಾ.2ರಂದು ರಾತ್ರಿ ತಾಲೂಕಿನತೋರಣಗಟ್ಟಿ ಗ್ರಾಮದ ಮಂಜುಳಾ ಚಂದ್ರಪ್ಪ ಗಣೇಲ್ಲ ಸಂಬಂದಿಸಿದ ಕಟಕೋಳ-ಯರಗಟ್ಟಿ ರಸ್ತೆಯ ಬದಿಗೆ ಇರುವ ಜಮೀನಿನ ಶೆಡ್‌ದಲ್ಲಿನ 3 ಆಡುಗಳನ್ನು ಮತ್ತು ಚುಂಚನೂರ ಗ್ರಾಮದ ಮಲ್ಲಿಕಾರ್ಜುನ ಮಾರುತಿ ವಡೇಕನವರ ಇವರ ಚುಂಚನೂರ ಗ್ರಾಮದ ಹದ್ದಿಯಲ್ಲಿ ಕಟಕೋಳ-ಮುನವಳ್ಳಿ ರಸ್ತೆಯ ಬದಿಗೆ ಜಮೀನದ ಶೆಡ್‌ದಲ್ಲಿ ಕಟ್ಟಿದ 1 ಆಡು, 1 ಹೋಂತನ್ನು ಕಳ್ಳತನವಾದ ಬಗ್ಗೆ ದೂರು ದಾಖಲಾಗಿತ್ತು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಾಮರಾಜನ್ ಮಾರ್ಗದರ್ಶನದಲ್ಲಿ ಹೆಚ್ಚುವರಿ ಎಸ್.ಪಿ ಆರ್.ಬಿ.ಬಸರಗಿ, ರಾಮದುರ್ಗ ಡಿ.ಎಸ್.ಪಿ ಚಿದಂಬರ ಮಡಿವಾಳರ ಹಾಗೂ ಸಿಪಿಐ ವಿನಾಕಯ ಬಡಿಗೇರ ನೇತೃತ್ವದಲ್ಲಿ ಕಟಕೋಳ ಪಿಎಸ್‌ಐ ಬಸವರಾಜ ಕೊಣ್ಣೂರೆ, ಎಎಸ್‌ಐ ಬಿ.ವಿ.ಹುಲಕುಂದ ಮತ್ತು ಸಿಬ್ಬಂದಿ ಎಸ್.ಎಸ್.ವಜ್ರಮಟ್ಟಿ, ಎಂ.ಸಿ.ಮನ್ನಿಕೇರಿ, ಆರ್.ಬಿ. ಗೋಕಾಕ, ಡಿ.ಎಚ್. ನದಾಫ, ಬಿ.ಎಸ್.ಚುಂಚನೂರ ಹಾಗೂ ಜಿಲ್ಲಾ ತಾಂತ್ರಿಕ ವಿಭಾಗದ ವಿನೋದ ಎ.ತಕ್ಕನ್ನವರ ಹಾಗೂ ಸಚೀನ ಪಾಟೀಲರಿದ್ದ ತಂಡ ಕಳ್ಳರನ್ನು ಒಂದೇ ವಾರದಲ್ಲಿ ಪತ್ತೆ ಹಚ್ಚುವಲ್ಲಿ ಯಶಸ್ವಿಯಾಗಿದ್ದಾರೆ.

## ಸವಾಲು ಎದುರಿಸಿ ಬೆಳೆದ ಆರ್‌ಎಸ್‌ಎಸ್

**ಬೆಂಗಳೂರು:** ರಾಷ್ಟ್ರೀಯ ಸ್ವಯಂಸೇವಕ ಸಂಘ(ಆರ್‌ಎಸ್‌ಎಸ್) ಸಮಾಜದ ಹಿತಕ್ಕಾಗಿ ಕೆಲಸ ಮಾಡುತ್ತಿದೆ. ಟೀಕೆ ಮಾಡುವವರು ಸಂಘದ ಹತ್ತಿರ ಬಂದು ಕಾರ್ಯವೈಖರಿಯನ್ನು ನೋಡಿದಾಗ ಮಾತ್ರ ಸತ್ಯದ ಅರಿವಾಗುತ್ತದೆ. ಈ ಹಿಂದೆಯೂ ಸಂಘದ ಮೇಲೆ ನಿಷೇಧ ಹೇರಲಾಗಿತ್ತು, ಆದರೆ ಸಂಘವು ಎಲ್ಲಾ ಸವಾಲುಗಳನ್ನು ಎದುರಿಸಿ ಬೆಳೆದಿದೆ ಎಂದು ಆರ್‌ಎಸ್‌ಎಸ್‌ನ ಕ್ಷೇತ್ರೀಯ ಕಾರ್ಯವಾಹ ನಾ.ತಿಪ್ಪೇಸ್ವಾಮಿ ಹೇಳಿದರು.

ರಾಷ್ಟ್ರೋತ್ಥಾನ ಪರಿಷತ್‌ನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಶಾದ್ಯಂತ ಆರ್‌ಎಸ್‌ಎಸ್‌ನ ಶತಾಬ್ದಿ ಕಾರ್ಯಕ್ರಮಗಳು ಅತ್ಯಂತ ಯಶಸ್ವಿಯಾಗಿ ನಡೆಯುತ್ತಿದ್ದು, ಪಂಚಪರಿವರ್ತನೆಯ 5 ವಿಷಯಗಳಾದ ಸಾಮಾಜಿಕ ಸಾಮರಸ್ಯ, ಕುಟುಂಬ ಪ್ರಬೋಧನ, ಪರಿಸರ ಸಂರಕ್ಷಣೆ, ಸ್ವದೇಶಿ ಜೀವನಶೈಲಿ, ನಾಗರಿಕ ಶಿಷ್ಟಾಚಾರ ವಿಷಯಗಳಿಗೆ ಒತ್ತುಕೊಡಲಾಗಿದೆ. ಸಮಾಜದಿಂದ ಅತ್ಯುತ್ತಮ ಪ್ರತಿಕ್ರಿಯೆ ಲಭಿಸಿದೆ ಎಂದು ತಿಳಿಸಿದರು.

**ರಾಜ್ಯದಲ್ಲಿ ರಾಣಿ ಅಬ್ಬಕ್ಕ 500 - ಕಾರ್ಯಕ್ರಮ:** ರಾಣಿ ಅಬ್ಬಕ್ಕ ಅವರ 500ನೇ ಜನ್ಮ ವರ್ಷಾಚರಣೆಯ ಅಂಗವಾಗಿ ಅವರ ಇತಿಹಾಸವನ್ನು ರಾಜ್ಯಾದ್ಯಂತ ತಿಳಿಸುವ ಉದ್ದೇಶದಿಂದ ಕರ್ನಾಟಕ ರಾಜ್ಯ ಮಹಾವಿದ್ಯಾಲಯ ಶಿಕ್ಷಕ ಸಂಘದ ವತಿಯಿಂದ ಮಂಗಳೂರು ವಿಭಾಗದ ಮೂರು ಜಿಲ್ಲೆಗಳಲ್ಲಿ ರಾಣಿ ಅಬ್ಬಕ್ಕ ಅವರ ಕುರಿತು 100 ಉಪನ್ಯಾಸ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಸುಮಾರು 125 ವಿದ್ಯಾಸಂಸ್ಥೆಗಳ ಸಹಯೋಗದೊಂದಿಗೆ 75 ಜನ ಸಂಪನ್ಮೂಲ ವ್ಯಕ್ತಿಗಳು, 300 ಗಣ್ಯರು ಭಾಗವಹಿಸಿದ್ದು, ಸುಮಾರು 23000 ವಿದ್ಯಾರ್ಥಿಗಳನ್ನು ತಲುಪಿದ್ದು, 2500 ಶಿಕ್ಷಕರು ಕಾರ್ಯಕ್ರಮಕ್ಕೆ ಸಾಕ್ಷಿಯಾದರು ಎಂದು ತಿಳಿಸಿದರು.



ಸಮಾಜವೇ ಜಾಗೃತಗೊಂಡು ಧರ್ಮ ರಕ್ಷಣೆ ಮಾಡಬೇಕು ಎಂಬುದು ಸಂಘದ ಆಶಯವಾಗಿದೆ.
■ ನಾ.ತಿಪ್ಪೇಸ್ವಾಮಿ, ಆರ್‌ಎಸ್‌ಎಸ್ ಕ್ಷೇತ್ರೀಯ ಕಾರ್ಯವಾಹ

ಶತಾಬ್ದಿ ವರ್ಷದ ನಂತರ ಆರ್‌ಎಸ್‌ಎಸ್‌ನ ಭೌಗೋಳಿಕ ರಚನೆಯಲ್ಲಿ ಬದಲಾವಣೆಯಾಗಲಿದ್ದು, ಸುಮಾರು ಪ್ರತಿ ಎರಡು ಕೋಟಿ ಜನಸಂಖ್ಯೆಗೆ ಒಂದು ಸಂಭಾಗವನ್ನು ರಚಿಸಲಾಗುವುದು. ಅದರಂತೆ ಕರ್ನಾಟಕದಲ್ಲಿ ಬೆಂಗಳೂರು, ಮೈಸೂರು, ಹುಬ್ಬಳ್ಳಿ, ಮಂಗಳೂರು ಎಂಬ 4 ಸಂಭಾಗಗಳ ರಚನೆಯಾಗಲಿದೆ ಎಂದು ತಿಳಿಸಿದರು.

### ಡ್ರಗ್ಸ್‌ಮುಕ್ತ ಕರ್ನಾಟಕ ಅಭಿಯಾನ

ಪರಿವರ್ತನಾ ಟ್ರಸ್ಟ್ ಬೆಂಗಳೂರು ವತಿಯಿಂದ ಕರ್ನಾಟಕ ದಕ್ಷಿಣದ 23 ಜಿಲ್ಲೆಯ 86 ತಾಲ್ಲೂಕುಗಳಲ್ಲಿ ಡ್ರಗ್ಸ್ ಜಾಗೃತಿ ಅಭಿಯಾನವನ್ನು ಆಯೋಜಿಸಲಾಗಿತ್ತು. 55 ದಿನಗಳ ಅವಧಿಯಲ್ಲಿ 181 ಜಾಗೃತಿ ಸಭೆ ಯೋಜನೆ ಮಾಡಲಾಗಿತ್ತು. ಇದರಲ್ಲಿ 52 ವಿವಿಧ ಸಂಘಟನೆಗಳು, 187 ವಿದ್ಯಾಸಂಸ್ಥೆಗಳ ಸಹಯೋಗದಲ್ಲಿ 60500 ವಿದ್ಯಾರ್ಥಿಗಳು, 6,865 ಸಾರ್ವಜನಿಕರು ಭಾಗವಹಿಸಿದ್ದರು. 3,675 ಕಿ.ಮೀ ಜಾಥಾ ನಡೆಸಲಾಗಿದೆ. ಮುಂದಿನ ಐದು ವರ್ಷದವರೆಗೆ ದೀರ್ಘಾವಧಿ ಜಾಗೃತಿ ಅಭಿಯಾನ ನಡೆಸುವ ಬಗ್ಗೆ ಯೋಚಿಸಲಾಗಿದೆ. ವಿದ್ಯಾಸಂಸ್ಥೆಗಳು ಮತ್ತು ಇಲಾಖೆಗಳ ಸಹಕಾರದೊಂದಿಗೆ ಶಾಲಾ ಕಾಲೇಜುಗಳ ದಾಖಲಾತಿ ಸಂದರ್ಭದಲ್ಲಿ ಟೆಸ್ಟಿಂಗ್ ಹಾಗೂ ವ್ಯಸನಿಗಳಿಗೆ ಚಿಕಿತ್ಸೆ ಇತ್ಯಾದಿ ಯೋಜನೆ ಹಮ್ಮಿಕೊಳ್ಳಲಾಗಿದೆ ಎಂದು ತಿಪ್ಪೇಸ್ವಾಮಿ ಮಾಹಿತಿ ನೀಡಿದರು.

## ಇಂದಿನಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆ

**ಬೆಂಗಳೂರು:** ಇಂದಿನಿಂದ (ಮಾ.18) ರಾಜ್ಯಾದ್ಯಂತ ಎಸ್‌ಎಸ್‌ಎಲ್‌ಸಿ ಪರೀಕ್ಷೆಯು ಆರಂಭವಾಗಲಿದ್ದು, ಶಿಕ್ಷಣ ಇಲಾಖೆಯು ಸಿಸಿ ಕ್ಯಾಮೆರಾ ಕಣ್ಗಾವಲಿನಲ್ಲಿ ಕಟ್ಟುನಿಟ್ಟಿನ ಭದ್ರತೆಯೊಂದಿಗೆ ಪರೀಕ್ಷಾ ಕೇಂದ್ರಗಳು ಸಿದ್ಧಗೊಂಡಿವೆ. ಮೊದಲ ದಿನ ಪ್ರಥಮ ಭಾಷೆ ವಿಷಯದ ಪರೀಕ್ಷೆ ನಡೆಯಲಿದೆ. ಪರೀಕ್ಷೆಗೆ ಒಟ್ಟು 9,02,899 ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದಾರೆ.

ಏ.2ರವರೆಗೂ ನಡೆಯುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ 8,12,855 ಹೊಸಬರು, 62,845 ಪುನರಾವರ್ತಿತ ಮತ್ತು 27,189 ಖಾಸಗಿ ಅಭ್ಯರ್ಥಿಗಳು ನೋಂದಾಯಿಸಿಕೊಂಡಿದ್ದಾರೆ. ಪರೀಕ್ಷೆಗೆ ಒಟ್ಟು 15,941 ಶಾಲೆಗಳು ನೋಂದಾಯಿಸಿಕೊಂಡಿದ್ದು, 2,871 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ. ಫಲಿತಾಂಶವನ್ನು ಏ. 24 ರಂದು ಪ್ರಕಟಿಸಲಾಗುತ್ತದೆ.

ಯಾವುದೇ ಅಕ್ರಮ ಮತ್ತು ಗೊಂದಲಗಳಿಗೆ ಅವಕಾಶವಾಗದೆ ಸುಸೂತ್ರವಾಗಿ ಪರೀಕ್ಷೆ ನಡೆಸಲು ಸಕಲ ಸಿದ್ಧತೆ ಹಾಗೂ ಭದ್ರತಾ ವ್ಯವಸ್ಥೆ ಮಾಡಿಕೊಳ್ಳಲಾಗಿದೆ ಎಂದು ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ತಿಳಿಸಿದೆ.

ಜತೆಗೆ ಎಲ್ಲಾ ಪರೀಕ್ಷಾ ಕೊಠಡಿಗಳಲ್ಲೂ ಸಿಸಿ ಕ್ಯಾಮರಾ ಕಣ್ಗಾವಲು ಮತ್ತು ಜಿಲ್ಲಾ ಕೇಂದ್ರದಲ್ಲಿ ವೆಬ್‌ಕ್ಯಾಸ್ಟಿಂಗ್ ವ್ಯವಸ್ಥೆ ಈ ಬಾರಿಯೂ ಮುಂದುವರಿದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ನಕಲಿ ಪ್ರಶ್ನೆಪತ್ರಿಕೆಗಳನ್ನು ಸಾಮಾಜಿಕ ಜಾಲತಾಣದಲ್ಲಿ ಸುಳ್ಳು ಸುದ್ದಿ ಹಬ್ಬಿಸುವವರ ಮೇಲೆ ನಿಗಾ ಇರಿಸಲಾಗುತ್ತದೆ. ಜತೆಗೆ ಇಂತಹ ಅಕ್ರಮ ಎಸಗಿದವರ ಮೇಲೆ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

### ಉಚಿತ ಬಸ್ ವ್ಯವಸ್ಥೆ

ವಿದ್ಯಾರ್ಥಿಗಳ ಅನುಕೂಲಕ್ಕೆ ಕೆಎಸ್‌ಆರ್‌ಟಿಸಿ ಮತ್ತು ಬಿಎಂಟಿಸಿ ಬಸ್‌ಗಳಲ್ಲಿ ಉಚಿತ ಪ್ರಯಾಣ ಸೌಲಭ್ಯವನ್ನು ಘೋಷಿಸಿದೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳು ಪರೀಕ್ಷಾ ಪ್ರವೇಶ ಪತ್ರ (ಹಾಲ್ ಟಿಕೆಟ್) ತೋರಿಸಿ, ಸಾರಿಗೆ ಬಸ್‌ಗಳಲ್ಲಿ ಉಚಿತ ಪ್ರಯಾಣ ಮಾಡಬಹುದಾಗಿದೆ.

### ನಗರ ಪರೀಕ್ಷಾ ಕೇಂದ್ರಗಳ ಸುತ್ತ ನಿಷೇಧಾಜ್ಞೆ

ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಹಿನ್ನೆಲೆಯಲ್ಲಿ ಪರೀಕ್ಷಾ ಕೇಂದ್ರಗಳ ಸುತ್ತ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ಕೇಂದ್ರದ 200 ಮೀಟರ್ ವ್ಯಾಪ್ತಿಯಲ್ಲಿರುವ ಝೆರಾಕ್ಸ್ ಅಂಗಡಿಗಳನ್ನು ಮುಚ್ಚುವಂತೆ ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಆದೇಶ ಹೊರಡಿಸಿದ್ದಾರೆ.

### ಕಿಡಿ ನುಡಿ

•ವಾಸುದೇವರಾವ್ ಕಕ್ಕೆನೇಜಿ

◈ ಭಾರತದಲ್ಲಿ ಹಿಂದೂ ಮುಸ್ಲಿಂ ಸಮಸ್ಯೆಗೆ ಕಾಂಗ್ರೆಸ್ಸೇ ಕಾರಣ -ನಿತಿನ್ ಗಡ್ಕರಿ
**-ವಿಚಿತ್ರವೇನೆಂದರೆ ಇದೀಗ ಪ್ರತಿ ಚುನಾವಣೆಯಲ್ಲೂ ಅವರ ಸೋಲಿಗೆ ಅದೇ ಕಾರಣ. ಅದು ಹೇಗೆಂದರೆ ಅವರನ್ನು ಈ ಕಡೆ ಹಿಂದುಗಳು ನಂಬೋದಿಲ್ಲ, ಆ ಕಡೆ ಮುಸ್ಲಿಮರೂ ನಂಬೋದಿಲ್ಲ!**

### ದಿನ ಭವಿಷ್ಯ

**ಮೇಷ** ಕೆಲಸ, ಮನೆಯ ಕಡೆಗೇ ಗಮನ ಕೊಟ್ಟು ಇತರ ವಿಷಯ ಕಡೆಗಣಿಸಿದ್ದೀರಿ. ಖಾಸಗಿ ವಿಷಯಕ್ಕೂ ಆದ್ಯತೆ ಕೊಡಿ. ಹೂಡಿಕೆಯಿಂದ ಧನಲಾಭ

**ವೃಷಭ** ಉದಾಸೀನತೆ. ಆದರಿಂದ ಕೆಲಸ ನಿಧಾನ. ತುರ್ತು ಕಾರ್ಯ ಕಡೆಗಣಿಸಬೇಡಿ. ಶೇರು ಹೂಡಿಕೆಯಲ್ಲಿ ಎಚ್ಚರ ವಹಿಸುವುದೊಳಿತು.

**ಮಿಥುನ** ಉದ್ವಿಗ್ನ ಪರಿಸ್ಥಿತಿ ಎದುರಿಸುವಿರಿ. ಮನಸು ಶಾಂತಗೊಳಿಸಲು ಹೆಚ್ಚು ಗಮನ ಕೊಡಿ. ಆದಾಯ ಮತ್ತು ಖರ್ಚಿನ ಮಧ್ಯೆ ಸಮತೋಲನ ಸಾಧಿಸಿ.

**ಕಟಕ** ಈ ದಿನ ಹೆಚ್ಚು ಎಚ್ಚರ ಅವಶ್ಯ. ಸಣ್ಣ ತಪ್ಪು ದೊಡ್ಡ ಪರಿಣಾಮ ಉಂಟು ಮಾಡೀತು. ಖರೀದಿ ಹುಮ್ಮಸ್ಸಿನಲ್ಲಿ ಖರ್ಚು ಅಧಿಕ. ಬಂಧು ಭೇಟಿ.

**ಸಿಂಹ** ಎಲ್ಲವೂ ನಿಮಗೆ ಪೂರಕವಾಗಿದ್ದರೂ ಏನೋ ಕೊರಗು, ಬೇಸರ. ಪ್ರೀತಿಯಲ್ಲಿ ಹಿನ್ನಡೆ. ನಿಮ್ಮ ಧೋರಣೆ ಬದಲಿಸುವ ಪ್ರಸಂಗ ಬಂದೀತು.

**ಕನ್ಯಾ** ಭವಿಷ್ಯದ ಯೋಜನೆ ರೂಪಿಸಲು ಸಕಾಲ. ಉದ್ಯೋಗ ಪಡೆಯುವಲ್ಲಿ ಸಫಲ. ಧೂಳು ಸಂಬಂಧಿ ಅಲರ್ಜಿ ಉಂಟಾದೀತು. ಕೌಟುಂಬಿಕ ಸೌಹಾರ್ದ.

**ತುಲಾ** ಕಲ್ಪನೆಗೆ ರೆಕ್ಕೆ ಮೂಡಲಿದೆ. ಅದನ್ನು ಸಾಕಾರಗೊಳಿಸಲು ಸಫಲ. ಆತ್ಮೀಯರ ಸಾಧನೆಯ ತೃಪ್ತಿ. ಚಾಲನೆಯಲ್ಲಿ ತುಸು ಎಚ್ಚರವಿರಲಿ.

**ವೃಶ್ಚಿಕ** ಏಕತಾನತೆಯಿಂದ ಹೊರಬಂದು ಹೊಸತನಕ್ಕೆ ಕ್ರಿಯಾಶೀಲರಾಗಿ. ಅನವಶ್ಯ ಜಗಳಕ್ಕೆ ಹೋಗದಿರಿ. ತಾಳ್ಮೆ ಪ್ರದರ್ಶಿಸಿ. ಪ್ರೀತಿಯಲ್ಲಿ ಮಹತ್ವದ ಬೆಳವಣಿಗೆ.

**ಧನು** ಕಡೆಗಣಿಸಿದ್ದ ವಿಷಯವೊಂದು ಮುನ್ನೆಲೆಗೆ ಬರಲಿದೆ. ಆ ಬಗ್ಗೆ ಗಮನ ಹರಿಸಿ. ವೃತ್ತಿಗೆ ಸಂಬಂಧಿಸಿ ಶುಭ ಸುದ್ದಿ ಕೇಳಲಿದೆ. ಧನಪ್ರಾಪ್ತಿ.

**ಮಕರ** ಉದ್ಯೋಗಕ್ಕೆ ಸಂಬಂಧಿಸಿ ಶುಭ ಸುದ್ದಿ. ಆಪ್ತರ ಜತೆಗಿನ ಭಿನ್ನಮತ ಶಮನ. ಹಣದ ವ್ಯವಹಾರದಲ್ಲಿ ಅನಿರೀಕ್ಷಿತ ತೊಡಕು ಉಂಟಾಗಲಿದೆ.

**ಕುಂಭ** ನೀವು ನಿರರ್ಥಕ ಅಂದುಕೊಂಡ ಕೆಲಸ ಉತ್ತಮ ಫಲಿತಾಂಶ ನೀಡಲಿದೆ. ತೃಪ್ತಿಕರ ಆರ್ಥಿಕ ಬೆಳವಣಿಗೆ. ಕೌಟುಂಬಿಕ ಸಾಮರಸ್ಯ.

**ಮೀನ** ವಿವಾಹ ಸಂಬಂಧ ಕೂಡಿಬಂದೀತು. ಉದ್ವಿಗ್ನತೆ ಸೃಷ್ಟಿಸುವ ವಿಷಯಗಳಿಂದ ದೂರವಿರಿ. ವೃತ್ತಿ ಕಾರ್ಯದಲ್ಲಿ ಸಫಲತೆ. ಬಂಧುಗಳ ಸಹಕಾರ.

ರಾಹುಕಾಲ: 12.00-1.30
ಗುಳಿಕಕಾಲ: 10.30-12.00

ಅದೃಷ್ಟ ಸಂಖ್ಯೆ : 5,3,7,1

### ರೈಲ್ವೇ ಇಲಾಖೆಯ ಪರೀಕ್ಷೆ ದಿಢೀರ್ ರದ್ದು: ಸಿಎಂ ಅಸಮಾಧಾನ

# ಕನ್ನಡಿಗರಿಗೆ ಕೇಂದ್ರ ದ್ರೋಹ

**ಬೆಂಗಳೂರು:** ನೈರುತ್ಯ ರೈಲ್ವೇ ಇಲಾಖೆಯ 194 ಗೂಡ್ಸ್ ರೈಲು ಮ್ಯಾನೇಜರ್ ಹುದ್ದೆಗಳು ಹಾಗೂ ಹುಬ್ಬಳ್ಳಿ ವಿಭಾಗದಲ್ಲಿ ಎಲ್‌ಡಿಸಿಇ 101 ಹುದ್ದೆಗಳಿಗೆ ಮುಂಬಡ್ತಿ ನೀಡುವ ಸಂಬಂಧ ಮಂಗಳವಾರ ನಡೆಯಬೇಕಿದ್ದ ಪರೀಕ್ಷೆಗಳನ್ನು ಕನ್ನಡಿಗರು ಹಾಗೂ ಕನ್ನಡ ಸಂಘಟನೆಗಳ ಭಾರೀ ವಿರೋಧದ ತರುವಾಯ ರೈಲ್ವೇ ಇಲಾಖೆಯು ದಿಢೀರ್ ರದ್ದುಪಡಿಸಿ ಕನ್ನಡಿಗ ಉದ್ಯೋಗಿಗಳನ್ನು ಆತಂತ್ರ ಪರಿಸ್ಥಿತಿಗೆತಳ್ಳಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಬರೆದುಕೊಂಡಿರುವ ಅವರು, ಕನ್ನಡ ಭಾಷೆಯಲ್ಲಿ ಪರೀಕ್ಷೆ ಬರೆಯಲು ಅವಕಾಶ ನೀಡದಿರುವ ಬಗ್ಗೆ ಈ ಮೊದಲೇ ಸಾವಿರಾರು ಕನ್ನಡಿಗ ಉದ್ಯೋಗಿಗಳು ಧ್ವನಿಯೆತ್ತಿದ್ದರು. ಶಾಂತ ರೀತಿಯ ಪ್ರತಿಭಟನೆಯನ್ನು, ಪ್ರತಿರೋಧವನ್ನು ನಿರ್ಲಕ್ಷಿಸುತ್ತಾ ಬಂದ ರೈಲ್ವೆ ಇಲಾಖೆ ಪರೀಕ್ಷೆ ಆರಂಭವಾಗುವ ಕೊನೆ ಕ್ಷಣದಲ್ಲಿ ರದ್ದುಮಾಡಿರುವುದು ಈಗಿನ ಗೊಂದಲಕ್ಕೆ ಕಾರಣ ಎಂದಿದ್ದಾರೆ.

**ಮುಂಬರುವ ದಿನಗಳಲ್ಲಿ ಕನ್ನಡ ಭಾಷಿಗರಿಗೆ ಭಾಷೆಯ ಹೆಸರಲ್ಲಿ ಅನ್ಯಾಯವಾಗದಂತೆ ಕೇಂದ್ರ ಸರ್ಕಾರ ನೋಡಿಕೊಳ್ಳಬೇಕು. ಪ್ರಧಾನಿ ನರೇಂದ್ರ ಮೋದಿ ಅವರೇ ಮಧ್ಯೆಪ್ರವೇಶಿಸಿ ಸಂಬಂಧಿತ ಇಲಾಖೆಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಬೇಕು.ರದ್ದುಪಡಿಸಲಾದ ರೈಲ್ವೆ ಇಲಾಖೆಯ ಪರೀಕ್ಷೆಯನ್ನು ಕನ್ನಡದಲ್ಲಿಯೇ ಬರೆಯಲು ಅವಕಾಶ ಕಲ್ಪಿಸಿ ಶೀಘ್ರದಲ್ಲಿಯೇ ನಡೆಸಲು ಕ್ರಮಕೈಗೊಳ್ಳಬೇಕು.**
■ ಸಿದ್ದರಾಮಯ್ಯ, ಮುಖ್ಯಮಂತ್ರಿ

### ಕನ್ನಡಿಗರೆಂದರೆ ಕೇಂದ್ರಕ್ಕೆ ತಾತ್ಸಾರ: ಮುಖ್ಯಮಂತ್ರಿ

ಪ್ರಾರಂಭದಲ್ಲಿಯೇ ರೈಲ್ವೆ ಇಲಾಖೆ ಎಚ್ಚೆತ್ತುಕೊಂಡು ತನ್ನ ತಪ್ಪನ್ನು ತಿದ್ದಿಕೊಂಡು ಕನ್ನಡದಲ್ಲಿ ಪರೀಕ್ಷೆಗೆ ಅವಕಾಶ ಮಾಡಿಕೊಟ್ಟಿದ್ದರೆ ಈಗಿನ ಆತಂತ್ರ ಸ್ಥಿತಿ ನಿರ್ಮಾಣವಾಗುತ್ತಿರಲಿಲ್ಲ. ಆ ಪ್ರಯತ್ನವನ್ನೇ ಮಾಡದೆ, ಕನ್ನಡಿಗರನ್ನು ತಾತ್ಸಾರ ಭಾವನೆಯಿಂದ ಕಂಡು, ಪ್ರತಿಭಟನೆಯ ಕಾವು ಹೆಚ್ಚಾದ ಕೂಡಲೆ ತರಾತುರಿಯಲ್ಲಿ ಪರೀಕ್ಷೆ ರದ್ದುಪಡಿಸುವ ನಿರ್ಧಾರಕ್ಕೆ ಬಂದಿರುವುದು ಖಂಡನೀಯ. ಕನ್ನಡಿಗರಿಗೆ ಕೇಂದ್ರ ಸರ್ಕಾರದ ಪರೀಕ್ಷೆಗಳಲ್ಲಿ ಅನ್ಯಾಯವಾಗುತ್ತಿರುವುದು ಇದು ಮೊದಲ ಬಾರಿ ಅಲ್ಲ ಬಹುಶಃ ಕೊನೆಯದ್ದೂ ಅಲ್ಲ. ಕೇಂದ್ರದ ಕುಟಿಲತನದಿಂದಾಗಿ ಕನ್ನಡಿಗ ಉದ್ಯೋಗಾಕಾಂಕ್ಷಿಗಳು ಮೊದಲಿಂದಲೂ ಅನ್ಯಾಯಕ್ಕೆ ತುತ್ತಾಗುತ್ತಾ ಬಂದಿದ್ದಾರೆ ಎಂದು ಸಿಎಂ ಸಿಟ್ಟು ಹೊರಹಾಕಿದ್ದಾರೆ. ಸೋಮಣ್ಣನವರು ಕನ್ನಡಿಗರ ಪರವಾಗಿ ನಿಂತು ಅನ್ಯಾಯವನ್ನು ಸರಿಪಡಿಸುತ್ತಾರೆ ಎಂಬ ಭರವಸೆಯನ್ನು ನಾನೂ ಇಟ್ಟುಕೊಂಡಿದ್ದೆ, ಆ ನಂಬಿಕೆ ಹುಸಿಯಾಗಿದೆ. ಸೋಮಣ್ಣನವರು ಮಾತನಾಡಲು ಶುರು ಮಾಡಿದರೆ ರೈಲ್ವೆ ಇಲಾಖೆ ಇರುವುದೇ ಕರ್ನಾಟಕಕ್ಕಾಗಿ ಎನ್ನುವಂತೆ ಮಾತಿನ ಅರಮನೆ ಕಟ್ಟುತ್ತಾರೆ. ಅವರು ಮಾತು ಸ್ವಲ್ಪ ಕಡಿಮೆಮಾಡಿ ಕರ್ನಾಟಕಕ್ಕಾಗಿ ಮಾಡಬೇಕಾದ ಕೆಲಸವನ್ನು ನಿಷ್ಠೆಯಿಂದ ಮಾಡಲು ಮುಂದಾಗಬೇಕು ಎಂದು ಸಿದ್ದರಾಮಯ್ಯ ಮನವಿ ಮಾಡಿದ್ದಾರೆ. ಭಾರತ ರಾಜ್ಯಗಳ ಒಕ್ಕೂಟ, ಈ ರಾಜ್ಯಗಳು ಭಾಷೆಗಳ ಆಧಾರದಲ್ಲಿಯೇ ರಚನೆಯಾಗಿರುವುದನ್ನು ಮರೆಯಬಾರದು. ನಾವು ಹಿಂದಿಯನ್ನು ಭಾಷೆಯಾಗಿ ವಿರೋಧಿಸುವುದಿಲ್ಲ, ಹಿಂದಿಯನ್ನು ಕನ್ನಡದ ಮೇಲೆ ಹೇರುವುದನ್ನು ಮಾತ್ರ ಖಂಡಿತ ಸಹಿಸುವುದಿಲ್ಲ. ಆಳುವ ಪಕ್ಷದ ಸಂಸದರು ಪಕ್ಷದ ಮುಲಾಜಿಗೆ ಬಿದ್ದು ಕನ್ನಡಕ್ಕೆ ಆಗುತ್ತಿರುವ ಅನ್ಯಾಯದ ವಿರುದ್ಧ ದನಿ ಎತ್ತದೆ ಬಾಯಿ ಮುಚ್ಚಿಕೊಂಡಿರಬಹುದು, ಆದರೆ ಕನ್ನಡಿಗರು ಜಾಗೃತರಾಗಿದ್ದಾರೆ. ಕನ್ನಡಿಗರು ಉದ್ಯೋಗಕ್ಕಾಗಿ, ಭಡ್ತಿಗಾಗಿ ಕೇಂದ್ರದ ಮುಂದೆ ಭಿಕ್ಷೆಗೆ ನಿಂತಿಲ್ಲ, ತಾವು ಶಿಕ್ಷಣ ಪಡೆದ ಭಾಷೆಯಲ್ಲೇ ತಮ್ಮ ಹಕ್ಕಿನ ಉದ್ಯೋಗ ಭಡ್ತಿಯನ್ನು ಕೇಳುತ್ತಿದ್ದಾರೆ ಎಂದು ಬರೆದುಕೊಂಡಿದ್ದಾರೆ.



## ಬಿರುಗಾಳಿಸಹಿತ ಆಲಿಕಲ್ಲು ಮಳೆ

ಪುಟ ೧➜ ಕಲಬುರಗಿ ನಗರದಲ್ಲಿ ಲಘು ಮಳೆಯಾಗಿದ್ದರೆ, ಚಿಂಚೋಳಿಯಲ್ಲಿ ಆಲಿಕಲ್ಲು ಮಳೆಯಾಗಿದೆ. ಹೊಸಪೇಟೆ, ಕೂಡ್ಲಿಗಿ ಮತ್ತು ಹಗರಿಬೊಮ್ಮನಹಳ್ಳಿ ಪಟ್ಟಣಗಳು ಸೇರಿದಂತೆ ವಿಜಯನಗರ ಜಿಲ್ಲೆಯ ಹಲವಾರು ಭಾಗಗಳಲ್ಲಿ ಸೋಮವಾರ ಸಂಜೆ ಗುಡುಗುಸಹಿತ ಮಳೆಯಾಗಿದೆ. ಕೂಡ್ಲಿಗಿ ತಾಲ್ಲೂಕಿನ ಯೆಂಬ್ಲಿ ಗ್ರಾಮದಲ್ಲಿ ಸಿಡಿಲು ಬಡಿದ ನಂತರ ಗಾಳಿಯಂತ್ರವೊಂದು ಸುಟ್ಟುಹೋಗಿದೆ.

**ಆಲಿಕಲ್ಲು ಸಹಿತ ಮಳೆ:** ಧಾರವಾಡ ನಗರದಲ್ಲಿ ಆಲಿಕಲ್ಲು ಸಹಿತ ಭಾರಿ ಮಳೆ ಆಗಿದ್ದು, ಬಿಸಿಲಿನ ಝಳಕ್ಕೆ ಬಸವಳಿದಿದ್ದ ಉತ್ತರ ಕರ್ನಾಟಕದ ಜನತೆಗೆ ವರುಣ ತಂಪೆರೆದಿದೆ. ಧಾರವಾಡದ ಕೆಲವೆಡೆ ಸಾಧಾರಣ ಮಳೆ ಆದರೆ, ನಗರದಲ್ಲಿ ಭಾರೀ ಮಳೆ ಆಗಿದೆ. ಆದರೆ ಗಾಳಿ ಜೋರಾಗಿ ಬೀಸಿದ್ದರಿಂದ ರೈತರಿಗೆ ಮಾವಿನ ಬೆಳೆಗೆ ಈ ಮಳೆ ಕಂಟಕವಾಗಲಿದೆಯೇ ಎಂಬ ಆತಂಕ ಉಂಟು ಮಾಡಿದೆ.

ಬಳ್ಳಾರಿ ನಗರ, ಸಂಡೂರು ಮತ್ತು ಕಂಪ್ಲಿಯಲ್ಲಿಯೂ ಸಹ ಲಘು ಮಳೆಯಾಗಿದೆ. ದಾವಣಗೆರೆ ನಗರ ಮತ್ತು ಜಿಲ್ಲೆಯ ಕೆಲವು ಭಾಗಗಳಲ್ಲಿ ಆಲಿಕಲ್ಲು ಮಳೆಯಾಗಿದೆ. ಕಲಘಟಗಿ ತಾಲೂಕಿನ ಬಹುತೇಕ ಭಾಗಗಳಲ್ಲಿ ಮಂಗಳವಾರ ಮಧ್ಯಾಹ್ನ ಭಾರೀ ಗಾಳಿ ಮಳೆ ಸುರಿದಿದೆ. ಕಲಘಟಗಿ ಪಟ್ಟಣ, ಮಾಚಾಪುರ, ಬೆಲವಂತರ ಸೋಮನಕೊಪ್ಪ ಹೀಗೆ ಹಲವು ಊರುಗಳ ರಸ್ತೆಗಳಲ್ಲಿ ಆಲಿಕಲ್ಲು ರಾಶಿ ರಾಶಿ ಸುರಿದು ಬಿದ್ದಿದ್ದು, ಮನೆಗಳ ಮೇಲೆ ಕೂಡ ಆಲಿಕಲ್ಲು ರಾಶಿ ಬಿದ್ದಿದ್ದವು. ನಿರಂತರ ಮಳೆ ಜತೆಗೆ ಆಲಿಕಲ್ಲು ಸುರಿದು ಜನ ಆಶ್ಚರ್ಯಚಕಿತರಾದರು.

ಕೊಡಗಿನ ಅನೇಕ ಭಾಗಗಳಲ್ಲಿ ಸೋಮವಾರ ಋತುವಿನ ಮೊದಲ ಮಳೆಯಾಗಿದೆ. ಮಂಗಳವಾರ ಸಂಜೆ ಸುರಿದ ಮಳೆಯು ಗುಡ್ಡಗಾಡು ಜಿಲ್ಲೆಯ ಕಾಫಿ ಬೆಳೆಗಾರರಿಗೆ ಹರ್ಷ ತಂದಿತು.

### ರೈತ ಸಾವು

**ರೋಣ:** ತಾಲೂಕಿನ ಮೆಣಸಗಿ ಗ್ರಾಮದಲ್ಲಿ ಮಂಗಳವಾರ ಸುರಿದ ಧಾರಾಕಾರ ಮಳೆಯಿಂದ ಸಿಡಿಲು ಬಡಿದು ರೈತ ನಿಂಗಪ್ಪ ರಾಮಪ್ಪ ಅಮಾತಿ (58) ಎಂಬ ರೈತ ಮೃತಪಟ್ಟಿದ್ದಾನೆ. ರೋಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### 24 ಗಂಟೆಯಲ್ಲಿ ಮತ್ತಷ್ಟು ಮಳೆ

ರಾಜ್ಯದ ಜನತೆಗೆ ಹವಾಮಾನ ಇಲಾಖೆ ಮಳೆಯ ಮುನ್ಸೂಚನೆ ನೀಡಿದೆ. ಮುಂದಿನ 24ಗಂಟೆಗಳ ಕಾಲ ಬೆಂಗಳೂರು ಸೇರಿ ರಾಜ್ಯದ ಹಲವು ಜಿಲ್ಲೆಗಳಲ್ಲಿ ಮಳೆಯಾಗುವ ಸಾಧ್ಯತೆಯಿದ್ದು, ಜನರು ಎಚ್ಚರಿಕೆಯಿಂದಿರಲು ಸೂಚಿಸಲಾಗಿದೆ. ರಾಜ್ಯದ ಅಲ್ಲಲ್ಲಿ ಮೋಡಕವಿದ ವಾತಾವರಣವಿರಲಿದ್ದು, ಹಗುರವಾದ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

## ಸಚಿವರಿಗೆ ಸಿಎಂ ಪತ್ರ

ಪುಟ ೧➜ ಇದು ಸರ್ಕಾರಕ್ಕೆ ತೀವ್ರ ಮುಜುಗರ ಉಂಟುಮಾಡುವುದರೊಂದಿಗೆ ಶಾಸಕರುಗಳ ಹಕ್ಕಿಗೆ ಮತ್ತು ಸದನದ ಘನತೆಗೆ ಚ್ಯುತಿಯನ್ನುಂಟು ಮಾಡಿರುತ್ತದೆ. ಈ ಸಂಬಂಧ ನಡೆದ ಸಭೆಯಲ್ಲಿ ಸಭಾಧ್ಯಕ್ಷರು ತೀವ್ರ ಅಸಮಾಧಾನ ವ್ಯಕ್ತಪಡಿಸಿರುತ್ತಾರೆ. ಆದ್ದರಿಂದ ತಮ್ಮ ಇಲಾಖೆಯ ವತಿಯಿಂದ ಉತ್ತರಿಸಬೇಕಾದ ಪ್ರಶ್ನೆಗಳಿಗೆ ಉತ್ತರವನ್ನು ಸಕಾಲದಲ್ಲಿ ವಿಧಾನಮಂಡಲಕ್ಕೆ ಕಳುಹಿಸದೇ ಇರುವ ಬಗ್ಗೆ ಇಲಾಖಾ ಕಾರ್ಯದರ್ಶಿಗಳ ವಿವರಣೆಯನ್ನು ತಕ್ಷಣ ನೀಡಲು ಸೂಚಿಸಲಾಗಿದೆ. ಅಲ್ಲದೆ, ಉತ್ತರ ಕಳುಹಿಸದ ಸಂದರ್ಭದಲ್ಲಿ ಸಂಬಂಧಪಟ್ಟ ಶಾಸಕರಿಗೆ ಪ್ರತ್ಯೇಕ ಪತ್ರವನ್ನು ಕಳುಹಿಸಿ ಹಾಗೂ ಮಾಹಿತಿ ಒದಗಿಸುವ ನಿರ್ದಿಷ್ಟ ಸಮಯವನ್ನು ತಿಳಿಸಲು ಸಹ ಸೂಚಿಸಿದೆ. ಎಂದು ಪತ್ರದಲ್ಲಿ ಸಿದ್ದರಾಮಯ್ಯ ತಿಳಿಸಿದ್ದಾರೆ.

### 8 ಐಎಎಸ್ ಅಧಿಕಾರಿಗಳಿಗೆ ನೋಟಿಸ್

ಕರ್ನಾಟಕದಲ್ಲಿ ಇದೇ ಮೊದಲ ಬಾರಿಗೆ ಕಾರಣ ಕೇಳಿ ಬರೋಬ್ಬರಿ ಎಂಟು ಇಲಾಖೆಯ ಹಿರಿಯ ಐಎಎಸ್ ಅಧಿಕಾರಿಗಳಿಗೆ ಶೋಕಾಸ್ ನೋಟಿಸ್ ಜಾರಿ ಮಾಡಲಾಗಿದೆ. ಅಧಿವೇಶನದಲ್ಲಿ ಶಾಸಕರುಗಳ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ಕೊಡದ ಇಲಾಖೆ ಕಾರ್ಯದರ್ಶಿಗಳಿಗೆ ನೋಟಿಸ್ ನೀಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದ ಬೆನ್ನಲ್ಲೇ, ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್ ಅವರು 8 ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳಿಗೆ ಕಾರಣ ಕೇಳಿ ನೋಟಿಸ್ ಜಾರಿ ಮಾಡಿದ್ದಾರೆ. ಸದನದಲ್ಲಿ ಶಾಸಕರ ಪ್ರಶ್ನೆಗೆ ಉತ್ತರ ನೀಡದ ಹಿನ್ನೆಲೆಯಲ್ಲಿ 8 ಇಲಾಖೆಯ ಕಾರ್ಯದರ್ಶಿಗಳಿಗೆ ಶೋಕಾಸ್ ನೋಟಿಸ್ ನೀಡಲಾಗಿದೆ.

- ಆರ್. ವಿನೋತ್ ಪ್ರಿಯಾ -ಪಶುಸಂಗೋಪನಾ ಇಲಾಖೆ
- ಮೋಹನ್ ರಾಜ್ ಕೆ.ಪಿ. -ವಸತಿ ಇಲಾಖೆ
- ಎನ್.ವಿ ಪ್ರಸಾದ್ - ಸಾರಿಗೆ ಇಲಾಖೆ
- ಆರ್.ಗಿರೀಶ್ - ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ
- ಆದಿತ್ಯ ಆಮ್ಲನ್ ಬಿಸ್ವಾಸ್ - ಲೋಕೋಪಯೋಗಿ ಇಲಾಖೆ
- ರಾಜೇಂದ್ರ ಕುಮಾರ್ ಕಟಾರಿಯಾ - ಕಂದಾಯ ಇಲಾಖೆ

## ಅಮಾನುಷ ದಾಳಿ

ಪುಟ ೧➜ ಸ್ಫೋಟದ ನಂತರ ಸಂಭವಿಸಿದ ದ್ವಿತೀಯ ಹಂತದ ಸ್ಫೋಟಗಳು ಅಲ್ಲಿ ಮದ್ದುಗುಂಡುಗಳ ಸಂಗ್ರಹವಿರುವುದನ್ನು ಖಚಿತಪಡಿಸಿವೆ ಎಂದು ಸಚಿವಾಲಯ ಪ್ರತಿಪಾದಿಸಿದೆ.

ನಂಗರ್‌ಹಾರ್‌ನಲ್ಲಿ ಡ್ರೋನ್ ಜೋಡಣೆ ಕೇಂದ್ರಗಳಿದ್ದವು ಎಂದು ಭದ್ರತಾ ಮೂಲಗಳು ತಿಳಿಸಿವೆ. ಪಾಕಿಸ್ತಾನದ ಭೂಪ್ರದೇಶದ ಮೇಲೆ ಪದೇ ಪದೇ ನಡೆದ ಗಡಿ ದಾಳಿಗಳ ಹಿನ್ನೆಲೆಯಲ್ಲಿ ಈ ಕಾರ್ಯಾಚರಣೆ ಪ್ರಾರಂಭಿಸಲಾಗಿದೆ ಎಂದು ಪಾಕ್ ಸಮರ್ಥಿಸಿಕೊಂಡಿದೆ.

## ಹುದ್ದೆ ಭರ್ತಿ ಆಗ್ರಹಿಸಿ ಪ್ರತಿಭಟನೆ

ಪುಟ ೧➜ ಪೊಲೀಸರ ಮನವೊಲಿಕೆಗೂ ಬಗ್ಗದ ಹಿನ್ನೆಲೆಯಲ್ಲಿ ಎಬಿವಿಪಿ ಕಾರ್ಯಕರ್ತರನ್ನು ವಶಕ್ಕೆ ಪಡೆಯಲು ಪೊಲೀಸರು ಮುಂದಾದಾಗ ಪೊಲೀಸರು ಹಾಗೂ ವಿದ್ಯಾರ್ಥಿಗಳು, ಕಾರ್ಯಕರ್ತರ ನಡುವೆ ವಾಗ್ವಾದ ಹಾಗೂ ಮಾತಿನ ಚಕಮಕಿ ನಡೆಯಿತು. ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ 2.50 ಲಕ್ಷಕ್ಕೂ ಹೆಚ್ಚಿನ ಹುದ್ದೆಗಳು ಖಾಲಿ ಇದ್ದು, ಆ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವಲ್ಲಿ ರಾಜ್ಯ ಸರ್ಕಾರ ವಿಳಂಬ ಮಾಡುತ್ತಿದೆ ಎಂದು ಆರೋಪಿಸಿದ ಕಾರ್ಯಕರ್ತರು, ಕಳೆದ ಐದು ವರ್ಷಗಳಿಂದ ಯಾವುದೇ ನೇಮಕಾತಿ ನಡೆದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಎಬಿವಿಪಿ ವಿಭಾಗ ಸಂಘಟನಾ ಕಾರ್ಯದರ್ಶಿ ಸಚಿನ್ ಹಿರೇಮಠ, ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯ ಪನಿರಾಘವೇಂದ್ರ ದೇಸಾಯಿ, ರಾಜ್ಯ ಸಹಕಾರ್ಯದರ್ಶಿ ಕುಶಾಲ ಗೋಧಗೇರಿ, ರಾಜ್ಯ ಕಾರ್ಯಸಮಿತಿ ಸದಸ್ಯ ಯಲ್ಲಪ್ಪ ಬಮ್ಮನಲ್ಲಿ, ದರ್ಶನ್ ಮಾಷಣ್ಣವರ, ಶಿವಯ್ಯ ಮಠಪತಿ, ಸಾಯಿ ಬೋಸ್ಲೆ, ನಾಗರಾಜ ಹಂಜಿ, ಪ್ರಥಮಗೌಡ ಪಾಟೀಲ, ಮಹಾಂತೇಶ, ಬಾಲಾಜಿ ಜವಳಕರ, ಸೌರಭ ಮೊದಲಾದವರಿದ್ದರು.

## ದೇಶದ ಅನಿಲ ಆತಂಕ ಇನ್ನಷ್ಟು ಇಳಿಕೆ

ಪುಟ ೧➜ ಈ ವರ್ಗಾವಣೆ ಪ್ರಕ್ರಿಯೆ ಪ್ರತಿ ಗಂಟೆಗೆ 1000 ಟನ್‌ಗಳಂತೆ ನಡೆಯುತ್ತಿದ್ದು, 2 ದಿನಗಳಲ್ಲಿ ಈ ಪ್ರಕ್ರಿಯೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ. ಕೇಂದ್ರ ಬಂದರು ಸಚಿವಾಲಯದ ನಿರ್ದೇಶನದಂತೆವಡ್ಡಿನೀರ್ ಬಂದರು ಈ ಕಾರ್ಯಾಚರಣೆಯನ್ನು ಸುಗಮವಾಗಿ ನಿರ್ವಹಿಸುತ್ತಿದೆ. ಇದರಲ್ಲಿ ಬಹು ಏಜೆನ್ಸಿಗಳ ಪಾಲ್ಗೊಳ್ಳುವಿಕೆ ಇದ್ದು, ಎಲ್ಲಪ್ರಕ್ರಿಯೆಗಳನ್ನೂ ನಿಕಟವಾಗಿ ಮೇಲ್ವಿಚಾರಣೆ ನಡೆಸಲಾಗುತ್ತಿದೆ. ಹಾಗೆಯೇ ಸಚಿವಾಲಯವು ಎಲ್‌ಪಿಜಿ ನೌಕೆಗಳನ್ನು ಸುರಕ್ಷತಾ ಮಾನದಂಡಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ನಿರ್ವಹಿಸುವಂತೆ ಮತ್ತು ಯಾವುದೇ ನಿಯಮಾವಳಿಗಳನ್ನು ಮೀರದಂತೆ ನಿರ್ದೇಶನ ನೀಡಿದೆ.

ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ಭಾರತ ಹೊಂದಿರುವ ಬಲವಾದ ರಾಜತಾಂತ್ರಿಕ ಬಾಂಧವ್ಯಗಳಿಂದಾಗಿ ಭಾರತೀಯ ನೌಕೆಗಳು ಹಾರ್ಮುಜ್ ಜಲಸಂಧಿಯನ್ನು ಸುರಕ್ಷಿತವಾಗಿ ದಾಟಿ ಬರುತ್ತಿದ್ದು, ದೇಶದ ತೈಲ ಮತ್ತು ಅನಿಲ ಪೂರೈಕೆಯನ್ನು ಖಾತ್ರಿಪಡಿಸಿಕೊಳ್ಳಲಾಗುತ್ತಿದೆ ಎಂದು ಗುಜರಾತಿನ ಸಚಿವ ಜಿತು ವಾಘಾನಿ ತಿಳಿಸಿದ್ದಾರೆ. ಭಾರತ ತನ್ನ ಬೇಡಿಕೆಯ ಕಚ್ಚಾತೈಲದ ಶೇ.88ಕ್ಕೆ ಆಮದನ್ನೇ ನೆಚ್ಚಿಕೊಳ್ಳಬೇಕಾಗಿದ್ದು, ಆದಾಗ್ಯೂ ಮೋದಿ ಸರಕಾರ ರಷ್ಯಾ ಸೇರಿದಂತೆ ಬಹುಮೂಲಗಳಿಂದ ತೈಲ ಆಮದು ಮಾಡಿಕೊಳ್ಳುವ ಮೂಲಕ ದೇಶದ ಜನತೆಯ ಹಿತವನ್ನು ರಕ್ಷಿಸುತ್ತಿರುವುದನ್ನು ಇಲ್ಲಿ ಸ್ಮರಿಸಬಹುದು. ಅಮೆರಿಕ, ಚೀನಾ, ಕೊಲ್ಲಿ ದೇಶಗಳಲ್ಲಿ ಕೂಡ ತೈಲ ಬೆಲೆ ಏರಿಕೆಯಾಗಿದ್ದರೂ ಭಾರತದಲ್ಲಿ ತೈಲ ಬೆಲೆ ಏರಿಕೆಯಾಗಿಲ್ಲ ಎಂಬುದಿಲ್ಲಿ ಉಲ್ಲೇಖನೀಯ.

### ಸಿಲುಕಿರುವ ಹಡಗುಗಳ ಸ್ಥಿತಿ

ಪರ್ಷಿಯನ್ ಗಲ್ಫ್ ಪ್ರದೇಶದಲ್ಲಿ ಸಿಲುಕಿರುವ ಉಳಿದ 22 ಹಡಗುಗಳ ಸುರಕ್ಷಿತ ಪ್ರಯಾಣಕ್ಕಾಗಿ ಬಂದರು ಮತ್ತು ಹಡಗು ಸಚಿವಾಲಯ ಹಾಗೂ ಹಡಗು ನಿರ್ದೇಶನಾಲಯ ನಿರಂತರ ಪ್ರಯತ್ನ ನಡೆಸುತ್ತಿದೆ. ಈ ಹಡಗುಗಳಲ್ಲಿ 611 ನಾವಿಕರಿದ್ದು, ಇವುಗಳಲ್ಲಿ ಆರು ಎಲ್‌ಪಿಜಿ ವಾಹಕಗಳು, ನಾಲ್ಕು ಕಚ್ಚಾ ತೈಲ ಟ್ಯಾಂಕರ್‌ಗಳು ಮತ್ತು ಮೂರು ಕಂಟೈನರ್ ಹಡಗುಗಳು ಸೇರಿವೆ. ಎಲ್ಲಾ ಭಾರತೀಯ ನಾವಿಕರು ಸುರಕ್ಷಿತವಾಗಿದ್ದಾರೆ ಮತ್ತು ಕಳೆದ 24 ಗಂಟೆಗಳಲ್ಲಿ ಯಾವುದೇ ಅಹಿತಕರ ಘಟನೆಗಳು ಸಂಭವಿಸಿಲ್ಲ, ಎಂದು ಅಧಿಕಾರಿಗಳು ತಿಳಿಸಿದ್ದಾರೆ.


### ಪೂರೈಕೆ ಮೇಲೆ ಒತ್ತಡ

ಅಮೆರಿಕ-ಇಸ್ರೇಲ್ ಮತ್ತು ಇರಾನ್ ನಡುವಿನ ಪ್ರತೀಕಾರ ದಾಳಿಗಳಿಂದಾಗಿ ಹಾರ್ಮುಜ್ ಜಲಸಂಧಿ ಪ್ರಸ್ತುತ ಮುಚ್ಚಲ್ಪಟ್ಟಿದೆ. ಪರ್ಯಾಯ ಮೂಲಗಳಿಂದ ತೈಲ ಆಮದಿನ ವ್ಯತ್ಯಯವನ್ನು ಭಾಗಶಃ ಸರಿದೂಗಿಸಲಾಗಿದ್ದರೂ, ಅನಿಲ ಮತ್ತು ಎಲ್‌ಪಿಜಿ ಪೂರೈಕೆ ಮೇಲೆ ಒತ್ತಡ ಮುಂದುವರಿದಿದೆ. ಈ ಬಿಕ್ಕಟ್ಟಿನ ಸಮಯದಲ್ಲಿ ಹಡಗು ಕಾರ್ಯಾಚರಣೆ ಸುಗಮಗೊಳಿಸಲು ಪ್ರಮುಖ ಭಾರತೀಯ ಬಂದರುಗಳು ಶೇಖರಣೆ ಮತ್ತು ಲಂಗರು ಹಾಕುವ ಶುಲ್ಕದಲ್ಲಿ ರಿಯಾಯಿತಿಗಳನ್ನು ನೀಡುತ್ತಿವೆ.

## ಲಂಚ ಪಡೆಯುತ್ತಿದ್ದ ಪಿಡಿಒ ಲೋಕಾಯುಕ್ತ ಬಲೆಗೆ

**ಮೈಸೂರು:** ನೀರುಗಂಟಿಗೆ ಬಾಕಿ ಸಂಬಳ ನೀಡಲು 25 ಸಾವಿರ ರೂ. ಲಂಚ ಪಡೆಯುತ್ತಿದ್ದ ಪಿಡಿಒರೊಬ್ಬರು ಲೋಕಾಯುಕ್ತ ಪೊಲೀಸರ ಬಲೆಗೆ ಸಿಕ್ಕಿ ಬಿದ್ದ ಘಟನೆ ಜಿಲ್ಲೆಯ ಹುಣಸೂರು ತಾಲೂಕಿನಲ್ಲಿ ನಡೆದಿದೆ. ಹುಣಸೂರು ತಾಲೂಕಿನ ಮುಳ್ಳೂರು ಗ್ರಾಮ ಪಂಚಾಯಿತ್ತಿ ಪಿಡಿಒ ಮಂಜುಳಾ ಲೋಕಾಯುಕ್ತ ಬಲೆಗೆ ಸಿಕ್ಕಿಬಿದ್ದವರು. ನೀರುಗಂಟಿಯಾಗಿ ಕೆಲಸ ಮಾಡುತ್ತಿದ್ದ ಸ್ವಾಮಿ ಎಂಬುವರು ಕರ್ತವ್ಯದಲ್ಲಿದ್ದ ವೇಳೆ ಮೃತಪಟ್ಟಿದ್ದಾರೆ. ಅನುಕಂಪದ ಆಧಾರದ ಮೇಲೆ ಸ್ವಾಮಿರವರ ಮಗ ಮಹದೇವ್ ಎಂಬುವರಿಗೆ ಕೆಲಸ ಸಿಕ್ಕಿದೆ. ತಂದೆ ಕರ್ತವ್ಯ ನಿರ್ವಹಿಸಿದ್ದ ಎರಡು ವರ್ಷದ ಸಂಬಳ ಬಾಕಿ ಪಡೆಯಲು ಮಹದೇವ್ ಮುಂದಾಗಿದ್ದಾರೆ. ಸುಮಾರು ನಾಲ್ಕು ಲಕ್ಷ ಸಂಬಳ ನೀಡಲು ಮಂಜುಳಾ 50 ಸಾವಿರ ಲಂಚಕ್ಕೆ ಬೇಡಿಕೆ ಇಟ್ಟಿದ್ದಾರೆ. ಇವರ ಕಿರುಕುಳದಿಂದ ಬೇಸತ್ತ ಮಹದೇವ್ ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದಾರೆ. ಮಹದೇವ್‌ರಿಂದ ತಮ್ಮ ಕಚೇರಿಯಲ್ಲಿ ಮಂಜುಳಾ 25 ಸಾವಿರ ಲಂಚ ಪಡೆಯುತ್ತಿದ್ದ ವೇಳೆ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿ ರೆಡ್ ಹ್ಯಾಂಡಾಗಿ ಹಿಡಿದಿದ್ದಾರೆ. ಈ ವೇಳೆ ಮಂಜುಳಾ ತನ್ನ ಕೈಯನ್ನ ಹರಿತವಾದ ಆಯುಧದಿಂದ ಕೊಯ್ದುಕೊಂಡಿದ್ದಾರೆ. ಗಾಯಗೊಂಡ ಮಂಜುಳಾರನ್ನು ಮೈಸೂರಿನ ಕೆ.ಆರ್.ಆಸ್ಪತ್ರೆಗೆ ಕರೆತಂದು ಚಿಕಿತ್ಸೆ ಕೊಡಿಸಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ.

## ವಿದ್ಯುತ್ ತಗುಲಿ ಹುಲಿ ಸಾವು



ಪುಟ ೧➜ ತಾಲೂಕಿನ ಹೆಗ್ಗಡಹಳ್ಳಿ, ಹಕ್ಕಲಪುರ, ಸೋಮಹಳ್ಳಿ, ಸಂಪಿಗೆಪುರ, ಕಲ್ಲಹಳ್ಳಿ ಪಡಗೂರು ಭಾಗದಲ್ಲಿ ಕಾಣಿಸಿಕೊಂಡಿದ್ದು ಕೆಲ ದಿನಗಳ ಹಿಂದೆ ಸಂಪಿಗೆಪುರ ಹಾಗೂ ದೇವಾಪುರದ ಬಳಿ ಹುಲಿ ಸೆರೆಹಿಡಿಯಲಾಗಿತ್ತು. ಪಡಗೂರು ಗ್ರಾಮದ ಸುತ್ತಮುತ್ತ ಹುಲಿ ಓಡಾಟ ಹೆಚ್ಚಳವಾಗಿದ್ದು ಕಳೆದ ವಾರ ಪಡಗೂರಿನಲ್ಲಿ ಜಾನುವಾರುವಿನ ಮೇಲೆ ದಾಳಿ ಮಾಡಿ ಕೊಂದು ಹಾಕಿತ್ತು. ಇದರಿಂದಾಗಿ ಹುಲಿ ಸೆರೆಗೆ ಅರಣ್ಯ ಇಲಾಖೆಯ ಅಧಿಕಾರಿಗಳು ಬೋನು ಇಟ್ಟು ನಿಗಾ ವಹಿಸಿದ್ದರು.

## ಆರೆಸ್ಸೆಸ್‌ನಿಂದ ಹಿಂದು ಧರ್ಮದ ಪುನರುತ್ಥಾನ, ಸಮಾಜ ಸಂಘಟನೆ

ಪುಟ ೧➜ ಮನೆ ಮನೆಗೆ ಸಂಪರ್ಕ ಮಾಡಿದ ಸಂದರ್ಭದಲ್ಲಿ ಮತಾಂತರ, ಡ್ರಗ್ಸ್, ಜನಸಂಖ್ಯೆಯಲ್ಲಿನ ಅಸಮತೋಲನ ಸೇರಿದಂತೆ ಸಮಾಜದ ಸಮಸ್ಯೆಗಳ ಬಗ್ಗೆ ಜನರು ಬೆಳಕು ಚೆಲ್ಲಿದ್ದರು. ಹಿಂದು ಸಮಾಜೋತ್ಸವದಲ್ಲಿ ಅಧಿಕ ಸಂಖ್ಯೆಯಲ್ಲಿ ಮಹಿಳೆಯರು ಭಾಗಿಯಾಗಿದ್ದು ವಿಶೇಷವಾಗಿತ್ತು ಎಂದು ಹೇಳಿದರು.

### ಶಾಖೆಯಲ್ಲಿ ಹೆಚ್ಚಳ

ದೇಶಾದ್ಯಂತ ಒಟ್ಟು 55,683 ಸ್ಥಾನಗಳಲ್ಲಿ 88,949 ರಾಷ್ಟ್ರೀಯ ಸ್ವಯಂಸೇವಕ ಸಂಘದ ಶಾಖೆಗಳು ನಡೆಯುತ್ತಿದ್ದು, ಕಳೆದ ವರ್ಷಕ್ಕಿಂತ 5820 ಶಾಖೆಗಳು ಹೆಚ್ಚಾಗಿವೆ. ವಾರಕ್ಕೊಮ್ಮೆ ನಡೆಯುವ ಮಿಲನ್ ಸಂಖ್ಯೆ ಕಳೆದ ಬಾರಿಗಿಂತ 459 ಹೆಚ್ಚಾಗಿದ್ದು, ಪ್ರಸ್ತುತ ದೇಶವ್ಯಾಪಿ 32,606 ಮಿಲನ್‌ಗಳು ಜರುಗುತ್ತಿವೆ. ತಿಂಗಳಿಗೊಮ್ಮೆ ನಡೆಯುವ ಮಂಡಲಿಗಳು ಒಟ್ಟು 13,211 ಇವೆ. ಒಟ್ಟಾರೆ ಶಾಖೆ, ಮಿಲನ್ ಮತ್ತು ಮಂಡಲಿಗಳು ಸೇರಿ ಒಟ್ಟು 1,34,766 ಶಾಖೆ ನಡೆಯುತ್ತಿವೆ ಎಂದು ಮಾಹಿತಿ ನೀಡಿದರು.

### ಕಾರ್ಯಕರ್ತ ಪ್ರಶಿಕ್ಷಣ ವರ್ಗ

ದೇಶಾದ್ಯಂತ ಕಾರ್ಯಕರ್ತರ ಪ್ರಶಿಕ್ಷಣ ವರ್ಗಗಳು ನಡೆದಿದ್ದು, ಒಟ್ಟು 63 ಸಂಘ ಶಿಕ್ಷಾ ವರ್ಗಗಳಲ್ಲಿ 14,024 ಶಿಕ್ಷಾರ್ಥಿಗಳು ಭಾಗವಹಿಸಿದ್ದರು. ಈ ವರ್ಷ ಕರ್ನಾಟಕದಲ್ಲೂ ನಾಲ್ಕು ಸಂಘ ಶಿಕ್ಷಾ ವರ್ಗಗಳು ನಡೆಯಲಿದ್ದು, ಘೋಷ್ ವರ್ಗ ಸೇರಿಸಲಾಗುವುದು ಎಂದು ತಿಳಿಸಿದರು.

### ಗಣ್ಯರಿಗೆ ಶ್ರದ್ಧಾಂಜಲಿ ಸಂತಾಪ

ಪ್ರತಿವರ್ಷ ಅಖಿಲ ಭಾರತೀಯ ಪ್ರತಿನಿಧಿ ಸಭಾದಲ್ಲಿ ರಾಷ್ಟ್ರಕ್ಕೆ ಮತ್ತು ಸಮಾಜಕ್ಕೆ ಕೊಡುಗೆ ನೀಡಿ ನಮ್ಮನ್ನಗಲಿದ ನಾಡಿನ ಪ್ರಮುಖರಿಗೆ, ಆರ್‌ಎಸ್‌ಎಸ್ ಹಿರಿಯ ಕಾರ್ಯಕರ್ತರಿಗೆ ಶ್ರದ್ಧಾಂಜಲಿ ಸಲ್ಲಿಸಲಾಗುತ್ತದೆ. ದೇಶದ ಅನೇಕ ಗಣ್ಯರ ಜತೆಗೆ ಕರ್ನಾಟಕದ ವೃಕ್ಷಮಾತೆ ಸಾಲುಮರದ ತಿಮ್ಮಕ್ಕ, ವಿಜ್ಞಾನಿ ಡಾ. ಮಾಧವ ಗಾಡ್ಗೀಲ್, ಸ್ವಾತಂತ್ರ್ಯ ಹೋರಾಟಗಾರ ಮತ್ತು ರಾಜಕಾರಣಿ ಭೀಮಣ್ಣ ಖಂಡ್ರೆ, ಶಾಮನೂರು ಶಿವಶಂಕರಪ್ಪ, ಹಿಂದುಸ್ಥಾನಿ ಗಾಯಕ ಅಶೋಕ ಹುಗ್ಗಣ್ಣವರ್, ಹುಬ್ಬಳ್ಳಿಯ ಉದ್ಯಮಿ ಭರತ್ ಖಿಮ್ಜಿ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಗಿದೆ ಎಂದು ಹೇಳಿದರು.

### ಕರ್ನಾಟಕದಲ್ಲಿ ನಡೆದ ವಿಶೇಷ ಕಾರ್ಯಕ್ರಮ

ಪುಟ ೧➜ ದೀಪೋತ್ಸವ, ಕಬಡ್ಡಿ ಸ್ಪರ್ಧೆ ಸೇರಿದಂತೆ 17 ವಿವಿಧ ಉಪಕ್ರಮಗಳೊಂದಿಗೆ ಯುವಕರ ಸಂಪರ್ಕ ಮಾಡಲಾಯಿತು. 13 ಸ್ಥಾನಗಳಲ್ಲಿ ಜಾಯ್ನ್ ಆರ್‌ಎಸ್‌ಎಸ್ ಅಭಿಯಾನ ಮತ್ತು 2815 ಸಣ್ಣಸಭೆಗಳು ನಡೆದವು. ಒಟ್ಟಾರೆ 8799 ವಿದ್ಯಾರ್ಥಿಗಳು ಮತ್ತು 3973 ತರುಣ ಉದ್ಯೋಗಿಗಳು ಕಾರ್ಯಕ್ರಮದಲ್ಲಿ ಸಹಭಾಗಿಗಳಾಗಿದ್ದರು. ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅವರ ಉಪಸ್ಥಿತಿಯಲ್ಲಿ ಶಿಕ್ಷಣ ಸಂಸ್ಥೆಗಳ ಪ್ರಮುಖರನ್ನು ಆಹ್ವಾನಿಸಲಾಗಿದ್ದ ಬೃಹತ್ ಸಂವಾದ ಕಾರ್ಯಕ್ರಮ ಧಾರವಾಡದ ಗರಗದಲ್ಲಿರುವ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ಆಯೋಜಿಸಲಾಗಿತ್ತು. 191 ಸ್ಥಾನಗಳಿಂದ 540 ಸಂಸ್ಥೆಗಳಿಂದ 920 ಪ್ರಮುಖರು ಭಾಗವಹಿಸಿದ್ದರು. ವಿಜಯಪುರದಲ್ಲಿ ಸಹಸರಕಾರ್ಯವಾಹ ಮುಕುಂದ ಸಿ.ಆರ್., ಭೇಟಿಯ ಸಂದರ್ಭದಲ್ಲಿ ಯುವ ಸಾಧು ಸಂತ ಸಂವಾದ ಕಾರ್ಯಕ್ರಮ ಆಯೋಜಿಸಲಾಗಿತ್ತು. ವಿವಿಧ ಪಂಥಗಳ 230 ಸಂತರು ಭಾಗವಹಿಸಿದ್ದರು. ಶತಾಬ್ದಿಯ ನಿಮಿತ್ತ ದೇಶದ 4 ಮಹಾನಗರಗಳಲ್ಲಿ ಸರಸಂಘಚಾಲಕರ ವ್ಯಾಖ್ಯಾನಮಾಲೆ ಮತ್ತು ಸಂವಾದ ಕಾರ್ಯಕ್ರಮ ನಡೆಯಿತು. ಬೆಂಗಳೂರಿನ ಕಾರ್ಯಕ್ರಮದಲ್ಲಿ 13 ವಿವಿಧ ಕ್ಷೇತ್ರಗಳಿಂದ ಗಣ್ಯರನ್ನು ಆಹ್ವಾನಿಸಲಾಗಿತ್ತು. ಒಟ್ಟು 1228 ಜನರು ಭಾಗಿಯಾಗಿದ್ದರು ಎಂದು ತಿಪ್ಪೇಸ್ವಾಮಿ ತಿಳಿಸಿದರು.

## ವಿದ್ಯಾರ್ಥಿಗಳಿಗೆ ಶುಭ ಹಾರೈಸಿದ ಮುಖ್ಯಮಂತ್ರಿ

**ವಿಧಾನಸಭೆ:** ರಾಜ್ಯದಲ್ಲಿ 2026 ನೇ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆ ಬುಧವಾರದಿಂದ ಪ್ರಾರಂಭವಾಗುತ್ತಿದ್ದು, ಪರೀಕ್ಷೆಗೆ ಹಾಜರಾಗುವ ಎಲ್ಲಾ ಅಭ್ಯರ್ಥಿಗಳಿಗೆ ಕರ್ನಾಟಕ ವಿಧಾನಸಭೆ ಶುಭಾಶಯ ಕೋರಿದೆ.

ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಅವರು, ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯುವ ಅಭ್ಯರ್ಥಿಗಳಿಗೆ ಶುಭ ಹಾರೈಸಲು ಅವಕಾಶ ನೀಡಿದರು. ಈ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿ, ಪ್ರಸ್ತುತ ಸಾಲಿನಲ್ಲಿ 8,65,968 ಮಕ್ಕಳು ಪರೀಕ್ಷೆಗೆ ಹಾಜರಾಗುತ್ತಿದ್ದಾರೆ. ಶಿಕ್ಷಣ ಕ್ಷೇತ್ರದಲ್ಲಿ ಸಾಕಷ್ಟು ಸುಧಾರಣೆಗಳನ್ನು ತರಲಾಗಿದ್ದು, ಮೂರು ಹಂತದಲ್ಲಿ ಪರೀಕ್ಷೆಗಳು ನಡೆಯುತ್ತವೆ. ಒಂದು ವೇಳೆ ಮೊದಲ ಹಂತದ ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿದ್ದಲ್ಲಿ ಎರಡನೇ ಹಂತ, ಮೂರನೇ ಹಂತದಲ್ಲಿ ಪರೀಕ್ಷೆಗೆ ಅವಕಾಶ ಇರುವುದರಿಂದ ಯಾವುದೇ ವಿದ್ಯಾರ್ಥಿಗಳು ಆತಂಕಗೊಳ್ಳದೆ ಪರೀಕ್ಷೆಯನ್ನು ಎದುರಿಸುವಂತೆ ತಿಳಿಸಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳಿಗೆ ಧೈರ್ಯವಾಗಿ ಪರೀಕ್ಷೆ ಬರೆಯುವಂತೆ ತಿಳಿಸಿದರು. ಅದಕ್ಕೂ ಮೊದಲು ಮಾತನಾಡಿದ ಶಿಕ್ಷಣ ಸಚಿವ ಮಧು ಬಂಗಾರಪ್ಪ, ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳು ಈ ಹಿಂದೆ ಒತ್ತಡದಿಂದ ಪರೀಕ್ಷೆಗೆ ಹಾಜರಾಗುತ್ತಿದ್ದರು.

### ಸುಳ್ಳು ಸುದ್ದಿ ಹರಡುವವರಿಗೆ ಎಚ್ಚರಿಕೆ ಕೊಡಿ

ಪ್ರತಿಪಕ್ಷದ ನಾಯಕ ಆರ್. ಅಶೋಕ ಮಾತನಾಡಿ, ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯುವ ಮಕ್ಕಳಿಗೆ ಪೋಷಕರು ಮಾನಸಿಕ ಹಿಂಸೆ ನೀಡಬಾರದು. ವರ್ಷಪೂರ್ತಿ ಸುಮ್ಮನಿದ್ದು, ಈಗ ಒತ್ತಡದಿಂದ ಪರೀಕ್ಷೆ ಬರೆಯುವಂತೆ ಮಾಡಬೇಡಿ ಎಂದು ಕಿವಿಮಾತು ಹೇಳಿದರು. ಇತ್ತೀಚೆಗೆ ಸಾಮಾಜಿಕ ಜಾಲತಾಣದಲ್ಲಿ ಪ್ರಶ್ನೆಪತ್ರಿಕೆ ಸೋರಿಕೆ ಆಗುತ್ತಿದೆ ಎಂದು ಸುಳ್ಳು ಸುದ್ದಿಗಳು ಬರುತ್ತಿವೆ. ಅಂತಹ ಸುದ್ದಿ ಹರಡುವವರನ್ನು ಜೈಲಿಗೆ ಹಾಕುವ ಎಚ್ಚರಿಕೆಯನ್ನು ನೀಡಬೇಕು ಎಂದು ತಿಳಿಸಿದರು.

ಸಭೆ




ದೆಹಲಿಯ ಕರ್ನಾಟಕ ಭವನದಲ್ಲಿ ಮಂಗಳವಾರ ನಡೆದ ರಾಜ್ಯದ ಸಂಸದರ ಜೊತೆ ಸಭೆಯಲ್ಲಿ ಯುಕೆಪಿ, ಮೇಕೆದಾಟು, ಮಹದಾಯಿ ಸೇರಿದಂತೆ ರಾಜ್ಯದ ಪ್ರಮುಖ ನೀರಾವರಿ ಅಡೆತಡೆ ನಿವಾರಣೆ ಸಂಬಂಧ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರುವ ಸಂಬಂಧ ಚರ್ಚೆ ನಡೆಸಲಾಯಿತು. ಡಿಸಿಎಂ ಡಿ.ಕೆ. ಶಿವಕುಮಾರ್,ಸಚಿವರಾದ ಎಚ್.ಕೆ.ಪಾಟೀಲ್, ಭೋಸರಾಜು, ಎಂ.ಬಿ.ಪಾಟೀಲ್ ಹಾಗೂ ಸಂಸದರಾದ ಜಗದೀಶ್ ಶೆಟ್ಟರ್, ಬಸವರಾಜ ಬೊಮ್ಮಾಯಿ ಇದ್ದರು.

## ಉದ್ದಿಮೆದಾರರಿಗೆ ಜಮೀನು

**ವಿಧಾನ ಪರಿಷತ್:** ಕಳೆದ 2 ವರ್ಷಗಳಲ್ಲಿ ಕೆಐಎಡಿಬಿಯಿಂದ ಅಭಿವೃದ್ಧಿಪಡಿಸಲಾಗುತ್ತಿರುವ ಕೈಗಾರಿಕಾ ಪ್ರದೇಶಗಳಲ್ಲಿ 2,954.52 ಎಕರೆ ಜಮೀನನ್ನು 1,445 ಉದ್ದಿಮೆದಾರರಿಗೆ ಹಂಚಿಕೆ ಮಾಡಿ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ ಎಂದು ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ತಿಳಿಸಿದರು.

ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿಯ ರವಿಕುಮಾರ್ ಅವರ ಪ್ರಶ್ನೆಗೆ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರ ಪರವಾಗಿ ಉತ್ತರಿಸಿದ ಸಚಿವರು, ಕೆಐಎಡಿಬಿಯ ಅಭಿವೃದ್ಧಿಪಡಿಸುವ ಕೈಗಾರಿಕಾ ಪ್ರದೇಶಗಳಲ್ಲಿ ಉತ್ತಮ ಗುಣಮಟ್ಟದ ಮೂಲಭೂತ ಸೌಕರ್ಯಗಳಾದ ರಸ್ತೆ, ಸಂಪರ್ಕ ವ್ಯವಸ್ಥೆ, ನೀರು, ಚರಂಡಿ, ವಿದ್ಯುತ್ ಇತ್ಯಾದಿಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ ಎಂದು ತಿಳಿಸಿದರು. 2022-23 ರಿಂದ ಫೆಬ್ರವರಿ 2026ರ ಅಂತ್ಯದವರೆಗೆ ರಾಜ್ಯ ಉನ್ನತ ಮಟ್ಟದ ಏಕಗವಾಕ್ಷಿ ಸಮಿತಿ ಹಾಗೂ ರಾಜ್ಯ ಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿ ಸಭೆಗಳಲ್ಲಿ 2,028 ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ ಎಂದು ಹೇಳಿದರು.

## ರೈತರ ಸಮಸ್ಯೆಗಳಿಗೆ ಪರಿಹಾರ ನೀಡಲಿ

**ವಿಧಾನ ಪರಿಷತ್:** ಅಡಿಕೆ ಬೆಳೆಗಾರರಿಗೆ ಒಂದೆಡೆ ಎಲೆಚುಕ್ಕಿ ರೋಗ, ಹಳದಿ ರೋಗದ ಬಾಧೆಯಾದರೆ, ಮತ್ತೊಂದೆಡೆ ಈಶಾನ್ಯ ರಾಜ್ಯಗಳಿಂದ ಅಡಿಕೆ ರಾಜ್ಯದ ಮಾರುಕಟ್ಟೆಗೆ ಬರುತ್ತಿರುವುದರಿಂದ ಅಡಿಕೆ ಬೆಳೆ ಪಾತಾಳಕ್ಕೆ ಕುಸಿಯುತ್ತಿದೆ. ಅಡಿಕೆ ಬೆಳೆಗಾರರು ಎದುರಿಸುತ್ತಿರುವ ಸಮಸ್ಯೆಗಳ ಪರಿಹಾರಕ್ಕೆ ತಕ್ಷಣ ರಾಜ್ಯ ಸರ್ಕಾರ ಮಧ್ಯ ಪ್ರವೇಶಿಸಬೇಕು ಎಂದು ಜೆಡಿಎಸ್ ಸದಸ್ಯ ಭೋಜೇಗೌಡ ಒತ್ತಾಯಿಸಿದರು.

ಬಜೆಟ್ ಚರ್ಚೆ ಕಲಾಪದ ವೇಳೆ ಈ ವಿಷಯ ಪ್ರತಿಪಾದಿಸಿದ ಅವರು, ರಾಜ್ಯದಲ್ಲಿ ಮಲೆನಾಡು/ಅರೆ ಮಲೆನಾಡು ಸೇರಿದಂತೆ ರಾಣೆಬೆನ್ನೂರುವರೆಗೆ ಅಡಿಕೆ ಬೆಳೆ ವಿಸ್ತರಿಸಿದೆ. ಸುಮಾರು 6.75 ಲಕ್ಷ ಹೆಕ್ಟೇರು ಅಡಿಕೆ ಬೆಳೆಯಿದೆ. ವಾರ್ಷಿಕ ಬೆಳೆ 10 ಲಕ್ಷ ಟನ್ ಉತ್ಪಾದನೆಯಾಗುತ್ತದೆ. 50 ಹೆಕ್ಟರ್ ಪ್ರದೇಶದಲ್ಲಿ ಹಳದಿ ಎಲೆ ಚುಕ್ಕಿ ರೋಗ, 15 ಸಾವಿರ ಹೆಕ್ಟೇರ್ ಪ್ರದೇಶಕ್ಕೆ ಕೊಳೆ ರೋಗ ವ್ಯಾಪಿಸಿದೆ ಎಂದರು.

## ಕಿರುಸುದ್ದಿ

### ಕುಡಿಯುವ ನೀರಿಗೆ 490 ಕೋಟಿ ರೂ. ಮೀಸಲು

**ವಿಧಾನಸಭೆ:** ಹನೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಅಂತರ್ಜಲ ಮಟ್ಟವನ್ನು ಅಭಿವೃದ್ಧಿಗೊಳಿಸುವ ನಿಟ್ಟಿನಲ್ಲಿ ಹಾಗೂ ಕುಡಿಯುವ ನೀರಿನ ಯೋಜನೆಗೆ ಸಣ್ಣ ನೀರಾವರಿ ಇಲಾಖೆಯಿಂದ 490 ಕೋಟಿ ರೂ.ಗಳನ್ನು ಪ್ರಸ್ತುತ ವರ್ಷದ ಆಯವ್ಯಯದಲ್ಲಿ ಮೀಸಲಿಟ್ಟಿದೆ ಎಂದು ಸಚಿವ ಡಾ. ಎಂ.ಸಿ.ಸುಧಾಕರ್ ತಿಳಿಸಿದರು. ಪ್ರಶ್ನೋತ್ತರ ಕಲಾಪದಲ್ಲಿ ಕಾಂಗ್ರೆಸ್ ಶಾಸಕ ಮಂಜುನಾಥ್ ಎಂ.ಆರ್. ಅವರ ಪ್ರಶ್ನೆಗೆ ಸಣ್ಣ ನೀರಾವರಿ ಸಚಿವರ ಪರವಾಗಿ ಉತ್ತರಿಸಿದ ಅವರು, ಅಂತರ್ಜಲ ಮಟ್ಟವನ್ನು ಅಭಿವೃದ್ಧಿಗೊಳಿಸುವ ನಿಟ್ಟಿನಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ನೀರಾವರಿ ಕೆರೆಗಳು, ಪಿಕಪ್ ಚೆಕ್ ಡ್ಯಾಂ ನಿರ್ಮಾಣ, ಕೆರೆಗಳಿಗೆ ಕುಡಿಯುವ ನೀರು ತುಂಬಿಸುವ ಯೋಜನೆ ಹಾಗೂ ಇತ್ಯಾದಿ ಯೋಜನೆಗಳನ್ನು ಕೈಗೊಳ್ಳಲಾಗಿದೆ ಎಂದರು. ಕಳೆದ ನಾಲ್ಕು ವರ್ಷಗಳಲ್ಲಿ 9 ಕೋಟಿ ರೂ.ಗಿಂತ ಹೆಚ್ಚು ಅನುದಾನವನ್ನು ಹನೂರು ವಿಧಾನಸಭಾ ಕ್ಷೇತ್ರಕ್ಕೆ ನೀಡಲಾಗಿದೆ. ಅಲ್ಲದೇ ಪ್ರಸ್ತುತ ಆಯವ್ಯಯದಲ್ಲಿ 490 ಕೋಟಿ ರೂ. ಅನುದಾನವನ್ನು ಮೀಸಲಿರಿಸಿದೆ ಎಂದು ಮಾಹಿತಿ ನೀಡಿದರು.

### ಹೊಸ ಕೆಎಸ್‌ಆರ್‌ಪಿ ಪಡೆ ಸ್ಥಾಪನೆ ಪರಿಶೀಲನೆ

**ವಿಧಾನಸಭೆ:** ರಾಯಚೂರು ಜಿಲ್ಲೆಯಲ್ಲಿ ಹೊಸದಾಗಿ ಕೆಎಸ್‌ಆರ್‌ಪಿ ಪಡೆಯನ್ನು ಸ್ಥಾಪಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ. ಅಗತ್ಯತೆ ಆಧಾರದ ಮೇಲೆ ರಾಯಚೂರು ಜಿಲ್ಲೆಯಲ್ಲಿ ಕೆಎಸ್‌ಆರ್‌ಪಿ ಪಡೆ ಸ್ಥಾಪಿಸಲಾಗುವುದು ಎಂದು ಗೃಹ ಸಚಿವ ಡಾ. ಜಿ.ಪರಮೇಶ್ವರ ತಿಳಿಸಿದರು. ಪ್ರಶ್ನೋತ್ತರ ಕಲಾಪದಲ್ಲಿ ಕಾಂಗ್ರೆಸ್ ಶಾಸಕ ಬಸನಗೌಡ ತುರುವಿಹಾಳ್ ಅವರು, ಕಲ್ಯಾಣ ಕರ್ನಾಟಕ ಭಾಗದಲ್ಲಿ ಕೆಎಸ್‌ಆರ್‌ಪಿ ಪಡೆ ಅಗತ್ಯವಿದ್ದು, 175 ಎಕರೆ ಜಾಗವನ್ನು ಹಾಗೂ ಕೆ.ಕೆ. ಆರ್.ಡಿ.ಬಿ.ಯ ಅನುದಾನವನ್ನು ಸಹ ನೀಡಲಾಗುವುದು ಎಂದು ತಿಳಿಸಿ ಕಲ್ಯಾಣ ಕರ್ನಾಟಕ ಭಾಗದ ಎಲ್ಲಾ ಶಾಸಕರು ಗೃಹ ಸಚಿವರಿಗೆ ಈಗಾಗಲೇ ಮನವಿ ಸಲ್ಲಿಸಿದ್ದಾರೆ ಎಂದರು. ಇದಕ್ಕೆ ಉತ್ತರಿಸಿದ ಸಚಿವರು, ರಾಯಚೂರು ಭಾಗದ 30 ಶಾಸಕರು ಸಹಿ ಮಾಡಿ ರಾಯಚೂರು ಭಾಗಕ್ಕೆ ಕೆಎಸ್‌ಆರ್‌ಪಿ ಪಡೆ ಸ್ಥಾಪಿಸುವಂತೆ ಮನವಿ ಸಲ್ಲಿಸಿರುತ್ತಾರೆ. ಈಗಾಗಲೇ ಬೆಂಗಳೂರು ಸೇರಿದಂತೆ ರಾಜ್ಯದಲ್ಲಿ 12 ಕೆಎಸ್‌ಆರ್‌ಪಿ ಪಡೆಗಳು ಕಾರ್ಯನಿರ್ವಹಿಸುತ್ತಿವೆ. ರಾಯಚೂರು ಭಾಗದಲ್ಲಿ ವಿಶ್ವಪ್ರಸಿದ್ಧ ಧಾರ್ಮಿಕ ಕ್ಷೇತ್ರಗಳು, ಅಣೆಕಟ್ಟೆಗಳು, ಗಡಿಭಾಗಗಳು ಇರುವುದರಿಂದ ಈ ಕುರಿತು ಪರಿಶೀಲಿಸಿ, ಶಾಸಕರ ಮನವಿಯನ್ನಾಧರಿಸಿ ಆರ್ಥಿಕ ಇಲಾಖೆಗೆ ಈಗಾಗಲೇ ಪ್ರಸ್ತಾವನೆ ಸಲ್ಲಿಸಲಾಗಿದೆ. ಅಗತ್ಯತೆ ಅನುಸಾರ ಆರ್ಥಿಕ ಇಲಾಖೆ ಅನುಮೋದನೆ ಪಡೆದು ಕೆಎಸ್‌ಆರ್‌ಪಿ ಪಡೆ ಸ್ಥಾಪನೆ ಬಗ್ಗೆ ಕ್ರಮ ವಹಿಸಲಾಗುವುದು ಎಂದು ಹೇಳಿದರು.

### ಜಾಲತಾಣಗಳ ದುರ್ಬಳಕೆಗೆ ಭಾರತಿ ಶೆಟ್ಟಿ ಆಗ್ರಹ

**ವಿಧಾನ ಪರಿಷತ್:** ಸಾಮಾಜಿಕ ಜಾಲತಾಣಗಳ ದುರ್ಬಳಕೆಯ ಫಲವಾಗಿ ಅನೇಕರು ಆತಂಕ, ಬ್ಲ್ಯಾಕ್ ಮೇಲ್, ನಿದ್ರಾಹೀನತೆಯಂತಹ ಗಂಭೀರ ಸಮಸ್ಯೆಗೆ ಎದುರಿಸುತ್ತಿದ್ದು, ಇದನ್ನು ತಡೆಗಟ್ಟಲು ಸರ್ಕಾರ ಗಂಭೀರ ಹೆಜ್ಜೆ ಇರಿಸಬೇಕು ಎಂದು ಬಿಜೆಪಿ ಸದಸ್ಯೆ ಭಾರತಿ ಶೆಟ್ಟಿ ಸದನದಲ್ಲಿ ಗಮನ ಸೆಳೆದರು. ಶೂನ್ಯವೇಳೆಯಲ್ಲಿ ವಿಷಯವನ್ನು ಮಂಡಿಸಿದ ಅವರು, ಸಾಮಾಜಿಕ ಜಾಲತಾಣಗಳ ದುರುಪಯೋಗದಿಂದ ಆಗುತ್ತಿರುವ ಪರಿಣಾಮಗಳ ಕುರಿತು ಸ್ವಯಂ ಸೇವಾ ಸಂಸ್ಥೆಯೊಂದು 11 ಸಾವಿರಕ್ಕೂ ಹೆಚ್ಚು ಜನರನ್ನು ಸಂದರ್ಶಿಸಿ ಸಮೀಕ್ಷಾ ವರದಿ ಒದಗಿಸಿದೆ.

## ನವೀನ್ ಹೋಟೆಲ್ಸ್ ವಿರುದ್ಧದ ಭೂ ಹಗರಣ ಆರೋಪ

# ವಂಚನೆ ನಡೆದಿಲ್ಲ

**ವಿಧಾನ ಪರಿಷತ್:** ಹುಬ್ಬಳ್ಳಿ-ಧಾರವಾಡದಲ್ಲಿ ನವೀನ್ ಹೋಟೆಲ್ಸ್ ಲಿಮಿಟೆಡ್‌ಗೆ 114.17 ಎಕರೆ ಜಮೀನು ಸಂಬಂಧ ಯಾವ ರೀತಿಯ ಹಗರಣ ನಡೆದಿಲ್ಲ. ಶುದ್ಧ ಕ್ರಯ ಪತ್ರ ನೆರವೇರಿಸುವ ಸಮಯದಲ್ಲಿ ಮಾರುಕಟ್ಟೆ ಬೆಲೆ ಅಥವಾ ಉಪನೊಂದಣಾಧಿಕಾರಿಗಳ ಮಾರ್ಗಸೂಚಿ ದರವನ್ನು ಮಂಡಳಿ ಪಡೆಯುವುದಿಲ್ಲ. ಹೀಗಾಗಿ ಇಲ್ಲಿ ಮುದ್ರಾಂಕ ಶುಲ್ಕದ ವಂಚನೆ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ತಿಳಿಸಿದರು.

ಪ್ರಶ್ನೋತ್ತರ ವೇಳೆಯಲ್ಲಿ ಸದಸ್ಯ ಜಕ್ಕಪ್ಪನವರ್ ಕೇಳಿದ ಪ್ರಶ್ನೆಗೆ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರ ಪರವಾಗಿ ಉತ್ತರಿಸಿದ ಸಚಿವರು, ಗಾಲ್ಫ್ ಕ್ಲಬ್ ಎಂದರೆ ಗ್ರೀನ್ ಬೆಲ್ಟ್, ಅಲ್ಲಿ ಯಾವ ವಿಶೇಷವಾಗಿ ಗಾಲ್ಫ್ ಕೋರ್ಸ್, ಗಾಲ್ಫ್ ಕ್ಲಬ್ ಚಟುವಟಿಕೆ ಹೊರತುಪಡಿಸಿ ಉಳಿದ ಯಾವ ಚಟುವಟಿಕೆಗಳನ್ನು ನಡೆಸುವುದಿಲ್ಲ. ಆದರೆ, ಒಂದು ವೇಳೆ ಅಲ್ಲಿ ಅನ್ಯ ವಾಣಿಜ್ಯಿಕ ಚಟುವಟಿಕೆಗಳು ನಡೆಯುತ್ತಿರುವ ದೂರು ಬಂದಿದ್ದರೆ ಅದನ್ನು ಇಲಾಖಾ ಕಾರ್ಯದರ್ಶಿಯ ಮಟ್ಟದಲ್ಲಿ ತನಿಖೆ ನಡೆಸಲು ಆದೇಶಿಸಲಾಗುವುದು. ಒಂದು ವೇಳೆ ಹೋಟೆಲ್ ಗಾಲ್ಫ್ ಚಟುವಟಿಕೆ ಹೊರತುಪಡಿಸಿ ಅನ್ಯ ವಾಣಿಜ್ಯಿಕ ಉದ್ದೇಶಗಳಿಗೆ ಜಮೀನು ಬಳಕೆ ಮಾಡಿಕೊಳ್ಳುತ್ತಿದ್ದರೆ ಅದನ್ನು ಮುಟ್ಟುಗೋಲು ಹಾಕಿಕೊಳ್ಳಲು ಸರ್ಕಾರ ಬದ್ಧವಾಗಿದೆ ಎಂದು ಸ್ಪಷ್ಟವಾಗಿ ಹೇಳಿದರು.



### ಅತ್ಯಂತ ಕಡಿಮೆ ಬೆಲೆಗೆ ಹಂಚಿಕೆ

ಇದಕ್ಕೂ ಮೊದಲು ಕಾಂಗ್ರೆಸ್ ಸದಸ್ಯ ಎಫ್.ಎಚ್. ಜಕ್ಕಪ್ಪನವರ್ ಮಾತನಾಡಿ, ಹುಬ್ಬಳ್ಳಿ-ಧಾರವಾಡದಲ್ಲಿ ನವೀನ್ ಹೋಟೆಲ್ಸ್ ಲಿಮಿಟೆಡ್‌ಗೆ **114.17** ಎಕರೆ ಜಮೀನನ್ನು ಅಂದಿನ ಮಾರುಕಟ್ಟೆ ಮೌಲ್ಯಕ್ಕೆ ನೊಂದಾಯಿಸದೇ ಕೇವಲ **97.61,433** ರೂ.ಗಳಿಗೆ ನೊಂದಾಯಿಸಿ **150** ಕೋಟಿ ರೂ. ಮುದ್ರಾಂಕ ಹಾಗೂ ನೊಂದಣಿ ಶುಲ್ಕ ವಂಚನೆಯಾಗಿದೆ. ಯಾವುದೇ ದೇಶದಲ್ಲೂ **114** ಎಕರೆ ಜಮೀನು ಗಾಲ್ಫ್ ಕ್ಲಬ್‌ಗೆ ನೀಡಿರುವ ಉದಾರಹಣೆ ಇಲ್ಲ. ಕೋಟ್ಯಂತರ ರೂ. ಬೆಲೆ ಬಾಳುವ ಜಮೀನನ್ನು ಅತ್ಯಂತ ಕಡಿಮೆ ಬೆಲೆಗೆ ಹಂಚಿಕೆ ಮಾಡಲಾಗಿದೆ. ಅಲ್ಲಿ ಯಾವ ಗಾಲ್ಫ್ ಕ್ಲಬ್ ಸಹ ನಿರ್ಮಾಣಗೊಂಡಿಲ್ಲ. ಒಂದು ರೀತಿಯಲ್ಲಿ ಅಲ್ಲಿ ಖಾಸಗಿ ಲೇಔಟ್ ಮಾಡುವ ದೊಡ್ಡಮಟ್ಟದ ಪ್ರಯತ್ನ ನಡೆದಿದೆ, ಇದೊಂದು ದೊಡ್ಡ ಭೂ-ಹಗರಣ, ಹೀಗಾಗಿ ಈ ಬಗ್ಗೆ ಉನ್ನತ ಮಟ್ಟದ ತನಿಖೆಯಾಗಬೇಕು ಎಂದು ಒತ್ತಾಯಿಸಿದರು. ಇದಕ್ಕೆ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣ ಸ್ವಾಮಿ ಸಹ ದನಿಗೂಡಿಸಿ ತನಿಖೆಗೆ ಒತ್ತಾಯಿಸಿದರು.

## ಜಿಲ್ಲೆಗಳಲ್ಲಿ ವಿಶೇಷ ಪಡೆ: ಸಚಿವ ಆರ್.ಬಿ. ತಿಮ್ಮಾಪುರ

# ಅಕ್ರಮ ಮದ್ಯ ತಡೆಗೆ ಕಾಯ್ದೆ?

**ವಿಧಾನಸಭೆ:** ರಾಜ್ಯದಲ್ಲಿ ಅಕ್ರಮ ಮದ್ಯ ಮಾರಾಟ ತಡೆಗಟ್ಟಲು ಕರ್ನಾಟಕ ಅಬಕಾರಿ ಕಾಯ್ದೆಯನ್ನು ಪರಿಷ್ಕರಿಸಿ ಹೊಸ ಕಾಯ್ದೆ ತರುವುದಕ್ಕೆ ಸರ್ಕಾರ ಚಿಂತನೆ ನಡೆಸುತ್ತಿದೆ ಎಂದು ಅಬಕಾರಿ ಸಚಿವ ಆರ್.ಬಿ. ತಿಮ್ಮಾಪುರ ತಿಳಿಸಿದರು.

ಪ್ರಶ್ನೋತ್ತರ ಕಲಾಪದಲ್ಲಿ ಕಾಂಗ್ರೆಸ್ ಶಾಸಕ ಬಸನಗೌಡ ದದ್ದಲ್ ಅವರು ವಿಷಯ ಪ್ರಸ್ತಾಪಿಸಿ, ರಾಯಚೂರು ಜಿಲ್ಲೆಯಲ್ಲಿ ಸ್ವಲಾಭಕ್ಕಾಗಿ ಅನಧಿಕೃತ ಸ್ಥಳಗಳು ಹಾಗೂ ಕಿರಾಣಿ ಅಂಗಡಿಗಳಲ್ಲೂ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ. ಕರ್ನಾಟಕ ಅಬಕಾರಿ ಕಾಯ್ದೆ 1965ರ ರೀತ್ಯಾ ಯಾವುದೇ ಕ್ರಮ ಆಗುತ್ತಿಲ್ಲ. ಈ ಬಗ್ಗೆ ಸರ್ಕಾರ ರಾಯಚೂರು ಹಾಗೂ ಯಾದಗಿರಿ ಜಿಲ್ಲೆಗಳಲ್ಲಿ ವಿಶೇಷ ಪಡೆಗಳನ್ನು ರಚಿಸಬೇಕು ಎಂದು ಮನವಿ ಮಾಡಿದರು. ಇದಕ್ಕೆ ಉತ್ತರಿಸಿದ ಸಚಿವರು, ಕರ್ನಾಟಕ ಅಬಕಾರಿ ಕಾಯ್ದೆ 1965ರ ರೀತ್ಯಾ ಯಾವುದೇ ಕ್ರಮವು ಹಳೆಯದಾಗಿದ್ದು, ಅಕ್ರಮ ಮದ್ಯ ಮಾರಾಟವನ್ನು ಮಾದಕ ವಸ್ತು ನಿಯಂತ್ರಣ ಕಾಯ್ದೆಯಡಿ ಸೇರಿಸಲು ಸರ್ಕಾರ ಪರಿಶೀಲನೆ ನಡೆಸುತ್ತಿದೆ. ಮದ್ಯ ಅಕ್ರಮ ಮಾರಾಟ ತಡೆಗಟ್ಟಲು ಕರ್ನಾಟಕ ಅಬಕಾರಿ ಕಾಯ್ದೆಯನ್ನು ಪರಿಷ್ಕರಿಸಿ ಹೊಸ ಕಾಯ್ದೆ ತರುವುದಕ್ಕೆ ಸರ್ಕಾರ ಚಿಂತನೆ ನಡೆಸುತ್ತಿದೆ ಎಂದು ತಿಳಿಸಿದರು.



### ಸೇಂದಿ ಮಾರಾಟ

ರಾಯಚೂರು ಜಿಲ್ಲೆಯಲ್ಲಿ ಅಕ್ರಮವಾಗಿ ಕ್ಲೋರಲ್ ಹೈಡ್ರೇಟ್ ಪೌಡರ್‌ನಿಂದ ಕೃತಕವಾಗಿ ಸೇಂದಿಯನ್ನು ತಯಾರಿಸಿ ಮಾರಾಟ ಮಾಡಲಾಗುತ್ತಿದೆ. ಜಿಲ್ಲೆಯ ಗಡಿ ಭಾಗಗಳಿಗೆ ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳಿಂದ ಸೇಂದಿ ಅಥವಾ ಕೃತಕ ಸೇಂದಿಯು ರಸ್ತೆ ಹಾಗೂ ರೈಲು ಮಾರ್ಗವಾಗಿ ಕಳ್ಳಸಾಗಾಣಿಕೆಯಾಗುತ್ತಿದೆ. ಈ ರೀತಿ ಅಕ್ರಮವಾಗಿ ಸೇಂದಿ ಅಥವಾ ಕೃತಕ ಸೇಂದಿಯನ್ನು ತಯಾರಿಸುತ್ತಿರುವವರ ವಿರುದ್ಧ ಪ್ರಕರಣಗಳನ್ನು ದಾಖಲಿಸಲಾಗಿದೆ ಎಂದು ಸಚಿವರು ಮಾಹಿತಿ ನೀಡಿದರು.

## ಸರ್ಕಾರದಿಂದ ದುಂದುವೆಚ್ಚ: ವಿಶ್ವನಾಥ್

**ವಿಧಾನ ಪರಿಷತ್:** ಇನ್ಫೋಸಿಸ್ ದಿಗ್ಗಜರಾದ ನಾರಾಯಣಮೂರ್ತಿ, ಸುಧಾ ನಾರಾಯಣಮೂರ್ತಿ ಅಂತಹ ಆಗರ್ಭ ಶ್ರೀಮಂತರೇ ಇಂಡಿಗೋ ವಿಮಾನದಲ್ಲಿ ಹೊಸದಿಲ್ಲಿಗೆ ಹೋಗುತ್ತಾರೆ. ಆದರೆ, ನಮ್ಮ ಮುಖ್ಯಮಂತ್ರಿ ಸಿದ್ದರಾಮಯ್ಯ ಬೆಂಗಳೂರಿನಿಂದ ಮೈಸೂರು, ಹುಬ್ಬಳ್ಳಿ ಹಾಗೂ ಹೊಸದಿಲ್ಲಿಗೆ ವಿಶೇಷ ವಿಮಾನದಲ್ಲಿ ಹಾರುತ್ತಾರೆ. ಅವರ ಸಂಪುಟ ಸಹೋದ್ಯೋಗಿಗಳೂ ಇದೇ ಹಾದಿಯನ್ನು ಅನುರಿಸುತ್ತಿದ್ದಾರೆ. ಪರಿಣಾಮ ರಾಜ್ಯ ಸರ್ಕಾರದ ದುಂದುವೆಚ್ಚ ಹೆಚ್ಚುತ್ತಿದೆ ಎಂದು ಹಿರಿಯ ಸದಸ್ಯ ಎಚ್. ವಿಶ್ವನಾಥ್ ತರಾಟೆಗೆತೆಗೆದುಕೊಂಡರು.

ಮೇಲ್ಮನೆಯಲ್ಲಿ ಬಜೆಟ್ ಮೇಲಿನ ಚರ್ಚೆ ವೇಳೆಯಲ್ಲಿ ಮಾತನಾಡಿದ ಅವರು, ಬೆಂಗಳೂರಿನಿಂದ - ಮೈಸೂರಿಗೆ ಕೇವಲ ಒಂದೂವರೆ ಗಂಟೆಯಲ್ಲಿ ತಲುಪಬಹುದು. ಬೆಂಗಳೂರಿನಿಂದ ಹೊಸದಿಲ್ಲಿಗೆ ಸಾಮಾನ್ಯ ವಿಮಾನದಲ್ಲಿ ಹೋಗಬಹುದು. ಆದರೆ, ಮೈಸೂರು, ದಿಲ್ಲಿಗೂ ಸಿಎಂ ವಿಶೇಷ ವಿಮಾನದಲ್ಲೇ ಪ್ರಯಾಣಿಸುತ್ತಾರೆ. ಇದಕ್ಕಾಗಿ ಸರ್ಕಾರ 38 ಕೋಟಿ ರೂ. ಖರ್ಚು ಮಾಡಿದೆ. ಇದು ಯಾರ ಹಣ, ಜನತೆ ಬೆವರು ಸುರಿಸಿ ಸರ್ಕಾರಕ್ಕೆ ಕಟ್ಟಿದ ತೆರಿಗೆ ಹಣ ಪೋಲಲ್ಲವೇ? ಈ ಸರ್ಕಾರದಲ್ಲಿ ದುಂದು ವೆಚ್ಚಗಳು ನಾಗಾಲೋಟದಲ್ಲಿದೆ.

## ಒಳಚರಂಡಿ ಕಾಮಗಾರಿ ನಗರಸಭೆಗೆ ಹಸ್ತಾಂತರ

**ವಿಧಾನ ಪರಿಷತ್:** ಭದ್ರಾವತಿ ನಗರದಲ್ಲಿ 16 ಕೋಟಿ ರೂ. ಮತ್ತು ಅಮೃತ್ 1 ರಲ್ಲಿ 40 ಕೋಟಿ ರೂ. ವೆಚ್ಚದಲ್ಲಿ ಒಳಚರಂಡಿ ಕಾಮಗಾರಿಗಳನ್ನು ಕೈಗೊಂಡು ನಗರಸಭೆಗೆ ಹಸ್ತಾಂತರ ಮಾಡಲಾಗಿದೆ. ಅದರಂತೆ ನಗರಸಭೆ ಈ ಒಳಚರಂಡಿ ವ್ಯವಸ್ಥೆಯನ್ನು ನಿರ್ವಹಣೆ ಮಾಡಲಿದೆ ಎಂದು ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವ ಬೈರತಿ ಸುರೇಶ್ ತಿಳಿಸಿದರು.

» ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಹೇಳಿಕೆ

ಪ್ರಶ್ನೋತ್ತರ ವೇಳೆಯಲ್ಲಿ ಕಾಂಗ್ರೆಸ್ ಸದಸ್ಯೆ ಬಲ್ಕಿಸ್ ಬಾನು ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಭದ್ರಾವತಿ ನಗರಸಭೆ ವ್ಯಾಪ್ತಿಯಲ್ಲಿ ಕೈಗೊಂಡಿದ್ದ ಒಳಚರಂಡಿ ಯೋಜನೆ ಕಾಮ ಗಾರಿಯಲ್ಲಿ ಲೋಪದೋಷಗಳ ಬಗ್ಗೆ ಮೂರನೇ ಸಂಸ್ಥೆಯಿಂದ ತನಿಖೆ ನಡೆಸಿ ತಪ್ಪಿತಸ್ಥರ ಗುತ್ತಿಗೆದಾರರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲಾಗುತ್ತದೆ. ವಿಶ್ವಬ್ಯಾಂಕ್ ನೆರವಿನ ಅಡಿಯಲ್ಲಿ ಕೆಎಂಆರ್‌ಪಿ ಯೋಜನೆಯಲ್ಲಿ ಭದ್ರಾವತಿ ಸೇರಿದಂತೆ 32 ನಗರ/ ಪಟ್ಟಣಗಳಲ್ಲಿ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸುವ ಕಾಮಗಾರಿಯನ್ನು ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

### ಕುಡಿಯುವ ನೀರು ಪೂರೈಕೆಗೆ ತಾತ್ಕಾಲಿಕ ವ್ಯವಸ್ಥೆ

**ವಿಧಾನ ಪರಿಷತ್ :** ರಾಯಚೂರು ಜಿಲ್ಲೆಯ ಮುದಗಲ್ ಪಟ್ಟಣದಲ್ಲಿ ಕುಡಿಯುವ ನೀರಿನ ಪೂರೈಕೆ ಯೋಜನೆಯ ಬಾಕಿ ಇರುವ ಕಾಮಗಾರಿಗಳಿಗೆ ಇನ್ನೂ 35.45 ಕೋಟಿ ರೂ. ಅಗತ್ಯವಿದೆ ಎಂದು ಸಚಿವ ಬೈರತಿ ಸುರೇಶ್ ಮಾಹಿತಿ ನೀಡಿದರು. ಪ್ರಶ್ನೋತ್ತರ ಕಲಾಪದಲ್ಲಿ ಸದಸ್ಯ ಶರಣಗೌಡ ಬಯ್ಯಾಪುರ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಬೇಸಿಗೆ ಆರಂಭವಾಗಿರುವ ಹಿನ್ನೆಲೆಯಲ್ಲಿ ರಾಜ್ಯದ ನಗರ /ಪಟ್ಟಣ ಪ್ರದೇಶಗಳಲ್ಲಿ ಕುಡಿಯುವ ನೀರು ಪೂರೈಕೆಗೆ ತಾತ್ಕಾಲಿಕ ವ್ಯವಸ್ಥೆಗಳನ್ನು ಮಾಡಲಾಗುತ್ತಿದೆ. ರಾಯಚೂರು ಜಿಲ್ಲೆಯ ಮುದಗಲ್ ಪಟ್ಟಣದಲ್ಲಿ ಕುಡಿಯುವ ನೀರು ಪೂರೈಕೆಗೆ ಹಣದ ಅಗತ್ಯವಿದ್ದು, ಈ ಹಣವನ್ನು ಕ್ರೋಢೀಕರಿಸಿ ಪುರಸಭೆ ವತಿಯಿಂದಲೇ ಕಾಮಗಾರಿ ಆರಂಭಿಸಿ ಪೂರ್ಣಗೊಳಿಸುವ ಚಿಂತನೆ ಇದೆ ಎಂದು ತಿಳಿಸಿದರು.

## ಅಡಕೆ ಹಾಳೆ ತಟ್ಟೆ ಸುರಕ್ಷಿತ

**ವಿಧಾನ ಪರಿಷತ್:** ಅಡಕೆ ಹಾಳೆ ತಟ್ಟೆಗಳ ಕುರಿತು ಆತಂಕಕ್ಕೆ ವೈಜ್ಞಾನಿಕ ಸಂಶೋಧನಾ ವರದಿಯು ತೆರೆ ಎಳೆದಿದೆ. ಅಡಿಕೆ ತಟ್ಟೆಗಳಲಗಲಿ ಆಲ್ಕಲಾಯ್ಡ್ ಮಟ್ಟವು ಅತ್ಯಂತ ಅಲ್ಪ ಪ್ರಮಾಣದಲ್ಲಿದ್ದು, ಇದು ಬಲಿತ ಅಡಿಕೆ ಕಾಯಿಗಿಂತಲೂ ಸಾವಿರಾರು ಪಟ್ಟು ಕಡಿಮೆಯಿದೆ. ಇದು ಸಂಪೂರ್ಣ ಸುರಕ್ಷಿತ ಎಂಬುದು ಅಧ್ಯಯನದಿಂದ ಸಾಬೀತಾಗಿದೆ.

ಸದಸ್ಯ ಪ್ರತಾಪ್ ಸಿಂಹ ನಾಯಕ್ ಅವರು ಕೇಳಿದ ಪ್ರಶ್ನೆಗೆ ಮೇಲ್ಮನೆಯಲ್ಲಿ ಅಡಿಕೆ ಕುರಿತು ಎದ್ದಿದ್ದ ಸಂಶಯಗಳಿಗೆ ಕೃಷಿ ಸಚಿವ ಚಲುವರಾಯಸ್ವಾಮಿ ಅವರು ಉತ್ತರಿಸಿದ್ದಾರೆ.

ಅಡಕೆಗೆ ಅಂಟಿರುವ ಕಳಂಕವನ್ನು ವೈಜ್ಞಾನಿಕವಾಗಿ ತೊಡೆದುಹಾಕುವ ನಿಟ್ಟಿನಲ್ಲಿ ರಾಜ್ಯ ತೋಟಗಾರಿಕೆ ಇಲಾಖೆಯು ಬೆಂಗಳೂರಿನ ಎಂ.ಎಸ್. ರಾಮಯ್ಯ ವಿಶ್ವವಿದ್ಯಾಲಯಕ್ಕೆ ವಿಶೇಷ ಅಧ್ಯಯನದ ಜವಾಬ್ದಾರಿ ವಹಿಸಿತ್ತು. ಈ ಸಂಬಂಧ ಈ ಸಂಸ್ಥೆಯು ಅಡಿಕೆಗಾಗಿ ಫೈಟೊಕೆಮಿಕಲ್ ಮತ್ತು ಕೀಟನಾಶಕ ಘಟಕಗಳ ಮೌಲ್ಯಮಾಪನ - ಆರೋಗ್ಯ, ಸುರಕ್ಷತೆ ಮತ್ತು ಪರಿಣಾಮಕಾರಿತ್ವದ ಮಾಪನ ಎಂಬ ಯೋಜನೆಯನ್ನು ಕೈಗೆತ್ತಿಕೊಂಡು, ಸುಮಾರು 31.80 ಲಕ್ಷ ರೂ. ವೆಚ್ಚದಲ್ಲಿ ಸಂಶೋಧನೆ ಕೈಗೊಂಡಿದ್ದು, ಪಾನ್ ಅಥವಾ ಪಾನ್ ಮಸಾಲದಂತಹ ಪದಾರ್ಥಗಳಲ್ಲಿ ಅಡಿಕೆಯನ್ನು ಕೇವಲ ಒಂದೇ ಅಂಶವಾಗಿ ಬಳಸಿ, ಅದಕ್ಕೆ ತಂಬಾಕು ಸೇರಿಸದೇ ಅಲ್ಪ ಪ್ರಮಾಣದಲ್ಲಿ ಸೇವಿಸಿದರೆ ಅದು ಖಂಡಿತವಾಗಿಯೂ ಹಾನಿಕಾರಕವಲ್ಲ ಎಂದು ಈ ಸಂಸ್ಥೆಯು ತನ್ನ ಸಂಶೋಧನಾ ವರದಿಯಲ್ಲಿ ಸ್ಪಷ್ಟಪಡಿಸಿದೆ ಎಂದು ತಿಳಿಸಿದರು.

ಕೇಂದ್ರ ಸರ್ಕಾರದ ಕೃಷಿ ಮತ್ತು ರೈತ ಕಲ್ಯಾಣ ಇಲಾಖೆಯು ಅಡಿಕೆ ಕುರಿತ ಸಾಕ್ಷ್ಯಾಧಾರಿತ ಸಂಶೋಧನೆಗೆ ದಿಲ್ಲಿಯ ಏಮ್ಸ್, ಹೈದರಾಬಾದ್‌ನ ಸಿಎಸ್‌ಐಆರ್, ಕಾಸರಗೋಡಿನ ಸಿಪಿಸಿಆರ್‌ಐ ಸೇರಿದಂತೆ ಹತ್ತು ಪ್ರತಿಷ್ಠಿತ ರಾಷ್ಟ್ರೀಯ ಸಂಸ್ಥೆಗಳನ್ನು ಒಳಗೊಂಡ ಬೃಹತ್ ಯೋಜನೆಯನ್ನು ರೂಪಿಸಿದೆ. ತೋಟಗಾರಿಕೆ ಆಯುಕ್ತರ ನೇತೃತ್ವದ ಸಮಿತಿಯು ಸಂಶೋಧನೆಯ ಮೇಲ್ವಿಚಾರಣೆ ನಡೆಸುತ್ತಿದೆ ಎಂದರು. ಈ ಎಲ್ಲ ಪ್ರತಿಷ್ಠಿತ ಸಂಸ್ಥೆಗಳಿಂದ ಅಂತಿಮ ವರದಿ ಕೈಸೇರಿದ ತಕ್ಷಣ, ಅಡಿಕೆ ಹಾನಿಕಾರಕವಲ್ಲ ಮತ್ತು ಕ್ಯಾನ್ಸರ್ ಕಾರಕವಲ್ಲ ಎಂಬ ಸತ್ಯವನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಚಾರ ಅಗತ್ಯ ಎಂದು ಸಚಿವರು ಭರವಸೆ ನೀಡಿದರು.

## ಸರ್ಕಾರಕ್ಕೆ ಸಣ್ಣ ಕೈಗಾರಿಕೆಗಳ ಬಗ್ಗೆ ಕಾಳಜಿ ಇಲ್ಲ: ಶರವಣ

**ವಿಧಾನ ಪರಿಷತ್:** ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳು ಸಂಕಷ್ಟದಲ್ಲಿದ್ದರೂ ಅವುಗಳ ಬಗ್ಗೆ ದತ್ತಾಂಶವಿಲ್ಲ ಎಂಬುದಾಗಿ ಹೇಳುವ ಈ ಸರ್ಕಾರಕ್ಕೆ ನಾಚಿಕೆಯಾಗಬೇಕು. ಇದೊಂದು ದಪ್ಪ ಚರ್ಮದ ಸರ್ಕಾರ ವಿಧಾನ ಪರಿಷತ್ ಶಾಸಕ ಟಿ.ಎ. ಶರವಣ ತೀವ್ರ ಆಕ್ರೋಶವನ್ನು ವ್ಯಕ್ತಪಡಿಸಿದರು.

ಚುಕ್ಕೆ ಗುರುತಿನ ಪ್ರಶ್ನೆಗೆ ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ವಲಯ ಉದ್ದಿಮೆಗಳ ಇಲಾಖೆ ಸಮರ್ಪಕ ಮಾಹಿತಿ ನೀಡದಕ್ಕೆ ಆಕ್ರೋಶ ವ್ಯಕ್ತಪಡಿಸಿದ ಅವರು, ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳು ಸಂಕಷ್ಟದಲ್ಲಿದ್ದರೂ ಅವುಗಳ ಬಗ್ಗೆ ದತ್ತಾಂಶವಿಲ್ಲದ ಸರ್ಕಾರದ ನಡೆಗೆ ಆಕ್ರೋಶ ವ್ಯಕ್ತಪಡಿಸಿದರು. ಎಷ್ಟು ಕೈಗಾರಿಕೆಗಳು ಮುಚ್ಚಿವೆ ಎಂಬ ಪ್ರಶ್ನೆಗೆ ಸಚಿವರು ಮಾಹಿತಿ ಇಲ್ಲ ಎಂದು ನೀಡಿದ ಉತ್ತರಕ್ಕೆ ಆಕ್ರೋಶಗೊಂಡ ಶರವಣ ಅವರು, ಕೆಲಸ ಮಾಡದ ಇಲಾಖೆಗಳು ಮತ್ತು ಸಚಿವ ಸ್ಥಾನಗಳು ಯಾಕೆ ಇರಬೇಕು ಎಂದು ವಾಗ್ದಾಳಿ ನಡೆಸಿದರು. ಇದಕ್ಕೆ ಸಚಿವ ಶರಣಬಸಪ್ಪ ದರ್ಶನಾಪೂರ್ ಪ್ರತಿಕ್ರಿಯಿಸಿ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ನೋಂದಣಿ ಕೇಂದ್ರ ಸರ್ಕಾರದ ಉದ್ಯಮ್ ತಂತ್ರಾಂಶದಲ್ಲಿ ನಡೆಯುವುದರಿಂದ, ಮುಚ್ಚಲ್ಪಟ್ಟ ಘಟಕಗಳ ನಿಖರ ಮಾಹಿತಿ ಪಡೆಯುವ ವ್ಯವಸ್ಥೆ ಇಲಾಖೆಯಲ್ಲಿ ಸದ್ಯಕ್ಕೆ ಲಭ್ಯವಿಲ್ಲ ಎಂದರು.

### ಇಲಾಖೆ ವಜಾಕ್ಕೆ ಆಗ್ರಹ

ಎಷ್ಟು ಕೈಗಾರಿಕೆಗಳು ಮುಚ್ಚಿವೆ ಮತ್ತು ಅದಕ್ಕೆ ಕಾರಣಗಳೇನು ಎಂಬ ಕನಿಷ್ಠ ಜ್ಞಾನವೂ ಇಲ್ಲದ ಮೇಲೆ ಸಣ್ಣ ಕೈಗಾರಿಕೆ ಇಲಾಖೆ ಮತ್ತು ಸಣ್ಣ ಕೈಗಾರಿಕೆ ಅಭಿವೃದ್ಧಿ ನಿಗಮಗಳು ಯಾಕೆ ಬೇಕು? ಕೂಡಲೇ ಇಲಾಖೆಯನ್ನು ಮುಚ್ಚಿಬಿಡಿ. ಸಣ್ಣ ಕೈಗಾರಿಕೆಗಳು ಕೇವಲ ವ್ಯಾಪಾರವಲ್ಲ. ಅವು ಲಕ್ಷಾಂತರ ಗ್ರಾಮೀಣ ಯುವಕರ ವೃತ್ತಿಜೀವನ ಮತ್ತು ಘನತೆಯ ಪ್ರಶ್ನೆ. ಸರ್ಕಾರವು ಕೈಗಾರಿಕೆಗಳಿಗೆ ಅಗತ್ಯವಾದ ವಿದ್ಯುತ್ ರಿಯಾಯಿತಿ, ಬಡ್ಡಿ ರಹಿತ ಸಾಲ ಮತ್ತು ಮಾರುಕಟ್ಟೆ ಸೌಲಭ್ಯ ನೀಡುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. ಇಂತಹ ಬೇಜವಾಬ್ದಾರಿ ನೀತಿಯಿಂದಾಗಿ ಉದ್ಯಮಿಗಳು ಆತ್ಮಹತ್ಯೆಯ ಹಾದಿ ಹಿಡಿಯುವಂತಾಗಿದೆ ಎಂದು ಶರವಣ ಎಚ್ಚರಿಸಿದರು.

## ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಖರ್ಗೆ ಆಶ್ವಾಸನೆ

# ಉದ್ಯೋಗ ಕಲ್ಪಿಸಲು ರಾಜ್ಯ ಸರ್ಕಾರ ಬದ್ಧ

**ವಿಧಾನಸಭೆ:** ರಾಜ್ಯದ ಎರಡನೇ ರಾಜಧಾನಿಯೆಂದೇ ಘೋಷಣೆಯಾಗಿರುವ ಹಾಗೂ ರಾಜ್ಯದ ಗಡಿ ಜಿಲ್ಲೆಯಾದ ಬೆಳಗಾವಿಯಲ್ಲಿ ಐಟಿ ಪಾರ್ಕ್ ಅಥವಾ ಸೆಮಿ ಕಂಡಕ್ಟರ್ ಪಾರ್ಕ್‌ಗಳನ್ನು ನಿರ್ಮಿಸಿ ಅಭಿವೃದ್ಧಿ ಪರ ರಾಜ್ಯವನ್ನಾಗಿ ಮಾಡುವ ಹಾಗೂ ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸುವ ಉದ್ದೇಶ ಸರ್ಕಾರಕ್ಕಿದೆ ಎಂದು ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ ಖರ್ಗೆ ತಿಳಿಸಿದರು.

ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿಯ ಅಭಯ ಪಾಟೀಲ್ ಅವರು ವಿಷಯ ಪ್ರಸ್ತಾಪಿಸಿ, ಬೆಳಗಾವಿಯಲ್ಲಿ ಐಟಿ ಪಾರ್ಕ್ ಮತ್ತು ಸೆಮಿಕಂಡಕ್ಟರ್ ಪಾರ್ಕ್‌ಗಳನ್ನು ನಿರ್ಮಿಸಿ ಅಭಿವೃದ್ಧಿಪರ ರಾಜ್ಯವನ್ನಾಗಿ ಮಾಡಬೇಕು. ದ್ಯಾವಂತ ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸಬೇಕೆಂದು ಮನವಿ ಮಾಡಿದರು.

ಇದಕ್ಕುತ್ತರಿಸಿದ ಸಚಿವರು, ಬೆಳಗಾವಿಯಲ್ಲಿ ಐಟಿ ಪಾರ್ಕ್ ಅಥವಾ ಸೆಮಿ ಕಂಡಕ್ಟರ್ ಪಾರ್ಕ್‌ಗಳನ್ನು ನಿರ್ಮಿಸಿ ಅಭಿವೃದ್ಧಿ ಪರ ರಾಜ್ಯವನ್ನಾಗಿ ಮಾಡುವ ಹಾಗೂ ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸುವ ಉದ್ದೇಶದಿಂದ ಸರ್ಕಾರವು ಈಗಾಗಲೇ ಕ್ರಮ ಕೈಗೊಂಡಿದೆ. ಐಟಿ ಪ್ಲಗ್ ಆ್ಯಂಡ್ ಪ್ಲೇ ಮೂಲ ಸೌಕರ್ಯ ಸ್ಥಾಪನೆ, ಸ್ಟಾರ್ಟ್‌ಅಪ್ ಮತ್ತು ನಾವೀನ್ಯತೆ ಪರಿಸರ ವ್ಯವಸ್ಥೆಯನ್ನು ಬಲಪಡಿಸುವುದು. ವೇಗವರ್ಧಕ ಜಾಲಗಳು ಮತ್ತು ಸೀಡ್ ಫಂಡ್ ಬೆಂಬಲ, ಟೆಕ್ಸಲರೇಷನ್, ಸಮಗ್ರ ಅಭಿವೃದ್ಧಿ ಹಾಗೂ ಭವಿಷ್ಯದ ತಂತ್ರಜ್ಞಾನ, ನಿಪುಣ ಕರ್ನಾಟಕ, ಐಡಿಯಾ2ಪಿಓಸಿ ಎಲಿವೇಟ್ (ಗ್ರಾಂಟ್ ಇನ್ ಏಡ್), ರಾಜೀವ್ ಗಾಂಧಿ ಉದ್ಯಮಶೀಲತೆ ಕಾರ್ಯಕ್ರಮ, ಎಲಿವೇಟ್ ಮಹಿಳಾ ಉದ್ಯಮಶೀಲತೆ, ಗ್ರಾಸ್ ರೂಟ್ ಇನೋವೇಶನ್ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದರು. ಬೆಳಗಾವಿಯ ತಿಲಕವಾಡಿಯಲ್ಲಿರುವ ಕಲಾಮಂದಿರ ಕಟ್ಟಡದಲ್ಲಿ ಜಾಗತಿಕ ತಂತ್ರಜ್ಞಾನ ಕೇಂದ್ರ ಸ್ಥಾಪಿಸಲು ಆ ಕಟ್ಟಡವನ್ನು ಇಲಾಖೆಗೆ ಹಸ್ತಾಂತರಿಸಿಕೊಳ್ಳಲು ಕ್ರಮ ವಹಿಸಲಾಗುತ್ತಿದೆ ಎಂದು ತಿಳಿಸಿದರು.



### ಸೆಮಿಕಂಡಕ್ಟರ್ ಪಾರ್ಕ್ ಸ್ಥಾಪನೆ

ಬೆಳಗಾವಿಯಲ್ಲಿ ಐಟಿ. ಪಾರ್ಕ್ ಅಥವಾ ಸೆಮಿಕಂಡಕ್ಟರ್ ಪಾರ್ಕ್‌ಗಳನ್ನು ಸ್ಥಾಪಿಸುವ ಸಂಬಂಧ ಉದ್ದೇಶಿತ ಜಮೀನನ್ನು ಸರ್ಕಾರಕ್ಕೆ ಪಡೆದು ಜಮೀನನ್ನು ರಾಜ್ಯ ಸರ್ಕಾರಕ್ಕೆ ಹಸ್ತಾಂತರಿಸುವ ಸಲುವಾಗಿ ಭಾರತ ಸರ್ಕಾರದ ರಕ್ಷಣಾ ಸಚಿವರಿಗೆ **2021**ರ ಜ.**8**ರಂದು ಪತ್ರ ಬರೆಯಲಾಗಿದೆ. ಜಮೀನನ್ನು ರಾಜ್ಯ ಸರ್ಕಾರಕ್ಕೆ ಹಿಂದಿರುಗಿಸಲು ರಕ್ಷಣಾ ಇಲಾಖೆಯಿಂದ ಇನ್ನೂ ಕ್ರಮ ಕೈಗೊಂಡಿಲ್ಲವಾದ್ದರಿಂದ ಅದೇ ವರ್ಷ ಸೆ.**9** ರಂದು ಮತ್ತೆ ಪತ್ರ ಬರೆಯಲಾಗಿದೆ. **2021**ರ ಸೆ.**21**ರಂದು ಮುಖ್ಯಮಂತ್ರಿಗಳು ರಕ್ಷಣಾ ಸಚಿವರಿಗೆ ಹಾಗೂ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ರಕ್ಷಣಾ ಕಾರ್ಯದರ್ಶಿಯವರಿಗೆ ಪತ್ರ ಬರೆದು ಜಮೀನನ್ನು ಕರ್ನಾಟಕ ಸರ್ಕಾರದ ವಶಕ್ಕೆ ನೀಡುವಂತೆ ಕೋರಲಾಗಿದೆ ಎಂದು ವಿವರಿಸಿದರು.

## ಆರೋಗ್ಯ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ಭರವಸೆ

# ಔಷಧ ಕೊರತೆ ಉಂಟಾಗದಂತೆ ಕ್ರಮ

**ವಿಧಾನ ಪರಿಷತ್:** ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧ ಕೊರತೆ ಉಂಟಾಗದಂತೆ ಕ್ರಮ ಕೈಗೊಳ್ಳಲಾಗಿದ್ದು, ಎಲ್ಲ ಉನ್ನತ ಅಧಿಕಾರಿಗಳು ಪರೀಕ್ಷೆ ನಡೆಸಲು ಅವಕಾಶವಿರುತ್ತದೆ. ಈ ಎಲ್ಲ ಬದಲಾವಣೆಯಿಂದ ಮುಂದಿನ ದಿನದಲ್ಲಿ ಶೇ.80ರಷ್ಟು ಕರ್ನಾಟಕ ರಾಜ್ಯ ಔಷಧ ಸರಬರಾಜು ನಿಗಮ (ಕೆಎಸ್‌ಎಂಎಸ್‌ಸಿಎಲ್)ದಿಂದ ನೇರವಾಗಿ ಔಷಧಿಗಳ ಟೆಂಡರ್ ಕರೆದು ಪೂರೈಸಲಾಗುತ್ತದೆ ಎಂದು ಆರೋಗ್ಯ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಮೇಲ್ಮನೆಯಲ್ಲಿ ಅರ್ಧ ಗಂಟೆ ಚರ್ಚೆ ಕಲಾಪದ ವೇಳೆ ಸದಸ್ಯರಾದ ಡಾ.ಧನಂಜಯ ಸರ್ಜಿ ಹಾಗೂ ಪ್ರತಾಪ್ ಸಿಂಹ ನಾಯಕ್ ಅವರು ಈ ಬಗ್ಗೆ ಪ್ರಸ್ತಾಪಿಸಿದಾಗ ಉತ್ತರಿಸಿದ ಸಚಿವರು, ಕೆಎಸ್‌ಎಂಎಸ್‌ಸಿಎಲ್ ಮುಖಾಂತರ ಖರೀದಿ ಮಾಡಬೇಕು ಎನ್ನುವುದು ಮುಖ್ಯ ಉದ್ದೇಶ. ಅವಶ್ಯಕತೆಯಿರುವ ಔಷಧ ಖರೀದಿ ಕಾರ್ಯವೈಖರಿಯಲ್ಲಿ ಲೋಪದೋಷವಿತ್ತು. ಟೆಂಡರ್ ಪ್ರಕ್ರಿಯೆ, ಗುಣಮಟ್ಟ ಹೀಗೆ ಹಲವು ನ್ಯೂನ್ಯತೆಗಳ ಲಾಭವನ್ನು ಕೆಲವು ಸಂಸ್ಥೆಗಳು ಪಡೆದುಕೊಂಡಿರಬಹುದು. ಇದನ್ನು ಸರಿಪಡಿಸಲು ಹಲವು ಕ್ರಮ ಕೈಗೊಂಡಿದ್ದೇವೆ. ಕೆಎಸ್‌ಎಂಎಸ್‌ಸಿಎಲ್ ಸರಿಯಾಗಿ ದಿಕ್ಕಿನಲ್ಲಿ ಸಾಗಬೇಕು ಎನ್ನುವ ಕಾರಣಕ್ಕೆ ಐಎಎಸ್ ಅಧಿಕಾರಿಯನ್ನು ಮುಖ್ಯಸ್ಥರಾಗಿ ನೇಮಕ ಮಾಡಿದ್ದೇವೆ. ನಮ್ಮ ಉದ್ದೇಶ ಎಲ್ಲ ಇಲಾಖೆಗಳ ಔಷಧಿ ಖರೀದಿ ಪ್ರಕ್ರಿಯೆ ಸರಿಯಾಗಿ ಆಗಬೇಕು ಎಂದರು.



ಕಳೆದ ವರ್ಷ 893 ಔಷಧಗಳ ಪೈಕಿ 534 ಔಷಧಗಳಿಗೆ ಟೆಂಡರ್ ಕರೆಯಲಾಗಿದೆ. ಈ ಪೈಕಿ 232 ಔಷಧ ಖರೀದಿಸಲು ಕಾರ್ಯಾದೇಶ ನೀಡಲಾಗಿದೆ. ಇನ್ನುಳಿದ ಔಷಧಗಳನ್ನು ಸ್ಥಳೀಯವಾಗಿ ಖರೀದಿಸಲಾಗುವುದು. ಶೇ.20ರಷ್ಟು ಔಷಧಗಳನ್ನು ಸ್ಥಳೀಯ ಆಸ್ಪತ್ರೆಗಳೇ ಖರೀದಿಸುವಂತೆ ಸೂಚಿಸಲಾಗಿದೆ. ವಾರ್ಷಿಕವಾಗಿ ಔಷಧಿ ಖರೀದಿ ಬದಲು ಎರಡ್ಮೂರು ತಿಂಗಳಿಗೊಮ್ಮೆ ಖರೀದಿಗೆ ಕ್ರಮ ಕೈಗೊಳ್ಳಲಾಗಿದೆ. ಔಷಧಿ ಸರಬರಾಜಿಗೂ ಮುನ್ನ ಅದರ ಗುಣಮಟ್ಟ ಪರೀಕ್ಷಿಸಿದ ಬಳಿಕವಷ್ಟೇ ಆಸ್ಪತ್ರೆಗಳಿಗೆ ವಿತರಿಸಲಾಗುತ್ತಿದೆ. ಸದ್ಯ 270 ಕೋಟಿ ರೂ. ಮೌಲ್ಯದ ಔಷಧ ಖರೀದಿಸಲಾಗಿದೆ. ಉಗ್ರಾಣಗಳಲ್ಲಿ ದಾಸ್ತಾನು ಇರುವ ಔಷಧಗಳ ಪ್ರಮಾಣ, ಔಷಧಗಳ ಸರಬರಾಜು, ವಿತರಣೆ ಮೇಲೆ ನಿಗಾವಹಿಸಲು ರಿಯಲ್ ಟೈಮ್ ಟ್ರ್ಯಾಕಿಂಗ್‌ಸಿಸ್ಟಂ ಜಾರಿಗೊಳಿಸಲಾಗಿದೆ ಎಂದರು.

## ಸಂಪಾದಕೀಯ

### ಉತ್ತರದಾಯಿತ್ವ ಮತ್ತು ಅಧಿಕಾರ

ಸರ್ಕಾರದ ಸಚಿವರು ಸಮರ್ಪಕ ಉತ್ತರನೀಡುತ್ತಿಲ್ಲವೆಂದು ವಿಧಾನಸಭಾಧ್ಯಕ್ಷರು ಸಭಾತ್ಯಾಗ ಮಾಡಿದ ಘಟನೆ ಇತಿಹಾಸದಲ್ಲೇ ಮೊದಲು ಎಂಬುದು ಎಷ್ಟು ಸತ್ಯವೋ ಎಲ್ಲಾ ಕಾಲದಲ್ಲೂ ಸಚಿವರು ಒಂದು ಹಂತದ ನಂತರ ಅಸಹಾಯಕರೇ ಎನ್ನುವುದು ಕೂಡ ಅಷ್ಟೇ ಸತ್ಯ. ಸರ್ಕಾರದ ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳಿಂದ ಮೊದಲುಗೊಂಡು ಕೆಳಹಂತದ ಗುಮಾಸ್ತರವರೆಗೆ ಎಲ್ಲರೂ ಸಚಿವರುಗಳ ಕಣ್ಣಿಗೆ ಮಣ್ಣೆರಚುವ ತಂತ್ರ ಚೆನ್ನಾಗಿ ಅರಿತವರೆ. ಎಲ್ಲಾ ಕಾಲದಲ್ಲೂ ಯಾವುದಾದರು ಸಚಿವರು 'ಇದ್ದೇ ಇರುತ್ತಾರೆ' ಎಂಬುದನ್ನು ಈ ಹೊತ್ತಿನಲ್ಲಿ ಗಮನಿಸಬೇಕಾಗಿದೆ. ಒಂದು ಕ್ಷೇತ್ರದ ಶಾಸಕ ತನ್ನೂರಿನ ಸಮಸ್ಯೆಯನ್ನು ಸಂಬಂಧಪಟ್ಟ ಸಚಿವರ ಬಳಿಗೆ ತೆಗೆದುಕೊಂಡು ಹೋಗುತ್ತಾನೆ. ಆದರೆ ಸಚಿವರಿಗೆ ತಮ್ಮ ಇಲಾಖೆಗಳ ಸಂಪೂರ್ಣ ಕಾರ್ಯವೈಖರಿ ಮತ್ತು ನಿಯಮಗಳ ಅರಿವಂತೂ ಇರಲು ಸಾಧ್ಯವಿಲ್ಲ. ಒಂದು ಇಲಾಖೆಯ ಸಂಪೂರ್ಣ ಒಳತೋಟಿಯನ್ನು ಅರಿಯುವ ಸಚಿವ ಉತ್ತಮ ರಾಜಕಾರಣಿ ಎನಿಸಿಕೊಳ್ಳುವುದೂ ಇಲ್ಲ, ರಾಜಕಾರಣದಲ್ಲಿ ಇಲಾಖೆ ಆತನಿಗೆ ಒಂದು ಭಾಗವೇ ಹೊರತು ಆತನ ರಾಜಕೀಯ ಬದುಕಿನ ಎಲ್ಲವೂ ಅಲ್ಲ, ಅಂತಲ್ಲಿ ಸಚಿವರು ಇಲಾಖೆಯ ಅಧಿಕಾರಿಗಳನ್ನು ನೆಚ್ಚಿಕೊಳ್ಳಲೇಬೇಕು. 'ಇಂಥ ಎಷ್ಟೋ ಸಚಿವರನ್ನು ಈ ಮೊದಲೂ ಕಂಡಿರುವ ಅಧಿಕಾರಿಗಳು ಅತಿ ಜಾಣರು! ಸಚಿವರಿಗೆ ಇಂಥವರನ್ನು ನಂಬಲೇಬೇಕಾದ ಅನಿವಾರ್ಯತೆ.

ಅಧಿಕಾರಿಗಳಿಗೆ ಗೊತ್ತು ಎಂಬುದಿರುವುದಿಲ್ಲ, ಸಚಿವ, ಶಾಸಕರಿಗಿರುವಂತೆ ಯಾರಿಗೂ ಮುಖ ಕೊಟ್ಟು ಉತ್ತರಿಸುವ ಪ್ರಮೇಯವೂ ಇಲ್ಲ. ಇಲಾಖೆಗಳಲ್ಲಿ ಕಾರ್ಯಗಳು ನಡೆಯುವ ಒಂದು ಸಿದ್ಧಸೂತ್ರವಿರುತ್ತದೆ. ಅದರನ್ವಯ ಕಾರ್ಯಗಳೂ ನಡೆಯುತ್ತಿರುತ್ತವೆ. ಲೋಕ ಎಷ್ಟೇ ಏಐ ಕಾಲಕ್ಕೆ ಹೋಗಿದರೂ ಸರ್ಕಾರಿ ಯಂತ್ರ ಮಾತ್ರ ಇನ್ನೂ ಐವತ್ತರ ದಶಕದ ಕಾರ್ಯವೈಖರಿಯನ್ನೇ ನೆಚ್ಚಿಕೊಂಡಿರುತ್ತವೆ. ಅಧಿಕಾರಿ ವರ್ಗಕ್ಕೆ ಆಡಳಿತ ಯಂತ್ರದ ವೇಗ ಹೆಚ್ಚಿಸುವುದು ಬೇಕಾಗಿಲ್ಲ. ವೇಗ ಹೆಚ್ಚಿದರೆ ಅವರಿಗೆ ತಮ್ಮ ಕರ್ತವ್ಯವನ್ನು ಹೆಚ್ಚಿಸಿಕೊಳ್ಳಬೇಕಾಗುತ್ತದೆ. ಕಂಪ್ಯೂಟರ್ ಯುಗಕ್ಕಿಂತ ಸಾಕಷ್ಟು ಮುನ್ನ ಆಡಳಿತ ವ್ಯವಸ್ಥೆಯ ಭಾಗವಾಗಿರುವ ದೊಡ್ಡ ಅಧಿಕಾರಿ ವರ್ಗ ಇಂದಿಗೂ ರಾಜ್ಯದ ವ್ಯವಸ್ಥೆಯಲ್ಲಿದೆ. ಸುಲಭಕ್ಕೆ ಬದಲಾವಣೆಗೆ ತೆರೆದುಕೊಳ್ಳದ ಪರಿಸ್ಥಿತಿ ಅವರದ್ದಿದೆ. ಆದರೆ ಸಮಾಜ ಸಾಕಷ್ಟು ಮುಂದೆ ಸಾಗಿದೆ. ಸಮಾಜದಲ್ಲಿ ಕಾಲದ ನಡೆಗೆ ತಕ್ಕಂತೆ ಸಮಸ್ಯೆಗಳೂ ನಿರ್ಮಾಣವಾಗಿವೆ ಮತ್ತು ಬೇಡಿಕೆಗಳೂ ಸೃಷ್ಟಿಯಾಗಿವೆ. ಸಚಿವರಾದವರು ಸಮಾಜವನ್ನು ಕಾಲದ ನಡೆಗೆ ತಕ್ಕಂತೆ ಕೊಂಡೊಯ್ಯುವ ಮನಸ್ಸಿರುತ್ತದೆ. ಆದರೆ ಮಾರ್ಗವಿರುವುದಿಲ್ಲ. ಅದ್ದರಿಂದ ಇಂದಿಗೂ ರಾಜ್ಯದ ಕಂದಾಯ ಇಲಾಖೆಯಂಥ ಜಾಗಗಳಲ್ಲಿ ಕೆಲಸಗಳು ಕುಂಟುತ್ತಾ ಸಾಗುತ್ತವೆ. ವರ್ಷಗಟ್ಟಲೆ ಕಾಯುವಂಥ ಸ್ಥಿತಿ ನಿರ್ಮಾಣವಾಗುತ್ತದೆ. ಇದರ ನಡುವೆಯೇ ಅಧಿಕಾರಿ ವರ್ಗಕ್ಕೆ ಸಚಿವರನ್ನು ಹಿತಾಸಕ್ತಿಗೆ ತೆಗೆದುಕೊಳ್ಳುವ ತಂತ್ರಗಾರಿಕೆಯೂ ತಿಳಿಯುತ್ತದೆ. 'ಇದರ ಪರಿಣಾಮ ಸಚಿವರು ಉತ್ತರ ನೀಡದ ಉತ್ತರ ಕುಮಾರರಾಗುತ್ತಾರೆ. ಈ ಪರಿಸ್ಥಿತಿ ಸುಧಾರಣೆಯಾಗದ್ದೇನಲ್ಲ, ಸಚಿವರು ಅಧಿಕಾರಿಗಳ ಮೇಲೆ ತೀಕ್ಷ್ಣವಾದ ಕಣ್ಣಿಟ್ಟರೆ ಇಂಥ ಪರಿಸ್ಥಿತಿಯಿಂದ ಹೊರಬರಬಹುದು ಮತ್ತು ಆಡಳಿತ ವ್ಯವಸ್ಥೆಯಲ್ಲಿ ವೇಗವನ್ನು ತರಬಹುದು.

# ಗೆದ್ದೋನು ಸೋತ, ಸೋತವನು ಸತ್ತು ಗೆದ್ದ

**ಎಷ್ಟು ದುಬಾರಿಯ ಸಾಧನವಿದೆ ಎಂಬುದಕ್ಕಿಂತ ಎಷ್ಟು ಚಾಲಾಕಿ ಅಥವಾ ಚತುರ ಸಾಧನ ನಿಮ್ಮ ಬಳಿ ಇದೆ ಎಂಬುದು ಹೆಚ್ಚು ಮುಖ್ಯವಾಗುತ್ತಿದೆ.**

ಖಾರಾ ಬಾತ್
• ವಿನಾಯಕ ಭಟ್ಟ ಮೂರೂರು
vakradanta@gmail.com

ಯುದ್ಧದ ರೀತಿ ಬದಲಾಗಿದೆ. ಈಗಿನ ಯುದ್ಧಗಳಲ್ಲಿ ಯಾರೂ ಎಲ್ಲಿಗೂ ಹೋಗುವ ಅಗತ್ಯವೇ ಇಲ್ಲ. ಕುಳಿತಲ್ಲಿಂದಲೆ ಕ್ಷಿಪಣಿ, ಡ್ರೋಣ್ ಹಾರಿಸಿದರಾಯಿತು. ಇನ್ನೊಂದು ದೇಶದವರೂ ಅಷ್ಟೇ ಕುಳಿತಲ್ಲಿಂದಲೇ ಅವುಗಳನ್ನು ಹೊಡೆದುರುಳಿಸುತ್ತಾರೆ. ಅವರೂ ಪ್ರತಿಯಾಗಿ ಕ್ಷಿಪಣಿ-ಡ್ರೋಣ್ ಹಾರಿಸುತ್ತಾರೆ. ಯಾವ್ಯಾವುದೋ ತಂತ್ರಜ್ಞಾನದ ಮೂಲಕ ಯಾರು ಎಲ್ಲಿದ್ದಾರೆ, ಪ್ರಮುಖ ಅಸ್ತ್ರಗಳನ್ನು ಎಲ್ಲಿಟ್ಟಿದ್ದಾರೆ ಎಂಬುದನ್ನೆಲ್ಲ ಪತ್ತೆ ಮಾಡಿ, ಅಲ್ಲಿಗೆ ಸರಿಯಾಗಿ ದಾಳಿ ಮಾಡಿದರಾಯಿತು. ಇನ್ನೊಂದು ದೇಶಕ್ಕೆ ಹೋಗಬೇಕೆಂದಿಲ್ಲ, ಅವರ ವಾಯು ಗಡಿ ದಾಟಬೇಕೆಂದಿಲ್ಲ, ದುಬಾರಿ ವಿಮಾನ ಹಾರಿಸಿ, ಅದರೊಳಗೊಬ್ಬ ಪೈಲಟ್ ಕುಳಿತು, ಆ ವಿಮಾನ ವೈರಿ ನೆಲದಲ್ಲಿ ಬಿದ್ದು, ಪೈಲಟ್‌ನನ್ನು ಅವರು ಯುದ್ಧ ಖೈದಿಯಾಗಿಸಿಕೊಳ್ಳುವ ಕತೆಗಳೆಲ್ಲ ಈಗ ಹಳೆಯದಾಯಿತು. ಈಗೇನಿದ್ದರೂ ಆತ್ಮಹತ್ಯಾ ಡ್ರೋಣ್‌ಗಳ ಕಾಲ. ಅದು ನಾಶವಾಗಲೆಂದೇ ಹಾರಿಸುವುದು. ಒಂದೋ ವೈರಿಗಳು ಅದನ್ನು ಹೊಡೆದುಹಾಕುತ್ತಾರೆ ಅಥವಾ ಅದೇ ಬಿದ್ದು ಸ್ಫೋಟಿಸಿಕೊಳ್ಳುತ್ತದೆ. ಒಟ್ಟಿನಲ್ಲಿ ನಾಶವಾಗುತ್ತದೆ.

ಪಾಕಿಸ್ತಾನದ ಮೇಲೆ ಭಾರತ ನಡೆಸಿದ ಆಪರೇಷನ್ ಸಿಂದೂರ ಕೂಡ ಹೆಚ್ಚುಕಡಿಮೆ ಇದೇ ಮಾದರಿಯದ್ದು. ಭಾರತೀಯ ಯುದ್ಧ ವಿಮಾನಗಳು ಪಾಕಿಸ್ತಾನ ವಾಯುಪ್ರದೇಶವನ್ನು ಪ್ರವೇಶಿಸಲೇ ಇಲ್ಲ. ಕುಳಿತಲ್ಲಿಂದಲೆ ನಿರ್ದಿಷ್ಟ ಗುರಿಗೆ ಕ್ಷಿಪಣಿ ಹಾರಿಸಿ, ಯಶ ಸಾಧಿಸಲಾಯಿತು. ಈಗ ಅಮೆರಿಕ-ಇಸ್ರೇಲ್ ಹಾಗೂ ಇರಾನ್ ಯುದ್ಧದ ರೀತಿ ಇನ್ನೂ ವಿಚಿತ್ರ. ಅಮೆರಿಕ ಬಳಿ ಆಧುನಿಕ ಶಸ್ತ್ರಾಸ್ತ್ರ, ರಾಡಾರ್ ಗಳಿವೆ. ಅಮೆರಿಕದಷ್ಟು ಅತ್ಯಾಧುನಿಕ ಶಸ್ತ್ರಾಸ್ತ್ರಗಳು ಇರಾನ್ ಬಳಿ ಇಲ್ಲ. ಆದರೂ ಯುದ್ಧದಲ್ಲಿ ಹೆಚ್ಚು ನಷ್ಟವಾಗುತ್ತಿರುವುದು ಅಮೆರಿಕಕ್ಕೆ ಅಂದರೆ ನಂಬುತ್ತೀರಾ?

ಇರಾನ್ ಒಳಗೆ ಇಸ್ರೇಲ್ ಹಾಗೂ ಅಮೆರಿಕ ಸಾಕಷ್ಟು ಹಾನಿ ಮಾಡಿರಬಹುದು. ಒಂದೇ ಹೊಡೆತಕ್ಕೆ ಇರಾನ್ ಮುಖ್ಯಸ್ಥನನ್ನೇ ಕೊಂದು ವಿಶ್ವಕ್ಕೆ ಅಚ್ಚರಿ ಮೂಡಿಸಿರಬಹುದು. ಆದರೆ ಯುದ್ಧ ಹೆಚ್ಚು ದಿನ ನಡೆದಂತೆ ಅಮೆರಿಕಕ್ಕೆ ಹೆಚ್ಚು ನಷ್ಟವಾಗುವ ಲಕ್ಷಣಗಳು ಗೋಚರಿಸುತ್ತಿವೆ. ಯಾಕೆಂದರೆ ಅಮೆರಿಕದ ಬಳಿ ಶಸ್ತ್ರಾಸ್ತ್ರಗಳೆಲ್ಲ ಇವೆಯಾದರೂ, ಅವೆಲ್ಲ ದುಬಾರಿ ಸಾಧನಗಳು. ಅಮೆರಿಕದಲ್ಲಿ ಉತ್ಪಾದನಾ ವೆಚ್ಚ ಹೆಚ್ಚು. ಹಾಗಾಗಿಯೇ ನಾಸಾಗಿಂತ ನಮ್ಮ ಇಸ್ರೋದವರು ಕಡಿಮೆ ಕರ್ಚಿನಲ್ಲಿ ಚಂದ್ರಯಾನ ಮಾಡಲು ಸಾಧ್ಯವಾಗಿದ್ದು. ಹಾಗೆ ಅಮೆರಿಕದ ಹೆಚ್ಚು ವೆಚ್ಚಗಳ ಶಸ್ತ್ರಾಸ್ತ್ರಗಳನ್ನು ಎದುರಿಸಲು ಇರಾನ್ ಹೆಚ್ಚು ಕರ್ಚು ಮಾಡುತ್ತಿಲ್ಲ. ಉದಾಹರಣೆಗೆ ಇರಾನ್ ಕೇವಲ 20 ಲಕ್ಷ ರೂಪಾಯಿ ವೆಚ್ಚದ ಡ್ರೋನ್‌ಗಳನ್ನು ಬಳಸುತ್ತಿದೆ. ಆ ಡ್ರೋಣ್‌ಗಳನ್ನು ಹೊಡೆದುರುಳಿಸಲು ಅದಕ್ಕಿಂತ ಮೂರ್ನಾಲ್ಕು ಪಟ್ಟು ಹೆಚ್ಚು ವೆಚ್ಚದ ಸಾಧನಗಳನ್ನು ಬಳಸಲಾಗುತ್ತಿದೆ. ಇತ್ತೀಚೆಗೆ ಅರಬ್ ದೇಶಗಳಲ್ಲಿದ್ದ ಅಮೆರಿಕದ ಅತ್ಯಾಧುನಿಕ ರಾಡಾರ್ ಒಂದನ್ನು ಇರಾನ್ ಡ್ರೋನ್ ಮೂಲಕ ನಾಶಪಡಿಸಿಬಿಟ್ಟಿತು. ಈ ಲೆಕ್ಕಾಚಾರ ನೋಡಿದರೆ ಹೆಚ್ಚು ದಿನ ಯುದ್ಧ ನಡೆದಷ್ಟೂ ನಷ್ಟ ಅಮೆರಿಕಕ್ಕೆ ಎಂಬುದು ಸ್ಪಷ್ಟ. ಇರಾನ್‌ಗೆ ನಷ್ಟವಾಗುತ್ತದೆ. ಆದರೆ ಅದರ ನಷ್ಟದ ಪ್ರಮಾಣ ಕಡಿಮೆ. ಅಮೆರಿಕ ಆರ್ಥಿಕವಾಗಿ ಬಲಿಷ್ಠವಾಗಿದೆ. ಹಾಗಾಗಿ ಅದಕ್ಕಾಗುವ ನಷ್ಟವೂ ಅಷ್ಟೇ ಬಲವಾಗಿರುತ್ತದೆ.



ಇರಾನ್‌ನ ನೌಕಾಪಡೆ ಬಳಿ ಇರುವ ಯುದ್ಧ ನೌಕೆಗಳಲ್ಲಿ ಬಹುತೇಕ ನೌಕೆಗಳು ಮೊದಲು ಸರಕುಸಾಗಣೆ ನೌಕೆಗಳಾಗಿದ್ದವು. ಅವುಗಳನ್ನೆ ಬದಲಾಯಿಸಿ ಯುದ್ಧನೌಕೆ ಮಾಡಲಾಗಿದೆ. ಹಾಗಾಗಿ ಅಮೆರಿಕದ ಒಂದು ಯುದ್ಧ ನೌಕೆಯ ಕರ್ಚು, ಇರಾನ್‌ನ ನಾಲ್ಕೈದು ಯುದ್ಧ ನೌಕೆ ನಿರ್ಮಾಣವಾಗಬಿಡುತ್ತದೆ. ಅಮೆರಿಕ ಈಗಾಗಲೇ ಇರಾನ್‌ನ ನಾಲ್ಕು ಯುದ್ಧ ನೌಕೆಗಳನ್ನು ಹೊಡೆದುಹಾಕಿದ್ದಾಗಿ ಹೇಳಿಕೊಂಡಿದೆ. ಆದರೆ ಇರಾನ್ ಏನಾದರೂ ಅಮೆರಿಕದ ಒಂದು ಯುದ್ಧ ನೌಕೆಯನ್ನು ಹೊಡೆದುರುಳಿಸಿದರೆ ಆಗ ದುಡ್ಡಿನ ಲೆಕ್ಕಾಚಾರದಲ್ಲಿ ಅಮೆರಿಕ ಹೆಚ್ಚು ನಷ್ಟದಲ್ಲಿರುತ್ತದೆ.

ಇನ್ನೊಂದು ಅತ್ಯಂತ ಆಸಕ್ತಿಕರ ಸಂಗತಿಯಿದೆ. ಅಮೆರಿಕದ ಅತ್ಯಾಧುನಿಕ ಯುದ್ಧ ನೌಕೆಯೊಂದನ್ನು ಅತ್ಯಂತ ಕಡಿಮೆ ವೆಚ್ಚದಲ್ಲಿ ನಿರ್ಮಿಸಿದ್ದ ಸಬ್ ಮೆರಿನ್ ಒಂದು ಹೊಡೆದುರುಳಿಸಲು ಯಶಸ್ವಿಯಾಗಿತ್ತು ಎಂದರೆ ನಿಮಗೆ ಅಚ್ಚರಿಯಾಗಬಹುದು. ವಿಮಾನ ಮತ್ತು ಕ್ಷಿಪಣಿವಾಹಕ ಯುದ್ಧನೌಕೆಗಳು ಸಾಮಾನ್ಯವಾಗಿ ಏಕಾಂಗಿಯಾಗಿ ಸಮುದ್ರಕ್ಕಿಳಿಯುವುದಿಲ್ಲ, ಬದಲಾಗಿ ಅಕ್ಕಪಕ್ಕದಲ್ಲಿ ರಕ್ಷಣಾ ಹಡಗುಗಳು ಕೂಡ ಇರುತ್ತವೆ. ಹೆಲಿಕಾಪ್ಟರ್‌ಗಳು, ಸಬ್ ಮೆರಿನ್ ಸ್ಕ್ಯಾನರ್‌ಗಳು ಎಲ್ಲವೂ ಇರುತ್ತವೆ. ಅಮೆರಿಕ 45,500ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿದ ಯುದ್ಧ ನೌಕೆ ಅಂದು ಉತ್ತರ ಅಂಟ್ಲಾಂಟಿಕ್ ಸುಮದ್ರದಲ್ಲಿ ಹೋಗುತ್ತಿತ್ತು. ಇಷ್ಟೆಲ್ಲ ಅತ್ಯಾಧುನಿಕ ಸಾಧನಗಳಿದ್ದರೂ ಕೇವಲ 660ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣವಾಗಿದ್ದ ಸಬ್ ಮೆರಿನ್‌ಒಂದು ಈ ಯುದ್ಧನೌಕೆಯನ್ನು ಹೊಡೆದುರುಳಿಸುವ ಹಂತ ತಲುಪಿತ್ತು. ನಿಜವಾದ ಯುದ್ಧ ಸಂದರ್ಭವಾಗಿದ್ದರೆ ಅಮೆರಿಕದ ಯುದ್ಧ ನೌಕೆ ಬಲಿಯಾಗುತ್ತಿತ್ತು.

ನ್ಯಾಟೊ ಪಡೆಗಳು ಯುದ್ಧಾಭ್ಯಾಸ ಮಾಡುತ್ತಿದ್ದ ಸಂದರ್ಭವದು. ಅಮೆರಿಕದ ವಿಮಾನವಾಹಕ ಯುದ್ಧನೌಕೆ ಡಿ. ಐಸಿನ್ ಹೋವರನ್ನು ತೇಲಾಡುವ ವಾಯುನೆಲೆ ಎಂದೇ ಕರೆಯಲಾಗುತ್ತದೆ. ಯುದ್ಧದ ಸಂದರ್ಭದಲ್ಲಿ ಒಂದು ಡಜನ್‌ಗೂ ಹೆಚ್ಚು ಯುದ್ಧ ನೌಕೆಗಳನ್ನು ಉಡಾವಣೆ ಮಾಡಬಹುದಾದ ಸಾಮರ್ಥ್ಯ ಈ ಹಡಗಿಗಿದೆ. ಹಡಗಿನ ಕೆಳಭಾಗದಲ್ಲಿ ಸೋನಾರ್ ವೇವ್‌ಗಳ ಮೂಲಕ ಹಾಗೂ ಆಗಸದಲ್ಲಿ ಹೆಲಿಕಾಪ್ಟರ್ ಹಾಗೂ ರಾಡಾರ್‌ಗಳು ಯಾವುದೇ ದಾಳಿಯನ್ನು, ವೈರಿಯ ನಡೆಯನ್ನು ಮೊದಲೇ ಗುರುತಿಸಲು ಸಿದ್ಧವಾಗಿದ್ದವು. ಇದೆಲ್ಲದರ ನಡುವೆ ಕೆನಡಾದ ನೌಕಾಪಡೆಯ ಸಣ್ಣ ಸಬ್‌ಮೆರಿನ್ ಒಂದು ಸಮುದ್ರದಾಳದಲ್ಲಿ ತಣ್ಣಗೆ ಅಮೆರಿಕದ ಯುದ್ಧ ನೌಕೆಯ ಕಡೆಗೆ ಬರುತ್ತಿತ್ತು. ಯುದ್ಧ ನೌಕೆ ಹಾಗೂ ಆಸುಪಾಸಿನ ಭದ್ರತಾ ಹಡುಗಳಲ್ಲಿರುವ ಸಾಧನಗಳು ಸಬ್ ಮೆರಿನ್ ಸೇರಿದಂತೆ ಯಾವುದೇ ವೈರಿ ದೇಶದ ಸಾಧನಗಳು ಅನತಿ ದೂರದಲ್ಲಿರುವಾಗಲೆ ಪತ್ತೆ ಮಾಡಿ, ಪ್ರತಿ ದಾಳಿಯನ್ನು ರೂಪಿಸಿ ಯುದ್ಧ ನೌಕೆಯನ್ನು ಕಾಪಾಡುತ್ತವೆ. ಆದರೆ ಇಲ್ಲಿ ಕೆನಡಾದ ಚಿಕ್ಕ ಸಬ್‌ಮೆರಿನ್ ಪತ್ತೆ ಮಾಡಲು ಅಮೆರಿಕದ ಅತ್ಯಾಧುನಿಕ ಯುದ್ಧ ನೌಕೆ ಹಾಗೂ ಅದರ ಭದ್ರತಾ ಹಡಗುಗಳು ವಿಫಲವಾದವು.

ಯುದ್ಧಾಭ್ಯಾಸದ ಸಮಯದಲ್ಲಿ ಯಾರೂ ಶಸ್ತ್ರ ಚಲಾಯಿಸುವುದಿಲ್ಲ, ಕೆಲವು ಲೆಕ್ಕಾಚಾರಗಳ ಆಧಾರದಲ್ಲಿ ಅಂತಿಮ ತೀರ್ಮಾನಕ್ಕೆ ಬರಲಾಗುತ್ತದೆ. ಈ ಲೆಕ್ಕಾಚಾರದ ಆಧಾರದಲ್ಲಿ ಅಮೆರಿಕ ಯುದ್ಧ ನೌಕೆ ನಾಶವಾಯಿತು ಎಂದು ಯುದ್ಧಾಭ್ಯಾಸದಲ್ಲಿ ಘೋಷಿಸಲಾಯಿತು.

ಇದಕ್ಕೆ ಕಾರಣವಿತ್ತು. ಸಾಮಾನ್ಯವಾಗಿ ಸಬ್ ಮೆರಿನ್‌ಗಳು ಒಂದು ಹಂತದ ಶಬ್ದವನ್ನು ಹೊರಡಿಸುತ್ತವೆ. ಯುದ್ಧ ನೌಕೆ ಹಾಗೂ ಅದರ ಭದ್ರತಾ ನೌಕೆಗಳಲ್ಲಿರುವ ಸೋನಾರ್ ವ್ಯವಸ್ಥೆ ನೀರಿನ ಆಳದಲ್ಲಿ ಓಡಾಡುವ ಸಾಧನಗಳ ಎಂಜಿನ್ ಶಬ್ದ, ಅದರ ಬೇರೆ ಬೇರೆ ಮೆಕಾನಿಕಲ್ ಶಬ್ದಗಳನ್ನು ಆಧರಿಸಿ ಅದರ ಸೂಚನೆಯನ್ನು ಯುದ್ಧ ನೌಕೆಗೆ ನೀಡುತ್ತದೆ. ಆದರೆ ಕೆನಡಾ ಸಬ್‌ಮೆರಿನ್ ನಿರ್ಮಿಸುವಾಗ ಹೊಸ ತಂತ್ರಜ್ಞಾನ ಅಳವಡಿಸಿತ್ತು. ಸಾಮಾನ್ಯವಾಗಿ ಸಬ್‌ಮೆರಿನ್‌ಗಳು ನ್ಯೂಕ್ಲಿಯರ್ ಶಕ್ತಿ ಬಳಸಿದರೆ, ಈ ಸಬ್ ಮೆರಿನನ್ನು ಡೀಸೆಲ್ ಎಂಜಿನ್ ಹಾಗೂ ಬ್ಯಾಟರಿ ಬಳಸಿ ನಿರ್ಮಿಸಲಾಗಿತ್ತು. ಹೇಗೆ ಬ್ಯಾಟರಿ ಸ್ಕೂಟರ್ ಅಥವಾ ಕಾರುಗಳು ಶಬ್ದ ಮಾಡುವುದೇ ಇಲ್ಲವೋ ಹಾಗೆ ಬ್ಯಾಟರಿ ಬಳಸಿದ ಸಬ್‌ಮೆರಿನ್ ಸಾಧಾರಣ ಸಬ್‌ಮೆರಿನ್‌ಗಿಂತ ತುಂಬಾ ಕಡಿಮೆ ಶಬ್ದ ಮಾಡುತ್ತಿತ್ತು. ಇದರಿಂದಾಗಿ ಸಮುದ್ರದಾಳದ ಬೇರೆ ಬೇರೆ ಸದ್ದುಗಳ ಜತೆಗೆ ಈ ಸಬ್‌ಮೆರಿನ್ ಶಬ್ದವನ್ನು ಪ್ರತ್ಯೇಕಿಸಿ ಗುರುತಿಸಲು ಅಮೆರಿಕದ ಯುದ್ಧ ನೌಕೆಯ ಸೋನಾರ್ ವ್ಯವಸ್ಥೆ ವಿಫಲವಾಯಿತು. ಇದರಿಂದಾಗಿ ಸಬ್‌ಮೆರಿನ್ ಅಪಾಯಕಾರಿಯಾಗುವಷ್ಟು ಹತ್ತಿರದ ತನಕ ಬರುವವರೆಗೂ ಅದನ್ನು ಗುರುತಿಸಲು ಯುದ್ಧ ನೌಕೆಗೆ ಸಾಧ್ಯವಾಗಿಲ್ಲ.

ಇದನ್ನು ಗಮನಿಸಿದಾಗ ಎಷ್ಟು ಅತ್ಯಾಧುನಿಕ ತಂತ್ರಜ್ಞಾನ ಹಾಗೂ ಹೆಚ್ಚು ದುಡ್ಡಿನಿಂದ ನಿರ್ಮಿಸಿದ ಸಾಧನಗಳನ್ನು ನೀವು ಹೊಂದಿದ್ದೀರಿ ಎಂಬುದಕ್ಕಿಂತ ಅದೆಲ್ಲ ತಂತ್ರಜ್ಞಾನವನ್ನು ಏಮಾರಿಸುವ ಹೊಸ ಮಾದರಿಯ, ನಾವಿನ್ಯವಿರುವ ಸಾಧನ ನಿಮ್ಮ ಬಳಿ ಇದೆಯೆ ಎಂಬುದು ಹೆಚ್ಚು ಮುಖ್ಯವಾಗುತ್ತದೆ. ಎಷ್ಟು ದುಬಾರಿಯ ಸಾಧನವಿದೆ ಎಂಬುದಕ್ಕಿಂತ ಎಷ್ಟು ಚಾಲಾಕಿ ಅಥವಾ ಚತುರ ಸಾಧನ ನಿಮ್ಮ ಬಳಿ ಇದೆ ಎಂಬುದು ಹೆಚ್ಚು ಮುಖ್ಯವಾಗುತ್ತಿದೆ.

## ಪರಿಣಾಮದಿಂದ ಸಾಫಲ್ಯವನ್ನು ಅಳೆಯಬೇಕು

ಶ್ಲೋಕ ಸಾಗರ
• ಡಾ. ಸೋಂದಾ ಭಾಸ್ಕರ ಭಟ್

ವಿದ್ಯಾಭ್ಯಾಸಸ್ಯ ಸಾಫಲ್ಯಂ ಜ್ಞೇಯಂ ನ ಪರಿಮಾಣತಃ।
ಜ್ಞೇಯಂ ತತ್ಸರ್ವಥಾ ಲೋಕೇ ಮನುಷ್ಯೈ ಪರಿಣಾಮತಃ॥ -ಸುವಚನಶತಕಂ

ವಿದ್ಯಾಭ್ಯಾಸದ ಸಫಲತೆಯನ್ನು ವಿದ್ಯಾರ್ಥಿ ಎಷ್ಟು ಕಲಿತಿದ್ದಾನೆ ಎಂಬ ಪರಿಮಾಣದಿಂದ ಅಳೆಯಬಾರದು. ಅವನ ಮೇಲೆ ಅದು ಎಷ್ಟು ಪರಿಣಾಮವನ್ನು ಬೀರಿದೆ ಎಂಬುದರಿಂದ ಸಾಫಲ್ಯವನ್ನು ಅಳೆಯಬೇಕು- ಎಂಬುದು ಶ್ಲೋಕಾರ್ಥ.

ಶಿಕ್ಷಣ ಮೂಲಭೂತ ಹಕ್ಕುಗಳಲ್ಲೊಂದು. ಎಲ್ಲ ಶಿಕ್ಷಿತರಾಗಬೇಕು ಎಂಬುದು ಇದರ ಹಿಂದಿರುವ ಆಶಯ. ಶಿಕ್ಷಿತನು ಚೆನ್ನಾಗಿ ಅರ್ಥಮಾಡಿಕೊಂಡು ಬದುಕಬಲ್ಲ, ಸಮಾಜವನ್ನು ಕಟ್ಟಬಲ್ಲ, ಸಮಾಜದಲ್ಲಿರುವ ಓರೆ ಕೋರೆಗಳನ್ನು ಸರಿಪಡಿಸಬಲ್ಲ, ಸುಂದರ ಹಾಗೂ ಸಮೃದ್ಧ ಸಮಾಜಕ್ಕೆ ಮುನ್ನುಡಿಯಾಗಬಲ್ಲ, ಅರ್ಥಪೂರ್ಣ ಸಮಾಜ ಬದುಕಿಗೆ ಕಾರಣನಾಗಬಲ್ಲ, ತಾನೂ ಅರಳಿ ಇತರರನ್ನೂ ಅರಳಿಸಬಲ್ಲ.

ಈ ಎಲ್ಲ ಕಾರಣಕ್ಕಾಗಿಯೇ ಸರ್ವ ಶಿಕ್ಷಣ ಅಭಿಯಾನದಂತಹ ಕ್ರಾಂತಿಕಾರಿ ಯೋಜನೆಯನ್ನು ತರಲಾಗಿದೆ. ಇಂದಿನ ಕಾಲಘಟ್ಟದಲ್ಲಿ ಓದಿ ಪದವಿ ಪಡೆದರೆ ಶಿಕ್ಷಿತ ಎಂಬ ಹಣೆಪಟ್ಟಿಕಟ್ಟುತ್ತೇವೆ. ಶಾಲೆಗಳಿಗೆ ತೆರಳಿ ಓದದಿದ್ದರೂ ಸಮಾಜದ ನಡುವೆ ಅನ್ಯಾನ್ಯ ಚಟುವಟಿಕೆಗಳಲ್ಲಿ ತೊಡಗಿಕೊಂಡು ಕೃಷಿಯನ್ನೋ, ವ್ಯಾಪಾರವನ್ನೂ ಸಮುದಾಯ ಮೆಚ್ಚುವಂತೆ ನಡೆಸಿಕೊಂಡು ಬಂದವನೂ ಶಿಕ್ಷಿತನೆ. ಪರಿಸರವೇ ಗುರು. ಸಮಾಜವೇ ಶಾಲೆ. ಪರಿಶ್ರಮದಿಂದ ದುಡಿದು ಪಡೆದ ಅನುಭವವೇ ಪದವಿ. ಸಮಾಜಕ್ಕೆ ಪೂರಕವಾಗಿ ಬದುಕು ನಡೆಸುತ್ತಿದ್ದರೇ ವಿನಾ ಅವರೆಂದೂ ಸಮಾಜಕ್ಕೆ ಮಾರಕವಾಗಿರಲಿಲ್ಲ.

ಇಂದು ಎಷ್ಟು ಕಲಿತಿದ್ದಾನೆ ಎಂಬುದನ್ನು ಅರಿತು ಸಾಫಲ್ಯವನ್ನು ಗುರುತಿಸುತ್ತೇವೆ. ಉನ್ನತ ಪದವಿಯನ್ನು ಪಡೆದಿದ್ದರೂ ಹೆಚ್ಚು ಡಿಗ್ರಿಗಳನ್ನು ಹೊಂದಿದ್ದಾನೆ ಎಂಬುದರ ಹಿನ್ನೆಲೆಯಲ್ಲಿ ಜೀವನದ ಸಫಲತೆಯನ್ನು ಲೆಕ್ಕ ಹಾಕುವ ಪದ್ಧತಿಯಿದೆ. ಇದು ತಪ್ಪು. ರಾಕ್ಷಸರಂತೆ ವ್ಯವಹರಿಸುವ ಸಾಕ್ಷರರಿದ್ದಾರೆ. ಅಪರೂಪದ ಪದವಿ ಪಡೆದು ಲೋಕಕಂಟಕರಾದವರಿದ್ದಾರೆ.

ಜಗತ್ತಿನಲ್ಲಿ ಭಯೋತ್ಪಾದನೆ ಮಾಡುವವರು, ಪ್ರೇರೇಪಿಸುವವರು, ಅವರನ್ನು ಸಮರ್ಥಿಸುವವರು... ಇವರೆಲ್ಲರೂ ವಿದ್ಯಾಭ್ಯಾಸ ಪಡೆದವರೆ. ನಕ್ಸಲ್ ಚಟುವಟಿಕೆಗಳಲ್ಲಿ ತೊಡಗಿದವರು ನಿರಕ್ಷರಕುಕ್ಷಿಗಳಲ್ಲ. ಇವರ ಬೆಂಬಲಕ್ಕೆ ನಿಲ್ಲುವ ಅರ್ಬನ್ ನಕ್ಸಲರು ಓದಿಕೊಂಡವರೇ. ಇವರನ್ನೆಲ್ಲ ಇವರ ಪದವಿ, ವಿದ್ಯಾಭ್ಯಾಸದ ಹಿನ್ನೆಲೆಯಲ್ಲಿ ಅಳೆಯಲು ಸಾಧ್ಯವೇ? ಸಂಸ್ಕಾರದ ಗಂಧವಿಲ್ಲದ ಇವರ ವಿದ್ಯಾ ರಾಷ್ಟ್ರ ಮಾರಕ. ಸಮಾಜ ವಿದ್ರೋಹಕ. ಓದಿದ್ದೊಂದು, ಮಾಡುವುದೊಂದು ಎಂಬಂತಾಗಬಾರದು. ದೇಶಕ್ಕೆ ವ್ಯವಸ್ಥೆಗೆ, ಇನ್ನೊಬ್ಬರ ಸಂಪತ್ತಿಗೆ ಕನ್ನ ಹಾಕುವವರು ವಿದ್ಯಾವಂತ ಸಮಾಜ ವಿಧ್ವಂಸಕರು. ಆದ್ದರಿಂದ ವಿದ್ಯಾಭ್ಯಾಸದ ಸಫಲತೆಯನ್ನು ಪಡೆದ ಪದವಿಯಿಂದ ಗುರುತಿಸಬಾರದು. ಅದು ಸಮಾಜದ ಮೇಲೆ ಎಷ್ಟು ಒಳ್ಳೆಯ ಪರಿಣಾಮವನ್ನು ಬೀರಿದೆ ಎಂಬುದರ ಮೇಲೆ ಅಳೆಯಬೇಕು. ವಿದ್ಯಾವಂತನು, ಪದವೀ ಧರನು ಸಮಷ್ಟಿಯ ಹಿತಚಿಂತನೆಯನ್ನು ಬೆಳೆಸಿಕೊಳ್ಳಬೇಕು. ತನ್ನ ಜ್ಞಾನವನ್ನು ಸಮಾಜೋನ್ನಯನಕ್ಕೆ ಬಳಸಬೇಕು. ಆಗಲೇ ವಿದ್ಯಾಭ್ಯಾಸ ಸಾಫಲ್ಯವನ್ನು ಪಡೆಯುತ್ತದೆ.

# ಪ್ರಜಾಸತ್ತೆಗೆ ಮರಳಿದ ಬಾಂಗ್ಲಾ ಮತ್ತು ನೇಪಾಳ

• ರಾಮ್ ಮಾಧವ್

ಭಾರತವು ವಿಶ್ವದ ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಷ್ಟೇ ಅಲ್ಲದೇ ಅತ್ಯಂತ ಯಶಸ್ವಿ ಪ್ರಜಾಪ್ರಭುತ್ವ ರಾಷ್ಟ್ರವೂ ಹೌದು. ದ. ಏಷ್ಯಾದ ಇತರ ದೇಶಗಳಿಗೂ ಭಾರತದ ಪ್ರಜಾತಂತ್ರವು ಒಂದು ಮಾದರಿಯಾಗಿದೆ. ಕಳೆದ ಕೆಲವು ದಶಕಗಳಲ್ಲಿ ದಕ್ಷಿಣ ಏಷ್ಯಾದ ಬಹುತೇಕ ರಾಷ್ಟ್ರಗಳು ಪ್ರಜಾಪ್ರಭುತ್ವವನ್ನು ಅಪ್ಪಿಕೊಂಡಿವೆ. ಅಲ್ಲಿನ ಜನರನ್ನು ಇದಕ್ಕೆ ಅಭಿನಂದಿಸಬೇಕಾದುದು ಸಹಜವಾದರೂ, ಇದರಲ್ಲಿ ಭಾರತದ ಶ್ರೇಯಸ್ಸು ಕೂಡಾ ಇದೆ.

ಇದೇವೇಳೆ, ಕಳೆದ ಎರಡು ತಿಂಗಳಲ್ಲಿ ಭಾರತದ ಎರಡು ನೆರೆರಾಷ್ಟ್ರಗಳು ಪ್ರಜಾತಂತ್ರಕ್ಕೆ ಮರಳಿರುವುದು ಸ್ವಾಗತಾರ್ಹ ಬೆಳವಣಿಗೆ. ರಾಜಕೀಯ ಅಸ್ಥಿರತೆಗೆ ಗುರಿಯಾಗಿದ್ದ ಬಾಂಗ್ಲಾದೇಶ ಮತ್ತು ನೇಪಾಳಗಳಲ್ಲಿ ಚುನಾವಣೆಗಳು ನಡೆದು ಪ್ರಜಾತಾಂತ್ರಿಕವಾಗಿ ಆಯ್ಕೆಯಾದ ಸರಕಾರಗಳು ಅಧಿಕಾರಕ್ಕೆ ಬಂದವು.

ಬಾಂಗ್ಲಾದಲ್ಲಿ ಫೆ. 12ರಂದು ಚುನಾವಣೆ ನಡೆಯುವ ಮೂಲಕ ಮಹಮ್ಮದ್ ಯೂನುಸ್‌ರ 18 ತಿಂಗಳ ಹಂಗಾಮಿ ಆಡಳಿತಕ್ಕೆ ತೆರೆ ಬಿತ್ತು. ನೇಪಾಳದಲ್ಲಿ ಐದು ತಿಂಗಳ ಹಿಂದೆ ಯುವಜನಾಂಗದಿಂದ ಕ್ರಾಂತಿ ನಡೆದು ಚುನಾಯಿತ ಸರಕಾರವು ಪದಚ್ಯುತಗೊಂಡಿತ್ತು. ಅಲ್ಲಿ ಮಾರ್ಚ್ 5ರಂದು ಚುನಾವಣೆ ನಡೆದು ಹೊಸ ಸರಕಾರವೊಂದು ಅಧಿಕಾರ ವಹಿಸಿಕೊಂಡಿತು. ಎರಡೂ ದೇಶಗಳಲ್ಲಿನ ಚುನಾವಣೆಗಳು ಶಾಂತಿಯುತವಾಗಿ ನಡೆದುದು ಹಾಗೂ ಮತದಾರರು ತಮ್ಮ ಸರಕಾರವನ್ನು ಆರಿಸುವಲ್ಲಿ ಪ್ರಬುದ್ಧತೆಯನ್ನು ಮೆರೆದುದು ಗಮನಾರ್ಹ ಅಂಶವಾಗಿದೆ.

ಬಾಂಗ್ಲಾ ಮತ್ತು ನೇಪಾಳ ಎರಡೂ ದೇಶಗಳಲ್ಲಿ ಹಿಂದಿನ ಆಡಳಿತದ ವಿರುದ್ಧ ಜನರು ದಂಗೆ ಎದ್ದಿದ್ದರು. ಬಾಂಗ್ಲಾದಲ್ಲಿ 2024ರ ಆಗಸ್ಟ್‌ನಲ್ಲಿ ಶೇಖ್ ಹಸೀನಾ ಸರಕಾರವನ್ನು ಉರುಳಿಸಲಾಗಿದ್ದರೆ, 2025ರ ಸೆಪ್ಟೆಂಬರ್‌ನಲ್ಲಿ ನೇಪಾಳದಲ್ಲಿ ಕೆ.ಪಿ. ಶರ್ಮಾ ಒಲಿ ಸರಕಾರವನ್ನು ಉರುಳಿಸಲಾಗಿತ್ತು. ಇವೆರಡು ದಂಗೆಗಳು ಶಾಂತಿಯುತವಾಗಿರಲಿಲ್ಲ. ಹಿಂಸಾತ್ಮಕ ಪ್ರತಿಭಟನೆಗಳು ನಡೆದಿದ್ದವು. ಬಾಂಗ್ಲಾದಲ್ಲಿ ನಡೆದ ಹಿಂಸೆಯಲ್ಲಂತೂ 850 ಜನರು ಸತ್ತಿರುವುದಾಗಿ ಅಲ್ಲಿನ ಆಡಳಿತ ತಿಳಿಸಿದೆ. ಆದರೆ ವಿಶ್ವಸಂಸ್ಥೆಯ ಮಾನವ ಹಕ್ಕುಗಳ ತನಿಖಾ ವರದಿ ಹೇಳುವ ಪ್ರಕಾರ ಸತ್ತವರ ಸಂಖ್ಯೆ 1400ಕ್ಕಿಂತ ಅಧಿಕ. ನೇಪಾಳದಲ್ಲಿ 76 ಮಂದಿ ಸತ್ತಿರುವುದಾಗಿ ಅಧಿಕೃತವಾಗಿ ಹೇಳಲಾಗಿತ್ತು. ಆದರೆ ಅಲ್ಲಿನ ಹಿಂಸಾಚಾರದಲ್ಲಿ ಅದಕ್ಕಿಂತ ಹೆಚ್ಚು ಮಂದಿ ಸತ್ತಿರುವ ಸಾಧ್ಯತೆಗಳಿವೆ.

ನೇಪಾಳ ಮತ್ತು ಬಾಂಗ್ಲಾ ಎರಡೂ ದೇಶಗಳಲ್ಲಿ ಹಠಾತ್ತನೆ ಹಿಂಸಾಚಾರ ಸ್ಫೋಟಗೊಂಡುದ್ದನ್ನು ಕಾಣುವಾಗ ಇದರ ಹಿಂದೆ ವಿದೇಶೀ ಕೈವಾಡದ ಸಂಚಿದೆ ಎಂಬ ಅನುಮಾನ ಮೂಡಿತ್ತು. ಆಡಳಿತ ಬದಲಾವಣೆಯ ಉದ್ದೇಶದಿಂದ ವಿದೇಶಿ ಶಕ್ತಿಗಳು ಈ ಹಿಂಸಾತ್ಮಕ ಪ್ರತಿಭಟನೆಗೆ ಕುಮ್ಮಕ್ಕು ನೀಡಿರಬೇಕೆಂದು ಆರೋಪ ಕೇಳಿಬಂದಿತ್ತು. ಇದೇವೇಳೆ ಇವೆರಡೂ ದೇಶಗಳಲ್ಲಿ ಜನರು ದಂಗೆ ಏಳಲು ಬೇಕಾದ ಪರಿಸ್ಥಿತಿಯೂ ಉಂಟಾಗಿತ್ತೆಂಬುದು ಸುಳ್ಳಲ್ಲ. ಎರಡೂ ದೇಶಗಳಲ್ಲಿ ಜನರ ಬವಣೆ ಹೆಚ್ಚಿತ್ತು. ಆಡಳಿತದಲ್ಲಿ ಭ್ರಷ್ಟಾಚಾರ ಮಿತಿಮೀರಿತ್ತು. ಇವನ್ನೆಲ್ಲಾ ಸಹಿಸಲಾಗದೆ ಜನರು ದಂಗೆ ಎದ್ದಿರುವುದೂ ಸಹಜವಾಗಿದೆ.

ದಂಗೆಯ ಬಳಿಕ ಬಾಂಗ್ಲಾ ದೇಶವು ಬಳಿಕ ಚುನಾಯಿತವಲ್ಲದ ಮಹಮ್ಮದ್ ಯೂನುಸ್ ಆಡಳಿತದ ಕೈವಶದಲ್ಲಿತ್ತು. ಆದರೆ ಈ ಮಧ್ಯಂತರ ಸರಕಾರದ ಆಡಳಿತ ಕೂಡಾ ಸಮಾಧಾನಕರವಾಗಿರಲಿಲ್ಲ, ಅಲ್ಲಿನ ಜನರಿಗೂ ಈ ಆಡಳಿತದ ಧೋರಣೆ ರೋಸಿಹೋಗಿತ್ತು. ಜತೆಗೇ ಭಾರತಕ್ಕೆ ಕೂಡಾ ಯೂನುಸ್ ಆಡಳಿತವು ಅಸಹನೀಯ ಪರಿಸ್ಥಿತಿಗಳನ್ನು ಸೃಷ್ಟಿಸಿತ್ತು. ಯೂನುಸ್ ಸರಕಾರವು ಭಾರತ ವಿರೋಧಿ ನಿಲುವನ್ನು ನಿರ್ಲಜ್ಜವಾಗಿ ಪ್ರದರ್ಶಿಸಿದ್ದರಿಂದ ಉಭಯ ದೇಶಗಳ ನಡುವಿನ ಸಂಬಂಧವು ಹಿಂದೆಂದೂ ಕಾಣದಷ್ಟು ಪ್ರಪಾತಕ್ಕೆ ಕುಸಿದಿತ್ತು.

ಬಾಂಗ್ಲಾ ಚುನಾವಣೆಗೆ ಸಿದ್ಧತೆ ನಡೆದಂತೆಯೇ ಹಿಂದಿನ ಸರಕಾರದ ಪದಚ್ಯುತಿಯಲ್ಲಿ ಪ್ರಮುಖಪಾತ್ರ ವಹಿಸಿದ್ದ ವಿದ್ಯಾರ್ಥಿಗಳ ಸಂಘಟನೆಗಳನ್ನು ಒಳಗೊಂಡ ನ್ಯಾಷನಲ್ ಸಿಟಿಜನ್ಸ್ ಪಾರ್ಟಿ ಮೂಲಭೂತವಾದಿ ಜಮಾತ್-ಇ-ಇಸ್ಲಾಮೀ ಪಕ್ಷದೊಂದಿಗೆ ಕೈಜೋಡಿಸಿತ್ತು. ಈ ಮೈತ್ರಿಕೂಟಕ್ಕೆ ಮಧ್ಯಂತರ ಸರಕಾರದ ಪರೋಕ್ಷ ಬೆಂಬಲವೂ ಇತ್ತು. ಹಾಗಾಗಿ ಜಮಾತ್-ಇ-ಇಸ್ಲಾಮೀ ಮತ್ತು ಎನ್‌ಸಿಪಿ ಮೈತ್ರಿಕೂಟವು ಚುನಾವಣೆಯಲ್ಲಿ ಗೆಲುವು ಸಾಧಿಸಬಹುದು ಎಂಬುದಾಗಿ ಎಲ್ಲರೂ ಭಾವಿಸಿದ್ದರು. ಚುನಾವಣೆ ಸಂದರ್ಭದಲ್ಲಿ ಕೂಡಾ ಭಾರೀ ಹಿಂಸಾಚಾರ ನಡೆಯಬಹುದೆಂದು ಭೀತಿ ಪಡಲಾಗಿತ್ತು.



ಆದರೆ ಬಾಂಗ್ಲಾದ ಮತದಾರರು ಬುದ್ಧಿವಂತಿಕೆ ಮತ್ತು ಪ್ರಬುದ್ಧತೆಯನ್ನು ಪ್ರದರ್ಶಿಸಿದರು. ಚುನಾವಣೆ ವೇಳೆ ಹಿಂಸಾಚಾರಕ್ಕೆ ಹೆಚ್ಚಿನ ಆಸ್ಪದ ನೀಡಲಿಲ್ಲ. ಮೂಲಭೂತವಾದಿ ಪಕ್ಷವನ್ನು ತ್ಯಜಿಸಿ ಬಾಂಗ್ಲಾದೇಶ್ ನ್ಯಾಷನಲ್ ಪಾರ್ಟಿ (ಬಿಎನ್‌ಪಿ)ಗೆ ಭಾರೀ ಬಹುಮತ ನೀಡಿದರು. ಅಧಿಕ ಜನಸಂಖ್ಯೆ ಹೊಂದಿರುವ ಬಾಂಗ್ಲಾದೇಶಕ್ಕೆ ಈ ಸಂಕೀರ್ಣ ಸಮಯದಲ್ಲಿ ಒಂದು ವಿಶ್ವಾಸಾರ್ಹ ಹಾಗೂ ಅನುಭವೀ ಸರಕಾರದ ಅಗತ್ಯವಿತ್ತು. ಜನರು ಈ ಕಾರಣದಿಂದಲೇ ತಾರೀಖ್ ರೆಹಮಾನ್ ನೇತೃತ್ವದ ಬಿಎನ್‌ಪಿಯನ್ನು ಅಧಿಕಾರಕ್ಕೆ ಏರಿಸಿದರು.

ಬಾಂಗ್ಲಾದಲ್ಲಿ ಹಲವು ರಾಜಕೀಯ ಸುಧಾರಣೆ ಮತ್ತು ಸಾಂವಿಧಾನಿಕ ಬದಲಾವಣೆಗೆ ಚುನಾವಣೆ ಸಂದರ್ಭದಲ್ಲಿಯೇ ಜನಮತ ಗಣನೆ ನಡೆದಿತ್ತು. ಈ ಸುಧಾರಣೆಗಳಿಗೆ ಬಾಂಗ್ಲಾ ಜನರು ಸಮ್ಮತಿ ಸೂಚಿಸಿದ್ದರು. ಅದನ್ನು ಅನುಷ್ಠಾನಕ್ಕೆ ತರುವುದು ಈಗ ಬಿಎನ್‌ಪಿ ಸರಕಾರದ ಆದ್ಯತೆಯಾಗಿದೆ. ಜನಮನತಗಣನೆಯಲ್ಲಿ ಪಾಲ್ಗೊಂಡ 87 ಮಿಲಿಯ ಮತದಾರರಲ್ಲಿ ಶೇ. 83ರಷ್ಟು ಮಂದಿ ಸಾಂವಿಧಾನಿಕ ಸುಧಾರಣೆಗಳಿಗೆ ಸಮ್ಮತಿ ಸೂಚಿಸಿದ್ದಾರೆ. ಪ್ರಧಾನಿಯ ಅಧಿಕಾರಾವಧಿಯನ್ನು ಎರಡು ಅವಧಿಗಳಿಗೆ ಸೀಮಿತಗೊಳಿಸುವುದು, ಸಂಸತ್ತಿನಲ್ಲಿ ಮತ್ತು ಸರಕಾರಿ ಹುದ್ದೆಗಳಲ್ಲಿ ಯುವಕರಿಗೆ ಶೇ. 5ರಷ್ಟು ಪ್ರಾತಿನಿಧ್ಯ ಕಲ್ಪಿಸುವುದು, ಸ್ವತಂತ್ರ ಭ್ರಷ್ಟಾಚಾರ ವಿರೋಧಿ ಮಂಡಳಿ ಸ್ಥಾಪಿಸುವುದು, ಅಲ್ಪಸಂಖ್ಯಾತರಿಗೆ ಸಮಾನ ಶಿಕ್ಷಣ ಮತ್ತು ಆರೋಗ್ಯದ ಹಕ್ಕು ಕಲ್ಪಿಸುವುದು ಮುಂತಾದವು ಈ ಸುಧಾರಣೆಗಳಲ್ಲಿ ಸೇರಿದೆ. ಯೂನುಸ್ ಆಡಳಿತವು ಸಂಪೂರ್ಣವಾಗಿ ಭಾರತ ವಿರೋಧಿ ನೀತಿಯನ್ನು ಅನುಸರಿಸಿದ್ದರೆ ನೂತನ ಪ್ರಧಾನಿ ರೆಹಮಾನ್ ಅವರು ಭಾರತದೊಂದಿಗಿನ ಸಂಬಂಧವನ್ನು ಸುಧಾರಿಸುವ ಇಂಗಿತ ವ್ಯಕ್ತಪಡಿಸಿರುವುದು ಸ್ವಾಗತಾರ್ಹ.

**ನೇಪಾಳದಲ್ಲಿ ಹೊಸ ಸರಕಾರ**

ನೇಪಾಳದಲ್ಲಿ ಜನರು ಹೊಸದಾದ ಪಕ್ಷವೊಂದನ್ನು ಅಧಿಕಾರಕ್ಕೆ ಏರಿಸಿದ್ದಾರೆ. ಕೆಲವೇ ವರ್ಷಗಳ ಹಿಂದೆ ಅಸ್ತಿತ್ವಕ್ಕೆ ಬಂದ ರಾಷ್ಟ್ರೀಯ ಸ್ವತಂತ್ರ ಪಾರ್ಟಿ (ಎನ್‌ಸಿಪಿ) ಭಾರೀ ಬಹುಮತ ಪಡೆದು ಅಧಿಕಾರಕ್ಕೆ ಏರಿದೆ. ಪತ್ರಕರ್ತನಾಗಿದ್ದುಕೊಂಡು ರಾಜಕಾರಣಿಯಾದ 50ರ ಹರೆಯದ ರವಿ ಲಮಿಚನೆ ಮತ್ತು 35ರ ಹರೆಯದ ರ್‍ಯಾಪ್ ಸಂಗೀತಗಾರ ಬಾಲೇಂದ್ರ ಷಾ ಈ ಪಕ್ಷವನ್ನು ಕಟ್ಟಿದವರು. ನೇಪಾಳದಲ್ಲಿ ಯುವ ಮತದಾರರು ಶೇ. 40ರಷ್ಟಿದ್ದು, ಅವರು ಹೊಸಬರನ್ನೇ ಆಡಳಿತಕ್ಕೆ ಏರಿಸುವ ಉತ್ಸಾಹ ತೋರಿದ್ದಾರೆ. ಬಾಲೇಂದ್ರ ಷಾ ನೇಪಾಳದ ಹೊಸ ಪ್ರಧಾನಿಯಾಗಿದ್ದಾರೆ. ಬಹುಕಾಲದಿಂದ ಅಸ್ತಿತ್ವದಲ್ಲಿದ್ದ ನೇಪಾಳಿ ಕಾಂಗ್ರೆಸ್ ಮತ್ತು ನೇಪಾಳಿ ಕಮ್ಯುನಿಸ್ಟ್ ಪಕ್ಷ ಮೊದಲಾದವು ಮೂಲೆಗುಂಪಾಗಿವೆ. ಈ ಎರಡು ಪಕ್ಷಗಳ ಪ್ರಮುಖ ಮುಖಂಡರನ್ನು ಕೂಡಾ ಜನರು ಮೂಲೆಗೆ ತಳ್ಳಿದ್ದಾರೆ.

1991ರಲ್ಲಿ ರಾಜಸತ್ತೆಯ ಬದಲಿಗೆ ನೇಪಾಳವು ಪ್ರಜಾಸತ್ತೆಯನ್ನು ಅಪ್ಪಿಕೊಂಡಿತ್ತು. ಆದರೆ ಅಲ್ಲಿಂದ ಬಳಿಕ ನೇಪಾಳದಲ್ಲಿ ಸ್ಥಿರ ಸರಕಾರವೊಂದು ರೂಪುಗೊಂಡಿರಲೇ ಇಲ್ಲ. 1990ರಿಂದ 2008ರ ಅವಧಿಯಲ್ಲಿ 16 ಪ್ರಧಾನಿಗಳು ಆಳಿದ್ದರು. 2008ರಲ್ಲಿ ರಾಜಸತ್ತೆಯನ್ನು ಸಂಪೂರ್ಣ ಅಳಿಸಿಹಾಕಲಾಯಿತು. ಅಲ್ಲಿಂದ ಬಳಿಕ ಕೂಡಾ 15 ಪ್ರಧಾನಿಗಳು ನೇಪಾಳವನ್ನು ಆಳಿದ್ದಾರೆ. 2008ರಿಂದಾರಂಭಿಸಿ ಕಳೆದ 4 ಚುನಾವಣೆಗಳಲ್ಲಿ ನೇಪಾಳದ ಜನರು ಯಾವ ಪಕ್ಷಕ್ಕೂ ಬಹುಮತ ನೀಡಿರಲಿಲ್ಲ, ಹಾಗಾಗಿ ಸರಕಾರಗಳು ಪದೇ ಪದೇ ಬದಲಾಗುತ್ತಿದ್ದವು. ಈ ಹಿನ್ನೆಲೆಯಲ್ಲಿ ಮೊನ್ನೆ ನಡೆದ ಚುನಾವಣೆ ನೇಪಾಳದ ಪ್ರಜಾತಾಂತ್ರಿಕ ಇತಿಹಾಸದಲ್ಲಿ ಮಹತ್ವದ ಬೆಳವಣಿಗೆಯಾಗಿದೆ. ಏಕಪಕ್ಷವು ಬಹುಮತ ಪಡೆಯಲು ಸಫಲವಾಗಿದೆ. ಇದರಿಂದಾಗಿ ಅಲ್ಲಿ ಸ್ಥಿರ ಸರಕಾರವೊಂದು ರೂಪುಗೊಳ್ಳುವ ಆಶಾವಾದ ಮೂಡಿದೆ.

"ಪ್ರಜಾಪ್ರಭುತ್ವ ಒಳ್ಳೆಯದು. ಬೇರೆವ್ಯವಸ್ಥೆಗಳು ಕೆಟ್ಟದಾಗಿರುವುದರಿಂದ ನಾನಿದನ್ನು ಹೇಳುತ್ತಿದ್ದೇನೆ'' ಎಂದು ನೆಹರೂ ಹಿಂದೊಮ್ಮೆ ಹೇಳಿದ್ದರು. ಯಾವುದೇ ಪ್ರಜಾಪ್ರಭುತ್ವವು ಪರಿಪೂರ್ಣವಲ್ಲ, ಯಾವುದೇ ಚುನಾವಣೆಯೂ ಸಂಪೂರ್ಣ ದೋಷಪೂರಿತವಲ್ಲ, ಆದರೆ ಭಾರತವು ಪ್ರಜಾತಂತ್ರವನ್ನು ಅನುಸರಿಸುವಲ್ಲಿ ಇತರ ದೇಶಗಳಿಗೆ ಯಾವಾಗಲೂ ಮಾದರಿಯಾಗಿದೆ. ಪಾಕಿಸ್ತಾನ ಹೊರತುಪಡಿಸಿದರೆ ಭಾರತದ ಉಳಿದೆಲ್ಲಾ ನೆರೆದೇಶಗಳು ಪ್ರಜಾಪ್ರಭುತ್ವವನ್ನು ಅನುಸರಿಸುತ್ತಿವೆ. ಪಾಕಿಸ್ತಾನದಲ್ಲಿ ಮಾತ್ರ ಹೆಸರಿಗೆ ಪ್ರಜಾಪ್ರಭುತ್ವ ಸರಕಾರವಿದ್ದರೂ ಆಡಳಿತದ ಹಿಡಿತ ಇರುವುದು ಸೇನೆಯಲ್ಲಿ. ಮೂರು ವರ್ಷಗಳ ಹಿಂದೆ ಮಾಲ್ದೀವ್ಸ್ ಮತ್ತು ಶ್ರೀಲಂಕಾಗಳಲ್ಲೂ ಶಾಂತಿಯುತ ಮತದಾನ ನಡೆದು ಆಡಳಿತ ಬದಲಾವಣೆ ಉಂಟಾಗಿತ್ತು. ಕಳೆದ ವರ್ಷ ಡಿಸೆಂಬರ್‌ನಲ್ಲಿ ಮ್ಯಾನ್ಮಾರ್‌ನಲ್ಲಿ ಕೂಡಾ ಸಂಸದೀಯ ಚುನಾವಣೆ ನಡೆದಿತ್ತು. ಹೊಸ ಸರಕಾರದಡಿಯಲ್ಲಿ ಇವೆಲ್ಲ ದೇಶಗಳು ಭಾರತದೊಂದಿಗೆ ಉತ್ತಮ ಸಂಬಂಧವನ್ನು ಹೊಂದಿವೆ.

ನೆರೆ ದೇಶಗಳ ಜನರೊಂದಿಗೆ ನಮ್ಮ ದೇಶದ ಜನರೂ ಕೂಡಾ ಉತ್ತಮ ಬಾಂಧವ್ಯವನ್ನು ಹೊಂದಿದ್ದಾರೆ. ಈ ಹಿನ್ನೆಲೆಯಲ್ಲಿ ಭಾರತ ಸರಕಾರವು ನೇಪಾಳ ಮತ್ತು ಬಾಂಗ್ಲಾದೇಶಗಳ ನೂತನ ಸರಕಾರಗಳೊಂದಿಗೆ ಉತ್ತಮ ಬಾಂಧವ್ಯ ಬೆಳೆಸಿಕೊಂಡು ದ್ವಿಪಕ್ಷೀಯ ಸಂಬಂಧವನ್ನು ಬೆಳೆಸಿಕೊಳ್ಳಬಹುದಾಗಿದೆ. ಕಳೆದೊಂದು ವರ್ಷದಿಂದ ಈ ದೇಶಗಳೊಂದಿಗೆ ಹದಗೆಟ್ಟ ಸಂಬಂಧವನ್ನು ಮತ್ತೆ ಸರಿದಾರಿಗೆ ತರಬಹುದಾಗಿದೆ. ಅಟಲ್‌ಬಿಹಾರಿ ವಾಜಪೇಯಿ ಹಿಂದೊಮ್ಮೆ ಹೇಳಿದ್ದರಲ್ಲವೆ "ನಾವು ನಮ್ಮ ಸ್ನೇಹಿತರನ್ನು ಬದಲಾಯಿಸಬಹುದು, ಆದರೆ ನೆರೆಕರೆಯನ್ನು ಬದಲಾಯಿಸಲಾಗುವುದಿಲ್ಲ''.

# 'ಆರ್ಡರ್ಲಿ' ಪದ್ಧತಿ ಇನ್ನೂ ರದ್ದುಗೊಂಡಿಲ್ಲವೆ?

**ಆರ್ಡರ್ಲಿ ವ್ಯವಸ್ಥೆ ರದ್ದುಗೊಂಡಿದೆ ಎಂದೇ ಭಾವಿಸಲಾಗಿತ್ತು. ಆದರೆ ಇನ್ನೂ ಇದೆ ಎಂಬುದು ಪೊಲೀಸ್ ವರಿಷ್ಠಾಧಿಕಾರಿಯ ಮಾತಿನಿಂದ ಸಾಬೀತಾಗಿದೆ.**

• ಹೊಸೂರು ರತ್ನಾಕರ ಶೆಟ್ಟಿ

ಜನಸಾಮಾನ್ಯರ ನೆನಪು ಮಾಸುವುದು ಬಹು ಬೇಗ. ಕಹಿ ನೆನಪುಗಳಾಗಲಿ, ಸಮಾಜವೇ ತಲೆ ತಗ್ಗಿಸುವ ಘಟನೆಗಳಾಗಲಿ ಮುನ್ನೆಲೆಗೆ ಬಂದಾಗ ಆಂದೋಲನೆಯೇ ನಡೆದು, ತದನಂತರ ಸರ್ಕಾರದ ಕ್ರಮ/ಭರವಸೆಯ ನಂತರ ಎಲ್ಲವೂ ಸರಿಹೋಯಿತೆಂದು ಮುನ್ನಡೆಯುವ ಜನರು ಕ್ರಮೇಣ ಅಂತಹ ಘಟನಾವಳಿಗಳನ್ನೆ ಮರೆತು ಬಿಡುತ್ತಾರೆ. ಆದರೆ ವಾಸ್ತವವಾಗಿ ಅಂತಹ ಅನಿಷ್ಟ ಪದ್ಧತಿಗಳು ತೆರೆಯ ಮರೆಯಲ್ಲಿ ಅವ್ಯಾಹತವಾಗಿ ನಡೆಯುತ್ತಿರುವುದು ಮತ್ತೆ ಮುಖ್ಯವಾಹಿನಿಯಲ್ಲಿ ಸದ್ದು ಮಾಡಿದಾಗ ಬೆಚ್ಚಿಬೀಳುವ ಸರದಿ ಅದೇ ಜನಸಾಮಾನ್ಯರದ್ದು. ನಮ್ಮ ಪೊಲೀಸ್ ವ್ಯವಸ್ಥೆಯಲ್ಲಿ ಅನಾದಿಕಾಲದಿಂದಲೂ ಅನುಸರಿಸಿಕೊಂಡು ಬಂದ 'ಆರ್ಡರ್ಲಿ' (ಮನೆಗೆಲಸದ ಸಿಪಾಯಿಗಳು) ವ್ಯವಸ್ಥೆ ಇನ್ನೂ ಮುಂದುವರಿಯುತ್ತಿದೆ.

ಪೊಲೀಸ್ ವ್ಯವಸ್ಥೆಯ ಕೆಳಹಂತದಲ್ಲಿ ಕೆಲಸಮಾಡುವ ನೌಕರರನ್ನು ಉನ್ನತ ಪೊಲೀಸ್ ಅಧಿಕಾರಿಗಳ ಮನೆಯಲ್ಲಿ ಕೆಲಸ ಮಾಡಲು ಬಳಸಿಕೊಳ್ಳುತ್ತಿರುವುದು ಎಲ್ಲರೂ ಸಮಾನರು ಎನ್ನುವ ಪ್ರಜಾಪ್ರಭುತ್ವ ವ್ಯವಸ್ಥೆಯ ಅಣಕವೇ ಸರಿ. ಶತಮಾನಗಳ ಕಾಲ ನಮ್ಮನ್ನಾಳಿದ ಆಂಗ್ಲರಿಂದ ಬಳುವಳಿ ಪಡೆದ ಹಲವು ಅನಿಷ್ಟ ಪದ್ಧತಿಗಳಲ್ಲಿ ಇದೂ ಒಂದು. ಆದರೆ ಸ್ವಾತಂತ್ರ್ಯದ ಅಮೃತೋತ್ಸವ ದಾಟಿರುವ ಈ ಹಂತದಲ್ಲೂ ಈ ಪದ್ಧತಿ ಇನ್ನೂ ಇರುವುದು ದುರದೃಷ್ಟಕರ. ಕೆಚ್ಚೆದೆಯ, ಸ್ವಾಭಿಮಾನಿಗಳಾದ ಚಂದ್ರಶೇಖರ ಆಜಾದ್, ಭಗತ್ ಸಿಂಗ್, ಸುಭಾಷ್ ಚಂದ್ರ ಬೋಸ್‌ರಂತವರ ಪರಂಪರೆ ಹೊಂದಿರುವ ನಮ್ಮ ಯುವಜನತೆ ಒಂದಿಷ್ಟೂ ಪ್ರತಿಭಟನೆ ತೋರದೆ, ಹೀನಾಯ ವ್ಯವಸ್ಥೆಗೆ ಒಗ್ಗಿಕೊಳ್ಳುತ್ತಿರುವುದು ಮಾತ್ರ ವಿಪರ್ಯಾಸವೇ ಸರಿ.

ದೇಶದ ಕಾನೂನು ಪರಿಸ್ಥಿತಿ ಸುಸ್ಥಿತಿಯಲ್ಲಿರಲು ಸದಾ ಜಾಗರೂಕರಾಗಿರುವ ಕ್ರಿಯಾಶೀಲ ಪೊಲೀಸ್ ವ್ಯವಸ್ಥೆ ಅತ್ಯವಶ್ಯಕ. ಈನಿಟ್ಟಿನಲ್ಲಿ ಎಲ್ಲಾ ಚುನಾಯಿತ ಸರ್ಕಾರದ ಪ್ರಥಮ ಆದ್ಯತೆ ಸಮರ್ಪಕ ಕಾನೂನು ಪರಿಪಾಲನೆಯೇ ಆಗಿರುತ್ತದೆ. ಇದಕ್ಕಾಗಿ ಸರ್ಕಾರವು ಪೊಲೀಸ್ ವ್ಯವಸ್ಥೆಯನ್ನು ಕಾಲಕಾಲಕ್ಕೆ ಆಧುನಿಕಗೊಳಿಸುವುದರ ಜೊತೆಗೆ ಕ್ರಿಯಾಶೀಲತೆಯನ್ನು ಮೈಗೂಡಿಸಿಕೊಂಡು ಪಾರದರ್ಶಕವಾಗಿ ಕಾರ್ಯನಿರ್ವಹಿಸುವತ್ತ ಶ್ರಮಪಡುತ್ತಿದೆ. ಕೆಲವೊಮ್ಮೆ ಪೊಲೀಸ್ ಸಿಬ್ಬಂದಿಗಳ ಕೊರತೆಯಿಂದ ಕಾನೂನು ಸುವ್ಯವಸ್ಥೆ ಕಾಪಾಡಲು ಹರಸಾಹಸ ಪಡುತ್ತಿರುವುದನ್ನು ಕೂಡಾ ನಾವು ಆಗಾಗ ನೋಡುತ್ತಲೇ ಇದ್ದೇವೆ. ಇಂತಹ ಸಂದಿಗ್ಧ ಸ್ಥಿತಿಯಲ್ಲಿ ಕಾನೂನುಬದ್ಧವಾಗಿ ಪೊಲೀಸ್ ಇಲಾಖೆಗೆ ನೇಮಕಗೊಂಡು, ತಿಂಗಳುಗಳ ಕಾಲ ಕಠಿಣ ತರಬೇತಿ ಪಡೆದ ಸಿಬ್ಬಂದಿಗಳ ಸೇವೆಯನ್ನು ಅಧಿಕಾರಿಗಳು ತಮ್ಮ ಮನೆಕೆಲಸಗಳಿಗೆ ಬಳಸಿಕೊಳ್ಳುತ್ತಿರುವುದು ಎಷ್ಟು ಸರಿ? ತರಬೇತಿ ಪಡೆದ ಸಿಬ್ಬಂದಿಗಳ ಸೇವೆಯು ಸದಾ ದೇಶಕ್ಕಾಗಿ ಮುಡುಪಿರಲಿ ಎನ್ನುವ ಉದಾತ್ತ ಮನೋಭಾವವುಳ್ಳ ಪೊಲೀಸ್ ಉನ್ನತಾಧಿಕಾರಿಗಳ ಕೊರತೆ ಇದೆಯೆ ?

ಈ 'ಆರ್ಡರ್ಲಿ' ವ್ಯವಸ್ಥೆಯ ಬಗ್ಗೆ ದಶಕಗಳ ಹಿಂದೆಯೇ ಪ್ರತಿಭಟನೆ ನಡೆದಿತ್ತು. ಪ್ರತಿಭಟನೆಯ ಕಾವು ತೀವ್ರಗೊಂಡ ಬಳಿಕ ಇಂತಹ ಅನಿಷ್ಟ ಪದ್ಧತಿಗೆ ಅಂತ್ಯ ಹಾಡುವುದಾಗಿ ಸರ್ಕಾರ ಆಶ್ವಾಸನೆ ನೀಡಿತ್ತು. ಅದರ ನಂತರ ಎಲ್ಲವೂ ಸರಿಹೋಯಿತೆಂದು ಎಲ್ಲರು ತಿಳಿದಿದ್ದರು. ಆದರೆ ಇತ್ತೀಚೆಗೆ ಪೊಲೀಸ್ ಇಲಾಖೆಯ ಮಹಾನಿರ್ದೇಶಕ (ಡಿ.ಜಿ.ಪಿ) ಎಮ್.ಎ.ಸಲೀಮ್‌ರವರು ಹೊರಡಿಸಿದ ಆದೇಶದಲ್ಲಿ ರಾಜ್ಯದಲ್ಲಿರುವ ಸುಮಾರು ಮೂರು ಸಾವಿರ 'ಆರ್ಡರ್ಲಿ'ಗಳ ಸೇವೆಗಳನ್ನು ರದ್ದು ಪಡಿಸಿರುವುದಾಗಿ ಘೋಷಿಸಿರುವುದನ್ನು ಜನರು ಆಶ್ಚರ್ಯಚಕಿತರಾಗಿದ್ದಾರೆ. ದಶಕಗಳ ಹಿಂದೆಯೇ ಈ ಅನಿಷ್ಟ ಪದ್ಧತಿಗೆ ಅಂತ್ಯ ಹಾಡುವುದಾಗಿ ಸರ್ಕಾರ ಘೋಷಿಸಿದ್ದರೂ, ಮದ್ರಾಸ್ ಹೈಕೋರ್ಟ್ ಇದನ್ನು ಅನಾದಿಕಾಲದ ಜೀತ ಪದ್ಧತಿ ಎಂದು ಜರೆದಿದ್ದರೂ ಈ ಪದ್ಧತಿ ಇನ್ನೂ ಚಾಲನೆಯಲ್ಲಿರುವುದು ದಿಟವೆಂದು ಸಾಬೀತಾಗಿದೆ. ಇದು ಹಲವು ಪ್ರಶ್ನೆಗಳಿಗೆ ಎಡೆಮಾಡಿಕೊಡುತ್ತಿದೆ.

ಪ್ರತಿ ತಿಂಗಳು ಸರ್ಕಾರದಿಂದ ಸಂಬಳ ಪಡೆದು, ತನ್ನ ಉಪಯುಕ್ತ ಸೇವೆಯನ್ನು ಮರೆತು, ಮೇಲಧಿಕಾರಿಗಳ ಮನೆಯಲ್ಲಿ ಬಿಟ್ಟಿಕೆಲಸ ಮಾಡುತ್ತಿರುವ ಪೊಲೀಸ್ ಸಿಬ್ಬಂದಿಗಳನ್ನು ಗುರುತಿಸುವುದೇಕೆ ಸರಕಾರಕ್ಕೆ ಸಾಧ್ಯವಾಗಿಲ್ಲ? ಇದರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಿಲ್ಲವೇಕೆ? ನಿಯಮಾವಳಿಗಳನ್ನು ರೂಪಿಸುವ ಉನ್ನತಾಧಿಕಾರಿಗಳೇ ಈ ಅನಿಷ್ಟ ಪದ್ಧತಿಗೆ ಸಮರ್ಥನೆ ನೀಡುತ್ತಿದ್ದಾರೆ ಎನ್ನುವ ಅನುಮಾನ ಎಲ್ಲರನ್ನು ಕಾಡುತ್ತಿದೆ. ಉನ್ನತಾಧಿಕಾರಿಗಳೇ ಸ್ವಯಂಪ್ರೇರಿತರಾಗಿ ತಮ್ಮ ಅಡಿಯಾಳಾಗಿ ದುಡಿಯುತ್ತಿರುವ ಸಿಬ್ಬಂದಿಗಳನ್ನು ಬಿಡುಗಡೆಗೊಳಿಸಬಹುದು. ಆ ಮೂಲಕ ಸಿಬ್ಬಂದಿಗಳು ಇಲಾಖೆಯ ಮುಖ್ಯವಾಹಿನಿಗೆ ಬಂದು ಸಿಬ್ಬಂದಿಗಳ ಕೊರತೆಯಿಂದ ಹೆಣಗಾಡುವ ವ್ಯವಸ್ಥೆಯನ್ನು ತುಸು ತಿಳಿಗೊಳಿಸುವಂತೆ ಮಾಡಬಹುದು.

ಪ್ರಸ್ತುತ ಕರ್ನಾಟಕದಲ್ಲಿರುವ ಹಲವಾರು ಸಮಸ್ಯೆಗಳು ವೈರುಧ್ಯಗಳಿಂದ ಕೂಡಿದ್ದು ಹರಿತವಾದ ಕತ್ತಿಯ ಉಭಯ ತುದಿಗಳಂತೆ ಯಾವ ಕಡೆ ವಾಲಿದರೂ ಹಾನಿಯು ನಿಶ್ಚಿತವೆನ್ನುವಂತಿದೆ. ಉದಾಹರಣೆಗೆ ಜಾತಿ ಒಳ ಮೀಸಲಾತಿ ಜಾರಿ ಮಾಡಿದರೆ ಒಂದು ವರ್ಗಕ್ಕೆ ಅನ್ಯಾಯವಾದರೆ, ಜಾರಿ ಮಾಡದಿದ್ದರೆ ಮತ್ತೊಂದು ವರ್ಗಕ್ಕೆ ಅನ್ಯಾಯವಾಗಲಿದೆ. ಆದರೆ ಆರ್ಡರ್ಲಿ ಪದ್ಧತಿಯನ್ನು ನಿರ್ಮೂಲನೆ ಮಾಡುವುದರಿಂದ ಕೇವಲ ಕೆಲವೇ ಮೇಲಾಧಿಕಾರಿಗಳಿಗೆ ಅಸಮಾಧಾನವಾಗಬಹುದೇ ಹೊರತು ಪೊಲೀಸ್ ಇಲಾಖೆ ಹಾಗೂ ಸಮಾಜದ ಮೇಲೆ ಸಕಾರಾತ್ಮಕ ಪರಿಣಾಮ ಬೀರಲಿದೆ.

ಪೊಲೀಸ್ ಇಲಾಖೆಯ ಹೊಣೆ ಹೊತ್ತಿರುವ ಗೃಹಮಂತ್ರಿಗಳು ಮನಸ್ಸು ಮಾಡಿದರೆ ಕೆಲವೇ ಗಂಟೆಗಳಲ್ಲಿ ಈ ಅನಿಷ್ಟ ಪದ್ಧತಿಗೆ ಅಂತಿಮ ಹಾಡಬಹುದು. ಅಂತಹ ಎದೆಗಾರಿಕೆಯ ನಿರ್ಧಾರ ಹೊರಬೀಳಲಿ ಎನ್ನುವುದೇ ಬಹುಜನರ ಆಶಯ ಕೂಡಾ. 'ಆರ್ಡರ್ಲಿ' ವ್ಯವಸ್ಥೆಯಲ್ಲಿ ಸುಮಾರು ಮೂರು ಸಾವಿರ ಸಿಬ್ಬಂದಿಗಳಿದ್ದು, ಇವರ ವಾರ್ಷಿಕ ವೆಚ್ಚ 78 ಕೋಟಿ ರೂಪಾಯಿಯನ್ನು ಆರ್ಥಿಕ ಹೊರೆಯಿಂದ ಬಸವಳಿದ ಕರ್ನಾಟಕ ಸರ್ಕಾರವೇ ಭರಿಸಬೇಕಾಗಿರುವುದು ಅನಿವಾರ್ಯವಾಗಿದೆ. ಹಾಗಾಗಿ ಕರ್ನಾಟಕ ಸರ್ಕಾರ ಈ ನಿಟ್ಟಿನಲ್ಲಿ ತುರ್ತಾಗಿ ಅಗತ್ಯ ಕ್ರಮ ಕೈಗೊಳ್ಳಬೇಕಾಗಿದೆ.



# ಪರಿಹಾರ ಪ್ರತೀಕಾರ ಪ್ರತಿಜ್ಞೆ

## ಮಧ್ಯಪ್ರಾಚ್ಯ ಸಂಘರ್ಷ; ಕದನ ವಿರಾಮ ಪ್ರಸ್ತಾಪ ತಿರಸ್ಕರಿಸಿದ ಇರಾನ್ ಸರ್ವೋಚ್ಚ ನಾಯಕ ಮೊಜ್ತಬಾ

**• ಟೆಹ್ರಾನ್:** ಇರಾನ್‌ನ ಸರ್ವೋಚ್ಚ ನಾಯಕ ಮೊಜ್ತಬಾ ಖಮೇನಿ ಮಧ್ಯಸ್ಥಿಕೆ ರಾಷ್ಟ್ರಗಳ ಕದನ ವಿರಾಮ ಪ್ರಸ್ತಾಪಗಳನ್ನು ತಿರಸ್ಕರಿಸಿದ್ದಾರೆ. ಅಮೆರಿಕ ಮತ್ತು ಇಸ್ರೇಲ್‌ನಿಂದ ಪರಿಹಾರ ಪಡೆಯುವುದು ಅಥವಾ ಅವುಗಳ ಆಸ್ತಿ ನಾಶಪಡಿಸುವ ಇರಾನ್‌ನ ಗುರಿಯನ್ನು ಅವರು ಪುನರುಚ್ಚರಿಸಿದ್ದಾರೆ.

ಎರಡು ಮಧ್ಯಸ್ಥಿಕೆ ರಾಷ್ಟ್ರಗಳ ಮೂಲಕ ರವಾನಿಸಲಾದ ಕದನ ವಿರಾಮ ಮತ್ತು ಉದ್ವಿಗ್ನತೆ ಶಮನದ ಪ್ರಸ್ತಾಪಗಳನ್ನು ಮಂಗಳವಾರ ಅಧಿಕೃತವಾಗಿ ತಿರಸ್ಕರಿಸಲಾಗಿದೆ. ಇರಾನ್‌ನ ಹಿರಿಯ ಅಧಿಕಾರಿಯೊಬ್ಬರ ಪ್ರಕಾರ, ಖಮೇನಿ ತಮ್ಮ ಮೊದಲ ವಿದೇಶಾಂಗ ನೀತಿ ಅಧಿವೇಶನದಲ್ಲಿ ಪ್ರತೀಕಾರಕ್ಕೆ ಸಂಬಂಧಿಸಿದಂತೆ ಅತ್ಯಂತ ಕಠಿಣ ಮತ್ತು ಗಂಭೀರ ನಿಲುವನ್ನು ವ್ಯಕ್ತಪಡಿಸಿದ್ದಾರೆ. ನೇಮಕಗೊಂಡ ನಂತರ ಹೊರಡಿಸಿದ ಮೊದಲ ಹೇಳಿಕೆಯಲ್ಲಿ, ಇರಾನ್ ಎಂದಿಗೂ ಹಿಂದೆ ಸರಿಯುವುದಿಲ್ಲ ಮತ್ತು ಯುದ್ಧದಲ್ಲಿ ಹತರಾದವರ ಸೇಡು ತೀರಿಸಿಕೊಳ್ಳಲು ಸಂಪೂರ್ಣ ಶಕ್ತಿಯೊಂದಿಗೆ ಪ್ರತಿರೋಧ ಒಡ್ಡಲಿದೆ ಎಂದು ಅವರು ಪ್ರತಿಜ್ಞೆ ಮಾಡಿದ್ದಾರೆ.

ದಿವಂಗತ ಅಯತೊಲ್ಲಾ ಅಲಿ ಖಮೇನಿ ಸೇರಿದಂತೆ ಯುದ್ಧದಲ್ಲಿ ಮಡಿದ ಪ್ರತಿಯೊಬ್ಬ ನಾಗರಿಕನಿಗಾಗಿ ಪರಿಹಾರ ಪಡೆಯುವುದು ಪ್ರಾಥಮಿಕ ನೀತಿಯಾಗಿ ಘೋಷಿಸಲಾಗಿದೆ. ಪರಿಹಾರ ನೀಡಲು ನಿರಾಕರಿಸಿದರೆ, ಇರಾನ್ ಶತ್ರು ರಾಷ್ಟ್ರಗಳ ಆಸ್ತಿಗಳನ್ನು ವಶಪಡಿಸಿಕೊಳ್ಳಲಿದೆ ಅಥವಾ ಅದೇ ಪ್ರಮಾಣದಲ್ಲಿ ನಾಶಪಡಿಸಲಿದೆ ಎಂದು ಸರ್ವೋಚ್ಚ ನಾಯಕ ಹೇಳಿದ್ದಾರೆ. ಕೆಲವು ಪ್ರತೀಕಾರ ಕ್ರಮಗಳು ಈಗಾಗಲೇ ಜಾರಿಯಾಗಿದ್ದರೂ, ಸೇಡು ತೀರಿಸಿಕೊಳ್ಳುವ ಆದೇಶ ಇನ್ನೂ ಪೂರ್ಣಗೊಂಡಿಲ್ಲ, ಇದು ಪ್ರಮುಖ ಗುರಿಯಾಗಿ ಮುಂದುವರಿಯಲಿದೆ ಎಂದು ಆಡಳಿತ ಮಂಡಳಿ ತಿಳಿಸಿದೆ.

### ರಷ್ಯಾಗೆ ಹಾರಿದ ಮೊಜ್ತಬಾ?

ಫೆಬ್ರವರಿ 28 ರಂದು ನಡೆದ ವೈಮಾನಿಕ ದಾಳಿಯಲ್ಲಿ ತಂದೆಯ ಮರಣದ ನಂತರ, ಸರ್ವೋಚ್ಚ ನಾಯಕನ ಆರೋಗ್ಯದ ಬಗ್ಗೆ ವರದಿಗಳು ಹೊರಬಂದಿವೆ. 56 ವರ್ಷದ ಧರ್ಮಗುರು ತೀವ್ರವಾಗಿ ಗಾಯಗೊಂಡಿದ್ದು, ರಷ್ಯಾ ಮಿಲಿಟರಿ ವಿಮಾನದ ಮೂಲಕ ವೈದ್ಯಕೀಯ ಚಿಕಿತ್ಸೆಗಾಗಿ ಮಾಸ್ಕೋಗೆ ವರ್ಗಾಯಿಸಲಾಗಿದೆ ಎಂದು ಕುವೈತ್‌ನ ಅಲ್-ಜರಿದಾ ಪತ್ರಿಕೆ ವರದಿ ಮಾಡಿದೆ. ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ವೈಯಕ್ತಿಕ ಪ್ರಸ್ತಾಪದ ಮೇರೆಗೆ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಲಾಗುತ್ತಿದೆ. ಆದರೆ, ಕ್ರೆಮ್ಲಿನ್ ವಕ್ತಾರ ಡಿಮಿಟ್ರಿ ಪೆಸ್ಕೋವ್, ಈ ವರದಿಗಳನ್ನು ದೃಢಪಡಿಸಿಲ್ಲ, ಆದರೆ ನಿರಾಕರಿಸಿಯೂ ಇಲ್ಲ. ಉಕ್ರೇನ್ ಯುದ್ಧದ ನಂತರ ರಷ್ಯಾ ಮತ್ತು ಇರಾನ್ ನಡುವೆ ಮಿಲಿಟರಿ ಸಹಕಾರ ಹೆಚ್ಚಾಗಿದ್ದು, ಈಗಿನ ಪರಿಸ್ಥಿತಿಯಲ್ಲಿ ಇದು ಪಾಶ್ಚಿಮಾತ್ಯ ದೇಶಗಳಿಗೆ ತಲೆನೋವಾಗಿ ಪರಿಣಮಿಸಿದೆ.



### ಬಾಗ್ದಾದ್‌ನಲ್ಲಿನ ಅಮೆರಿಕ ರಾಯಭಾರ ಕಚೇರಿ ಮೇಲೆ ದಾಳಿ

ಬಾಗ್ದಾದ್‌ನಲ್ಲಿನ ಅಮೆರಿಕ ರಾಯಭಾರ ಕಚೇರಿ ಪ್ರದೇಶವನ್ನು ಗುರಿಯಾಗಿಸಿಕೊಂಡು ಅನೇಕ ಡ್ರೋನ್ ಮತ್ತು ಕ್ಷಿಪಣಿಗಳ ದಾಳಿ ನಡೆದಿದೆ. ದಾಳಿ ನಡೆದ ಕೂಡಲೇ ಸ್ಫೋಟಗಳ ಶಬ್ದಗಳು ಕೇಳಿಬಂದಿದ್ದು, ಕಚೇರಿ ಆವರಣದ ಸುತ್ತಮುತ್ತ ದಟ್ಟ ಹೊಗೆ ಆವರಿಸಿಕೊಂಡಿದೆ. ಕನಿಷ್ಠ ಮೂರು ಡ್ರೋನ್‌ಗಳು ರಾಯಭಾರ ಕಚೇರಿಯನ್ನು ಗುರಿಯಾಗಿಸಿ ದಾಳಿ ನಡೆಸಲಾಗಿದೆ. ಸಿ-ರಾಮ್ ವಾಯು ರಕ್ಷಣಾ ವ್ಯವಸ್ಥೆಯು ಅದರಲ್ಲಿ ಎರಡನ್ನು ಹೊಡೆದುರುಳಿಸಿದರೆ, ಮೂರನೆಯದು ರಾಯಭಾರ ಕಚೇರಿಯ ಆವರಣದೊಳಗೆ ಅಪ್ಪಳಿಸಿತು, ಇದರಿಂದ ಬೆಂಕಿ ಮತ್ತು ಹೊಗೆ ಕಾಣಿಸಿಕೊಂಡಿದೆ.

### ಜಾಗತಿಕ ಆರ್ಥಿಕತೆಗೆ ಆತಂಕ

ಹಾರ್ಮುಜ್ ಜಲಸಂಧಿಯ ಪ್ರಾಯೋಗಿಕ ಮುಚ್ಚುವಿಕೆ ಜಾಗತಿಕ ಆರ್ಥಿಕತೆಯನ್ನು ಆತಂಕಗೊಳಿಸಿದೆ. ಇದರಿಂದ ಇಂಧನದ ಬೆಲೆಗಳು ಏರಿಕೆ ಕಾಣುತ್ತಿವೆ, ಬಡ ದೇಶಗಳಲ್ಲಿ ಆಹಾರ ಕೊರತೆ ಉಂಟಾಗುವ ಭೀತಿ ಇದೆ, ದುರ್ಬಲ ರಾಷ್ಟ್ರಗಳು ಅಸ್ಥಿರಗೊಳ್ಳುತ್ತಿವೆ ಮತ್ತು ಗ್ರಾಹಕರಿಗೆ ಬೆಲೆಗಳನ್ನು ಕಡಿಮೆ ಮಾಡುವ ಕೇಂದ್ರ ಬ್ಯಾಂಕ್‌ಗಳ ಪ್ರಯತ್ನಗಳನ್ನು ಸಂಕೀರ್ಣಗೊಳಿಸುತ್ತಿದೆ. ಕೆಲವು ಹಡಗುಗಳು ಮಾತ್ರ ಜಲಸಂಧಿಯನ್ನು ದಾಟುತ್ತಿವೆ. ಮುಖ್ಯವಾಗಿ ಇರಾನ್‌ನವು, ಹಾಗೆಯೇ ಭಾರತ ಮತ್ತು ಟರ್ಕಿಯಂತಹ ಇತರ ದೇಶಗಳ ಹಡಗುಗಳೂ ಸೇರಿವೆ. ಇರಾನ್ ಇದನ್ನು ತಾಂತ್ರಿಕವಾಗಿ ತೆರೆದಿಟ್ಟಿದ್ದೇವೆ ಎಂದು ಹೇಳಿದರೂ, ಅಮೆರಿಕ, ಇಸ್ರೇಲ್ ಮತ್ತು ಅವರ ಮೈತ್ರಿಕೂಟದ ರಾಷ್ಟ್ರಗಳಿಗೆ ಮಾತ್ರ ಅವಕಾಶ ಇಲ್ಲ ಎಂದು ಹೇಳಿದೆ. ಇರಾಕ್ ತನ್ನ ಹಡಗುಗಳಿಗೆ ಮಾರ್ಗ ಒದಗಿಸುವ ಕುರಿತು ಇರಾನ್ ಜತೆ ಮಾತುಕತೆ ನಡೆಸುತ್ತಿದೆ ಎಂದು ಮಂಗಳವಾರ ತಿಳಿಸಿದೆ.


## ಟ್ರಂಪ್‌ಗೆ ಮತ್ತೊಂದು ಮುಖಭಂಗ

ಮಧ್ಯಪ್ರಾಚ್ಯ ಯುದ್ಧದ ಭೀಕರತೆ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ಈ ಮಧ್ಯೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಕರೆಗೆ ಮಿತ್ರಪಕ್ಷಗಳು ಓಗೊಡದೆ ಅಮೆರಿಕ ನಗೆಪಾಟಲಿಗೀಡಾಗಿದೆ. ಈ ಬೆನ್ನಲ್ಲೇ ಇರಾನ್ ಮೇಲಿನ ದಾಳಿ ವಿರೋಧಿಸಿ ಅಮೆರಿಕ ರಾಷ್ಟ್ರೀಯ ಭಯೋತ್ಪಾದನಾ ನಿಗ್ರಹ ಕೇಂದ್ರದ ನಿರ್ದೇಶಕ ಜೋ ಕೆಂಟ್ ಅವರು ಮಂಗಳವಾರ ರಾಜೀನಾಮೆ ಘೋಷಿಸಿದ್ದಾರೆ.

**ಅಮೆರಿಕ ಉಗ್ರ ನಿಗ್ರಹ ಕೇಂದ್ರದ ನಿರ್ದೇಶಕ ರಾಜೀನಾಮೆ**



ಇರಾನ್ ಯುದ್ಧವನ್ನು ವಿರೋಧಿಸಿ ರಾಜೀನಾಮೆ ನೀಡಿದ ಮೊದಲ ಮತ್ತು ಅತ್ಯಂತ ಹಿರಿಯ ಟ್ರಂಪ್ ಆಡಳಿತದ ಅಧಿಕಾರಿಯಾಗಿದ್ದಾರೆ. ಫೆ.28 ರಂದು ಅಮೆರಿಕ-ಇಸ್ರೇಲ್ ನೇತೃತ್ವದ ವಾಯುದಾಳಿಯಿಂದ ಭುಗಿಲೆದ್ದ ಇರಾನ್‌ನಲ್ಲಿನ ಯುದ್ಧವನ್ನು ತಾನು ಇನ್ನು ಮುಂದೆ ಬೆಂಬಲಿಸಲು ಸಾಧ್ಯವಿಲ್ಲ ಎಂದು ಕೆಂಟ್ ಎಕ್ಸ್‌ನಲ್ಲಿನ ಪೋಸ್ಟ್‌ನಲ್ಲಿ ಹೇಳಿದರು. ಬಹಳ ಚಿಂತನೆಯ ನಂತರ, ನಾನು ಇಂದು ಜಾರಿಗೆ ಬರುವಂತೆ ರಾಷ್ಟ್ರೀಯ ಭಯೋತ್ಪಾದನಾ ನಿಗ್ರಹ ಕೇಂದ್ರದ ನಿರ್ದೇಶಕ ಹುದ್ದೆಗೆ ರಾಜೀನಾಮೆ ನೀಡಲು ನಿರ್ಧರಿಸಿದ್ದೇನೆ. ಇರಾನ್‌ನಲ್ಲಿ ನಡೆಯುತ್ತಿರುವ ಯುದ್ಧವನ್ನು ನನ್ನ ಆತ್ಮಸಾಕ್ಷಿಯಿಂದ ಬೆಂಬಲಿಸಲು ಸಾಧ್ಯವಿಲ್ಲ ಎಂದು ಅವರು ಬರೆದಿದ್ದಾರೆ.



## ಇಸ್ರೇಲ್ ದಾಳಿ: ಇರಾನ್ ಭದ್ರತಾ ಮುಖ್ಯಸ್ಥ ಹತ!

**• ಜೆರುಸಲೇಂ:** ಇಸ್ರೇಲ್ ಮಿಲಿಟರಿ ನಡೆಸಿದ ರಾತ್ರಿವೇಳೆಯ ನಿಖರ ದಾಳಿಯಲ್ಲಿ ಇರಾನ್‌ನ ಭದ್ರತಾ ಮುಖ್ಯಸ್ಥ ಅಲಿ ಲಾರಿಜಾನಿ ಹತರಾಗಿದ್ದಾರೆ ಎಂದು ಇಸ್ರೇಲ್ ರಕ್ಷಣಾ ಸಚಿವ ಇಸ್ರೇಲ್ ಕಾಟ್ಜ್ ಹೇಳಿದ್ದಾರೆ. ಇರಾನ್‌ನ ಸುಪ್ರೀಂ ನ್ಯಾಷನಲ್ ಸೆಕ್ಯೂರಿಟಿ ಕೌನ್ಸಿಲ್‌ನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿರುವ ಲಾರಿಜಾನಿ ಮತ್ತು ಬಸಿಜ್ ಪ್ರತಿರೋಧ ಪಡೆಯ ಮುಖ್ಯಸ್ಥ ಗುಲಾಮ್ ರೆಜಾ ಸುಲೈಮಾನಿ ಅವರನ್ನು ಗುರಿಯಾಗಿಸಿಕೊಂಡು ಈ ದಾಳಿಗಳನ್ನು ನಡೆಸಲಾಗಿತ್ತು. ಲಾರಿಜಾನಿ ಮತ್ತು ಸುಲೈಮಾನಿ ಹತ್ಯೆಯಾಗಿದೆ ಎಂದು ಇಸ್ರೇಲಿ ಮಾಧ್ಯಮಗಳು ವರದಿ ಮಾಡಿವೆಯಾದರೂ, ಇರಾನ್ ಅಧಿಕಾರಿಗಳು ಇದನ್ನು ಇನ್ನೂ ದೃಢಪಡಿಸಿಲ್ಲ. ಒಂದು ವೇಳೆ ಇದು ದೃಢಪಟ್ಟರೆ, ಅಯತೊಲ್ಲಾ ಅಲಿ ಖಮೇನಿ ಮರಣದ ನಂತರ ಇರಾನ್ ಆಡಳಿತ ವ್ಯವಸ್ಥೆಯಲ್ಲಿ ಸಂಭವಿಸಿದ ಅತ್ಯಂತ ಉನ್ನತ ಮಟ್ಟದ ಸಾವು ಇದಾಗಲಿದೆ. ಲಾರಿಜಾನಿ ಕಳೆದ ಶುಕ್ರವಾರ ಟೆಹ್ರಾನ್‌ನಲ್ಲಿ ನಡೆದ ಕುದ್ಸ್ ಡೇ ಮೆರವಣಿಗೆಯ ಸಂದರ್ಭದಲ್ಲಿ ಸಾರ್ವಜನಿಕವಾಗಿ ಕಾಣಿಸಿಕೊಂಡಿದ್ದರು. ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್‌ಗೆ ಸಂಬಂಧಿಸಿದ ಹಿರಿಯ ಅಧಿಕಾರಿಗಳ ಮಾಹಿತಿಗಾಗಿ ಅಮೆರಿಕ ಘೋಷಿಸಿದ 10 ಮಿಲಿಯನ್ ಡಾಲರ್ ಬಹುಮಾನದ ಪಟ್ಟಿಯಲ್ಲಿ ಇವರ ಹೆಸರನ್ನು ಇತ್ತೀಚೆಗೆ ಸೇರಿಸಲಾಗಿತ್ತು.



**ಇರಾನ್ ಸರ್ಕಾರಿ ಮಾಧ್ಯಮದ ಪ್ರತಿಕ್ರಿಯೆ:** ದಾಳಿಯ ನಂತರ ಇರಾನ್ ಸರ್ಕಾರಿ ಮಾಧ್ಯಮ, ಲಾರಿಜಾನಿ ಅವರದ್ದೆಂದು ಹೇಳಲಾದ ಹೇಳಿಕೆಯೊಂದನ್ನು ಬಿಡುಗಡೆ ಮಾಡಿದೆ. ಇಸ್ರೇಲ್ ವಿರೋಧಿ ಸಭೆಗಳ ಕುರಿತು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನೀಡಿದ ಹೇಳಿಕೆಯನ್ನು ಅದರಲ್ಲಿ ಟೀಕಿಸಲಾಗಿದ್ದು, ವಿದೇಶಿ ಆಕ್ರಮಣದ ವಿರುದ್ಧ ಇರಾನ್‌ನ ಬದ್ಧತೆಯನ್ನು ಪುನರುಚ್ಚರಿಸಲಾಗಿದೆ. ಹಿಂದಿನ ಸರ್ವೋಚ್ಚ ನಾಯಕನ ಸಾವಿಗೆ ಕಾರಣವಾದ ಅಮೆರಿಕನ್-ಜಿಯೋನಿಸ್ಟ್ ಆಕ್ರಮಣವನ್ನು ಖಂಡಿಸಿ ಲಾರಿಜಾನಿ ಸೋಮವಾರ ಮುಸ್ಲಿಂ ಜಗತ್ತಿಗೆ ನೀಡಿದ ಸಂದೇಶದ ಬೆನ್ನಲ್ಲೇ ಈ ಬೆಳವಣಿಗೆಗಳು ನಡೆದಿವೆ.

### ಬೈರೂತ್ ಮೇಲೆ ಇಸ್ರೇಲ್ ದಾಳಿ

ಇಸ್ರೇಲಿ ಸೇನೆ ಮಂಗಳವಾರ ಬೆಳಗ್ಗೆ ಟೆಹ್ರಾನ್‌ನ ವಿವಿಧ ಭಾಗಗಳ ಮೇಲೆ ಹೊಸ ದಾಳಿಗಳನ್ನು ನಡೆಸಿರುವುದಾಗಿ ಹೇಳಿದೆ. ಜತೆಗೆ ಲೆಬನಾನ್‌ನ ರಾಜಧಾನಿ ಬೈರೂತ್‌ನಲ್ಲಿ ಹೆಜ್ಬೊಲ್ಲಾ ಉಗ್ರರನ್ನು ಗುರಿಯಾಗಿಸಿ ದಾಳಿಗಳನ್ನು ನಡೆಸಿದೆ. ಇರಾನ್‌ನಲ್ಲಿ, ಕಮಾಂಡ್ ಕೇಂದ್ರಗಳು, ಕ್ಷಿಪಣಿ ಉಡಾವಣೆ ಸ್ಥಳಗಳು ಮತ್ತು ವಾಯು ರಕ್ಷಣಾ ವ್ಯವಸ್ಥೆಗಳನ್ನು ಗುರಿಯಾಗಿಸಲಾಗಿದೆ ಎಂದು ತಿಳಿಸಿದೆ. ಲೆಬನಾನ್‌ನ ಮೇಲಿನ ದಾಳಿಗಳ ಕುರಿತು ಇಸ್ರೇಲ್ ತಕ್ಷಣ ಯಾವುದೇ ವಿವರಗಳನ್ನು ನೀಡಿಲ್ಲ. ಆದರೆ ಲೆಬನಾನ್ ಸೇನೆ ಕಫರ್ ಸಿರ್ ಗ್ರಾಮದಲ್ಲಿ ನಡೆದ ವಾಯು ದಾಳಿಯಲ್ಲಿ ತನ್ನ ಇಬ್ಬರು ಸೈನಿಕರು ಗಂಭೀರವಾಗಿ ಗಾಯಗೊಂಡಿದ್ದಾರೆ ಎಂದು ತಿಳಿಸಿದೆ. ಈ ಸಂಘರ್ಷ ಪ್ರಾರಂಭವಾದ ನಂತರದಿಂದ ಇರಾನ್‌ನಲ್ಲಿ 1,300 ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ ಎಂದು ಇರಾನ್ ರೆಡ್ ಕ್ರೆಸೆಂಟ್ ತಿಳಿಸಿದೆ. ಕೆಲವು ಇಸ್ರೇಲಿ ಪಡೆಗಳು ದಕ್ಷಿಣ ಲೆಬನಾನ್ ಒಳಗೆ ಪ್ರವೇಶಿಸಿವೆ. ಇದರಿಂದ ದೊಡ್ಡ ಮಟ್ಟದ ಆಕ್ರಮಣಕ್ಕೆ ಇಸ್ರೇಲ್ ಸಿದ್ಧವಾಗುತ್ತಿದೆ ಎಂಬ ಆತಂಕ ಇದೆ.

## ಕಿರುಸುದ್ದಿ

### ಐಸಿಸ್ ನಂಟು: ಬಿಡಿಎಸ್ ವಿದ್ಯಾರ್ಥಿ ಸೆರೆ

**• ಲಖನೌ:** ಉತ್ತರ ಪ್ರದೇಶದ ಭಯೋತ್ಪಾದನಾ ನಿಗ್ರಹ ದಳ (ಎಟಿಎಸ್) ನಿಷೇಧಿತ ಭಯೋತ್ಪಾದಕ ಸಂಘಟನೆ ಐಸಿಸ್‌ನ ಘಟಕದೊಂದಿಗೆ ನಂಟು ಹೊಂದಿದ್ದ ಬಿಡಿಎಸ್ ವಿದ್ಯಾರ್ಥಿಯನ್ನು ಬಂಧಿಸಿದೆ. ಸಹರಾನ್ಪುರ ಜಿಲ್ಲೆಯ ನಿವಾಸಿ ಹ್ಯಾರಿಸ್ ಅಲಿ (19) ಎಂಬ ಆರೋಪಿಯನ್ನು ಮೊರಾದಾಬಾದ್‌ನಿಂದ ಬಂಧಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

### ಸಚಿವ ಪುರಿ ಪುತ್ರಿ ವಿಷಯ ಡಿಲೀಟ್‌ಗೆ 24 ಗಂಟೆ ಗಡುವು

**• ಹೊಸದಿಲ್ಲಿ:** ಜೆಫ್ರಿ ಎಪ್ಸ್ಟೀನ್ ಕ್ರಿಮಿನಲ್ ಚಟುವಟಿಕೆಗಳಿಗೆ ಕೇಂದ್ರ ಸಚಿವ ಹರ್ದೀಪ್ ಸಿಂಗ್ ಪುರಿ ಅವರ ಪುತ್ರಿ ಹಿಮಾಯನಿ ಪುರಿ ಅವರಿಗೆ ನಂಟು ಕಲ್ಪಿಸುವ ಮಾನಹಾನಿಕರ ವಿಷಯಗಳನ್ನು 24 ಗಂಟೆಗಳ ಒಳಗೆ ತೆಗೆದುಹಾಕುವಂತೆ ದಿಲ್ಲಿ ಹೈಕೋರ್ಟ್ ನಿರ್ದೇಶನ ನೀಡಿದೆ. ನ್ಯಾಯಮೂರ್ತಿ ಮಿನಿ ಪುಷ್ಕರ್ಣ ಅವರು ಸಾಮಾಜಿಕ ಮಾಧ್ಯಮ ವೇದಿಕೆಗಳಲ್ಲಿ ಅಂತಹ ವಿಷಯವನ್ನು ಯಾವುದೇ ರೀತಿಯಲ್ಲಿ ಪ್ರಕಟಿಸದಂತೆ, ಪ್ರಸಾರ ಮಾಡದಂತೆ ನಿರ್ಬಂಧಿಸಿದ್ದಾರೆ.

## ಸಂಸತ್ತಲ್ಲಿ ಫಲಕ, ಪೋಸ್ಟರ್ ಪ್ರದರ್ಶಿಸುವಂತಿಲ್ಲ: ಬಿರ್ಲಾ

**• ಹೊಸದಿಲ್ಲಿ:** ಅನುಚಿತ ವರ್ತನೆಗಾಗಿ ಫೆ.3 ರಂದು ಸದನದಿಂದ ಅಮಾನತುಗೊಂಡಿದ್ದ 8 ವಿಪಕ್ಷೀಯ ಸದಸ್ಯರ ಅಮಾನತನ್ನು ಲೋಕಸಭೆಯು ತಕ್ಷಣ ಅನ್ವಯಿಸುವಂತೆ ಮಂಗಳವಾರ ರದ್ದುಗೊಳಿಸಿದೆ. ಏಕಕಾಲಕ್ಕೆ , ಸದನದೊಳಗೆ ಅಥವಾ ಸಂಸತ್ ಭವನದಲ್ಲಿ ಎಲ್ಲೂ ಯಾವುದೇ ಫಲಕಗಳು, ಪೋಸ್ಟರ್‌ಗಳು, ಫೋಟೋಗಳು ಅಥವಾ ಎಐ ಮುಖೇನ ಸೃಜಿಸಿದ ಚಿತ್ರಗಳನ್ನು ಪ್ರದರ್ಶಿಸುವಂತಿಲ್ಲ ಎಂದು ಸಭಾಪತಿ ಓಂ ಬಿರ್ಲಾ ಸ್ಪಷ್ಟ ತಾಕೀತು ಮಾಡಿದ್ದಾರೆ. ವಿಪಕ್ಷಕೂಟದ ಎಂಟು ಸದಸ್ಯರ ವಿರುದ್ಧದ ಅಮಾನತನ್ನು ಹಿಂಪಡೆಯಬೇಕು. ಸಂಸತ್ತಿನಲ್ಲಿ ನಡೆದಿರುವ ಘಟನಾವಳಿಗಳು ದುರದೃಷ್ಟಕರ ಮತ್ತು ಸದನದ ಸುಗಮ ಕಲಾಪಗಳಿಗೆ ಸಹಕರಿಸಲು ತನ್ನ ಪಕ್ಷ ಸಿದ್ಧವಿದೆ ಎಂದು ಕಾಂಗ್ರೆಸ್ ಸದಸ್ಯ ಕೆ.ಸುರೇಶ್ ಆರಂಭದಲ್ಲಿ ಸದನವನ್ನು ವಿನಂತಿಸಿದ್ದರು. ವಿಪಕ್ಷಕೂಟದ ಹಲವು ಸದಸ್ಯರು ಇದೇ ಆಗ್ರಹ ಮುಂದಿಟ್ಟಾಗ, ಸದನದ ಸುಗಮ ಕಲಾಪಗಳಿಗಾಗಿ ಲಕ್ಷ್ಮಣ ರೇಖೆ ಎಳೆಯೋ ಅಗತ್ಯವಿದೆ ಎಂದು ಸಂಸದೀಯ ವ್ಯವಹಾರ ಸಚಿವ ಕಿರಣ್ ರಿಜಿಜು ಅಭಿಪ್ರಾಯಪಟ್ಟರು ಮತ್ತು ಇದಕ್ಕೆ ಆಳುವ ಪಕ್ಷ ಮತ್ತು ವಿಪಕ್ಷ ಕೂಟದ ಸದಸ್ಯರು ಸಮ್ಮತಿಸಿದರು. ಜಗತ್ತಿನ ಅತಿ ದೊಡ್ಡ ಪ್ರಜಾಸತ್ತೆಯಾಗಿರುವ ಭಾರತದ ಸಂಸತ್ತಿನಲ್ಲಿ ಕಲಾಪಗಳು ತೀರಾ ಸುಗಮವಾಗಿ ನಡೆಯಬೇಕು ಮತ್ತು ಪ್ರತಿಯೋರ್ವರೂ ಇದಕ್ಕೆ ಸಹಕರಿಸಬೇಕೆಂದು ಪ್ರತಿಯೋರ್ವರಿಗೂ ಆಶಯವಿರುತ್ತೆ ಎಂದು ಸಭಾಪತಿ ಬಿರ್ಲಾ ಹೇಳಿದರು.

## ಎನ್‌ಎಚ್‌ಆರ್‌ಸಿ ನೋಟಿಸ್ ಕೆಡಿ ಅಶ್ಲೀಲ ಹಾಡು ಸ್ಥಗಿತ

**• ಹೊಸದಿಲ್ಲಿ:** ಸರಿಕೆ ಚುನಾರ್ ಹಾಡು ಮತ್ತು ಅದರ ಕನ್ನಡ ಆವೃತ್ತಿಯಾದ ಸರ್ಸೆ ನಿನ್ನ ಸೆರಗ ಸರ್ಸೆ ಹಾಡುಗಳಲ್ಲಿ ಅಶ್ಲೀಲ ಅಂಶಗಳಿವೆ ಎಂಬ ಕಾರಣಕ್ಕೆ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ (ಎನ್‌ಎಚ್‌ಆರ್‌ಸಿ) ನೋಟಿಸ್ ನೀಡಿದ ಬೆನ್ನಲ್ಲೇ, ಎಲ್ಲಾ ಸ್ಟ್ರೀಮಿಂಗ್ ಪ್ಲಾಟ್‌ಫಾರ್ಮ್‌ಗಳಿಂದ ಈ ಹಾಡನ್ನು ತೆಗೆದುಹಾಕಲಾಗಿದೆ.

ಸಾಮಾಜಿಕ ಕಾರ್ಯಕರ್ತ ವಿನೀತ್ ಜಿಂದಾಲ್ ದಿಲ್ಲಿ ಪೊಲೀಸ್ ಮತ್ತು ಕೇಂದ್ರ ಚಲನಚಿತ್ರ ಪ್ರಮಾಣೀಕರಣ ಮಂಡಳಿಗೆ (ಸಿಬಿಎಫ್‌ಸಿ) ಈ ಬಗ್ಗೆ ಅಧಿಕೃತ ದೂರು ಸಲ್ಲಿಸಿದ್ದರು. ಹಾಡಿನ ಸಾಹಿತ್ಯ ಮತ್ತು ದೃಶ್ಯಗಳು ಲೈಂಗಿಕ ಪ್ರಚೋದಕವಾಗಿದ್ದು, ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 294, ಐಟಿ ಕಾಯ್ದೆ ಮತ್ತು ಪೋಕ್ಸೋ ಕಾಯ್ದೆಯನ್ನು ಉಲ್ಲಂಘಿಸಿವೆ ಎಂದು ದೂರಿನಲ್ಲಿ ಆರೋಪಿಸಲಾಗಿತ್ತು. ಈ ಕಾನೂನು ಪ್ರಕ್ರಿಯೆಯಲ್ಲಿ ನಿರ್ದೇಶಕ ಪ್ರೇಮ್, ಸಂಗೀತ ನಿರ್ದೇಶಕ ಅರ್ಜುನ್ ಜನ್ಯ, ಗೀತರಚನೆಕಾರ ರಕೀಬ್ ಆಲಂ ಮತ್ತು ಗಾಯಕಿ ಮಂಗ್ಲಿ ಅವರ ಹೆಸರನ್ನು ಉಲ್ಲೇಖಿಸಲಾಗಿದೆ. ಹಾಡನ್ನು ತೆಗೆದುಹಾಕುವ ಮುನ್ನ ಸಾರ್ವಜನಿಕ ವಲಯದಿಂದ ತೀವ್ರ ಟೀಕೆಗಳು ವ್ಯಕ್ತವಾಗಿದ್ದವು. ಗಾಯಕ ಅರ್ಮಾನ್ ಮಲಿಕ್ ಈ ಹಾಡಿನ ಸಾಹಿತ್ಯವನ್ನು ಕನಿಷ್ಠ ಮಟ್ಟದ ಬರವಣಿಗೆ ಎಂದು ಕರೆದಿದ್ದರೆ, ಕ್ರಿಕೆಟಿಗ ಹರ್ಭಜನ್ ಸಿಂಗ್, ಈ ಹಾಡಿನಲ್ಲಿ ನೋರಾ ಫತೇಹಿ ಮತ್ತು ಸಂಜಯ್ ದತ್ ಭಾಗವಹಿಸಿರುವುದನ್ನು ಬಹಿರಂಗವಾಗಿ ವಿರೋಧಿಸಿದ್ದರು. ಯೂಟ್ಯೂಬ್ ಸೇರಿದಂತೆ ಇತರೆ ವೇದಿಕೆಗಳಿಂದ ಹಾಡನ್ನು ತೆಗೆದುಹಾಕಲಾಗಿದ್ದರೂ, ಚಿತ್ರತಂಡದಿಂದ ಈವರೆಗೆ ಯಾವುದೇ ಅಧಿಕೃತ ಹೇಳಿಕೆ ಹೊರಬಂದಿಲ್ಲ.

## ಮಕ್ಕಳಿಗೆ ಪೌಷ್ಟಿಕ ಆಹಾರ, ಉತ್ತಮ ಶಿಕ್ಷಣ ಅತ್ಯವಶ್ಯ

**• ಹೊಸದಿಲ್ಲಿ:** ದೇಶದ ಭಾವೀ ಭವಿಷ್ಯವಾಗಿರುವ ಪುಟಾಣಿಗಳಿಗೆ ಉತ್ತಮ ಪೌಷ್ಟಿಕಾಂಶಯುಕ್ತ ಆಹಾರ ಮತ್ತು ಉತ್ತಮ ಗುಣಮಟ್ಟದ ಶಿಕ್ಷಣ ನೀಡೋದು ಅತ್ಯವಶ್ಯ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದ್ದಾರೆ. ಮಕ್ಕಳಿಗೆ ಸುರಕ್ಷಿತ ಮತ್ತು ಭವ್ಯ ಭವಿಷ್ಯ ಕಲ್ಪಿಸುವುದು ಸರಕಾರಕ್ಕೆ ಸೀಮಿತ ಹೊಣೆಯಲ್ಲ, ಬದಲಾಗಿ ಸಮಸ್ತರ ಪಾಲುದಾರಿಕೆಯ ಹೊಣೆಗಾರಿಕೆಯಾಗಿದೆ ಎಂದವರು ಪ್ರತಿಪಾದಿಸಿದ್ದಾರೆ. ಶಿಕ್ಷಕರು, ಹೆತ್ತವರು, ಸಾಮಾಜಿಕ ಸಂಘಟನೆಗಳು, ಕಾರ್ಪೊರೇಟ್ ರಂಗ ಮತ್ತು ಸಮಾಜದ ಪ್ರತಿಯೊಂದು ಸಂಸ್ಥೆಗಳು ಒಗ್ಗಟ್ಟಾಗಿ ಶ್ರಮಿಸಿದಲ್ಲಿ, ಭಾವೀ ಪೀಳಿಗೆಯ ಭವ್ಯ ಭವಿಷ್ಯಕ್ಕೆ ಭದ್ರ ಬುನಾದಿ ಹಾಕಬಲ್ಲೆವು. ಪ್ರತಿಯೋರ್ವ ಮಗುವಿಗೂ ಉತ್ತಮ ಗುಣಮಟ್ಟದ ಶಿಕ್ಷಣ , ಪೌಷ್ಟಿಕ ಆಹಾರ, ಉತ್ತಮ ಆರೋಗ್ಯ ಹಾಗೂ ಸ್ವಚ್ಛ ಮತ್ತು ಸುರಕ್ಷಿತ ವಾತಾವರಣ ಕಲ್ಪಿಸುವುದು ನಮ್ಮೆಲ್ಲರ ಹೊಣೆ, ಇದನ್ನು ನಾವು ನಿಭಾಯಿಸಲೇಬೇಕು. ಈ ಮೂಲಭೂತ ಅಂಶಗಳಿಂದ ಮಕ್ಕಳ ಸಮಗ್ರ ಬೆಳವಣಿಗೆ ಸಾಧ್ಯ ಎಂದು ರಾಷ್ಟ್ರಪತಿ ಅಭಿಪ್ರಾಯಪಟ್ಟರು. ಅಕ್ಷಯ ಪಾತ್ರ ಪ್ರತಿಷ್ಠಾನದ 5 ಬಿಲಿಯನ್ ಅನ್ನದಾಸೋಹದ ಸಂಸ್ಮರಣಾರ್ಥ ನಡೆದ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ಮುರ್ಮು ಭಾಗಿಯಾಗಿದ್ದರು. ಉತ್ತಮ ಪೋಷಣೆ ಮತ್ತು ಸುಶಿಕ್ಷಿತ ಭಾರತದಿಂದ ಸಂಪನ್ನ ಭಾರತದತ್ತ ಎಂಬ ಕಾರ್ಯಕ್ರಮದ ಪ್ರಧಾನ ವಿಚಾರವು , 2047ರ ವೇಳೆಗೆ ವಿಕಸಿತ ಭಾರತದ ಸಾಕಾರಕ್ಕೆ ಉತ್ತಮ ಪೋಷಣೆಯುಕ್ತ ಸುಶಿಕ್ಷಿತ ಸಮಾಜದ ಅಗತ್ಯವನ್ನು ಎತ್ತಿಹಿಡಿದಿದೆ ಎಂದರು.



## ಗುಜರಾತ್ ಸಿಎಂಗೆ ಏನಾಸಂ ವರದಿ ಸಲ್ಲಿಸಿದ ಸಮಿತಿ

**• ಗಾಂಧಿನಗರ:** ಏಕರೂಪ ನಾಗರಿಕ ಸಂಹಿತೆ(ಏನಾಸಂ)ಕರಡು ಮಸೂದೆ ರಚನೆಗೆ ಗುಜರಾತ್ ಸರಕಾರ ರಚಿಸಿದ್ದ ಪಂಚ ಸದಸ್ಯ ಸಮಿತಿ, ತನ್ನ ವಿವರವಾದ ಅಂತಿಮ ವರದಿಯನ್ನು ಮಂಗಳವಾರ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಅವರಿಗೆ ಸಲ್ಲಿಸಿದೆ. ರಾಜ್ಯ ಸರಕಾರ ಪ್ರಸಕ್ತ ಬಜೆಟ್ ಅಧಿವೇಶನದಲ್ಲೇ ಏನಾಸಂ ಕರಡು ಮಸೂದೆಯನ್ನು ವಿಧಾನಸಭೆಯಲ್ಲಿ ಮಂಡಿಸುವ ಸಾಧ್ಯತೆಗಳಿವೆ. ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ನ್ಯಾ.ರಂಜನಾ ಪ್ರಕಾಶ್ ದೇಸಾಯಿ ಅಧ್ಯಕ್ಷತೆಯ ಸಮಿತಿ ಮುಖ್ಯಮಂತ್ರಿಗಳಿಗೆ ತನ್ನ ವರದಿ ಸಲ್ಲಿಸುವ ಸಂದರ್ಭ ವರದಿಯ ಪ್ರಸ್ತುತಿ ಮಾಡಿತು. ಗುಜರಾತ್‌ನಲ್ಲಿ ಏನಾಸಂ ಜಾರಿಗೊಳಿಸುವ ನಿಟ್ಟಿನಲ್ಲಿ ವಿವಿಧ ಅಂಶಗಳನ್ನು ಪರಿಗಣಿಸಿ, ಕರಡು ಮಸೂದೆ ಸಿದ್ಧಪಡಿಸಲು, ಕಳೆದ ವರ್ಷ ಫೆಬ್ರವರಿಯಲ್ಲಿ ಸರ್ಕಾರ ಸಮಿತಿ ರಚಿಸಿತ್ತು. ವರದಿಯಲ್ಲಿ ರಾಜ್ಯದ ಎಲ್ಲಾ ಧರ್ಮ ಮತ್ತು ಸಮುದಾಯಗಳ ಜನರಿಗೆ ಮದುವೆ, ವಿವಾಹ ವಿಚ್ಛೇದನ, ಆಸ್ತಿಯ ಉತ್ತರಾಧಿಕಾರ, ದತ್ತು ಇತ್ಯಾದಿ ವಿಚಾರಗಳಿಗೆ ಸಮಾನ ಕಾನೂನು ಚೌಕಟ್ಟನ್ನು ಅನ್ವಯಿಸಬೇಕೆಂಬ ಸಲಹೆ ಮುಂದಿಡಲಾಗಿದೆ.

### ವಿಶ್ವಸಂಸ್ಥೆ ಸಾಮಾನ್ಯ ಸಭೆಯಲ್ಲಿ ಭಾರತದ ಖಾಯಂ ಪ್ರತಿನಿಧಿ ಹರೀಶ್ ಕಿಡಿ

# ಇಸ್ಲಾಮೋಫೋಬಿಯಾ ಹೆಸರಲ್ಲಿ ಪಾಕ್ ಕಟ್ಟುಕಥೆ

**• ವಿಶ್ವಸಂಸ್ಥೆ:** ನೆರೆರಾಷ್ಟ್ರಗಳಲ್ಲಿ ಇಸ್ಲಾಮೋಫೋಬಿಯಾ ಹೆಸರಲ್ಲಿ ತಿರುಚಿದ ಕಾಲ್ಪನಿಕ ಕತೆ ಕಟ್ಟುವುದು ಪಾಕಿಸ್ತಾನದ ಹವ್ಯಾಸವೆಂದು ಆರೋಪಿಸಿರುವ ಭಾರತ, ಅಹ್ಮದೀಯರನ್ನು ಕ್ರೂರವಾಗಿ ದಮನಿಸುತ್ತಿರುವ ಅಥವಾ ರಂಜಾನ್ ಸಂದರ್ಭದಲ್ಲೇ ಅಫಘಾನಿಸ್ತಾನ ವಿರುದ್ಧ ವೈಮಾನಿಕ ಬಾಂಬ್ ದಾಳಿ ನಡೆಸುತ್ತಿರುವ ಪಾಕಿಸ್ತಾನ ತನ್ನ ಈ ಕ್ರೂರ ನಡೆಯನ್ನು ಯಾವ ರೀತಿ ಬಣ್ಣಿಸಲಿದೆ ಎಂದು ಪ್ರಶ್ನಿಸಿದೆ.

ಪಾಕಿಸ್ತಾನ ತನ್ನ ದೇಶದಲ್ಲಿನ ಅಹಮದೀಯರನ್ನು ಅತ್ಯಂತ ಕ್ರೂರವಾಗಿ ನಡೆಸಿಕೊಳ್ಳುತ್ತಿದೆ. ಇಸ್ಲಾಮೋಫೋಬಿಯಾ ಹೆಸರಲ್ಲಿ ಕಟ್ಟುಕಥೆ ಕಟ್ಟೋ ಪಾಕಿಸ್ತಾನ, ಅಹ್ಮದೀಯರ ವಿರುದ್ಧದ ತನ್ನ ಸ್ವಂತ ದೌರ್ಜನ್ಯವನ್ನು ಯಾವ ರೀತಿ ಸಮರ್ಥಿಸಿಕೊಳ್ಳುವುದೆಂದು ಯಾರಿಗೂ ಅಚ್ಚರಿಯಾಗದಿರದು ಎಂದು ವಿಶ್ವಸಂಸ್ಥೆಗೆ ಭಾರತದ ಖಾಯಂ ಪ್ರತಿನಿಧಿಯಾಗಿರುವ ರಾಯಭಾರಿ ಪರ್ವತನೇಣಿ ಹರೀಶ್ ಕುಟುಕಿದ್ದಾರೆ.



ಅಂತಾರಾಷ್ಟ್ರೀಯ ಇಸ್ಲಾಮೋಫೋಬಿಯಾವನ್ನು ಮಟ್ಟಹಾಕುವ ದಿನಾಚರಣೆ ಸಂಸ್ಮರಣಾರ್ಥ ವಿಶ್ವಸಂಸ್ಥೆ ಸಾಮಾನ್ಯ ಸಭೆಯಲ್ಲಿ ಹರೀಶ್ ಪಾಕಿಸ್ತಾನವನ್ನು ಕಟುವಾಗಿ ತರಾಟೆಗೆತ್ತಿಕೊಂಡರು.

ಇಸ್ಲಾಮಿಕ್ ಸಹಕಾರ ಸಂಘಟನೆಯನ್ನು ಭಾರತದ ವಿರುದ್ಧ ಆಯುಧವಾಗಿ ಬಳಸಿಕೊಳ್ಳಲು ವ್ಯವಸ್ಥಿತವಾಗಿ ಪ್ರಯತ್ನಿಸಿರುವ ನೆರೆರಾಷ್ಟ್ರ, ನನ್ನ ತಾಯ್ನಾಡು ಭಾರತದ ವಿರುದ್ಧ ನಿರಂತರವಾಗಿ ಸುಳ್ಳು ಮತ್ತು ಆಧಾರರಹಿತ ಆರೋಪಗಳನ್ನು ಮಾಡುತ್ತಿದೆ. ಮತೀಯ ಅಸ್ಮಿತೆಯನ್ನು ಆಯುಧವಾಗಿ ಬಳಸಿಕೊಳ್ಳುತ್ತಿರುವ ಅಪಾಯಕಾರಿ ಪ್ರವೃತ್ತಿ ಹೆಚ್ಚಾಗುತ್ತಿದೆ. ರಾಷ್ಟ್ರ-ಅರಾಷ್ಟ್ರಗಳು ಮತೀಯ ಅಸ್ಮಿತೆ ಮುಖೇನ ತಮ್ಮ ಸಂಕುಚಿತ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಪ್ರಯತ್ನಿಸುತ್ತಿರುವುದು ಕೂಡ ಗಂಡಾಂತರಕಾರಿ . ಇದನ್ನು ವಿಶ್ವಸಂಸ್ಥೆ ಗಂಭೀರ ಪರಿಗಣಿಸಬೇಕೆಂದು ಹರೀಶ್ ಆಗ್ರಹಿಸಿದ್ದಾರೆ.

### ಶಾಂತಿಯುತ ಸಹಬಾಳ್ವೆಗೆ ಕೊಳ್ಳಿ ಇಡುವ ಪಾಕ್ ತಂತ್ರ

ಜಗತ್ತಿನಲ್ಲೇ ಅತ್ಯಧಿಕ ಸಂಖ್ಯೆಯ ಮುಸಲ್ಮಾನರು ಅಂದರೆ 200 ಮಿಲಿಯನ್ ಮುಸಲ್ಮಾನರಿಗೆ ಭಾರತ ತಾಯ್ನೆಲೆಯಾಗಿದೆ. ಜಮ್ಮು ಕಾಶ್ಮೀರ ಸಹಿತ ಭಾರತಾದ್ಯಂತದ ಮುಸಲ್ಮಾನರು ತಮ್ಮ ಪರ ಧ್ವನಿಯೆತ್ತಲು ತಮ್ಮದೇ ಪ್ರತಿನಿಧಿಗಳನ್ನು ಚುನಾಯಿಸುತ್ತಾರೆ. ಇಂತಹ ಸನ್ನಿವೇಶದಲ್ಲಿ ಮುಸಲ್ಮಾನ ಸಮುದಾಯಗಳ ಸಹಿತ ಭಾರತದಲ್ಲಿ ಎಲ್ಲಾ ಸಮುದಾಯಗಳ ಜನರ ಶಾಂತಿಯುತ ಸಹಬಾಳ್ವೆ ಮತ್ತು ವೈವಿಧ್ಯಮಯ ಬಹುಸಂಸ್ಕೃತಿಯನ್ನು ಹಾಳುಗೆಡಹುವುದೇ ಪಾಕ್ ಪ್ರಚೋದಿತ ಫೋಬಿಯಾ ಹಿಂದಿನ ದುರುದ್ದೇಶವೆಂಬುದು ಸ್ಪಷ್ಟವೆಂದು ಹರೀಶ್ ಆರೋಪಿಸಿದ್ದಾರೆ. ಪಾಕ್‌ನ ತಿರುಚಿದ ಇಸ್ಲಾಮೋಫೋಬಿಯಾವು ಭಾರತದ ಮೂಲಭೂತ ಭಾವನೆಗಳಿಗೆ ತದ್ವಿರುದ್ಧವಾದುದು ಎಂದರು.

### 11 ಸ್ಥಾನಗಳ ಪೈಕಿ 9 ಎನ್‌ಡಿಎಗೆ | 26 ಅಭ್ಯರ್ಥಿಗಳ ಅವಿರೋಧ ಆಯ್ಕೆ

# ರಾಜ್ಯಸಭೆಯಲ್ಲಿ ಬಹುಮತದತ್ತ ಎನ್‌ಡಿಎ

**• ಹೊಸದಿಲ್ಲಿ:** ರಾಜ್ಯಸಭೆ ಚುನಾವಣೆಯಲ್ಲಿ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟ(ಎನ್‌ಡಿಎ) ಗಮನಾರ್ಹ ಜಯ ಸಾಧಿಸಿದ್ದು, ಮೇಲ್ಮನೆಯಲ್ಲಿ ಬಹುಮತದ ಗಡಿ ತಲುಪುವ ಮೂಲಕ ತನ್ನ ಬಲವನ್ನು ವಿಸ್ತರಿಸಿಕೊಂಡಿದೆ.

ಒಟ್ಟು 37 ಖಾಲಿ ಸ್ಥಾನಗಳ ಪೈಕಿ ಏಳು ರಾಜ್ಯಗಳ 26 ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಉಳಿದ 11 ಸ್ಥಾನಗಳಿಗೆ ಬಿಹಾರ, ಒಡಿಶಾ ಮತ್ತು ಹರ್ಯಾಣದಲ್ಲಿ ಸೋಮವಾರ ಮತದಾನ ನಡೆದಿದ್ದು, ಎನ್‌ಡಿಎಯ 9 ಅಭ್ಯರ್ಥಿಗಳು ಗೆದ್ದಿದ್ದಾರೆ. ಬಿಹಾರದ ಎಲ್ಲಾ ಐದು ಸ್ಥಾನಗಳನ್ನು ಎನ್‌ಡಿಎ ಬಾಚಿಕೊಂಡಿದೆ. ನಿತೀಶ್ ಕುಮಾರ್, ನಿತಿನ್ ನವೀನ್, ರಾಮನಾಥ್ ಠಾಕೂರ್, ಉಪೇಂದ್ರ ಕುಶ್ವಾಹ ಮತ್ತು ಶಿವೇಶ್ ಕುಮಾರ್ ಜಯಗಳಿಸಿದ್ದಾರೆ.

ಒಡಿಶಾದಲ್ಲಿ ಬಿಜೆಪಿ ನಾಲ್ಕು ಸ್ಥಾನಗಳ ಪೈಕಿ ಮೂರನ್ನು ಗೆದ್ದುಕೊಂಡಿದೆ. ಮನಮೋಹನ್ ಸಮಾಲ್, ಸುಜೀತ್ ಕುಮಾರ್ ಮತ್ತು ಬಿಜೆಪಿ ಬೆಂಬಲಿತ ಪಕ್ಷೇತರ ಅಭ್ಯರ್ಥಿ ದಿಲೀಪ್ ರೇ ಇಲ್ಲಿ ಜಯಭೇರಿ ಬಾರಿಸಿದ್ದಾರೆ. ಬಿಜೆಡಿಯ ಸಂತೃಪ್ ಮಿಶ್ರಾ ನಾಲ್ಕನೇ ಸ್ಥಾನ ಪಡೆದಿದ್ದಾರೆ. ಹರ್ಯಾಣದಲ್ಲಿ ಮತದಾನದ ಗೌಪ್ಯತೆ ಉಲ್ಲಂಘನೆಯ ಆರೋಪಗಳ ನಡುವೆಯೇ ಬಿಜೆಪಿಯ ಸಂಜಯ್ ಭಾಟಿಯಾ ಮತ್ತು ಕಾಂಗ್ರೆಸ್‌ನ ಕರಮ್‌ವೀರ್ ಸಿಂಗ್ ಬೌಧ್ ಆಯ್ಕೆಯಾಗಿದ್ದಾರೆ.

**ರಾಜ್ಯಸಭೆಯಲ್ಲಿ ಬಿಜೆಪಿ ಶಕ್ತಿ ವೃದ್ಧಿ:** 245 ಸದಸ್ಯ ಬಲದ ರಾಜ್ಯಸಭೆಯಲ್ಲಿ ಬಹುಮತಕ್ಕೆ 123 ಸ್ಥಾನಗಳ ಅಗತ್ಯವಿದ್ದು, ಎನ್‌ಡಿಎ ಪ್ರಸ್ತುತ 120ರಿಂದ 125 ಸ್ಥಾನಗಳನ್ನು ಹೊಂದಿದೆ. ವಿರೋಧ ಪಕ್ಷಗಳ ಇಂಡಿ ಕೂಟ, 85 ರಿಂದ 95 ಸ್ಥಾನಗಳನ್ನು ಹೊಂದಿದ್ದರೆ, ಉಳಿದ ಸ್ಥಾನಗಳು ಪ್ರಾದೇಶಿಕ ಪಕ್ಷಗಳು, ಪಕ್ಷೇತರರು ಮತ್ತು ನಾಮನಿರ್ದೇಶಿತ ಸದಸ್ಯರ ಬಳಿ ಇವೆ.

**ನಾಟಕೀಯ ಬೆಳವಣಿಗೆಗಳಿಂದ ಗಮನ ಸೆಳೆದ ಮೇಲ್ಮನೆ ಸಮರ:** ರಾಷ್ಟ್ರ ರಾಜಕಾರಣದಲ್ಲಿ ಮತ್ತೆ ಚರ್ಚೆಗೆ ಕಾರಣವಾದ ರಾಜ್ಯಸಭಾ ಚುನಾವಣೆಗಳು ಅಡ್ಡ ಮತದಾನ, ಮತ ಎಣಿಕೆ ವಿಳಂಬ ಮತ್ತು ರಾಜಕೀಯ ನಾಟಕಗಳಿಂದ ಗಮನ ಸೆಳೆದವು. ಈ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿ ಉತ್ತಮ ಸಾಧನೆ ಮಾಡಿದ್ದು, ಒಡಿಶಾ, ಹರ್ಯಾಣ ಮತ್ತು ಬಿಹಾರ ರಾಜ್ಯಗಳಲ್ಲಿ ಒಟ್ಟು 9 ಸ್ಥಾನಗಳನ್ನು ಗೆದ್ದಿದೆ.

ಹರ್ಯಾಣದಲ್ಲಿ ಮತ ಎಣಿಕೆ ವಿಳಂಬವಾಗಿದ್ದು, ರಾಜಕೀಯ ಆರೋಪ-ಪ್ರತ್ಯಾರೋಪಗಳಿಗೆ ವೇದಿಕೆಯಾಯಿತು. ಅಂತಿಮವಾಗಿ ಕಾಂಗ್ರೆಸ್ ಮತ್ತು ಬಿಜೆಪಿ ತಲಾ ಒಂದು ಸ್ಥಾನ ಗೆದ್ದವು.

ಒಡಿಶಾದಲ್ಲಿ ಅಡ್ಡಮತದಾನ ಭಾರೀ ಸಂಚಲನ ಸೃಷ್ಟಿಸಿತು. ಬಿಜೆಪಿ ಬೆಂಬಲಿತ ಅಭ್ಯರ್ಥಿಗಳು ಮೂರು ಸ್ಥಾನಗಳನ್ನು ಗೆದ್ದರೆ, ಬಿಜು ಜನತಾ ದಳಕ್ಕೆ ಒಂದು ಸ್ಥಾನ ಮಾತ್ರ ಸಿಕ್ಕಿತು. ಅಡ್ಡ ಮತದಾನ ಕಾರಣ ಕಾಂಗ್ರೆಸ್ ಮೂವರು ಶಾಸಕರನ್ನು ಪಕ್ಷದಿಂದ ಹೊರಹಾಕಲಾಗಿದೆ.

ಬಿಹಾರದಲ್ಲಿ ಎನ್‌ಡಿಎ ಸಂಪೂರ್ಣ ಮೇಲುಗೈ ಸಾಧಿಸಿದೆ. ಸಿಎಂ ನಿತೀಶ್ ಕುಮಾರ್ ಸೇರಿದಂತೆ ಐದು ಅಭ್ಯರ್ಥಿಗಳು ಜಯ ಸಾಧಿಸಿದರು.

## ಹುಬ್ಬಳ್ಳಿ ಇಂದಿನ ಉತ್ಪನ್ನವಾರು ದರ

| ಉತ್ಪನ್ನಗಳು | ₹ಕನಿಷ್ಠ (ಕ್ವಿಂ) | ₹ಗರಿಷ್ಠ (ಕ್ವಿಂ) |
|---|---|---|
| ಕಡಲೆಕಾಳು | 1811 | 5381 |
| ಉದ್ದಿನಕಾಳು | 6829 | 6829 |
| ಚಪ್ಪರದವರೆ | 6381 | 6381 |
| ಒಣ ಮೆಣಸಿನಕಾಯಿ | 29299 | 51811 |
| ಹೆಸರುಕಾಳು | 600 | 7052 |
| ಜೋಳ | 1510 | 4329 |
| ಮೆಕ್ಕೆಜೋಳ | 1556 | 1635 |
| ಮಡಿಕೆ (ವಾಟಕಿ) | 7575 | 13171 |
| ಸಾಸುವೆ | 4325 | 4325 |
| ಈರುಳ್ಳಿ | 400 | 2100 |
| ಆಲೂಗಡ್ಡೆ | 1300 | 1800 |
| ಕುಸುಬೆ | 4759 | 5060 |
| ಸೋಯಾಬಿನ್ | 3595 | 5383 |
| ತೊಗರಿ | 2809 | 4510 |
| ಗೋಧಿ | 2011 | 3025 |

# 2 ಲಕ್ಷಕ್ಕೂ ಹೆಚ್ಚು ಮೆಣಸಿನಕಾಯಿ ಚೀಲಗಳ ಆವಕ

**ಬ್ಯಾಡಗಿ:** ಪಟ್ಟಣದ ಅಂತಾರಾಷ್ಟ್ರೀಯ ಮಾರುಕಟ್ಟೆಗೆ ಇಂದು ಪ್ರಸಕ್ತ ಸಾಲಿನಲ್ಲಿ ಮೊದಲ ಬಾರಿಗೆ ಅಧಿಕ ಪ್ರಮಾಣದಲ್ಲಿ ಮೆಣಸಿನಕಾಯಿ ಚೀಲಗಳು ಬಂದಿವೆ.

ಈ ಸಾಲಿನಲ್ಲಿ 2.43.160 ಲಕ್ಷ ಚೀಲಗಳು ಆವಕ ಇದಾಗಿದೆ. ಕಳೆದ ವಾರಕ್ಕೆ ಹೋಲಿಸಿದರೆ ಒಂದು ಲಕ್ಷಕ್ಕೂ ಹೆಚ್ಚು ಮೆಣಸಿನಕಾಯಿ ಚೀಲಗಳು ಬಂದಿದ್ದು, ವ್ಯಾಪಾರಸ್ಥರು ಮಾರುಕಟ್ಟೆಯಲ್ಲಿ ರಸ್ತೆಯ ಮೇಲೆ ಚೀಲವನ್ನು ಇಟ್ಟು ಆವಕ ಮಾಡಿದರು.

ಮಾರುಕಟ್ಟೆಯಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಮುಂಜಾಗ್ರತವಾಗಿ ಪೊಲೀಸ್ ಇಲಾಖೆಯಿಂದ ಮಾರುಕಟ್ಟೆ ಹಾಗೂ ಬಸ್ ನಿಲ್ದಾಣ, ಹಳೆ ಪುರಸಭೆ, ಗುಮ್ಮನ ಹಳ್ಳಿ ಸರ್ಕಲ್ ಗಲ್ಲಿಯಲ್ಲಿ ಅತಿ ಹೆಚ್ಚು ಪೊಲೀಸ್ ಸಿಬ್ಬಂದಿ ನಿಯೋಜನೆ ಮಾಡಲಾಗಿತ್ತು.

ಮೆಣಸಿನಕಾಯಿ ಮೊತ್ತ ಕೊಂಚ ಇಳಿಕೆ ಕಂಡಿದೆ ಕಳೆದ ಗುರುವಾರಕ್ಕೆ ಹೋಲಿಸಿದರೆ ಅಲ್ಪ ಪ್ರಮಾಣದ ದರ ಕಡಿಮೆ ಆಗಿದೆ.

ಬ್ಯಾಡಗಿ ಕಡ್ಡಿ ಮೆಣಸಿನಕಾಯಿ ಕಳೆದ ವಾರಕ್ಕೆ ಹೋಲಿಸಿದರೆ ದರದಲ್ಲಿ ಏರಿಕೆ ಕಡಿಮೆ 4.009ರೂ. 100ಕೆಜಿ ಸರಾಸರಿ ದರ 100 ಕೆಜಿಗೆ 47.239ರೂ. ಅತಿ ಹೆಚ್ಚು 100 ಕೆಜಿಗೆ 58.889ರೂ. ಬ್ಯಾಡಗಿ ಡಬ್ಬಿ ಕಳೆದ ವಾರಕ್ಕೆ ಹೋಲಿಸಿದರೆ ಈ ವಾರ ಅತಿ ಸ್ವಲ್ಪ ಏರಿಕೆ ದರ ಕಡಿಮೆ ಪ್ರತಿ 100 ಕೆಜಿಗೆ 5.019ರೂ. ಸರಾಸರಿ ದರ ಪ್ರತಿ 100 ಕೆಜಿಗೆ 49.529ರೂ. ಹೆಚ್ಚು ದರ ಪ್ರತಿ 100 ಕೆಜಿಗೆ 62.000ರೂ.

ಗುಂಟೂರು ಒಣಮೆಣಸಿಕಾಯಿ ಕಡಿಮೆ ಬಿಳಿಕಾಯಿ ದರ ಪ್ರತಿ 100 ಕೆಜಿಗೆ 1409 ರೂ. ಸರಾಸರಿ ದರ ಪ್ರತಿ 100 ಕೆಜಿಗೆ 13.109ರೂ. ಅತಿ ಹೆಚ್ಚು ದರ ಪ್ರತಿ 100 ಕೆಜಿಗೆ 17.529 ರೂ.

# ಅಪ್ರಾಪ್ತೆ ಮೇಲೆ ಲೈಂಗಿಕ ದೌರ್ಜನ್ಯ ಆರೋಪಿಗೆ 20 ವರ್ಷ ಕಠಿಣ ಕಾರಾಗೃಹ ಶಿಕ್ಷೆ

**ಯಲ್ಲಾಪುರ:** ಅಪ್ರಾಪ್ತ ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ ಆರೋಪಿತನಿಗೆ 20 ವರ್ಷ ಕಠಿಣ ಕಾರಾಗೃಹ ಶಿಕ್ಷೆ ಹಾಗೂ ದಂಡ ವಿಧಿಸಿ ತೀರ್ಪು ನ್ಯಾಯಾಲಯ ನೀಡಿದೆ.

ಈ ಘಟನೆ 2022ರಲ್ಲಿ ನಡೆದಿದ್ದು, ಆರೋಪಿತನಾದ ಮಾವಿನಕಟ್ಟಾ ಕುಂದರಗಿಯ ಶೇಖರ ಮಾದೇವ ದೇವಾಡಿಗ(30) ಈತನಿಗೆ ಅಂದಿನ ತನಿಖಾಧಿಕಾರಿ ಸುರೇಶ್ ಎಚ್ ಯಳ್ಳೂರ ಪೊಲೀಸ್‌ನಿರೀಕ್ಷಕರುಯಲ್ಲಾಪುರದಸ್ತಗಿರಿಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿ ತದನಂತರ ಆರೋಪಿತನ ವಿರುದ್ಧ ದೋಷಾರೋಪಣ ಪತ್ರ ತಯಾರಿಸಿ ನ್ಯಾಯಾಲಯಕ್ಕೆ ಸಲ್ಲಿಸಿದ್ದರು. ಈ ಪ್ರಕರಣದ ವಿಚಾರಣೆ ನಡೆಸಿದ ತ್ವರಿತ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಕಾರವಾರ ನ್ಯಾಯಾಲಯದ ನ್ಯಾಯಾಧೀಶರಾದ ಪ್ರತಿಭಾ ಬಂಡುರಾವ್ ಕುಲಕರ್ಣಿ ರವರು ಈ ಪ್ರಕರಣದ ಆರೋಪಿತನಾದ ಶೇಖರ ಮಾದೇವ ದೇವಾಡಿಗ ಈತನು ಅಪರಾಧ ಮಾಡಿದ ಬಗ್ಗೆ ಸಾಕ್ಷಿ ಪುರಾವೆಯಿಂದ ಧೃಡಪಟ್ಟಿದೆ ಎಂದು ತೀರ್ಮಾನಿಸಿ ಮಾ. 17 ರಂದು ಆರೋಪಿತನಿಗೆ 20 ವರ್ಷ ಕಠಿಣ ಕಾರಾಗೃಹ ಶಿಕ್ಷೆ, 1,10,000 ರೂ. ದಂಡ ವಿಧಿಸಿದ್ದಲ್ಲದೇ, ಕಾನೂನು ಸೇವೆಗಳ ಪ್ರಾಧಿಕಾರದಿಂದ 4.00.000 ರೂಪಾಯಿ ನೊಂದವಳಿಗೆ ಪರಿಹಾರ ನೀಡುವಂತೆ ಆದೇಶಿಸಿ ತೀರ್ಪು ನೀಡಿರುತ್ತಾರೆ. ಈ ಪ್ರಕರಣದ ವಾದವನ್ನು ಸರಕಾರ ಪರವಾಗಿ ಗುರುಶಾಂತಯ್ಯ ಕೆ ಕುರ್ಡಿಕೇರಿ ವಿಶೇಷ ಸರಕಾರಿ ಅಭಿಯೋಜಕರು ಕಾರವಾರ ರವರು ಪ್ರಕರಣದಲ್ಲಿ ವಾದ ಮಂಡಿಸಿ ಶಿಕ್ಷೆ ಕೊಡಿಸುವಲ್ಲಿ ಸಫಲರಾಗಿರುತ್ತಾರೆ.

# ನಾಲ್ವರ ಕಾರ್ಮಿಕರ ಸ್ಥಿತಿ ಗಂಭೀರ

**ಹುಬ್ಬಳ್ಳಿ:** ಇಲ್ಲಿಯ ದೇಶಪಾಂಡೆ ನಗರದ ಖಾಸಗಿ ಕಟ್ಟಡವೊಂದರಲ್ಲಿ ರಾಸಾಯನಿಕ ದುಷ್ಪರಿಣಾಮದಿಂದ ನಾಲ್ವರು ಕಾರ್ಮಿರಿಗೆ ಉಸಿರಾಟದ ಸಮಸ್ಯೆ ಎದುರಾಗಿ ಅಸ್ವಸ್ಥಗೊಂಡು ಆಸ್ಪತ್ರೆಗೆ ದಾಖಲಾದ ಘಟನೆ ಮಂಗಳವಾರ ನಡೆದಿದೆ. ಬೆಂಗಳೂರಿನ ಮಾಗಡಿ ನಿವಾಸಿಗಳಾದ ಜಾಫರ್, ಅಮ್ಜದ್, ಜಬಿ ಹಾಗೂ ಹೈದರ್ ಎಂಬ ಕಾರ್ಮಿಕರು ಅಸ್ವಸ್ಥಗೊಂಡವರು. ಎಲ್ಲರ ಸ್ಥಿತಿಯೂ ಗಂಭೀರವಾಗಿದೆ. ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಉಪನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕಳೆದ 10 ದಿನದ ಹಿಂದೆ ಫ್ಲೈವುಡ್ ಹಾಗೂ ಎಲ್‌ಇಡಿ ಕೆಲಸದ ನಿಮಿತ್ತ ನಗರಕ್ಕೆ ಬಂದಿದ್ದರು. ಸೋಮವಾರ ಕೆಲಸ ಮುಗಿಸಿ ಕೊಠಡಿಯಲ್ಲಿ ರಾತ್ರಿ ಮಲಗಿದ್ದಾರೆ. ಆಗ ಉಸಿರಾಟ ಸಮಸ್ಯೆಯಾಗಿ ಅಸ್ವಸ್ಥಗೊಂಡಿದ್ದರು. ಬೆಳಗ್ಗೆ ಅಲ್ಲಿಂದ ಸಿಬ್ಬಂದಿ ಅವರನ್ನು ಗಮನಿಸಿ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಬಳಿಕ ನಗರದ ಕೆಎಂಸಿಆರ್‌ಐ ಆಸ್ಪತ್ರೆಗೆ ಚಿಕಿತ್ಸೆಗೆ ರವಾನಿಸಿದ್ದಾರೆ. ರಾಸಾಯನಿಕ ಆಧಾರಿತ ಕೆಲಸ ನಡೆದಿದ್ದು, ರಾತ್ರಿಯಿಡಿ ಅಲ್ಲಿಯೇ ಮಲಗಿದ್ದರಿಂದ ಉಸಿರಾಟದ ತೊಂದರೆಯಾಗಿರುವ ಶಂಕೆಯಿದೆ. ನಿಖರ ಕಾರಣ ತಿಳಿದಿಲ್ಲ, ವೈದ್ಯರು ಹೊಟ್ಟೆ ಶುಚಿಮಾಡಿ ಚಿಕಿತ್ಸೆ ನೀಡುತ್ತಿದ್ದಾರೆ ಎಂದು ಎನ್. ಶಶಿಕುಮಾರ ತಿಳಿಸಿದರು. ನಾಲ್ವರ ಕಾರ್ಮಿಕರ ಸ್ಥಿತಿ ಗಂಭೀರವಾಗಿದೆ. ಆಕ್ಸಿಜನ್ ನೀಡಿ ಚಿಕಿತ್ಸೆ ನಿಡಲಾಗುತ್ತಿದೆ. ಚಿಕ್ಕ ಕೊಠಡಿಯಲ್ಲಿ ಮಲಗಿದ್ದರಿಂದ ಉಸಿರಾಟದ ತೊಂದರೆಯಾಗಿದ್ದು, ಕಾರ್ಬನ್ ಮೊನಾಕ್ಸೈಡ್ ಟಾಕ್ಸಿಟಿ ಅಥವಾ ಒಪಿ ಪಾಸಿಂಗ್‌ನಿಂದ ಪ್ರಜ್ಞಾಹೀನರಾಗಿರುವ ಸಾಧ್ಯತೆಯಿದೆ ಎಂದು ಕೆಎಂಸಿಆರ್‌ಐ ಆಸ್ಪತ್ರೆ ವೈದ್ಯಕೀಯ ಅಧೀಕ್ಷ ಡಾ. ಈಶ್ವರ ಹಸಬಿ ಹೇಳಿದರು.

# ಎಂಇಎಸ್ ಹಿರಿಯ ನಾಯಕ ದೀಪಕ ದಳವಿ ನಿಧನ



**ಬೆಳಗಾವಿ:** ಮಧ್ಯವರ್ತಿ ಮಹಾರಾಷ್ಟ್ರ ಏಕೀಕರಣ ಸಮಿತಿಯ ಅಧ್ಯಕ್ಷರಾಗಿದ್ದು, ಗಡಿ ಹೋರಾಟದಲ್ಲಿ ಮಹಾರಾಷ್ಟ್ರ ಪರ ಪ್ರಮುಖ ನಾಯಕನಾಗಿದ್ದ ದೀಪಕ ದಳವಿ (84) ಅವರು ಮಂಗಳವಾರ ನಿಧನರಾದರು. ಬೆಳಗಾವಿ ಸೇರಿದಂತೆ ಮರಾಠಿ ಭಾಷಿಗರ ಪ್ರದೇಶಗಳನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕು ಎಂಬ ಬೇಡಿಕೆಯನ್ನು ಮುಂದಿಟ್ಟುಕೊಂಡು ಸ್ಥಾಪಿತವಾದ ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್)ಯಲ್ಲಿ ದೀಪಕ ದಳವಿ ಅವರು ಹಿರಿಯ ನಾಯಕರಾಗಿ ಗುರುತಿಸಿಕೊಂಡಿದ್ದರು. ದಶಕಗಳ ಕಾಲ ಕರ್ನಾಟಕದ ವಿರುದ್ಧವಾಗಿ ಮಹಾರಾಷ್ಟ್ರ ಪರ ಹೋರಾಟ ನಡೆಸಿ, ಹಲವು ಬಾರಿ ಜೈಲು ಶಿಕ್ಷೆಯನ್ನೂ ಅನುಭವಿಸಿದ್ದರು.ಅವರ ಅಂತ್ಯಕ್ರಿಯೆ ಬೆಳಗಾವಿಯ ಶಹಾಪುರ ಸ್ಮಶಾನ ಭೂಮಿಯಲ್ಲಿ ಸಂಜೆ ನೆರವೇರಿತು ಎಂದು ಕುಟುಂಬ ಮೂಲಗಳು ತಿಳಿಸಿವೆ.

# ಅಣ್ಣನಿಂದ ತಮ್ಮನ ಕೊಲೆ



**ನರಗುಂದ:** ತಾಲೂಕಿನ ಹಿರೇಕೊಪ್ಪ ಗ್ರಾಮದ ಹೊರವಲಯದ ಜಮೀನಿನಲ್ಲಿ ಕುರಿಗಾಹಿಗಳಾದ ಅಣ್ಣನಿಂದಲೇ ತಮ್ಮನು ಕೊಲೆಯಾದ ಘಟನೆ ಸೋಮವಾರ ರಾತ್ರಿ ನಡೆದಿದೆ. ಕೊಲೆಯಾದ ವ್ಯಕ್ತಿ ಬೆಳಗಾವಿ ಜಿಲ್ಲೆ ರಾಮದುರ್ಗ ತಾಲೂಕಿನ ಚಿಕ್ಕ ಮೂಲಂಗಿಯ ಫಕೀರಪ್ಪ ಈರಪ್ಪ ಕುರುಗಿನಕೊಪ್ಪ (19) ಎಂದು ಗುರುತಿಸಲಾಗಿದೆ. ಕೊಲೆ ಮಾಡಿದ ಆರೋಪಿ ಅಶೋಕನನ್ನು ಪೊಲೀಸರು ಮಂಗಳವಾರ ವಶಕ್ಕೆ ಪಡೆದಿದ್ದಾರೆ.

ಕೊಲೆ ಆರೋಪಿ ಅಶೋಕ ತಾನೇ ತಮ್ಮನಾದ ಫಕೀರಪ್ಪನನ್ನು ಕೊಲೆ ಮಾಡಿ, ಮುಂಜಾನೆ ಪೊಲೀಸರಿಗೆ ಫೋನ್ ಮಾಡಿದ್ದಾನೆ. ಯಾರೋ ದುಷ್ಕರ್ಮಿಗಳು ನಮ್ಮ ತಮ್ಮನ ತಲೆಯ ಮೇಲೆ ಕಲ್ಲು ಎತ್ತಿಹಾಕಿ ಕೊಲೆ ಮಾಡಿದ್ದಾರೆಂದು ಮಾಹಿತಿ ನೀಡಿದ್ದಾನೆ. ಪೊಲೀಸರು ಸ್ಥಳಕ್ಕೆ ಬಂದು ಪರಿಶೀಲನೆ ನಡೆಸಿದ್ದಾರೆ. ಸ್ಥಳಕ್ಕೆ ಬಂದ ಶ್ವಾನ ನೇರವಾಗಿ ಅಶೋಕನ ಹತ್ತಿರ ಬಂದು ನಿಂತಿದೆ. ಕೂಡಲೇ ಪೊಲೀಸರು ಅಶೋಕನ್ನು ವಶಕ್ಕೆ ಪಡೆದು, ವಿಚಾರಣೆ ನಡೆಸಿದ್ದಾರೆ. ಆಗ ಹುಡುಗಿ ವಿಷಯವಾಗಿ ಫಕೀರಪ್ಪ ಹಾಗೂ ಅಶೋಕನ ನಡುವೆ ಗಲಾಟೆಯಾಗಿದೆ. ಕೊಲೆ ಮಾಡಿದರೆ ಆ ಹುಡುಗಿ ನನಗೆ ಸಿಗುತ್ತಾಳೆ ಎಂದು ಕೊಲೆ ಮಾಡಿರುವುದಾಗಿ ಆರೋಪಿ ಅಶೋಕ ಒಪ್ಪಿಕೊಂಡಿದ್ದಾನೆ. ಪೊಲೀಸರು ಅಶೋಕನನ್ನು ಬಂಧಿಸಿದ್ದಾರೆ. ಪಟ್ಟಣದ ಸಿಪಿಐ ಮಂಜುನಾಥ ನಡುವಿನಮನಿ ನರಗುಂದ ಪೊಲೀಸ ಠಾಣೆಯಲ್ಲಿ ಬುಧವಾರ ಪ್ರಕರಣ ದಾಖಲಿಸಿಕೊಂಡಿದ್ದಾರೆ.

---

**IN THE COURT OF THE 5th ADDITIONAL CIVIL JUDGE & JMFC AT BALLARI**
Crl. M.C. No. 140/2026

Between :-
1) BASAPPA S/O LATE. RUDRAPPA, aged about 40 years.
2) HANUMANTHAPPA S/O LATE. RUDRAPPA, aged about 48 years.
3) GOURAMMA D/O LATE. RUDRAPPA, aged about 46 years.
4) DURGA PANDURANGA S/O LATE. BASAPPA, aged about 37 years.
5) KURUBARA ERAMMA D/O S/O LATE. RUDRAPPA, aged about 35years.
6)HANUMAKKA W/O LATE. RUDRAPPA, aged about 68 years.
7) DYAVAMMA W/O NAGAPPA, D/O. DURGA MALLAPPA, aged about 60 years, all are R/o ward No.1, Badanahatti village, Kurugodu taluk, Ballari District.
....Petitioners

And

The register of Birth & Death's Register, Thasildhar, Taluk office, Kurugodu ....Respondent

**NOTICE**

WHEREAS, the above named petitioner has filed the above petition under section 13(2) of Birth and Deaths Act, 1969 against the respondent for the purpose of seeking date of death of Petitioner's No.1 grandfather by namely DURGAMALLAPPA S/O DURGA RAMANNA was died on 01-05-1998 at Badanahatti village, Kurugodu taluk, Ballari District in the above mentioned address.

Therefore, If any persons are interested you are hereby directed to appear in this court in person or by a pleader duly instructed on 18-04-2026 at about 11.00 a.m to show cause against the above suit, failing which the suit will be heard and determined ex-parte against you.

Given under my hand and seal of the court on this 17th day March-2026.
By Order of the court.
Sd/- Shirestedar,
5th Addl. Civil Judge and JMFC Ballari.
Sd/- Ambanna
Advocate for the petitioner

---

**IN THE COURT OF THE 5th ADDITIONAL CIVIL JUDGE & JMFC AT BALLARI**
Crl. M.C. No. 141/2026

Between :-
1) BASAPPA S/O LATE. RUDRAPPA, aged about 40 years.
2) HANUMANTHAPPA S/O LATE. RUDRAPPA, aged about 48 years.
3) GOURAMMA D/O LATE. RUDRAPPA, aged about 46 years.
4) DURGA PANDURANGA S/O LATE. BASAPPA, aged about 37 years.
5) KURUBARA ERAMMA D/O S/O LATE. RUDRAPPA, aged about 35years.
6)HANUMAKKA W/O LATE. RUDRAPPA, aged about 68 years.
7) DYAVAMMA W/O NAGAPPA, D/O. DURGA MALLAPPA, aged about 60 years, all are R/o ward No.1, Badanahatti village, Kurugodu taluk, Ballari District.
....Petitioners

And

The register of Birth & Death's Register, Thasildhar, Taluk office, Kurugodu ....Respondent

**NOTICE**

WHEREAS, the above named petitioner has filed the above petition under section 13(2) of Birth and Deaths Act, 1969 against the respondent for the purpose of seeking date of death of Petitioner's No.1 grandmother by namely ERAMMA W/O LATE DURGAMALLAPPA was died on 02-05-1995 at Badanahatti village, Kurugodu taluk, Ballari District in the above mentioned address.

Therefore, If any persons are interested you are hereby directed to appear in this court in person or by a pleader duly instructed on 18-04-2026 at about 11.00 a.m to show cause against the above suit, failing which the suit will be heard and determined ex-parte against you.

Given under my hand and seal of the court on this 17th day March-2026.
By Order of the court.
Sd/- Shirestedar,
5th Addl. Civil Judge and JMFC Ballari.
Sd/- Ambanna
Advocate for the petitioner

---

**CHANGE OF NAME**

I, **SHASHIKALA YASHAWANT VANI** (old name) Resident of Kulagi Road Near Old Maruti Temple Dandeli 581325 (address), have changed my name as **VANI VIJENDRA SHAH** (new name) henceforth I will be called and recognized by new name for all future purposes, dated: 17/03/2026.

**CHANGE OF NAME**

I, **SHILPA GUNAKI** have changed my minor son name from **AMOGH** (old name) To **AMOGH KULANKAR GUNAKI** (new name) Resident of No: 302, No: 3518B/15 & 35188/17, Saishubh Mangal Apt, Lingaraj Nagar, Hubballi, Dist: Dharwad 580021, henceforth I will be called and recognized by new name for all future purposes, dated: 17/03/2026.

**CHANGE OF NAME**

I, **NOORJAHAN SAIKALGAR** (old name) Resident of P B Road, Near Vegetable Market, Ranebennur-581115, Dt. Haveri, state of Karnataka (address), have changed my name as **NOORJAHAN NARAGUND** (new name) henceforth I will be called and recognized by new name for all future purposes, dated: 17/03/2026.

**CHANGE OF NAME**

I, **MOHAMMED JUNED DAVANAGERI** (old name) Resident of Momin Galli Behind Urdu Madarasa Ranebennur Dist: Haveri - 581115, have changed my name as **MUHAMMAD JUNED DAVANGERE** (new name) henceforth I will be called and recognized by new name for all future purposes, dated: 17/03/2026.

---

ಕ್ರಿ. ಮಿ. ನಂ : 108/2026
ರಾಣೇಬೆನ್ನೂರ ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ಇವರ ನ್ಯಾಯಾಲಯದಲ್ಲಿ
ಅರ್ಜಿದಾರರು: 1. ಸಾರವ್ವ ಕೋಂ ಹನುಮಂತಪ್ಪ ಪೂಜಾರ ಹಾಗೂ ಇನ್ನೊಬ್ಬರು
ವಿರುದ್ಧ
ಎದುರುಗಾರರು: ತಹಶೀಲ್ದಾರರು, ಜನನ ವ ಮರಣಗಳ ನೊಂದಣಾಧಿಕಾರಿಗಳು, ತಾ| ರಾಣೇಬೆನ್ನೂರ
'ಇಸ್ತಿಯಾರ ನಾಮೆ'
ಅರ್ಜಿದಾರರು, ಮೇಲ್ಕಾಣಿಸಿದ ಅರ್ಜಿಯನ್ನು ಎದುರುಗಾರರ ವಿರುದ್ಧ, 1ನೇ ಅರ್ಜಿದಾರ ಗಂಡ, 2ನೇ ಅರ್ಜಿದಾರನ ತಂದೆಯಾದ ಹನುಮಂತಪ್ಪ ತಂದೆ ರಾಜಪ್ಪ ಪೂಜಾರ ಇವರು ದಿನಾಂಕ 21-07-2006 ರಂದು ರಾಣೇಬೆನ್ನೂರ ತಾಲೂಕು ಗಂಗಾಜಲ ತಾಂಡಾದ ಅರ್ಜಿದಾರರ ಮನೆಯಲ್ಲಿ ಮರಣ ಹೊಂದಿದ್ದು, ಎದುರುಗಾರರಲ್ಲಿ ಮರಣದ ದಿನಾಂಕವು ಎಂಟ್ರಿ ಇರದೇ ಇದ್ದುದರಿಂದ, ಸದರಿ ಫೋತಿಯ ಮರಣದ ದಿನಾಂಕವನ್ನು ಎದುರುಗಾರರು ತಮ್ಮ ನೊಂದಣಿ ಪುಸ್ತಕದಲ್ಲಿ ಎಂಟ್ರಿ ಮಾಡಿಕೊಳ್ಳಲು ಹುಕುಂ ಪಡೆಯುವ ಕುರಿತು ಅರ್ಜಿ ದಾಖಲಿಸಿದೆ.
ಇದಕ್ಕೆ ಯಾರಾದರೂ ತಕರಾರು ವಗೈರೆ ಇದ್ದಲ್ಲಿ ದಿನಾಂಕ 25-4-2026ರಂದು ಮುಂಜಾನೆ 10.30ಘಂಟೆಗೆ ಸದರ ನ್ಯಾಯಾಲಯದಲ್ಲಿ ಖುದ್ದು ಅಥವಾ ವಕೀಲರ ಮುಖಾಂತರ ಹಾಜರಾಗಿ ತಕರಾರು ಸಲ್ಲಿಸಬೇಕು. ಇಲ್ಲವಾದಲ್ಲಿ ಯಾರದೂ ಯಾವುದೇ ರೀತಿಯ ತಕರಾರು ಇಲ್ಲಾ ಅಂತಾ ನ್ಯಾಯಾಲಯದವರು ಮುಂದಿನ ಆದೇಶ ಮಾಡುವರು ತಿಳಿಯಿರಿ ಅಂತಾ ಈ ದಿವಸ ನ್ಯಾಯಾಲಯದ ಮೋಹರು ಹಾಗೂ ಸಹಿಯೊಂದಿಗೆ ಕೊಡಲ್ಪಟ್ಟ ಇಸ್ತಿಯಾರನಾಮೆ.
ಈ ಹೊತ್ತು ಕೋರ್ಟಿನ ಶೀಲು ವ ಮೋಹರು ಖಾತೆ 31-01-2026 ರಂದು ಕೊಡಲ್ಪಟ್ಟಿದೆ.
ಸ್ಥಳ: ರಾಣೇಬೆನ್ನೂರ.
ದಿನಾಂಕ : 31-1-2026.
ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/-ಶಿರಸ್ತೇದಾರರು
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ವ ಪ್ರ ಜೆಎಮ್‌ಎಫ್‌ಸಿ ನ್ಯಾಯಾಲಯ, ರಾಣೇಬೆನ್ನೂರ.
ಸಹಿ/- ಶ್ರೀ ಕೆ. ಎಸ್. ಗೊಣ್ಣಿ
ಅರ್ಜಿದಾರರ ಪರ ವಕೀಲರು,

---

ಕ್ರಿ.ಮಿ. ನಂ.: 112/2026
**ಮಾನ್ಯ ಸಂಚಾರಿ ದಿವಾಣಿ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ರಟ್ಟೀಹಳ್ಳಿ**
ಅರ್ಜಿದಾರರು: 1) ರಾಮನಗೌಡ ತಂದೆ ಶಿವನಗೌಡ ಚಿಗ್ಗೌಡ್ರ ಹಾಗೂ ಇನ್ನೊಬ್ಬರು
ವಿರುದ್ಧ ಎದುರುದಾರರು: 1) ಮಾನ್ಯ ತಹಶಿಲ್ದಾರರು ವ ಜನನ ಮರಣಗಳ ನೊಂದಣಾಧಿಕಾರಿಗಳು ತಹಶಿಲ್ದಾರ ಕಾರ್ಯಾಲಯ ರಟ್ಟೀಹಳ್ಳಿ ಹಾಗೂ ಇನ್ನೊಬ್ಬರು
**ಇಸ್ತಿಯಾರ ನಾಮೆ**
ಮೇಲ್ಕಂಡ ಪ್ರಕರಣದ ಅರ್ಜಿದಾರರ ತಾಯಿಯಾದ ಶ್ರೀಮತಿ ಗಿರಿಜಮ್ಮ ಕೋಂ ಶಿವನಗೌಡ ಚಿಗ್ಗೌಡ್ರ ಇವರು ದಿನಾಂಕ **28/01/2024** ರಂದು ಹಾವೇರಿ ಜಿಲ್ಲೆಯ ರಟ್ಟೀಹಳ್ಳಿ ತಾಲೂಕ ಕುಡಪಲಿ ಗ್ರಾಮದಲ್ಲಿ ಮರಣ ಹೊಂದಿರುತ್ತಾರೆ, ಅಂತಾ ಎದುರುಗಾರರ ಮರಣ ನೊಂದಣಿ ದಾಖಲೆಯಲ್ಲಿ ಮರಣ ದಿನಾಂಕ ದಾಖಲಿಸಿಕೊಂಡು ಮರಣ ಪ್ರಮಾಣ ಪತ್ರ ಪಡೆಯಲು ಅರ್ಜಿ ಸಲ್ಲಿಸಿರುತ್ತಾರೆ.
ಕಾರಣ ಈ ಪ್ರಕರಣದಲ್ಲಿ ಯಾರಾದರೂ ಹಿತಾಸಕ್ತಿಯುಳ್ಳವರು ಇದ್ದಲ್ಲಿ ದಿ: **06/04/2026** ರಂದು ಮುಂಜಾನೆ 11.00 ಗಂಟೆಗೆ ನೀವಾಗಲೀ, ನಿಮ್ಮ ವಕೀಲರ ಮೂಲಕವಾಗಲಿ ನ್ಯಾಯಾಲಯಕ್ಕೆ ಹಾಜರಾಗತಕ್ಕದ್ದು, ಇಲ್ಲವಾದಲ್ಲಿ ಮುಂದಿನ ವಿಚಾರಣೆ ಮಾಡಿ ಪ್ರಕರಣ ಇತ್ಯರ್ಥ-ಪಡಿಸಲಾಗುವುದು.
ಈ ದಿವಸ ದಿ: **16/03/2026** ರಂದು ನ್ಯಾಯಾಲಯದ ಮೊಹರಿನೊಂದಿಗೆ ಕೊಡಲ್ಪಟ್ಟಿತು.
ಸ್ಥಳ: ರಟ್ಟೀಹಳ್ಳಿ ದಿನಾಂಕ: 16-03-2026
ಅರ್ಜಿದಾರರ ಪರ ವಕೀಲರು
ಸಹಿ/- (ಪಿ. ಸಿ. ಸರವಂದ)
ವಕೀಲರು ರಾಣೇಬೆನ್ನೂರ
ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೇದಾರರು,
ಮಾನ್ಯ ಸಂಚಾರಿ ದಿವಾಣಿ & ಜೆ.ಎಂ.ಎಫ್.ಸಿ ನ್ಯಾಯಾಲಯ ರಟ್ಟೀಹಳ್ಳಿ

---



ಕ್ರಿಮಿನಲ್ ಮಿಸಲೇನಿಯಸ ನಂ: 87/2026.
ಮಾ|| ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು, ನವಲಗುಂದ ಇವರ ನ್ಯಾಯಾಲಯದಲ್ಲಿ, ನವಲಗುಂದ
ಅರ್ಜಿದಾರಳು : ಶ್ರೀಮತಿ ಶಕುಂತಲಾ ಕೋಂ ಬಸಪ್ಪ ಮಸಾಲಜಿ,
ವಿರುದ್ಧ
ಎದುರುದಾರ: ಮೇ: ಮುಖ್ಯಾಧಿಕಾರಿಗಳು, ನವಲಗುಂದ ಪುರಸಭೆ,
ಪತ್ರಿಕಾ ಪ್ರಕಟಣೆ.
ಅರ್ಜಿದಾರಳ ಸಹೋದರಿಯಾದ ನಾಗವ್ವ ತಂದೆ ಬಸಪ್ಪ ಹೊಳೆಯಪ್ಪನವರ ಇವಳು ದಿನಾಂಕ 2/12/2023 ರಂದು ನವಲಗುಂದ ತಾಲೂಕ ಪೈಕಿ ನವಲಗುಂದ ನಗರದಲ್ಲಿ ಫೋತಿಯಾದದ್ದು ಇರುತ್ತದೆ ಅಂತಾ ಎದುರುದಾರರ ಜನನ ಮರಣ ನೋಂದಣಿ ಇಲಾಖೆಯಲ್ಲಿ ದಾಖಲ್ ಮಾಡಿಕೊಳ್ಳಲು ಹುಕುಂ ಪಡೆಯುವ ಸಲುವಾಗಿ ಮಾನ್ಯ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿದ್ದು ಇರುತ್ತದೆ. ಈ ಬಗ್ಗೆ ಯಾರದ್ದಾದರೂ ತಕರಾರು ವಗೈರೆ ಇದ್ದರೆ ಅಥವಾ ಯಾರಾದರೂ ದೇರೆ ವಾರಸುದಾರರು ಇದ್ದರೆ ದಿನಾಂಕ: 2?/04/2026ರಂದು ಬೆಳಿಗ್ಗೆ 11:00 ಘಂಟೆಗೆ ಈ ನ್ಯಾಯಾಲಯಕ್ಕೆ ಸ್ವತಃ ಆಗಲಿ ಅಥವಾ ವಕೀಲರ ಮೂಲಕವಾಗಿ ಆಗಲಿ ಹಾಜರ್ ಆಗತಕ್ಕದ್ದು, ಇದಕ್ಕೆ ತಪ್ಪಿದಲ್ಲಿ ಯಾರದೂ ತಕರಾರು ಇರುವುದಿಲ್ಲ ಅಂತಾ ಏಕತರ್ಫಿ ಆದೇಶವನ್ನು ಮಾಡಲಾಗುವುದು. ಈ ಸಾರ್ವಜನಿಕ ನೋಟೀಸು ಇಂದಿನ ದಿವಸ ದಿನಾಂಕ: 16/03/2026 ರಂದು ನ್ಯಾಯಾಲಯದ ಮೊಹರಿನೊಂದಿಗೆ ಕೊಡಲ್ಪಟ್ಟಿತು.
ನವಲಗುಂದ.
ದಿನಾಂಕ:16/03/2026
ನ್ಯಾಯಾಲಯದ ಆದೇಶದ ಮೇರೆಗೆ,
ಶಿರಸ್ತೇದಾರರು,
ಜೆ.ಎಮ್.ಎಫ್.ಸಿ ನ್ಯಾಯಾಲಯ,
ನವಲಗುಂದ, ಜಿಲ್ಲಾ: ಧಾರವಾಡ.
(ಶ್ರೀ ಎಸ್.ಎ.ಪಟ್ಟ ) ಅರ್ಜಿದಾರಳ ಪರ ವಕೀಲರು.

---

ಕ್ರಿಮಿನಲ್ ಮಿಸಲೇನಿಯಸ ನಂ: 88/2026
ಮಾನ್ಯ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನವಲಗುಂದ ಇವರ ನ್ಯಾಯಾಲಯದಲ್ಲಿ ನವಲಗುಂದ
ಅರ್ಜಿದಾರಳು :- ಲಕ್ಷ್ಮೀನಾರ್ಯೇಗಮ್ಮ ಕೋ ಮಹಮ್ಮದಲಿ ನದಾಫ ವಯಾ- 54 ವರ್ಷ, ಉದ್ಯೋಗ: ಮನೆಗೆಲಸ, ಸಾ- ಅಣ್ಣಿಗೇರಿ ತಾ- ಅಣ್ಣಿಗೇರಿ
ವಿರುದ್ಧ
ಎದುರುಗಾರ :- ಮೇ|| ತಹಶೀಲ್ದಾರರು ನವಲಗುಂದ ತಾ- ನವಲಗುಂದ
ಪತ್ರಿಕಾ ಪ್ರಕಟಣೆ
ಪ್ರಸ್ತುತ ಈ ಪ್ರಕರಣವನ್ನು ಅರ್ಜಿದಾರಳು ಮೇ: ನ್ಯಾಯಾಲಯಕ್ಕೆ ತನ್ನ ಚಿಕಮ್ಮಳಾದ ಶ್ರೀಮತಿ ನೂರಜಾನ ಕೋ ಮಹಮ್ಮದ್‌ಗೌಸ ಲುರ್ಫ ಗೌಸುಸಾಬ ಪರಕುಣಿ, ಇವರು ದಿ: 15-06-1972 ರಂದು ಅಣ್ಣಿಗೇರಿ ಗ್ರಾಮದಲ್ಲಿ ಫೋತಿಯಾಗಿದ್ದು, ಸದರಿಯವರ ಮರಣ ಮಾಹಿತಿಯನ್ನು ಎದುರುಗಾರರಲ್ಲಿಯ ಜನನ ಹಾಗೂ ಮರಣ ನೋಂದಣಿ ಪುಸ್ತಕದಲ್ಲಿ ದಾಖಲಿಸಲು ಮೇ|| ನ್ಯಾಯಾಲಯಕ್ಕೆ ಸಲ್ಲಿಸಿದ್ದು ಇರುತ್ತದೆ.
ಸದರ ಅರ್ಜಿಯು ವಿಚಾರಣೆಗೆ ಅಂತಾ ಮಾನ್ಯ ನ್ಯಾಯಾಲಯದವರು ದಿನಾಂಕ :21 /04/2026 ರಂದು ಬೆಳಿಗ್ಗೆ 10-30 ಗಂಟೆಗೆ ನಿಗದಿಯಾಗಿದ್ದು ಕಾರಣ ಅರ್ಜಿಗೆ ಸಂಬಂಧಪಟ್ಟ ಯಾರಾದರೂ ತಕರಾರು ವಗೈರೆ ಇದ್ದಲ್ಲಿ ಮೇಲ್ಕಾಣಿಸಿದ ದಿನಾಂಕ ಮತ್ತು ಸಮಯದಂದು ತಾವಾಗಲಿ ಅಥವಾ ತಮ್ಮ ವಕೀಲರ ಮುಖಾಂತರವಾಗಲಿ ಹಾಜರಾಗಿ ತಕರಾರುಗಳನ್ನು ಸಲ್ಲಿಸತಕ್ಕದ್ದು.
ಒಂದು ವೇಳೆ ಯಾವುದೇ ತಕರಾರು ಬರದೇ ಇದ್ದಲ್ಲಿ ಪ್ರಕರಣದಲ್ಲಿ ಏಕತರ್ಫಿ ಆದೇಶ ಮಾಡಲಾಗುವುದು ಅಂತಾ ಕೊಟ್ಟ ಜಾಹೀರ ನೋಟೀಸು.
ಈ ಹೊತ್ತು ಕೋರ್ಟಿನ ಮೊಹರಿನೊಂದಿಗೆ ಹಾಗೂ ಆದೇಶದೊಂದಿಗೆ ಕೊಡಲ್ಪಟ್ಟಿರುತ್ತದೆ
ನವಲಗುಂದ
ದಿನಾಂಕ: 16-03-2026
ಮಾನ್ಯ ಕೋರ್ಟ ಆಜ್ಞೆ ಮೇರೆಗೆ
ಶಿರಸ್ತೇದಾರರು,
ಜೆ.ಎಮ್.ಎಫ್.ಸಿ ನ್ಯಾಯಾಲಯ ನವಲಗುಂದ
ಶ್ರೀ ಆರ್.ಬಿ.ಐ ವಕೀಲರು ನವಲಗುಂದ.

---

**CHANGE OF NAME**

I, **ANJUM VARAGI** (old name) Resident of SY No: 299/2 Devang Nagar 4th Cross Vadgaon Near Mahedaviya Masjid, Belgaum 590005 (address), have changed my name as **ANJUM SAMEER BOTIYAL** (new name) henceforth I will be called and recognized by new name for all future purposes, dated: 17/03/2026.

**CHANGE OF NAME**

I, **SHAMEEMBANU** (old name) Resident of Pampa Nagar, 5th Cross, Ranebennur - 581115, Dt. Haveri, State of Karnataka (address), have changed my name as **SHAMEEM BANU LABBER** (new name) henceforth I will be called and recognized by new name for all future purposes, dated: 17/03/2026.



---

ಕ್ರಿಮಿನಲ್ ಮಿಸಲೇನಿಸ್ ನಂ:89/2026
ಮಾನ್ಯ ಪ್ರ.ದ.ನ್ಯಾ. ದಂಡಾಧಿಕಾರಿಗಳು ನವಲಗುಂದ ಇವರ ನ್ಯಾಯಾಲಯದಲ್ಲಿ ನವಲಗುಂದ
ಅರ್ಜಿದಾರರು :- ಶ್ರೀ ಅಶೋಕ ತಂದೆ ಮಂಜುನಾಥ ಚವಡಿ
ವಿರುದ್ಧ
ಎದುರುಗಾರರು :- ಮಾ|ತಹಸಿಲ್ದಾರ ಸಾಹೇಬರು ನವಲಗುಂದ, ಜನನ/ಮರಣ ನೋಂದಣಾಧಿಕಾರಿಗಳು ನವಲಗುಂದ
ದಿವಾಣಿ ಪ್ರಕ್ರಿಯಾ ಸಂಹಿತೆ 1908ರ ಆದೇಶ 5 ನಿಯಮ 20 (1ಎ) ರ ಅ ಸಾರ್ವಜನಿಕ ನೋಟಿಸ್
ಇದರಲ್ಲಿ ಅರ್ಜಿದಾರನು ಮೇ|ನ್ಯಾಯಾಲಯಕ್ಕೆ ತನ್ನ ದೊಡ್ಡಮ್ಮಳಾದ ಶ್ರೀಮತಿ ಸರವ್ವ ಕೋಂ ಶಿವಾನಂದ ಚವಡಿ ಇವರು ನವಲಗುಂದ ತಾಲೂಕ ಪೈಕಿ ಹೆಬ್ಬಾಳ ಗ್ರಾಮದಲ್ಲಿ ದಿನಾಂಕ 12/05/2000ರಂದು ಫೋತಿಯಾಗಿದ್ದು, ಸದರಿ ಫೋತಿಯವರ ಮರಣದ ದಾಖಲೆಯನ್ನು ಎದುರುಗಾರನಲ್ಲಿ ದಾಖಲಿಸಿಕೊಳ್ಳಲು ಅರ್ಜಿಯನ್ನು ಸಲ್ಲಿಸಿದ್ದು ಇರುತ್ತದೆ.
ಸದರ ಅರ್ಜಿಯು ಮೇ|ನ್ಯಾಯಾಲಯದಲ್ಲಿ ವಿಚಾರಣೆಗೆ ಅಂತಾ ದಿನಾಂಕ:21/04/26 ರಂದು ಬೆಳಿಗ್ಗೆ 10.30ಗಂಟೆಗೆ ನಿಗದಿಯಾಗಿದ್ದು ಇರುತ್ತದೆ. ಕಾರಣ ಅರ್ಜಿಗೆ ಸಂಬಂಧಪಟ್ಟ ಯಾರಾದರು ತಕರಾರು ವಗೈರೆ ಇದ್ದಲ್ಲಿ ಮೇಲ್ಕಾಣಿಸಿದ ದಿನಾಂಕದಂದು ತಾವಾಗಲಿ ಅಥವಾ ತಮ್ಮ ವಕೀಲರ ಮುಖಾಂತರವಾಗಲಿ ಹಾಜರಾಗಿ ತಕರಾರನ್ನು ಸಲ್ಲಿಸತಕ್ಕದ್ದು. ಒಂದು ವೇಳೆ ಯಾರಾದರು ತಕರಾರು ಬರದೆ ಇದ್ದಲ್ಲಿ ಸದರ ಪ್ರಕರಣವನ್ನು ಏಕತರ್ಫಿ ಆದೇ ಮಾಡಲಾಗುವದು ಅಂತಾ ಕೊಟ್ಟ ಜಾಹಿರ ನೋಟಿಸು, ಈ ಹೊತ್ತು ಕೋರ್ಟ ನ ಮೊಹರಿನೊಂದಿಗೆ ಹಾಗೂ ಆದೇಶದೊಂದಿಗೆ ಕೊಡಲ್ಪಟ್ಟಿರುತ್ತದೆ.
ನವಲಗುಂದ
ದಿನಾಂಕ: 16/03/2026
ಕೋರ್ಟ ಆದೇಶದ ಮೇರೆಗೆ
ಶಿರಸ್ತೇದಾರರು, ಮಾನ್ಯ ದಿವಾಣಿ ನ್ಯಾಯಾಲಯ ನವಲಗುಂದ
ಪ್ರ.ದ.ನ್ಯಾ. ದಂಡಾಧಿಕಾರಿಗಳು ನವಲಗುಂದ
ಅರ್ಜಿದಾರರ ಪರ ನ್ಯಾಯವಾದಿ
ಶ್ರೀಮತಿ ಎಸ್. ಎಮ್. ಚಿಕ್ಕನರಗುಂದ ವಕೀಲರು ನವಲಗುಂದ

---

**IN THE COURT OF THE HON'BLE CIVIL JUDGE AND JMFC AT SIRUGUPPA CRIMINAL MISCELLENEOUS CASE. NO 242 OF 2026**

Between:Chandrahas ....Petitioner
-AND-
The Tahasildar Cum Birth & Death Registrar Taluk Office Siruguppa.....Respondent

**TO WHOMSOEVER IT MAY CONCERN**
**NOTICE**

WHEREAS above named petitioner here in have instituted above petition under section 13[3]of birth and death Acts 1969 against the respondents for purpose of seeking death certificate of petitioner's Mother by name Hanumanthamma. W/o Dhasharathappa (who was died on: 05-01-2007 at the residence of the Petitioner.

Any person interested are here by summoned to appear before this court in person or by pleader duly instructed and able to answer all material questions relating to the petition on 27-04-2026 at 11.00 am before this court. In default of your appearance on the date/ day of above petition will be heard and determined as 'Ex-parte' Given under my hand & seal of the court this 17th day of March-2026

By Order of the court,
Sd/- Chief ministrial officer,
Civil judge & JMFC Court Siruguppa.
Sd/- J.RAJABAKSHI
Advocates Siruguppa

---

**IN THE COURT OF THE HON'BLE CIVIL JUDGE AND JMFC AT SIRUGUPPA CRIMINAL MISCELLENEOUS CASE. NO 83 OF 2026**

Between:Veeresha. K ....Petitioner
-AND-
The Chief officer Cum Birth & Death Registrar TMC Tekkalakote.....Respondent

**TO WHOMSOEVER IT MAY CONCERN**
**NOTICE**

WHEREAS above named petitioner here in have instituted above petition under section 13[3]of birth and death Acts 1969 against the respondents for purpose of seeking death certificate of petitioner's Mother by name Gangamma w/o Amaramma (who was died on: 06-07-2014 at the residence of the Petitioner.

Any person interested are here by summoned to appear before this court in person or by pleader duly instructed and able to answer all material questions relating to the petition on 27-04-2026 at 11.00 am before this court. In default of your appearance on the date/ day of above petition will be heard and determined as 'Ex-parte' Given under my hand & seal of the court this 17th day of March-2026

By Order of the court,
Sd/- Chief ministrial officer,
Civil judge & JMFC Court Siruguppa.
Sd/- J.RAJABAKSHI
Advocates Siruguppa.

---

**IN THE COURT OF THE HON'BLE CIVIL JUDGE AND JMFC AT SIRUGUPPA CRIMINAL MISCELLENEOUS CASE. NO 241 OF 2026**

Between: Chandrahas ....Petitioner
-AND-
The Tahasildar Cum Birth & Death Registrar Taluk Office Siruguppa.....Respondent

**TO WHOMSOEVER IT MAY CONCERN**
**NOTICE**

WHEREAS above named petitioner here in have instituted above petition under section 13[3]of birth and death Acts 1969 against the respondents for purpose of seeking death certificate of petitioner's Elder Mother by name Nagamma W/o Dhasharathappa (who was died on: 01-01-1579 at the residence of the Petitioner.

Any person interested are here by summoned to appear before this court in person or by pleader duly instructed and able to answer all material questions relating to the petition on 24-04-2026 at 11:00 AM before this court. In default of your appearance on the date/ day of above petition will be heard and determined as 'Ex-parte' Given under my hand & seal of the court this 17th day of March-2026.

By Order of the court,
Sd/- Chief ministrial officer,
Civil judge & JMFC Court Siruguppa.
Sd/- J.RAJABAKSHI
Advocates Siruguppa

---

**IN THE COURT OF THE HON'BLE CIVIL JUDGE AND JMFC AT SANDUR CRL MC NO. 467/2026**

Between:Petitioners:A. MARESH & OTHERS
And
Respondent:The Tahasildar Birth and Death Register, Sandur

**TO WHOMSOEVER IT MAY CONCERN**
**NOTICE**

Whereas above named petitioners are situated above petition under section 13(3) of Birth and death registration act, 1969 against the respondent for the purpose of seeking death certificate of petitioner of father by name AGASARA MAHADEVAPPA S/O LATE HANUMANTHAPPA was expired on 30.12.1996 at his sister residence in TARANAGARA Village, Sandur Taluk, Bellari District.

Any person interested are hereby summoned to appear before this Court in person or by a pleader duly instructed and able to answer all material question relating to the petition on 27.04.2026 at 11:00 AM before this Court. In default of your appearance on the date / day of the above will be heard and determined as ex-party. Given under my hand and seal of the court of this 17th day of March-2026.

BY ORDER OF THIS COURT
SHIRESTADAR
Civil Judge & JMFC Court Sandur
YERISWAMY.T (TYN)
Advocates for the petitioners Sandur

---

## ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
## KARNATAK UNIVERSITY, DHARWAD

NAAC Accredited with "A" Grade 2022
"UNIVERSITY WITH POTENTIAL FOR EXCELLENCE"
ವಜ್ರ ಮಹೋತ್ಸವ ವರ್ಷ 1949–2009
ಸಾಮಾನ್ಯ ಆಡಳಿತ ವಿಭಾಗ
G.A.D.
"ಚುನಾವಣಾ ಪರ್ವ ದೇಶದ ಗರ್ವ"
ಪಾವಟೆನಗರ, ಧಾರವಾಡ. ದೂರವಾಣಿ ಸಂ.: 0836-2215358
ಇ-ಮೇಲ್: kudgad@gmail.com, gad@kud.ac.in ವೆಬ್‌ಸೈಟ್: www.kud.ac.in

ನಂ. ಕವಿವಿ/ಜಿಎಡಿ/2025–26/ಟಿಡಿಆರ್–2 ದಿನಾಂಕ: 07.03.2026

### ಇ-ಟೆಂಡರ್ ಪ್ರಕಟಣೆ

2025–26ನೇ ಸಾಲಿಗೆ ಕರ್ನಾಟಕ ವಿಶ್ವವಿದ್ಯಾಲಯ, ಪಾವಟೆನಗರ, ಧಾರವಾಡ, ಘಟಕ ಮಹಾವಿದ್ಯಾಲಯಗಳು ಹಾಗೂ ಸ್ನಾತಕೋತ್ತರ ಕೇಂದ್ರಗಳಾದ ಕಾರವಾರ ಮತ್ತು ಗದಗ ಇಲ್ಲಿಗೆ "ಗ್ರೂಪ್ ಡಿ" ಸಿಬ್ಬಂದಿಯ ಸೇವೆಯನ್ನು ನುರಿತ ಏಜನ್ಸಿಯ ಮುಖಾಂತರ ಪಡೆಯುವ ಬಗ್ಗೆ ಇ–ಟೆಂಡರ್ ಪ್ರಕಟಣೆ.

1) **ಟೆಂಡರ್ ಸಂಖ್ಯೆ:** ಕೆಯು/ಜಿಎಡಿ/2025–26/ಟಿಡಿಆರ್–2, ದಿನಾಂಕ: 09.03.2026. 2) **ಟೆಂಡರ್ ಪ್ರಕಟಣೆ ದಿನಾಂಕ:** 09.03.2026, 3) **ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ (11 ತಿಂಗಳು):** ರೂ. 7,64,48,619/–, 4) **ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ:** 09.03.2026ರ ಮಧ್ಯಾಹ್ನ 13:00 ಗಂಟೆಯಿಂದ, 5) **ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ:** 08.04.2026ರ ಮಧ್ಯಾಹ್ನ 13:00 ಗಂಟೆವರೆಗೆ, 6) **ಬಿಡ್ ಪೂರ್ವಭಾವಿ ಸಭೆ:** ದಿನಾಂಕ: 24.03.2026 ಮಧ್ಯಾಹ್ನ 04.30 ಗಂಟೆಗೆ, ಸ್ಥಳ: ಕುಲಸಚಿವರ ಕಾರ್ಯಾಲಯ, ಕ.ವಿ.ವಿ., ಧಾರವಾಡ, 7) **ತಾಂತ್ರಿಕ ಬಿಡ್ ತೆರೆಯುವ ವೇಳೆ ಮತ್ತು ದಿನಾಂಕ:** 09.04.2026 ಮಧ್ಯಾಹ್ನ 13:05 ಗಂಟೆಗೆ, 8) **ಹಣಕಾಸಿನ ಬಿಡ್ ತೆರೆಯುವ ವೇಳೆ ಮತ್ತು ದಿನಾಂಕ:** ತಾಂತ್ರಿಕ ಪರಿಶೀಲನೆ ನಂತರ ತೆರೆಯಲಾಗುವುದು, ದಿನಾಂಕ: 11.04.2026 ಮಧ್ಯಾಹ್ನ 4:00 ಗಂಟೆಗೆ, 9) **ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ:** ರೂ. 30,57,945/– (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಪಾವತಿಸುವುದು). 10) **ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ:** ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾಲಯ, ಪಾವಟೆನಗರ, ಧಾರವಾಡ – 580 003. ದೂರವಾಣಿ ಸಂಖ್ಯೆ: 0836–2215358.

ಸಹಿ/–
ಕುಲಸಚಿವರು

ವಾಸಾಸಂಇ/ಧಾರವಾಡ/ದಿಶಾ/1362/2025–26

---

## ಕರ್ನಾಟಕ ಸರಕಾರ
## ಜಿಲ್ಲಾ ಪಂಚಾಯತ ಬೆಳಗಾವಿ
## ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ ರಾಜ ಇಂಜನೀಯರಿಂಗ್ ವಿಭಾಗ ಚಿಕ್ಕೋಡಿ

Email :preckdee@gmail.com ಕಚೇರಿ ದೂರವಾಣಿ/ಫ್ಯಾಕ್ಸ ಸಂಖ್ಯೆ: 08338–272131,
ಕ.ಸಂ:ಕಾನಿಅ/ಪಂರಾಇಂ/ಚಿವಿ/ಡಿಬಿ/ಕೆಪಿಪಿಪಿ/2025–26/9066 ದಿನಾಂಕ:10–03–2026.

### (ಕೆಪಿಪಿಪಿ ಅಲ್ಪಾವಧಿ ಟೆಂಡರ ಪ್ರಕಟಣೆ)

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ ಚಿಕ್ಕೋಡಿ ಇವರು KW-1, KW-2, KW-3, KW-4 (Standard Tender Document) ನಿಬಂಧನೆಗಳೊಪಟ್ಟಂತೆ ಪಂಚಾಯತ ರಾಜ್ ಇಂಜನೀಯರಿಂಗ್ ಇಲಾಖೆಯಲ್ಲಿ ಸಿವ್ಹಿಲ್ ನೊಂದಾಯಿತ ಹಾಗೂ ಇ–ಗುತ್ತಿಗೆ ಕುರಿತು ಕೆಪಿಪಿಪಿ ಇವರಿಂದ ನೊಂದಾಯಿಸಿದ ಅರ್ಹ ಗುತ್ತಿಗೆದಾರರಿಂದ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ ವಿವಿದ ಯೋಜನೆ ಅಡಿಯಲ್ಲಿಯ ಕಾಮಗಾರಿಗಳಿಗೆ ಐಟಂವಾರು ಟರ್ನಕೀ ಆಧಾರದ ಮೇಲೆ ಇ–ಟೆಂಡರ ಆಹ್ವಾನಿಸಲಾಗಿದೆ.

1]Last date of request for issue of blank E-bid document through e-Procurment Date: Other works:10-03-2026 To 25-03-2026, 2]Bid Closing & submission Date: 25-03-2026 AT 04:00 PM, 3]Financial Bid Opening Date:27-03-2026 AT 11:00 AM, 4]Pre Bid Meeting Date: [KW-3 & 4 Works Only]:24-03-2026 AT 05:00 PM,5]Techanical Bid Opening Date: [KW-3 & 4 Works Only]:27-03-2026 AT 11:00 AM, 6]Financial Bid Opening Date: [KW-3 & 4 Works Only]:30-03-2026 AT 11:00 AM.

General Works Indent No's:25338, 25329, 25335, 25337, 24382, 11869, 24610, 24412, 25136, 25105, 23616, 23613, SC Works Indent No's:24371, 11870, ST Works Indent No's: 15005, 24107, 25334, Category 1 Works Indent No's:25332, Category 2A Works Indent No's:25328, 11871, 25594,

ಕಾಮಗಾರಿಗಳ ವಿವರ, ಷರತ್ತು ನಿಬಂಧನೆಗಳಿಗಾಗಿ ಈ ಕಚೇರಿಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಹಾಗೂ ವೆಬ್ ಸೈಟ್ https://kppp.karnataka.gov.in/ ಸಂಪರ್ಕಿಸಬಹುದಾಗಿದೆ:

ಸಹಿ/–ಕಾರ್ಯನಿರ್ವಾಹಕ ಅಭಿಯಂತರು
ಪಂ.ರಾಜ್.ಇಂ.ವಿಭಾಗ ಚಿಕ್ಕೋಡಿ.

DIPR/BGM/RO-NO-2099/KSMCA/2025-26

---

## ಮಂಗಳೂರು ಮಹಾನಗರಪಾಲಿಕೆ

DMA/2025-26/WORK INDENT NO.52516, 37260, 54126, 55371, 55556
ದಿನಾಂಕ: 17-03-2026

### ಟೆಂಡರ್ ಪ್ರಕಟಣೆ E-PROCUREMENT OF KARNATAKA

ಮಂಗಳೂರು ಮಹಾನಗರಪಾಲಿಕೆಯ ಸಾಮಾನ್ಯ ನಿಧಿಯಲ್ಲಿ ಕಾಮಗಾರಿಗಳನ್ನು ನಿರ್ವಹಿಸುವ ಬಗ್ಗೆ ಈ ಕಛೇರಿ ಟೆಂಡರ್ ಸಂಖ್ಯೆ: **DMA/2025-26/WORK INDENT NO.52516, 37260, 54126, 55371, 55556** ರಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. 5 ಕಾಮಗಾರಿಗಳ ಒಟ್ಟು ಮೊತ್ತ **ರೂಪಾಯಿ 73.78 ಲಕ್ಷಗಳಾಗಿರುತ್ತದೆ.** ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 02-04-2026 ಅಪರಾಹ್ನ 4.00 ಗಂಟೆ.** ಹೆಚ್ಚಿನ ವಿವರವನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **kppp.karnataka.gov.in** ಮುಖಾಂತರ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಮಹಾನಗರಪಾಲಿಕೆ, ಮಂಗಳೂರು

DIPR/DK/KSMCA/1765/25-26 dt: 17.03.2026

---

ಕರ್ನಾಟಕ ಸರಕಾರ
## ಪ್ರಾದೇಶಿಕ ನಿರ್ದೇಶಕರು (ಪರಿಸರ) ಕಛೇರಿ, (ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ) ಕೋಡಿಬಾಗ, ಕಾರವಾರ–581303

ಇ–ಮೇಲ್: rdekwr2010@gmail.com, ದೂರವಾಣಿ/ಫ್ಯಾಕ್ಸ್: 08382–223997
ಸಂಖ್ಯೆ:ಪ್ರಾನಿಪ/ಬಾ.ಆ.ಸಿ./ಇ.ಟೆ./2025–26/1490 ದಿನಾಂಕ: 12.03.2026

### ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ) (ದ್ವಿ–ಲಕೋಟೆ ಸಿಸ್ಟಂ)

**2026–27ನೇ ಸಾಲಿನಲ್ಲಿ ಪ್ರಾದೇಶಿಕ ನಿರ್ದೇಶಕರು(ಪರಿಸರ), ಕಾರವಾರ ಕಛೇರಿಗೆ ಅಗತ್ಯವಿರುವ ಜಿ.ಆಯ್.ಎಸ್. ಇಂಜಿನಿಯರ್ ಕಮ್ ಸರ್ವೇಯರ್ (GIS Engineer cum Surveyor), ಪ್ರಥಮ ದರ್ಜೆ ಸಹಾಯಕರು (First Division Assistant), ಡ್ರಾಫ್ಟ್‌ಮನ್ (Draftman), ಲಿಟರೇಟ್ ಅಸಿಸ್ಟೆಂಟ್ (literate assistant) ಮತ್ತು ದಲಾಯತ್ (Attender) ಇವರುಗಳ ಸೇವೆ ಅವಶ್ಯವಿದ್ದು, ತಾತ್ಕಾಲಿಕವಾಗಿ 2026–27ನೇ ಸಾಲಿನ ಆರ್ಥಿಕ ವರ್ಷದಲ್ಲಿ ಮಾನವ ಹೊರ ಸಂಪನ್ಮೂಲ ಏಜೆನ್ಸಿ ಮೂಲಕ ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ–1999ರ ಅನುಸಾರ ಅಲ್ಪಾವಧಿ ಮರು ಇ–ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ನಮೂನೆಗಳನ್ನು ಇ–ಪ್ರೊಕ್ಯೂರ್‌ಮೆಂಟ ಪೋರ್ಟಲ್ https://eproc.karnataka.gov.in/ ನಲ್ಲಿ ದಿನಾಂಕ: 16–03–2026 ರಿಂದ ಪಡೆಯಬಹುದಾಗಿದೆ. ವಿವರಗಳು ಈ ಕೆಳಗಿನಂತಿದೆ.**

**(1) ಟೆಂಡರ ತೆರೆಯುವ ಸ್ಥಳ: ಪ್ರಾದೇಶಿಕ ನಿರ್ದೇಶಕರು (ಪರಿಸರ) ಕಛೇರಿ, ಕೋಡಿಬಾಗ, ಕಾರವಾರ. (2) ಟೆಂಡರ್ ಸ್ವೀಕರಿಸುವ ದಿನಾಂಕ ಮತ್ತು ವೇಳೆ: ಟೆಂಡರ್ ಷರತ್ತು ಸಂಬಂಧ ವಿವರ/ ಸ್ಪಷ್ಟೀಕರಣ ಪಡೆಯಲು ಕೊನೆಯ ದಿನಾಂಕ: 27–03–2026 ಸಾಯಂಕಾಲ: 04.00 ಗಂಟೆ, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 31–03–2026 ಸಾಯಂಕಾಲ: 04.30 ಗಂಟೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 01–04–2026 ಸಾಯಂಕಾಲ: 05:00 ಗಂಟೆ, ಆರ್ಥಿಕ ಬಿಡ್ ತೆರೆಯುವ ದಿನಾಂಕ: 04–04–2026 ಪೂರ್ವಾಹ್ನ: 11.30 ಗಂಟೆ, ದಿನಾಂಕ: 31–03–2026 ರಂದು ಟೆಂಡರ್ ಸ್ವೀಕೃತವಾಗದೇ ಇದ್ದಲ್ಲಿ ಮುಂದಿನ 5 ದಿವಸಗಳ ನಂತರ ಮರು ಟೆಂಡರ್ ಕರೆಯಲಾಗುವುದು. (3) ಟೆಂಡರು ಸ್ವೀಕರಿಸುವ ಅಧಿಕಾರಿಗಳು: ಪ್ರಾದೇಶಿಕ ನಿರ್ದೇಶಕರು (ಪರಿಸರ) ಕಾರವಾರ ಇಲ್ಲವೇ ಅವರಿಂದ ನಿಯೋಜಿಸಲ್ಪಟ್ಟ ಸಿಬ್ಬಂದಿಗಳು.**

**ಈ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಪ್ರಾದೇಶಿಕ ನಿರ್ದೇಶಕರು (ಪರಿಸರ) ಕಛೇರಿ, ಕೋಡಿಬಾಗ, ಕಾರವಾರ ರವರ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ. (ದೂರವಾಣಿ ಸಂಖ್ಯೆ: 08382–223997)**

ಸಹಿ/– ಪ್ರಾದೇಶಿಕ ನಿರ್ದೇಶಕರು (ಪರಿಸರ)
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಕಾರವಾರ.

DIPR/KWR/KSMCA/1214/ 25-26 dt. 16.03.2026

---



---

ಕರ್ನಾಟಕ ಸರ್ಕಾರ
## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
## ತಾಲ್ಲೂಕು ಆರೋಗ್ಯ ಅಧಿಕಾರಿಗಳ ಕಛೇರಿ, ಬಳ್ಳಾರಿ. ಬಳ್ಳಾರಿ (ತಾ)(ಜಿ)

ದೂರವಾಣಿ ಸಂಖ್ಯೆ: 08392–270507 E-mail Id : thoballari@gmail.com
No: THO/BLRY/TP/M.TNDR call-1/01/2025-26 Date: 12/03/2026

### ಮಾನ್ಯುಯಲ್ ಟೆಂಡರ್ ಪ್ರಕಟಣೆ

2025–26ನೇ ಸಾಲಿನಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬಳ್ಳಾರಿ ವ್ಯಾಪ್ತಿಯಲ್ಲಿ ಒಳಗೊಂಡಿರುವ ತಾಲ್ಲೂಕು ಆರೋಗ್ಯಾಧಿಕಾರಿಗಳು ಕಾರ್ಯಾಲಯ, ಬಳ್ಳಾರಿ ಇಲ್ಲಿಗೆ ಅವಶ್ಯವಿರುವ MEDICAL EQUIPMENTS & ELECTRONIC & ELECTRICAL EQUIPMENTS ಸಾಮಾಗ್ರಿಗಳನ್ನು ಖರೀದಿಸಲು ಗ್ರೂಪ್ ವೈಸ್ ಐಟಂ ಏಕ ಬಿಡ್ ಟೆಂಡರ್ ಅಹ್ವಾನಿಸಲಾಗಿದೆ. ಅಸಕ್ತಿವುಳ್ಳ ಅಧಿಕೃತ ಮಾರಟಗಾರರು/ ಸರಬರಾಜುದಾರರು ಭಾಗವಹಿಸಲಿರುವ ಸಾಮಾಗ್ರಿಗಳಿಗೆ ಅನ್ವಯವಾಗುಂತೆ ಇ.ಎಂ.ಡಿ ಮೊತ್ತೂವನ್ನು ಡಿ.ಡಿ. ರೂಪದಲ್ಲಿ ಮಾನ್ಯ ತಾಲ್ಲೂಕು ಆರೋಗ್ಯಾಧಿಕಾರಿಗಳು, ಬಳ್ಳಾರಿ ಇವರ ಪದನಾಮದಲ್ಲಿ ಪಡೆದು ಸದರಿ ಮಾನ್ಯುಯಲ್ ಟೆಂಡರ್‌ನಲ್ಲಿ ಭಾಗವಹಿಸಲು ತಿಳಿಸಲಾಗಿದೆ.

| | | |
|---|---|---|
| 1 | ಟೆಂಡರ್ ಫಾರಂ ಶುಲ್ಕ | ರೂ.500–00 (ರೂಪಾಯಿ ಐದು ನೂರು ಮಾತ್ರ) ಡಿ.ಡಿ.ರೂಪದಲ್ಲಿ ತಾಲ್ಲೂಕು ಆರೋಗ್ಯಾಧಿಕಾರಿಗಳು ಬಳ್ಳಾರಿ.ಇವರ ಪದನಾಮದಲ್ಲಿ ಪಡೆಯಲು ಸೂಚಿಸಿದೆ. |
| 2 | ಟೆಂಡರ್ ಫಾರಂ ಪಡೆಯುವ ದಿನಾಂಕ: | ದಿ:12/03/2026 ರಿಂದ 25/03/2026 ಸಮಯ ಬೆಳಿಗ್ಗೆ: 11:00 ಗಂಟೆಯ ವರೆಗೆ. |
| 3 | ಇ.ಎಂ.ಡಿ ಮೊತ್ತ. | The Group Wise Details of the EMD Amount to be remitted by the bidder is mentioned in COL. NO (D) OF Annexure-6 OF PAGE NO 10 Of this tender document. |
| 4 | ಭರ್ತಿ ಮಾಡಿರುವ ಟೆಂಡರ್ ಫಾರಂ ಸಲ್ಲಿಸುವ ಕೊನೆಯ ದಿನಾಂಕ ಮತ್ತು ವಿಳಾಸ | ದಿ: 25/03/2026 ಸಮಯ ಮಧ್ಯಹ್ನ: 03:00 ಗಂಟೆಯ ವರೆಗೆ. ವಿಳಾಸ: ತಾಲ್ಲೂಕು ಆರೋಗ್ಯಾಧಿಕಾರಿಗಳು ಕಾರ್ಯಾಲಯ, ಜಿ.ಆ.ಕು.ಕ ಇಲಾಖೆ, ಜಿಲ್ಲಾ ಆಸ್ಪತ್ರೆ ಆವರಣ, ಅನಂತಪುರ್ ರಸ್ತೆ, ಬಳ್ಳಾರಿ. |
| 5 | ಟೆಂಡರ್ ತೆರೆಯುವ ದಿನಾಂಕ: | ದಿ:25/03/2026 ರಂದು ಸಂಜೆ: 05:00 ಗಂಟೆಗೆ ವಿಳಾಸ: ತಾಲ್ಲೂಕು ಆರೋಗ್ಯಾಧಿಕಾರಿಗಳು ಕಾರ್ಯಾಲಯ, ಜಿ.ಆ.ಕು.ಕ ಇಲಾಖೆ, ಜಿಲ್ಲಾ ಆಸ್ಪತ್ರೆ ಆವರಣ, ಅನಂತಪುರ್ ರಸ್ತೆ, ಬಳ್ಳಾರಿ. |
| 6 | ಟೆಂಡರ್ ಮೊತ್ತ | ರೂ. 5,00,000/– (ರೂಪಾಯಿ ಐದು ಲಕ್ಷ ಮಾತ್ರ) |

ಈ ಕಾರ್ಯಾಲಯದ ದೂರವಾಣಿ ಸಂಖ್ಯೆ: 08392–270507 ಅಥವಾ ಕಛೇರಿಯ ವಿಳಾಸಕ್ಕೆ ಹಾಜರಾಗಿ ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬಹುದು.

ಸಹಿ/– ತಾಲ್ಲೂಕು ಆರೋಗ್ಯಾಧಿಕಾರಿಗಳು, ಬಳ್ಳಾರಿ

ಕರ್ನಾಟಕ ಸರ್ಕಾರ
**ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಸಾಮಾಜಿಕ ಅರಣ್ಯ ಉಪ-ವಿಭಾಗ, ಗದಗ**
**dcfsf.gadag@gmail.com**

ಕಡತ ಸಂಖ್ಯೆ: ಎ2/ಬಿಜಿಟಿ/Work Tender/ಸಿಆರ್–/2025–26
ದಿನಾಂಕ : 16–03–2026

## ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, 2026–27 ನೇ ಸಾಲಿನಲ್ಲಿ ಇಲಾಖೆಯ ವಿವಿಧ ಯೋಜನೆಗಳಡಿ ನೆಡುತೋಪು ನಿರ್ಮಾಣ ಹಾಗೂ ನಿರ್ವಹಣೆ, ಮುಂಗಡ ಕಾಮಗಾರಿ, ಸಸಿಗಳನ್ನು ಬೆಳೆಸುವುದು, ಸಸಿಗಳ ನಿರ್ವಹಣೆ ಮತ್ತು ಇತರೆ ಕಾಮಗಾರಿಗಳ ಸಂಬಂಧ ಇ-ಟೆಂಡರ್ ಆಹ್ವಾನಿಸಲಾಗಿದೆ. ಆದ್ದರಿಂದ ಇ–ಟೆಂಡರನ್ನು ಪಾರದರ್ಶಕತೆ ನಿಯಮ ಹಾಗೂ ಅಧಿನಿಯಮಗಳನ್ವಯ ಟೆಂಡರ್ ಕರೆದು ಅನುಷ್ಠಾನಗೊಳಿಸಲು ನಿರ್ದೇಶನ ನೀಡಿದ ಪ್ರಕಾರ ಈ ಕೆಳಗಿನ ವೇಳಾಪಟ್ಟಿಗಳನ್ವಯ ದಿನಾಂಕ: **16–03–2026** ರಂದು ಟೆಂಡರ್ ಆಹ್ವಾನಿಸಲಾಗಿದೆ. **ಟೇಬಲ್–1**

| ಕ್ರ.ಸಂ | ವಿವರ | ದಿನಾಂಕ |
|---|---|---|
| 1 | ಇ–ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ. | **01–04–2026** ಸಂಜೆ 4.00 ಗಂಟೆವರೆಗೆ |
| 2 | ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ಸಮಯ | **04–04–2026** ಮುಂಜಾನೆ 11.00 ಗಂಟೆಗೆ |
| 3 | ಆರ್ಥಿಕ ಬಿಡ್ ಟೆಂಡರ್ ಪರಿಶೀಲನೆ ದಿನಾಂಕ & ಸಮಯ | **06–04–2026** ಮುಂಜಾನೆ 11.00 ಗಂಟೆಗೆ |

**ಒಂದೊಮ್ಮೆ ಸದರಿ ದಿನಾಂಕದಂದು ಯಾವುದೇ ಗುತ್ತಿಗೆದಾರರು ಭಾಗವಹಿಸದಿದ್ದಲ್ಲಿ ಮರು ಟೆಂಡರನ್ನು 2 ದಿನಗಳವರೆಗೆ ವಿಸ್ತರಿಸಲಾಗಿದೆ. (ಮರು ಟೆಂಡರಿಗೆ ಪ್ರತ್ಯೇಕ ನೋಟಿಫಿಕೇಷನ್ ನೀಡಲಾಗುವುದಿಲ್ಲ.)**

ಮೇಲಿನ ದಿನಾಂಕಗಳಂದು ಸಾರ್ವತ್ರಿಕ ರಜೆಯಿದ್ದಲ್ಲಿ/ಸಾರ್ವತ್ರಿಕ ರಜೆಯೆಂದು ಘೋಷಣೆಯಾದಲ್ಲಿ ಮುಂದಿನ ದಿನಾಂಕಗಳನ್ನು ಪರಿಗಣಿಸುವುದು. ಇ–ಟೆಂಡರ್ ಶರತ್ತು ಹಾಗೂ ಹೆಚ್ಚಿನ ವಿವರಗಳನ್ನು ಸಾರ್ವಜನಿಕರ ತಿಳುವಳಿಕೆಗೋಸ್ಕರ ಇ–ಪೋರ್ಟಲ್ ವೆಬ್‌ಸೈಟ್‌ದಲ್ಲಿ ಇಡಲಾಗಿದೆ.

**ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ**
**ಸಾಮಾಜಿಕ ಅರಣ್ಯ ಉಪ–ವಿಭಾಗ, ಗದಗ.**

ವಾಸಾಸಂಇ/ಗದಗ/ಕೆ.ಎಸ್.ಎಂ.ಸಿ.ಎ/712/2025–26

---

ಕರ್ನಾಟಕ ಸರಕಾರ
**ಕಾರ್ಯನಿರ್ವಾಹಕ ಇಂಜಿನೀಯರರು ಲೋಕೋಪಯೋಗಿ ಇಲಾಖೆ ವಿಭಾಗ ಗದಗ**
**ಕಾರ್ಯಪಾಲಕ ಅಭಿಯಂತರವರ ಕಛೇರಿ, ಲೋಕೋಪಯೋಗಿ ಇಲಾಖೆ,**
ಗದಗ ವಿಭಾಗ ಗದಗ **Phone No.: 08372-238782 Fax No.: 08372-237268**
**E-Mail: eepwdgad@gmail.com**

ನಂ:ಕಾನಿಇಂಗಃಲೋಇಃಪಿಬಿ–1,2,3,4,5:ವಿವಿಧ:2025–26/5697 ದಿನಾಂಕ: 16–03–2026

## ಟೆಂಡರ್ ಪ್ರಕಟಣೆ ಹಾಗೂ ಅವಧಿ ವಿಸ್ತರಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯವರಿಂದ ಲೋಕೋಪಯೋಗಿ ಇಲಾಖೆ ಗದಗ ವಿಭಾಗದಡಿ ವಿವಿಧ ಲೆಕ್ಕ ಶೀರ್ಷಿಕೆ ಅನುದಾನದ ಅಡಿಯಲ್ಲಿಯ ಒಟ್ಟು **ರೂ. 868.00 ಲಕ್ಷ** ಮೊತ್ತದಲ್ಲಿ ಒಟ್ಟು 14 ಕಾಮಗಾರಿಗೆ (ಕನಿಷ್ಠ ಮೊತ್ತ **ರೂ. 5.00 ಲಕ್ಷ** ಹಾಗೂ ಗರಿಷ್ಠ ಮೊತ್ತ **ರೂ. 196.00 ಲಕ್ಷ**) ಕೆಪಿಪಿಪಿ (kppp) ನಲ್ಲಿ ನೊಂದಣಿ ಮಾಡಿಸಿದ ಲೋಕೋಪಯೋಗಿ ಇಲಾಖೆಯ ಅರ್ಹ ಗುತ್ತಿಗೆದಾರರಿಂದ ಕೆಪಿಪಿಪಿ (kppp) ಸ್ಟಾಂಡರ್ಡ್ ಬಿಡ್ ಡಾಕ್ಯುಮೆಂಟ್ ಕೆ ಡಬ್ಲ್ಯೂ–1, 2, 3, ಹಾಗೂ 4 ರ ಪ್ರಕಾರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಸಂಪೂರ್ಣ ವಿವರಗಳಿಗಾಗಿ ಅಂತರ್‌ಜಾಲ ವಿಳಾಸ **http://www.kppp.Karnataka.gov.in/** ದಲ್ಲಿ ನೋಡಿಕೊಳ್ಳಬಹುದು.

**Work Indent No:- Part-1 32758 Category-2A, 32761, 32771-ST, 32775, 32764 -SC, 32779,**

ಮೇಲಿನ ಕಾಮಗಾರಿಗಳ, ಈ ಕಛೇರಿ ಟೆಂಡರ್ ಪ್ರಕಟಣೆ ಪತ್ರ ನಂ: 5597 ದಿನಾಂಕ: **10–03–2026** ರಲ್ಲಿ ವಿವಿಧ ಲೆಕ್ಕ ಶೀರ್ಷಿಕೆಯಡಿ ಕರೆಯಲಾದ ಕಾಮಗಾರಿಗಳ ಟೆಂಡರ್ ವಿವರ ಪ್ರಶ್ನೋತ್ತರ ದಿನಾಂಕ: **27–03–2026** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **30–03–2026 ಮಧ್ಯಾಹ್ನ 4.00 ಗಂಟೆಯ ವರೆಗೆ** , ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **01–04–2026** ಆರ್ಥಿಕ ಬಿಡ್ ತೆರೆಯುವ ದಿನಾಂಕ: **02–04–2026** ಎಂದು ಅವಧಿ ವಿಸ್ತರಣೆ ಮಾಡಲಾಗಿದೆ.

**Work Indent No:- Part-2 29111/Call-2, 32276, 31841-ST, 31873-Category-2A, 34798, 34794, 34797, 34529.**

ಮೇಲಿನ ಕಾಮಗಾರಿಗಳ ಟೆಂಡರ್ ವಿವರ ಪ್ರಶ್ನೋತ್ತರ ದಿನಾಂಕ: **23–03–2026** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **25–03–2026 ಮಧ್ಯಾಹ್ನ 4.00 ಗಂಟೆಯ ವರೆಗೆ** , ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **26–03–2026**. ಆರ್ಥಿಕ ಬಿಡ್ ತೆರೆಯುವ ದಿನಾಂಕ: **27–03–2026.**

ಪರಿಶಿಷ್ಟ ಜಾತಿ ಮತ್ತು ಪಂಗಡ, ಕೆಟಗರಿ–I ಹಾಗೂ ಕೆಟಗರಿ–2ಎ ಕ್ಕೆ ಮೀಸಲಿರಿಸಿದ ಕಾಮಗಾರಿಗಳ ಟೆಂಡರ್‌ಗಳಲ್ಲಿ ಭಾಗವಹಿಸುವ ಗುತ್ತಿಗೆದಾರರು ಕಡ್ಡಾಯವಾಗಿ ಸಕ್ಷಮ ಪ್ರಾಧಿಕಾರದಿಂದ ಪಡೆದ ಪೂರಕ ದಾಖಲೆಗಳಾದ ಜಾತಿ ಪ್ರಮಾಣ ಪತ್ರ , 10 ವರ್ಷದ ರಹವಾಸಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

GST shall be paid separately as per prevailing Government Order. The increase in GST shall not be paid in the extended period of contract for which the contractor alone is responsible for delay as determined by the authority while granting the extension of time.

ಸಹಿ/–
**ಕಾರ್ಯಪಾಲಕ ಅಭಿಯಂತರರು**
**ಲೋಕೋಪಯೋಗಿ ಇಲಾಖೆ, ಗದಗ ವಿಭಾಗ ಗದಗ**

ವಾ.ಸಾ.ಇ./ಗದಗ/711/2025–26/ದೇಶಪಾಂಡೆಪಬ್ಲಿಸಿಟಿ

---



---

**ಕರ್ನಾಟಕ ನೀರಾವರಿ ನಿಗಮ ನಿಯಮಿತ**
(ಕರ್ನಾಟಕ ಸರ್ಕಾರದ ಉದ್ಯಮ)
**ಕಾರ್ಯನಿರ್ವಾಹಕ ಇಂಜಿನೀಯರವರ ಕಛೇರಿ,**
**ಕನೀನಿನಿ, ಸಿಂಗಟಾಲೂರು ಏತ ನೀರಾವರಿ ಯೋಜನೆ, ವಿಭಾಗ ನಂ–1, ಮುಂಡರಗಿ, ಗದಗ ಜಿಲ್ಲೆ. Ph No: 08371 – 295016**
E-mail ID : **eeslis1mdg@gmail.com**

## ಟೆಂಡರ್ ಪ್ರಕಟಣೆ
**(ONLY THROUGH "KPP-Procurement" SYSTEM)**

ಉಲ್ಲೇಖ : 1. ಈ ಕಛೇರಿ ಟೆಂಡರ್ ಪ್ರಕಟಣೆ ಪತ್ರ ಸಂಖ್ಯೆ: 1554/2025–26 ದಿನಾಂಕ: 13.03.2026
2. ಈ ಕಛೇರಿ ಟೆಂಡರ್ ಪ್ರಕಟಣೆ ಪತ್ರ ಸಂಖ್ಯೆ: 1553/2025–26 ದಿನಾಂಕ: 13.03.2026

ಸಿಂಗಟಾಲೂರು ಏತ ನೀರಾವರಿ ಯೋಜನೆ ಮುಂಡರಗಿ ಕಛೇರಿವತಿಯಿಂದ ಗದಗ ಜಿಲ್ಲೆ ಲಕ್ಷ್ಮೇಶ್ವರ ತಾಲೂಕಿನ ಗುಲಗಂಜಿ ಕೊಪ್ಪದ ಗ್ರಾಮದಲ್ಲಿರುವ ದುಂಡಿ ಬಸವೇಶ್ವರ ಸ್ವಾಮಿ ದೇವಸ್ಥಾನದ ಸಮೀಪ ರೈತ ಭವನ ನಿರ್ಮಿಸುವ ಕಾಮಗಾರಿಗೆ ಲೆಕ್ಕಶೀರ್ಷಿಕೆ 4701 ರಡಿ (Work Indent No.4069) ಉಲ್ಲೇಖ(1)ರ ಟೆಂಡರ್ ಪ್ರಕಟಣೆ ಹಾಗೂ ಯೋಜನೆಯ ಎಡಭಾಗದಲ್ಲಿ ಬರುವ ಲಿಫ್ಟ್–1 ರ ಟ್ರಾನ್ಸ್‌ಫಾರ್ಮರ್ ದುರಸ್ಥಿ ಕಾಮಗಾರಿಗೆ ಲೆಕ್ಕಶೀರ್ಷಿಕೆ 2701 ರಡಿ (Work Indent No.4202) ಉಲ್ಲೇಖ(2)ರ ಟೆಂಡರ್ ಪ್ರಕಟಣೆಯಲ್ಲಿ ಸೂಚಿಸಿರುವಂತೆ, ಅರ್ಹ ಗುತ್ತಿಗೆದಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಕೆಪಿಪಿ–ಪೋರ್ಟಲ್ ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ. ಅದರಂತೆ, ಕಾಮಗಾರಿಗಳ ಟೆಂಡರ್‌ಗೆ ಇಟ್ಟ ಮೊತ್ತವು (ಜಿ.ಎಸ್.ಟಿ. ಸೇರಿ) ರೂ. **50.00** ಲಕ್ಷ ಮತ್ತು ರೂ. **183.45** ಲಕ್ಷ ಆಗಿರುತ್ತದೆ ಹಾಗೂ ಈ ಕಾಮಗಾರಿಗಳಿಗೆ ಇ.ಎಂ.ಡಿ. ಮೊತ್ತವು ರೂ. **1.00** ಲಕ್ಷ ಹಾಗೂ ರೂ. **2.33** ಲಕ್ಷಗಳು ಆಗಿರುತ್ತದೆ.

ಇನ್ನುಳಿದಂತೆ, ಸದರಿ ಟೆಂಡರಿಗೆ ಸಂಬಂಧಿಸಿದ ಷರತ್ತು/ನಿಯಮಾವಳಿಗಳ ಮಾಹಿತಿಯನ್ನು ಕೆಳಗೆ ಸಹಿ ಮಾಡಿರುವ ಅಧಿಕಾರಿಯವರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ದಿನಾಂಕ : **16.03.2026** ರ ನಂತರ "https://kppp.karnataka.gov.in" ವೆಬ್‌ಸೈಟ್‌ನಲ್ಲಿ ಟೆಂಡರ್ ಡಾಕ್ಯೂಮೆಂಟ್ ಅನ್ನು ಡೌನ್‌ಲೋಡ್ ಮಾಡಿಕೊಂಡು ಬಿಡ್‌ನ್ನು ಸಲ್ಲಿಸಬಹುದಾಗಿರುತ್ತದೆ. ಸದರಿ ಕಾಮಗಾರಿಗಳ ಟೆಂಡರ್‌ಗೆ ಬಿಡ್ಡನ್ನು ಸಲ್ಲಿಸಲು ಕೊನೆಯ ದಿನಾಂಕ : **06.04.2026** ಎಂದು ಮತ್ತು ಟೆಂಡರ್ ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ : **08.04.2026** ಎಂದು ನಿಗದಿಪಡಿಸಿದೆ. ಅದರಂತೆ, Work Indent No.4202 ಟೆಂಡರ್ ಕುರಿತು Pre-bid ಸಭೆಯನ್ನು ದಿನಾಂಕ : **24.03.2026** ರಂದು ಕಾರ್ಯಪಾಲಕ ಇಂಜನೀಯರ್‌ರವರ ಕಛೇರಿ, ಸಿಂಗಟಾಲೂರು ಏತ ನೀರಾವರಿ ಯೋಜನೆ, ವಿಭಾಗ–01 ಮುಂಡರಗಿ ಕಛೇರಿಯಲ್ಲಿ ನಿಗದಿಪಡಿಸಲಾಗಿರುತ್ತದೆ. ಇನ್ನಿತರೆ ಹೆಚ್ಚಿನ ಮಾಹಿತಿಯನ್ನು KPP-Procurement Helpdesk Phone No's: 080-46010000, 080-68948777, 09240214000 & 09240214001 ಸಂಪರ್ಕಿಸಿ ಪಡೆಯಬಹುದಾಗಿದೆ. ನಿಬಂಧನೆಗೊಳಪಟ್ಟ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರ ಪಡೆದಿರುವ ಅಧಿಕಾರಿಯು ಎಲ್ಲಾ ಅಥವಾ ಯಾವುದೇ ಟೆಂಡರ್‌ನ್ನು, ಕಾರಣ ನೀಡದೆ ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

**ಸಹಿ/– ಕಾರ್ಯಪಾಲಕ ಅಭಿಯಂತರರು,**
**ಸಿಂ.ಏ.ನೀ.ಯೋಜನೆ, ನಂ. 1 ವಿಭಾಗ, ಕ.ನೀ.ನಿ.ನಿ., ಮುಂಡರಗಿ, ಜಿ॥ ಗದಗ**

ವಾಸಾಸಂಇ/ಗದಗ/ಕೆಎಸ್‌ಎಂಸಿಎ/713/2025–26

---

ಕರ್ನಾಟಕ ಸರ್ಕಾರ
ಉಪನಿರ್ದೇಶಕರವರ ಕಾರ್ಯಾಲಯ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ರಿಮ್ಯಾಂಡ್ ಹೋಂ ಕಟ್ಟಡ, ಶಿವಾಜಿ ನಗರ, ಬೆಳಗಾವಿ
**Email: ddwcdbgm@gmail.com** ದೂರವಾಣಿ: **0831–2407235**

ಸಂ:ಉನಿಬೆ/ಮಮಅಇ/ಲೋ.ಸ.ಟಿ./ಡಿ.ಎಂ.ಎಫ್./ಟ್ಯಾ.ಬಿ./ದ.ಪ.ಪ್ರ/2025–26 ದಿನಾಂಕ:16–03–2026

## : ದರ ಪಟ್ಟಿ ಆಹ್ವಾನ ಪ್ರಕಟಣೆ :

2025–26ನೇ ಸಾಲಿನ ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿ (DMF) ಯೋಜನೆ ಅಡಿಯಲ್ಲಿ ಮಾನ್ಯ ಲೋಕಸಭಾ ಸದಸ್ಯರು ಸೂಚಿಸಿರುವಂತೆ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ಲೋಕಸಭಾ ಮತಕ್ಷೇತ್ರದ ವ್ಯಾಪ್ತಿಯ ಎಂ.ಆರ್.ಡಬ್ಲ್ಯೂ./ಯು.ಆರ್.ಡಬ್ಲ್ಯೂ.ಗಳಿಗೆ 10 ಟ್ಯಾಬ್ ಗಳನ್ನು ಖರೀದಿಸಲು ಅರ್ಹ ಜಿ.ಎಸ್.ಟಿ. ನೊಂದಾಯಿತ ಉತ್ಪಾದಕರು/ಸರಬರಾಜುದಾರರಿಂದ ದರಪಟ್ಟಿ ಆಹ್ವಾನಿಸಲಾಗಿದ್ದು, ಅರ್ಹ ಉತ್ಪಾದಕರು/ಸರಬರಾಜುದಾರರು ದಿನಾಂಕ:26–03–2026 ರ ಸಂಜೆ 5–00 ಗಂಟೆಯ ಒಳಗಾಗಿ ಉಪಕರಣಗಳ ಸ್ಪೆಸಿಫಿಕೇಶನ್ (ಮಾದರಿ) ವಿವರವನ್ನು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಛೇರಿಯಿಂದ ಪಡೆದುಕೊಳ್ಳಲು ಮತ್ತು ದಿನಾಂಕ: 27–03–2026 ಸಂಜೆ 5–00 ಗಂಟೆಯ ಒಳಗಾಗಿ ಮುಚ್ಚಿದ ಲಕೋಟೆಯಲ್ಲಿ ದರಪಟ್ಟಿಯನ್ನು ಸಲ್ಲಿಸಲು ತಿಳಿಸಿದೆ.

ದರಪಟ್ಟಿ ವಿವರವನ್ನು ಮತ್ತು ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಅಂಗವಿಕಲರ ಕಲ್ಯಾಣಾಧೀಕಾರಿಗಳ ಕಚೇರಿ ಶಿವಾಜಿ ನಗರ ಬೆಳಗಾವಿ. (0831– 2476096) ಇಲ್ಲಿಗೆ ಸಂಪರ್ಕಿಸಬಹುದಾಗಿದೆ.

**ಸಹಿ/–ಉಪನಿರ್ದೇಶಕರು**
**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಬೆಳಗಾವಿ**

DIPR/BGM/RO-NO-2105/KSMCA/2025-26

---

**ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ, ವಿಜಯಪುರ ವಿಭಾಗ, ವಿಜಯಪುರ**

ಸಂಖ್ಯೆ:ಕಕರಸಾ/ವಿವಿ/ಸಂಚಾರ/ವಾಣಿಜ್ಯ/3776/2025–26 ದಿನಾಂಕ:14.03.2026

## ಇ–ಟೆಂಡರ್ ಪ್ರಕಟಣೆ ಸಂಖ್ಯೆ: 10/2026
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ವಿಜಯಪುರ ವಿಭಾಗದ ವ್ಯಾಪ್ತಿಯಲ್ಲಿ ಬರುವ ಬಸ್ ನಿಲ್ದಾಣಗಳಲ್ಲಿ ಖಾಲಿ ಇರುವ ಹಾಗೂ ಖಾಲಿಯಾಗಲಿರುವ ವಾಣಿಜ್ಯ ಮಳಿಗೆಗಳು, ಉಪಹಾರ ಗೃಹಗಳು/ತೆರೆದ ಸ್ಥಳಗಳಿಗೆ ಇ–ಪ್ರೊಕ್ಯೂರ್‌ಮೆಂಟ್ (ಆನ್‌ಲೈನ್) ಮೂಲಕ ಟೆಂಡರ್ ಆಹ್ವಾನಿಸಲಾಗಿದ್ದು, ದಿನಾಂಕಗಳ ವಿವರ ಈ ಕೆಳಗಿನಂತೆ ಇರುತ್ತವೆ.

1) ಅರ್ಜಿಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸಲು ಕೊನೆಯ **ದಿನಾಂಕ: 15.04.2026** ರ 17.28 **ಗಂಟೆಯ ವರೆಗೆ.**

2) ಆನ್‌ಲೈನ್ ಮೂಲಕ ಇ–ಟೆಂಡರ್ ತೆರೆಯುವ **ದಿನಾಂಕ: 17.04.2026** ರಂದು ಬೆಳಿಗ್ಗೆ 10.00 **ಗಂಟೆಯ ನಂತರ.**

ಟೆಂಡರ್ ಪ್ರಕಟಣೆಯ ಪ್ರತಿಯನ್ನು ಇ–ಪ್ರೊಕ್ಯೂರ್‌ಮೆಂಟ್ ರವರ ಹೊಸ ತಂತ್ರಾಂಶ https://kppp.karnataka.gov.in ದಿಂದ ಪಡೆಯಬಹುದಾಗಿದೆ ಅಥವಾ DTO ರವರ ದೂರವಾಣಿ ಸಂಖ್ಯೆ:7760992252 ಗೆ ಕರೆಮಾಡಿ ಪಡೆಯಬಹುದಾಗಿದೆ ಅಥವಾ ವಾಣಿಜ್ಯ ವಿಷಯ ನಿರ್ವಾಹಕರನ್ನು ಕಚೇರಿ ವೇಳೆಯಲ್ಲಿ ಬಂದು ವಿಚಾರಿಸಬಹುದಾಗಿದೆ. ಕ.ಕ.ರ.ಸಾ ನಿಗಮ ವಿಜಯಪುರ ವಿಭಾಗದ ವಿಭಾಗೀಯ ಕಚೇರಿ (ಸಂಚಾರ ಶಾಖೆ) ಯಲ್ಲಿ ಬಂದು ವಿಚಾರಿಸಬಹುದಾಗಿದೆ.

**ಸಹಿ/– ವಿಭಾಗೀಯ ನಿಯಂತ್ರಣಾಧಿಕಾರಿ,**
**ಕ.ಕ.ರ.ಸಾ ನಿಗಮ, ವಿಜಯಪುರ ವಿಭಾಗ**

ವಾಸಾಸಂಇ/ವಿಜಯಪುರ/815/ಕೆಎಸ್‌ಎಂಸಿಎ/2025–26

---

**ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್**
(ಕರ್ನಾಟಕ ಸರ್ಕಾರದ ಉದ್ಯಮ)
ನಂ.ಎಂ.115, 116, 117, 4ನೇ ಮುಖ್ಯ ರಸ್ತೆ, ಇಂಡಸ್ಟ್ರೀಯಲ್ ಎಸ್ಟೇಟ್, ರಾಜಾಜಿನಗರ, ಬೆಂಗಳೂರು–560 010
ಇ–ಮೇಲ್: ee2bbmp@kridl.net ಮೊಬೈಲ್: 9972959989

ಸಂಖ್ಯೆ: ಇಇ–2/ಕೆಆರ್‌ಐಡಿಎಲ್/ಡಬ್ಲ್ಯೂಕೆಎಸ್/ಟಿಎಸ್‌ಡಿ/ಮೈನಾರಿಟಿ/2025–26 ದಿನಾಂಕ: 17.03.2026

## ಟೆಂಡರ್ ಪ್ರಕಟಣೆ

ವ್ಯವಸ್ಥಾಪಕ ನಿರ್ದೇಶಕರು, ಕೆಆರ್‌ಐಡಿಎಲ್ ಇವರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಬಿಬಿಎಂಪಿ ವಿಭಾಗ–2 ಇವರು ಟೆಂಡರ್ ಉಲ್ಲೇಖ ಸಂಖ್ಯೆ: ಕೆಆರ್‌ಐಡಿಎಲ್/2025–26/ಒಡಬ್ಲ್ಯೂ/ವರ್ಕ್_ಇಂಡೆಂಟ್41, ಮತ್ತು ಕೆಆರ್‌ಐಡಿಎಲ್/2025–26/ಒಡಬ್ಲ್ಯೂ/ವರ್ಕ್_ಇಂಡೆಂಟ್42ರ ಅನ್ವಯ ಕಾಮಗಾರಿಗಳಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ (ಕೆಪಿಪಿಪಿ) ಮೂಲಕ ದ್ವಿ ಲಕೋಟೆ ಪದ್ಧತಿಯಲ್ಲಿ ಇ–ಟೆಂಡರ್ ಆಹ್ವಾನಿಸಿದ್ದಾರೆ. ಪ್ರತಿ ಕಾಮಗಾರಿಯ ಅಂದಾಜು ಯೋಜನಾ ವೆಚ್ಚ **ರೂ.885.00 ಲಕ್ಷಗಳು.** ಇಎಂಡಿ ಮೊತ್ತ: **ರೂ.13.50 ಲಕ್ಷ.** ಟೆಂಡರಿನಲ್ಲಿ ಭಾಗವಹಿಸಲು ಅಪೇಕ್ಷಿಸುವ ಆಸಕ್ತಿಯುಳ್ಳ ಗುತ್ತಿಗೆದಾರರು/ಸಂಸ್ಥೆಗಳು kppp ವೆಬ್‌ಸೈಟ್:**https://kppp.karnataka.gov.in** ಮೂಲಕ ಮಾತ್ರ ಟೆಂಡರ್ ವೀಕ್ಷಿಸಬಹುದು, ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಟೆಂಡರ್ ಸಲ್ಲಿಸಬಹುದು. ನಿರ್ದಿಷ್ಟ ಟೆಂಡರ್‌ಗಳ ದಿನಾಂಕಗಳು ಕೆಳಕಂಡಂತಿರುವುದು:

ಆನ್‌ಲೈನ್ ವಿಚಾರಣೆಯ ಕೊನೆಯ ದಿನಾಂಕ ಮತ್ತು ಸಮಯ: **06.04.2026** ರಂದು **15.00** ಗಂಟೆಯ ವರೆಗೆ. ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: **06.04.2026** ರಂದು **16.30** ಗಂಟೆಯ ವರೆಗೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **08.04.2026** ರಂದು **11.00** ಗಂಟೆಗೆ. ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **10.04.2026** ರಂದು **11.00** ಗಂಟೆಗೆ. ಹೆಚ್ಚಿನ ಮಾಹಿತಿಗಾಗಿ **https://kppp.karnataka.gov.in** ಇಲ್ಲಿಗೆ ಭೇಟಿ ನೀಡಿ.

**ಸಹಿ/–ಕಾರ್ಯಪಾಲಕ ಅಭಿಯಂತರರು, ಕೆಆರ್‌ಐಡಿಎಲ್,**
**ಬಿಬಿಎಂಪಿ ವಿಭಾಗ–2, ಬೆಂಗಳೂರು**

---

## CHANGE OF NAME

I, **Rafisab Tahasheldar.** R/0 Sidnekoppa Village, Tq: Kukanoor, Dist: Koppal, State: Karnataka, do hereby state that, my daughter`s name entered in different documents with surname spelt differently as **1) ZIYANAZ R TAHASHEELDAR 2) ZIYANAZ R TAHASHEELDAR.** Both these names are one and the same and refers to her only vide afficavit sworn before Notary Ramappa at Yalburga on 17.03.2026.

---

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿ ಕೊಡುವ ಮಾಹಿತಿ, ಗುಣಮಟ್ಟ ಮುಂತಾದವುಗಳ ಕುರಿತು ಸಾರ್ವಜನಿಕರು ಜಾಹೀರಾತು ನೀಡಿದವರೊಡನೆ ವ್ಯವಹರಿಸಬೇಕು. ಇದಕ್ಕೆ ಪತ್ರಿಕೆ ಜವಾಬ್ದಾರಿ ಇಲ್ಲ.

ಜಾಹೀರಾತು ವ್ಯವಸ್ಥಾಪಕರು

---

ಕರ್ನಾಟಕ ಸರಕಾರ
**ಕಾರ್ಯನಿರ್ವಾಹಕ ಇಂಜಿನಿಯರವರ ಕಛೇರಿ,**
**ಲೋ.ಇ. ಉಡುಪಿ ವಿಭಾಗ - ಉಡುಪಿ - 576101**
**ದೂರವಾಣಿ & ಫ್ಯಾಕ್ಸ್: (0820) 2531802**

ನಂ. ಪಿಡಬ್ಲ್ಯೂಡಿ:ಯುಡಿಎನ್:ಎನ್‌ಐಟಿ: 54:2025–26: ಎಇ–2 ದಿನಾಂಕ: 17.03.2026

## ಅಲ್ಪಾವಧಿ ಟೆಂಡರ್ ಪ್ರಕಟಣೆ (2ನೇ ಕರೆ)

2025–26ನೇ ಸಾಲಿನ ರೂ. 19.99 ಲಕ್ಷದಿಂದ 76.04 ಲಕ್ಷದವರೆಗಿನ (ಜಿ.ಎಸ್.ಟಿ. ಹೊರತುಪಡಿಸಿ), 5054–80–190–0–01–132 – ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ಬಂಡವಾಳ ವೆಚ್ಚ ಯೋಜನೆಯಡಿಯ 7 ಬೃಹತ್ ಸೇತುವೆಗಳ Retrofitting/ದುರಸ್ತಿ ಕಾಮಗಾರಿಗಳಿಗೆ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ ಅರ್ಹ ಗುತ್ತಿಗೆದಾರರಿಂದ "ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್" "kppp.karnataka.gov.in" ಮುಖಾಂತರ ಟೆಂಡರನ್ನು ಕರ್ನಾಟಕ ಟ್ರಾನ್ಸ್‌ಫರೆನ್ಸಿ ಇನ್ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಆ್ಯಕ್ಟ್ – 2023ರಲ್ಲಿ ನಿರೂಪಿತ ಶರ್ತಗೊಳಪಟ್ಟು ಟೆಂಡರನ್ನು ಆಹ್ವಾನಿಸಲಾಗಿದ್ದು, ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ "kppp.karnataka.gov.in" ಮುಖಾಂತರ ಕಾಮಗಾರಿಯ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:27.03.2026 ರ ಸಂಜೆ 5.30ರ ವರೆಗೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯನ್ನು ಸಂಪರ್ಕಿಸುವುದು.

**ಸಹಿ/– ಕಾರ್ಯಪಾಲಕ ಅಭಿಯಂತರರು**
**ಲೋಕೋಪಯೋಗಿ ಇಲಾಖೆ, ಉಡುಪಿ ವಿಭಾಗ, ಉಡುಪಿ**

---

ಕರ್ನಾಟಕ ಸರ್ಕಾರ
**ಸಮುದಾಯ ಆರೋಗ್ಯ ಕೇಂದ್ರ, ರಟ್ಟಿಹಳ್ಳಿ**
**Email : mochcrattihalli@gmail.com Ph : 08376 286100**

ಕಡತ ಸಂಖ್ಯೆ: ಸ.ಆ.ಕೇ.ರ/ಟೆಂಡರ/01/2025–26 ದಿನಾಂಕ : 16/03/2026

## ಇ–ಟೆಂಡರ್ ಪ್ರಕಟಣೆ

ವಿಷಯ : ಹೊರ ಗುತ್ತಿಗೆ ಆಧಾರದ ಮೇಲೆ ನಾನ್ ಕ್ಲಿನಿಕಲ್ ಹಾಗೂ ಗ್ರೂಪ್–ಡಿ ಸಿಬ್ಬಂದಿ ಸೇವೆ ಪಡೆಯಲು ಇ–ಟೆಂಡರ್ ಆಹ್ವಾನಿಸುವ ಕುರಿತು.

ಉಲ್ಲೇಖ : 1) ಸರಕಾರದ ಆದೇಶ ಸಂಖ್ಯೆ ಆಕುಕ/01/ಸಿಜಿಎಂ/2019 ದಿನಾಂಕ : 24–06–2019.
2) ಮಾನ್ಯ ಆಯುಕ್ತರು ಆರೋಗ್ಯ ಮತ್ತು ಕು.ಕ.ಸೇವೆಗಳು ಬೆಂಗಳೂರ ಇವರ ಸುತ್ತೋಲೆ ಸಂಖ್ಯೆ:ಮುಲೆಪಅ(ಆ)/ಕೊವಿಡ್–19/ಗುತ್ತಿಗೆ/ಹೊರಗುತ್ತಿಗೆ/47/2020–21 ದಿ.07–01–2021
3) ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಹಾವೇರಿ ಇವರ ಅನುಮೋದನೆ ದಿನಾಂಕ : 20/02/2026

ಸನ್ 2026–27 ನೇ ಸಾಲಿಗೆ ಸಮುದಾಯ ಆರೋಗ್ಯ ಕೇಂದ್ರ ರಟ್ಟೀಹಳ್ಳಿ ಆಸ್ಪತ್ರೇಯಲ್ಲಿ ಖಾಲಿ ಇರುವ 04 ನಾನ್ ಕ್ಲಿನಿಕಲ್ ಹಾಗೂ 05 ಗ್ರೂಪ್–ಡಿ ಹುದ್ದೆಗಳ ಸೇವೆಯನ್ನು ಮಾನವ ಹೊರ ಸಂಪನ್ಮೂಲ ಸಂಸ್ಥೆ ಮೂಲಕ ಹೊರಗುತ್ತಿಗೆ ಆಧಾರದ ಮೇಲೆ ಪಡೆದುಕೊಳ್ಳಲು ಅರ್ಹ ನೊಂದಾಯಿತ ಮಾನವ ಹೊರ ಸಂಪನ್ಮೂಲ ಸಂಸ್ಥೆಯವರಿಂದ ಕೆ.ಪಿ.ಪಿ. ಪೋರ್ಟಲ್ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಈ ಕೆಳಕಂಡಂತೆ ಇ–ಟೆಂಡರ್ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ (kppp.karanataka.gov.in) ನಿಂದ ಪಡೆಯಬಹುದು.

ಇ–ಟೆಂಡರಿನ ಪ್ರಮುಖ ಘಟನಾವಳಿಗಳು. **Schedule of Events** :

(1) ಟೆಂಡರ್ ಅಪ್‌ಲೋಡ್ ಮಾಡುವ ಪ್ರಾರಂಭ ದಿನಾಂಕ : **17/03/2026** (2) ಟೆಂಡರ್‌ನ ಅಂದಾಜು ಮೌಲ್ಯ ರೂ. **19.20** ಲಕ್ಷ (3) ಟೆಂಡರ್ ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ ಮತ್ತು ವೇಳೆ : **31/03/2026** ಸಾಯಂಕಾಲ 4.00 ಗಂಟೆಯವರೆಗೆ (4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ : **01/04/2026** ರಂದು ಸಾಯಂಕಾಲ 4.30 ಗಂಟೆ (5) ಹಣಕಾಸಿನ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ : ತಿಳಿಸಲಾಗುವುದು (6) ಪಾವತಿಸಬೇಕಾದ ಇ.ಎಂ.ಡಿ ಮೊತ್ತ ರೂ. **96,000.00** (7) ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ (ರಜಾ ದಿನಗಳನ್ನು ಹೊರತುಪಡಿಸಿ) ಆಡಳಿತ ವೈದ್ಯಾಧಿಕಾರಿಗಳು, ಸಮುದಾಯ ಆರೋಗ್ಯ ಕೇಂದ್ರ, ರಟ್ಟೀಹಳ್ಳಿ, **08376 286100/9986970708**

ಟೆಂಡರಿನಲ್ಲಿ ಸಲ್ಲಿಸಬೇಕಾದ ದಾಖಲಾತಿಗಳ ಹಾಗೂ ಇನ್ನಿತರ ನಿಬಂಧನೆಗಳ ವಿವರಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದು.

**ಸಹಿ/– ಆಡಳಿತ ವೈದ್ಯಾಧಿಕಾರಿಗಳು, ಸಮುದಾಯ ಆರೋಗ್ಯ ಕೇಂದ್ರ**
**ರಟ್ಟಿಹಳ್ಳಿ ತಾ॥ ರಟ್ಟಿಹಳ್ಳಿ ಜಿಲ್ಲಾ॥ ಹಾವೇರಿ**

ವಾಸಾಸಂಇ/ಹಾವೇರಿ/ಕೆಎಸ್‌ಎಂಸಿಎ/814/2025–26

---

ಕರ್ನಾಟಕ ಸರ್ಕಾರ
**ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ**
Email: ee_pwdbellary@yahoo.com ದೂರವಾಣಿ ಸಂ: 08392 266123

ಸಂ:ಕಾನಿಇ/ಲೋಇ/ಬವಿ/ಟಿ.ಎಸ್–6/ಕೆಕೆಆರ್‌ಡಿಬಿ/2025–26/6831 ದಿನಾಂಕ:16.03.2026

## ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಆಸಕ್ತಿಯುಳ್ಳ ಗುತ್ತಿಗೆದಾರರಿಂದ ಈ ಕೆಳಕಾಣಿಸಿದ ಕಾಮಗಾರಿಗಳಿಗೆ ದ್ವಿ/ಏಕ ಲಕೋಟೆ ಪದ್ಧತಿಯಂತೆ ಟೆಂಡರುಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಪ್ರಕಟಣೆಯಲ್ಲಿನ ಕಾಮಗಾರಿಗಳನ್ನು, ಅಂತರ್ಜಾಲದ ಮೂಲಕ ವೆಬ್ ಸೈಟ್ ವಿಳಾಸ **https:kppp.karnataka.gov.in** ವನ್ನು ಸಂದರ್ಶಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

| ಕ್ರ ಸಂ | ಕಾಮಗಾರಿಗಳ ವಿವರ | ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ |
|---|---|---|
| 1) | PWD/2025-26/RD/WORK_INDENT34506 | 30.00 |
| 2) | PWD/2025-26/RD/WORK_INDENT34507 (Reserved CAT-2A Category) | 30.00 |
| 3) | PWD/2025-26/RD/WORK_INDENT34811 | 150.00 |
| 4) | PWD/2025-26/RD/WORK_INDENT34217 (Reserved SC Category) | 50.00 |
| 5) | PWD/2025-26/BD/WORK_INDENT34534 | 14.00 |
| 6) | PWD/2025-26/RD/WORK_INDENT34216 | 93.00 |
| 7) | PWD/2025-26/WS/WORK_INDENT34508 (Reserved CAT-1 Category) | 60.00 |
| 8) | PWD/2025-26/RD/WORK_INDENT34787 (Reserved CAT-2A Category) | 60.00 |
| 9) | PWD/2025-26/RD/WORK_INDENT34791 (Reserved SC Category) | 58.62 |
| 10) | PWD/2025-26/RD/WORK_INDENT29134 | 32.00 |
| 11) | PWD/2025-26/BD/WORK_INDENT34439 | 96.74 |
| 12) | PWD/2025-26/RD/WORK_INDENT34800 | 127.05 |
| 13) | PWD/2025-26/RD/WORK_INDENT34796 | 100.00 |
| 14) | PWD/2025-26/BD/WORK_INDENT32986 | 500.00 |

**ಸೂಚನೆ :** ಕಾರಣಾಂತರಗಳಿಂದ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಬದಲಾದಲ್ಲಿ, ಮರು ಟೆಂಡರ್ ಆಹ್ವಾನಿಸಿದ್ದಲ್ಲಿ ಹಾಗೂ ಇನ್ನಿತರೆ ಬದಲಾವಣೆಗಳಿದ್ದಲ್ಲಿ ಗುತ್ತಿಗೆದಾರರು ಕೆ.ಪಿ.ಪಿ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ. ಇದಕ್ಕಾಗಿ ಪ್ರತ್ಯೇಕ ಜಾಹಿರಾತು ಹೊರಡಿಸಲಾಗುವುದಿಲ್ಲ.

**ಟೆಂಡರಿಗಾಗಿ ನಿಗದಿಪಡಿಸಿದ ದಿನಾಂಕಗಳು ಕೆಳಗಿನಂತಿವೆ.**

ಅ)ಕಾಮಗಾರಿಗಳಿಗೆ ನಿಗಧಿಪಡಿಸಿದ ಪ್ರಿ–ಬಿಡ್ ಸಭೆ ದಿನಾಂಕ ಮತ್ತು ಸಮಯ : **20.03.2026 ರಂದು 11.00 ಗಂಟೆಗೆ ಕಾರ್ಯನಿರ್ವಾಹಕ ಇಂಜನೀಯರ್, ಲೋಕೋಪಯೋಗಿ ಇಲಾಖಾ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ.** ಆ)ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗದಿಪಡಿಸಲಾದ ದಿನಾಂಕ: **24.03.2026** ರಂದು **12.00** ಗಂಟೆಯ ವರೆಗೆ. ಇ)ಕೆ.ಪಿ.ಪಿ ಪೋರ್ಟಲ್ ಮುಖಾಂತರ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **27.03.2026 ರಂದು 16.00 ಗಂಟೆಯ ವರೆಗೆ.** ಈ)ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ.: **30.03.2026 ರಂದು 16.30 ಗಂಟೆಗೆ ಕಾರ್ಯನಿರ್ವಾಹಕ ಇಂಜನೀಯರ್, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ ತೆರೆಯಲಾಗುವುದು**

ಸಹಿ/–ಕಾರ್ಯನಿರ್ವಾಹಕ ಇಂಜನೀಯರ್,
ಲೋಕೋಪಯೋಗಿ ಇಲಾಖೆ, ವಿಭಾಗ, ಬಳ್ಳಾರಿ

ಡಿಐಪಿಆರ್/ಬಳ್ಳಾರಿ/1151/ಕೆಎಸ್‌ಎಂಸಿಎ/2025–26

---

**ಮಹಾನಗರ ಪಾಲಿಕೆ, ಕಲಬುರಗಿ**
ದೂ.: 08472/278675, ಫ್ಯಾಕ್ಸ : 08472/260776, ಇ ಮೇಲ್ itstaff_ulb_gulbarga@yahoo.com

No: KMP/TS-01/SFC/01/2025-26 ದಿನಾಂಕ: 17–03–2026

## :: ಇ–ಪ್ರೊಕ್ಯುರಮೆಂಟ್ ಅಲ್ಪಾವಧಿ ಟೆಂಡರ ಪ್ರಕಟಣೆ ::

1) ಕಾಮಗಾರಿಯ ವಿವರ: Providing Colouring and Painting to Community Hall at Various Locations in Zone-1, Zone-2 and Zone-3 in Kalaburagi City. 2) ಲೆಕ್ಕ ಶೀರ್ಷಿಕೆ: 2019–20 ರಿಂದ 204–25ನೇ ಸಾಲಿನ SFC UNTIED, SCSP & TSP ಉಳಿತಾಯ ಅನುದಾನದ, 3) ಟೆಂಡರಿಗಿಟ್ಟ ಮೊತ್ತ: **32,01,250.00,** 4) ಗುತ್ತಿಗೆದಾರರ ಅರ್ಹತೆ: Class III & above, 6) ಟೆಂಡರ ಸಲ್ಲಿಸಲು ಅಂತಿಮ ದಿನಾಂಕ: 24.03.2026 ಸಾಯಂಕಾಲ 4:30 ಗಂಟೆಯವರೆಗೆ, 7) ಟೆಂಡರ ತೆರೆಯುವ ದಿನಾಂಕ ತಾಂತ್ರಿಕ: 25.03.2026 ಸಾಯಂಕಾಲ 4:35 ಗಂಟೆಯವರೆಗೆ, 9) ಟೆಂಡರ ಅರ್ಜಿ ಬೆಲೆ ಮತ್ತು ಇ.ಎಂ.ಡಿ ಮೊತ್ತ: ಟೆಂಡರ್ ಫಾರಂ ಬೆಲೆ ರೂ. As per e-portal EMD ಮೊತ್ತ ರೂ. 64,100.00, 10) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ ಮತ್ತು ಮೋ. ನಂ: ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ. 9620341599, 11) ಅಂತರಜಾಲ ತಾಣದ ವಿಳಾಸ: www.kppp.karnataka.gov.in

**ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,**
**ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ.**

ವಾ.ಸಾ.ಸಂ.ಇ/ಕಲಬುರಗಿ/1187/ಕೆ.ಎಸ್.ಎಂ.ಸಿ.&ಎ/2025–26

---

ಕರ್ನಾಟಕ ಸರ್ಕಾರ
**ಕೃಷಿ ಮಾರಾಟ ಇಲಾಖೆ**
**ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ನೆಹರು ಗಂಜ್, ಕಲಬುರಗಿ–585 104**
E-mail : apmckalburgi@gmail.com, apmcgulbarga@rediffmail.com Ph: 08472-257469

ಸಂ:ಕೃಮಾಇ/ಕೃಉಮಾಸ/ಕ/ನಿ/2310/2025–26 ದಿನಾಂಕ: 17–03–2026

## –: ಪ್ರಕಟಣೆ :–

ಈ ಮೂಲಕ ಪೇಟೆ ಕಾರ್ಯಕರ್ತರ ಗಮನಕ್ಕೆ ತರಬಯಸುವುದೇನೆಂದರೆ, ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ಈ ಕೆಳಕಂಡ ನಿವೇಶನಗಳ ಹಾಗೂ ಅದರಲ್ಲಿ ನಿರ್ಮಿಸಿರುವ ಅಂಗಡಿ–ವ–ಗೋದಾಮು ಕಟ್ಟಡಗಳ ಖಾತೆ ಬದಲಾವಣೆ/ವಾರಸಾ ಬದಲಾವಣೆ ಬಯಸಿ ವಿವಿಧ ಪೇಟೆಕಾರ್ಯಕರ್ತರು ಮನವಿ ಸಲ್ಲಿಸಿರುವುದರಿಂದ ಸಾರ್ವಜನಿಕರಿಂದ ವರ್ಗಾವಣೆ ಕುರಿತಂತೆ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿದ್ದು ಈ ಪ್ರಕಟಣೆ ಪತ್ರಿಕೆಯಲ್ಲಿ ಪ್ರಕಟವಾದ ದಿನಾಂಕದಿಂದ 07 ದಿನಗಳ ಒಳಗಾಗಿ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಪೂರಕ ದಾಖಲಾತಿಗಳೊಂದಿಗೆ ಈ ಕಛೇರಿಗೆ ಸಲ್ಲಿಸಬಹುದಾಗಿರುತ್ತದೆ. ತದನಂತರ ಬರುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

| ಕ್ರ ಸಂ | ನಿವೇಶನ ಮತ್ತು ಅಂಗಡಿ–ವ–ಗೋದಾಮು ಸಂಖ್ಯೆ | ನಿವೇಶನ ಮಾರಾಟ ಮಾಡಿರುವ ಪೇಟೆ ಕಾರ್ಯಕರ್ತರ ಹೆಸರು | ಖರೀದಿದಾರರ/ವಾರಸುದಾರರ ಹೆಸರು ಪೇಟೆಕಾರ್ಯಕರ್ತರ ಹೆಸರು | ಷರಾ |
|---|---|---|---|---|
| 01 | ಕಟ್ಟಡ ಸಹಿತ ನಿವೇಶನ ಸಂ: 127 (ಪಶ್ಚಿಮಕ್ಕೆ 1562 ಚದರ ಅಡಿ) (ಮು.ಮಾ.ಪ್ರಾ) | ಮೆ॥ ಆರ್ ಎಮ್ ಪಾಟೀಲ ಕೊಟ್ಟರಗಾ ಮಾಲೀಕರಾದ ಶ್ರೀ ಮಲ್ಲಿಕಾರ್ಜುನ ತಂದೆ ಮಲಶೆಟ್ಟೆಪ್ಪಾ ಪಾಟೀಲ | ಮಹಾದೇವ ಟ್ರೇಡಿಂಗ್ ಕಂಪನಿ ಮಾ॥ ಶ್ರೀ ಬಸವರಾಜ ಶಿವಲಿಂಗಪ್ಪ ದೊಶೆಟ್ಟಿ | ಖಾತೆ ಬದಲಾವಣೆ |
| 02 | ಕಟ್ಟಡ ಸಹಿತ ನಿವೇಶನ ಸಂ: 127 (ಪೂರ್ವಕ್ಕೆ 1562 ಚದರ ಅಡಿ) (ಮು.ಮಾ.ಪ್ರಾ) | ಮೆ॥ ಆರ್ ಎಮ್ ಪಾಟೀಲ ಕೊಟ್ಟರಗಾ ಮಾಲೀಕರಾದ ಶ್ರೀ ಮಲ್ಲಿಕಾರ್ಜುನ ತಂದೆ ಮಲಶೆಟ್ಟೆಪ್ಪಾ ಪಾಟೀಲ | ದಿನಸಿ ಪಾಟೀಲ ಟ್ರೇಡಿಂಗ್ ಕಂಪನಿ ಮಾ॥ ಶ್ರೀ ರಾಜಶೇಖರ ಶಾಲಿವಾನ ಪಾಟೀಲ | ಖಾತೆ ಬದಲಾವಣೆ |

**ಸಹಿ/– ಕಾರ್ಯದರ್ಶಿ**
**ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಕಲಬುರಗಿ.**

ವಾ.ಸಾ.ಸಂ.ಇ/ಕಲಬುರಗಿ/1191/ಕೆ.ಎಸ್.ಎಂ.ಸಿ.&ಎ/2025–26

---

**ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ**
(ಕರ್ನಾಟಕ ಸರ್ಕಾರದ ಸ್ವಾಮಿತ್ವದಲ್ಲಿ)
**ಕಾರ್ಯಪಾಲಕ ಅಭಿಯಂತರರವರ ಕಛೇರಿ,**
**ಕೃಭಾಜನಿನಿ, ನಾಬದಂ, ಕಾಲುವೆ ವಿಭಾಗ–4, ಚಿಕ್ಕಹೊನ್ನಕುಣಿ, ತಾ: ದೇವದುರ್ಗ.**

ಸಂಖ್ಯೆ:ಕೃಭಾಜನಿನಿ/ನಾಬದಂಕಾ/ವಿ–4/ತಾಶಾ/Clr prd/2025–26/897 ದಿನಾಂಕ:16–03–2026

## ಅಲ್ಪಾವಧಿ ಶೇಕಡಾವಾರು ಟೆಂಡರ್ ಪ್ರಕಟಣೆ

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ, ಬೆಂಗಳೂರು, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ನಾಬದಂಕಾ, ವಿಭಾಗ ಸಂ.–4, ಚಿಕ್ಕಹೊನ್ನಕುಣಿ, ತಾ: ದೇವದುರ್ಗ, ಜಿಲ್ಲೆ: ರಾಯಚೂರು ಇವರು ಈ ಕೆಳಗಿನ 2025–26ನೇ ಸಾಲಿನ ಕ್ಲೋಸರ್ ಅವಧಿಯ ಕಾಮಗಾರಿಗಳಿಗಾಗಿ ನೊಂದಾಯಿತ ಕೆ.ಪಿ.ಡಬ್ಲ್ಯೂ.ಡಿ. 4ನೇ ದರ್ಜೆ & ಮೇಲ್ಪಟ್ಟು ಗುತ್ತಿಗೆದಾರರು ಇವರಿಂದ ಟೆಂಡರನ್ನು ಆಹ್ವಾನಿಸಲಾಗಿರುತ್ತದೆ. ಕೆ ಟಿ ಟಿ ಪಿ ನಿಯಮರನ್ವಯ ಗುತ್ತಿಗೆದಾರರು ಅಗತ್ಯ ಇ.ಎಂ.ಡಿ ಠೇವಣಿ ಮೊತ್ತವನ್ನು ಇ–ಕ್ಯಾಶನಲ್ಲಿ ಪಡೆದು ಏಕಮಾತ್ರ ಲಕೋಟಿಯಲ್ಲಿ ಟೆಂಡರನ್ನು ಸಲ್ಲಿಸುವದು. ಇ.ಎಂ.ಡಿ ಠೇವಣಿ ಮತ್ತು ಇತರೆ ಅವಶ್ತಕ ಬಿಡ್ ದಾಖಲೆಗಳನ್ನೊಳಗೊಂಡಿರುವ ಬಿಡ್ ದಾರರ ಬಿಡ್ಡುಗಳನ್ನು ಮಾತ್ರ ತೆರೆಯಲಾಗುವುದು.

1) **ಕಾಮಗಾರಿಯ ಹೆಸರು:** Closure Period works. **ಒಟ್ಟು ಕಾಮಗಾರಿಗಳ ಸಂಖ್ಯೆ: 3, ಇಎಂಡಿ ಮೊತ್ತ (ಪ್ರತಿ ಕಾಮಗಾರಿಗೆ):** As mentioned in e-portel. ಟೆಂಡರ್ ಪ್ರೋಸೆಸಿಂಗ್ ಶುಲ್ಕ: As mentioned in e-portel. ಕೆಲಸ ಮುಗಿಸಲು ಕಾಲಮಿತಿ: 30 Days.

1) **ಗುತ್ತಿಗೆದಾರರು ಇ–ಟೆಂಡರ್ ಪುಸ್ತಕಕ್ಕಾಗಿ ದಿನಾಂಕ:** 16/03/2026 ರಿಂದ 23/03/2026 ರವರೆಗೆ ಕೆ.ಬಿ.ಜೆ.ಎನ್.ಎಲ್. ವೆಬ್ ಸೈಟ್ http://kppp.karnataka.gov.in ಕ್ಲಿಕ್ ಮಾಡಿ ಇ–ಪೋರ್ಟಲ್ ನಲ್ಲಿ ಇರುವಂತೆ ಟೆಂಡರ್ ಶುಲ್ಕ (ಮರಳಿಸಲಾಗದ)/ಇ.ಎಂ.ಡಿ. ಮೊತ್ತವನ್ನು ಭರಿಸಿ ಇ–ಟೆಂಡರ್ ಪುಸ್ತಕವನ್ನು ಕೋರಿಕೊಳ್ಳುವುದು. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ನಲ್ಲಿ ಈ ಕೆಳಗಿನ ಪೇಮೆಂಟ ಮೋಡ್‌ಗಳನ್ನು ಬಳಸಿಕೊಂಡು ದಿನಾಂಕ23/03/2026 ರಸಾಯಂಕಾಲ 5.00 ಘಂಟೆಯೊಳಗಾಗಿ ಭರಿಸುವದು. Credit card / Direct debit / National electronic fund transfer (NEFT) / over the counter (OTC) 2) ಗುತ್ತಿಗೆದಾರರು ದಿನಾಂಕ:16/03/2026 ರಿಂದ 23/03/2026 ರ ಸಾಯಂಕಾಲ 5.00 ಘಂಟೆಯವರೆಗೆ ಇ–ಟೆಂಡರ ಪುಸ್ತಕವನ್ನು Access ಮಾಡಬಹುದು. 3) ಭರ್ತಿಗೊಳಿಸಿದ ಇ–ಟೆಂಡರ ಪುಸ್ತಕವನ್ನು ದಿನಾಂಕ: 16/03/2026 ರಿಂದ 23/03/2026 ರ ರ ಸಾಯಂಕಾಲ 5.00 ಘಂಟೆಯವರೆಗೆ ಸಲ್ಲಿಸುವದು. 4) ಏಕಮಾತ್ರ ಲಕೋಟೆಯನ್ನು ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ನಾಬದಂಕಾ, ವಿಭಾಗ ಸಂ.–4, ಚಿಕ್ಕಹೊನ್ನಕುಣಿ, ಕಛೇರಿಯಲ್ಲಿ ದಿನಾಂಕ24/03/2025 ರ ಸಾಯಂಕಾಲ 5.00 ಘಂಟೆಯುವರೆಗೆ ಹಾಜರಿರುವ ಗುತ್ತಿಗೆದಾರರ ಸಮ್ಮುಖದಲ್ಲಿ ತೆರೆಯಲಾಗುವದು. ಪೂರ್ವಾರ್ಹತೆ ಷರತ್ತುಗಳಿಗೆ ಅಗತ್ಯವಿರುವ ಪ್ರಮಾಣ ಪತ್ರ/ ದಾಖಲೆಗಳನ್ನು ಸ್ಕ್ಯಾನ್ ಮಾಡಿ ಇ–ಟೆಂಡರ ಪುಸ್ತಕಕ್ಕೆ ಲಗತ್ತಿಸುವದು. 5) ಟೆಂಡರಿಗೆ ಸಂಬಂಧಪಟ್ಟಂತೆ ಉಳಿದ ಯಾವುದೇ ವಿವರಗಳನ್ನು, ಈ ಕೆಳಗೆ ಸಹಿ ಮಾಡಿರುವ ಕಾರ್ಯಪಾಲಕ ಅಭಿಯಂತರವರ ಕಛೇರಿಯಿಂದ (ಕಛೇರಿಯ ವೇಳೆಯಲ್ಲಿ) ಇ–ಪೋರ್ಟಲ್ ಮುಖಾಂತರ ಪಡೆದುಕೊಳ್ಳಲು ಸೂಚನೆ ನೀಡಲಾಗಿದೆ ಮತ್ತು ಟೆಂಡರ್‌ನಲ್ಲಿ ಯಾವುದಾದರೂ ತಿದ್ದುಪಡಿಗಳಿದ್ದಲ್ಲಿ ಅದನ್ನು ಇ–ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

**ಸಹಿ/– ಕಾರ್ಯಪಾಲಕ ಅಭಿಯಂತರರು,**
**ಕೃಭಾಜನಿನಿ, ನಾಬದಂ, ಕಾಲುವೆ ವಿಭಾಗ–4,**
**ಚಿಕ್ಕಹೊನ್ನಕುಣಿ, ತಾ:ದೇವದುರ್ಗ.**

DIP/RCR/770/KSMC&A/773/2025-26

## ಕಿರುಸುದ್ದಿ

### ಬೆಂಗಳೂರು 10ಕೆಯಲ್ಲಿ ಖ್ಯಾತ ಓಟಗಾರರು ಭಾಗಿ

**ಬೆಂಗಳೂರು:** ಪುರುಷರ ವಿಭಾಗದಲ್ಲಿ ಉಗಾಂಡಾದ ಹಾರ್ಬರ್ಟ್ ಕಿಬೆಟ್ ಅಗ್ರಸ್ಥಾನದಲ್ಲಿದ್ದರೆ, ಸಾರಾ ಚೆಲಂಗಟ್ ಬೆಂಗಳೂರಿನಲ್ಲಿ ಸತತವಾಗಿ ಪ್ರಶಸ್ತಿ ಗೆಲ್ಲುವತ್ತ ಕಣ್ಣಿಟ್ಟಿದ್ದಾರೆ. ಏಪ್ರಿಲ್ 26 ರಂದು ನಡೆಯಲಿರುವ ಟಿಸಿಎಸ್ ವರ್ಲ್ಡ್ 10 ಕೆ ಬೆಂಗಳೂರಿನ 18ನೇ ಆವೃತ್ತಿಗಾಗಿ ವಿಶ್ವ ದರ್ಜೆಯ ಆಟಗಾರರು ಭಾಗವಹಿಸುವುದಾಗಿ ತಿಳಿಸಿದ್ದಾರೆ. ಪುರುಷರ ವಿಭಾಗದಲ್ಲಿ ಉಗಾಂಡಾದ ಖ್ಯಾತ ರನ್ನರ್ ಹಾರ್ಬರ್ಟ್ ಕಿಬೆಟ್ ಭಾಗವಹಿಸುವಿಕೆ ಖಚಿತ ಪಡಿಸಿದ್ದಾರೆ. ವಿಶ್ವ ಜೂನಿಯರ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ ಫೈನಲಿಸ್ಟ್ (ರನ್ನರ್ ಅಪ್) ಆಗಿದ್ದ 20 ವರ್ಷದ ಕಿಬೆಟ್, ವರ್ಷದ ಆರಂಭದಲ್ಲಿ 10ಕೆಯಲ್ಲಿ ಮೊದಲ ಬಾರಿಗೆ ಕಾಣಿಸಿಕೊಂಡರು. ಸ್ಪ್ಯಾನಿಷ್ ಪಟ್ಟಣವಾದ ಕ್ಯಾಸ್ಟೆಲ್ಲನ್‌ನಲ್ಲಿ ವಿಶ್ವದ ಪ್ರಮುಖರೊಂದಿಗೆ 26:39 ನಿಮಿಷಗಳಲ್ಲಿ ಜಯಗಳಿಸಿದ್ದರು. ಈ ವರ್ಷ 27 ನಿಮಿಷಗಳ ಅವಧಿಗೆ ಪ್ರವೇಶಿಸಿದ ಐವರು ಕ್ರೀಡಾಪಟುಗಳಲ್ಲಿ ಕಿಬೆಟ್ ಸಹ ಒಬ್ಬರಾಗಿದ್ದರೆ, ಬೆಂಗಳೂರು ಕೂಟ ದಾಖಲೆಗಿಂತ ವೇಗವಾಗಿ ವೈಯಕ್ತಿಕ ಅತ್ಯುತ್ತಮ ಪ್ರದರ್ಶನ ನೀಡಿದ ಒಟ್ಟು 11 ಕ್ರೀಡಾಪಟುಗಳು ಸಹ ಕಣದಲ್ಲಿದ್ದಾರೆ. ಭಾರತದಲ್ಲಿ ಇದು ನನ್ನ ಮೊದಲ ಸ್ಪರ್ಧೆಯಾಗಿದೆ ಮತ್ತು ಟಿಸಿಎಸ್ ವರ್ಲ್ಡ್ 10ಕೆ ಬೆಂಗಳೂರಿನಲ್ಲಿ, ನಾನು ಅದ್ಭುತ ಫಾರ್ಮ್‌ನಲ್ಲಿರುವುದರಿಂದ ನಾನು ಆದರಿಂದ ಹೆಚ್ಚಿನದನ್ನು ಬಯಸುತ್ತೇನೆ ಎಂದು ಹಾರ್ಬರ್ಟ್ ಕಿಬೆಟ್ ಹೇಳಿದರು. ಇನ್ನುಳಿದಂತೆ ಕಿಬೆಟ್ ಇಥಿಯೋಪಿಯನ್ ಖೈರಿ ಬೆಜಿಗಾ (26:51) ಮತ್ತು ಇಬ್ಬರು ಪ್ಲಾಟಿನಂ ಮಟ್ಟದ ಓಟಗಾರರಾದ ಬುರುಂಡಿಯ ರೊಡ್ರಿಗ್ ಕ್ವಿಜೆರಾ ಮತ್ತು ಇಥಿಯೋಪಿಯಾದ ಗೆಮೆಚು ಡಿಡಾ ಅವರಿಂದ ಕಠಿಣ ಸವಾಲನ್ನು ಎದುರಿಸಲಿದ್ದಾರೆ. ಪ್ರಬಲ ಕೀನ್ಯಾದ ಉಪಸ್ಥಿತಿಯ ನಡುವೆ ಸತತವಾಗಿ ಪ್ರಶಸ್ತಿಗಳಿಗಾಗಿ ಚೆಲಂಗಟ್ ಸಜ್ಜಾಗಿದ್ದಾರೆ. ಹಾಲಿ ಚಾಂಪಿಯನ್ ಸಾರಾ ಚೆಲಂಗಟ್ ತನ್ನ ಪ್ರಶಸ್ತಿಯನ್ನು ರಕ್ಷಿಸಿಕೊಳ್ಳಲು ಮರಳಲಿದ್ದಾರೆ.

### ಐಸಿಸಿ ರ‍್ಯಾಂಕಿಂಗ್: 7ನೇ ಸ್ಥಾನಕ್ಕೆ ಕೌರ್

**ಮುಂಬೈ:** ಭಾರತದ ಮಹಿಳಾ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಅಂತಾರಾಷ್ಟ್ರೀಯ ಕ್ರಿಕೆಟ್ ಸಂಸ್ಥೆಯ ಏಕದಿನ ಬ್ಯಾಟಿಂಗ್ ಶ್ರೇಯಾಂಕದಲ್ಲಿ ಏಳನೇ ಸ್ಥಾನಕ್ಕೆ ಜಿಗಿದಿದ್ದಾರೆ. ಮಂಗಳವಾರ ಬಿಡುಗಡೆಯಾದ ಪಟ್ಟಿಯಲ್ಲಿ ಮಂಧಾನ ಅವರೇ ಮೊದಲ ಸ್ಥಾನದಲ್ಲಿ ಮುಂದುವರಿದಿರುವುದು ವಿಶೇಷ. ಭಾರತ ತಂಡದ ಪ್ರಮುಖ ಆಟಗಾರರಲ್ಲಿ ಜೆಮಿಮಾ ರಾಡ್ರಿಗ್ಸ್ 12ನೇ ಸ್ಥಾನದಲ್ಲೇ ಮುಂದುವರಿದಿದ್ದಾರೆ. ನ್ಯೂಜಿಲೆಂಡ್‌ನ ಸೋಫಿ ಡಿವೈನ್ 11ನೇ ಸ್ಥಾನಕ್ಕೆ ಇಳಿದಿದ್ದಾರೆ. ವಿಶ್ವಕಪ್ ಸೆಮಿಫೈನಲ್ ಸೇರಿದಂತೆ ಪ್ರಮುಖ ಪಂದ್ಯಗಳಲ್ಲಿ ಆಶಾಕಿರಣವಾಗಿ ಗೆಲುವಿನಲ್ಲಿ ಮಿಂಚಿರುವ ಕೌರ್ ಇತ್ತೀಚೆಗೆ ನಡೆದ ಆಸ್ಟ್ರೇಲಿಯಾ ಸರಣಿಯಲ್ಲೂ ಉತ್ತಮ ಬ್ಯಾಟಿಂಗ್ ಮಾಡಿದ್ದರು. ಪರಿಣಾಮ ಅವರ ಸ್ಥಾನ ಏರಿಕೆಯಾಗಿದೆ.

### ಸಂಸ್ಥೆಯ ಕ್ರಿಕೆಟಿಗರಿಗೆ ಕ್ರಿಕೆಟ್ ಆಸ್ಟ್ರೇಲಿಯಾ ಖಡಕ್ ಸೂಚನೆ

# ಪೇಶಾವರಕ್ಕೆ ಕಾಲಿಡಬೇಡಿ: ಆಟಗಾರರಿಗೆ ಸಿಎ ಎಚ್ಚರಿಕೆ

**ಪರ್ತ್:** ಅಫ್ಘಾನಿಸ್ತಾನ ಮೇಲೆ ದಾಳಿ ನಡೆಸಿದ ನಂತರ ಪಾಕಿಸ್ತಾನದಲ್ಲಿ ಉದ್ವೇಗ ಸೃಷ್ಟಿಯಾಗಿರುವ ಬೆನ್ನಲ್ಲೇ ಆಸ್ಟ್ರೇಲಿಯಾ ಕ್ರಿಕೆಟ್ ಸಂಸ್ಥೆ ಪಾಕಿಸ್ತಾನ ಸೂಪರ್ ಲೀಗ್‌ನಲ್ಲಿ ಭಾಗವಹಿಸಲಿರುವ ಆಸೀಸ್ ಆಟಗಾರರಿಗೆ ಪೇಶಾವರ ಅಂತಹ ಸೂಕ್ಷ್ಮ ಸ್ಥಳಗಳಿಗೆ ಪ್ರಯಾಣಿಸ ಬಾರದೆಂದು ಎಚ್ಚರಿಕೆ ನೀಡಿದೆ.



ಅಫ್ಘಾನಿಸ್ತಾನದ ಕಾಬುಲಿನಲ್ಲಿ ನಡೆದ ಪಾಕಿಸ್ತಾನ ದಾಳಿಯ ನಂತರ ಪಾಕ್ ಹಾಗೂ ಅಫ್ಘಾನ್ ನಡುವಿನ ಪರಿಸ್ಥಿತಿ ಉದ್ವೇಗಕ್ಕೇರಿದ ನಂತರ ಇಂಡಿಯನ್ ಪ್ರೀಮಿಯರ್ ಲೀಗ್‌ಗೂ ಮುನ್ನವೇ ಶುರುವಾಗಬೇಕಿದ್ದ ಪಾಕಿಸ್ತಾನ ಸೂಪರ್ ಲೀಗ್ ಮುಂದೂಡುವ ಅನಿವಾರ್ಯತೆಗೆ ಸಿಲುಕಿಕೊಂಡಂತಿದೆ. ಈ ನಡುವೆ ಆಸ್ಟ್ರೇಲಿಯಾ ಆಟಗಾರರನ್ನು ಯಾವುದೇ ಕಾರಣಕ್ಕೂ ಪಾಕ್‌ನ ಪೇಶಾವರ ಹಾಗೂ ಆಯ್ದ ಸೂಕ್ಷ್ಮ ಪ್ರದೇಶಗಳಿಗೆ ತೆರಳಬೇಡಿ ಎಂಬ ಎಚ್ಚರಿಕೆ ನೀಡಿದೆ. ಇರಾನ್ ಹಾಗೂ ಇಸ್ರೇಲಿನ ನಡುವೆ ನಡೆಯುತ್ತಿರುವ ಯುದ್ಧದ ಬೆನ್ನಲ್ಲೇ ಮೊದಲೇ ಆಟಗಾರರ ಆಗಮನದ ಹಿನ್ನಡೆ ಅನುಭವಿಸಿದ್ದ ಪಿಎಸ್‌ಎಲ್‌ಗೆ ಇದೀಗ ಮತ್ತೊಂದು ಹಿನ್ನಡೆಯಾಗಿದೆ. ಟೂರ್ನಿಗಳಲ್ಲಿ ಸೋತು ಶರಣಾಗಿ ಭಾರೀ ಆರ್ಥಿಕ ನಷ್ಟಗಳನ್ನು ಎದುರಿಸಿರುವ ಪಾಕಿಸ್ತಾನ ಕ್ರಿಕೆಟ್ ಸಂಸ್ಥೆಗೆ ಮತ್ತೊಂದು ಬಲವಾದ ಪೆಟ್ಟು ಬಿದ್ದಿದೆ.

**ಆತಂಕ ಮೊದಲ ಬಾರಿಯಲ್ಲ:** ಕಳೆದ ಬಾರಿ ಪಾಕಿಸ್ತಾನ ಭಾರತದೊಂದಿಗೆ ಉದ್ವೇಗ ಹೆಚ್ಚಿಸಿಕೊಂಡಿತ್ತು. ಈ ವೇಳೆ ಪಿಎಸ್‌ಎಲ್‌ಗೆ ತೆರಳಿದ್ದ ಆಟಗಾರರು ಅಲ್ಲಿನ ಪರಿಸ್ಥಿತಿ ನೋಡಿ ಗಾಬರಿಗೊಂಡಿದ್ದರು. ಟಾಮ್ ಕರ್ರನ್, ರಿಶಾದ್ ಪಾಕ್‌ನಲ್ಲಿ ಅಸುರಕ್ಷತೆಯ ಭಾವ ವ್ಯಕ್ತ ಪಡಿಸಿ ಕಣ್ಣೀರಿಟ್ಟಿದ್ದರು. ಮತ್ತೊಮ್ಮೆ ಪಾಕಿಸ್ತಾನಕ್ಕೆ ಬರಲಾರೆ ಎಂಬ ನಿರ್ಧಾರವನ್ನೂ ಮಾಡಿದ್ದರು. ಇದಲ್ಲದೆ, 2009ರಲ್ಲಿ ಸರಣಿ ಆಡುವುದಕ್ಕೆ ಪಾಕಿಸ್ತಾನ ತಲುಪಿದ್ದ ಶ್ರೀಲಂಕಾ ಮೇಲೆ ಭಯೋತ್ಪಾದಕರು ದಾಳಿ ನಡೆಸಿದ್ದರು. ಕೆಲವು ಕ್ರಿಕೆಟಿಗರು ಗಾಯಗೊಂಡಿದ್ದರು. ಇದಲ್ಲದೆ ಹಲವಾರು ಬಾರಿ ಕ್ರಿಕೆಟಿಗರಿಗೆ ಸುರಕ್ಷತೆ ನೀಡುವ ವಿಚಾರದಲ್ಲಿ ಪಾಕಿಸ್ತಾನ ವಿಫಲವಾಗಿದೆ.

#### ಆಸ್ಟ್ರೇಲಿಯಾ ಆಟಗಾರರಿಗೆ ಎಚ್ಚರಿಕೆ

ಐಪಿಎಲ್‌ನಲ್ಲಿ ಬಿಕರಿಯಾಗದ ಆಟಗಾರರನ್ನು ಆರಿಸಿಕೊಂಡು ನಡೆಸುವ ಪಿಎಸ್‌ಎಲ್ ಟೂರ್ನಿಗೆ ಯುದ್ಧದ ಬಿಸಿ ತಟ್ಟಿರುವುದು ಒಂದು ಕಡೆಯಾದರೆ, ಸ್ವಂತ ದೇಶದಲ್ಲಿ ನಡೆಯುತ್ತಿರುವ ಸಂಘರ್ಷ ಮತ್ತೊಂದು ಹೊಡೆತ ನೀಡಿದೆ. ಇದೇ ವೇಳೆ ಲೀಗ್‌ನಲ್ಲಿ ಸ್ಟೀವ್ ಸ್ಮಿತ್, ಡೇವಿಡ್ ವಾರ್ನರ್, ಲಾಬುಷೇನ್, ಗ್ಲೇನ್ ಮ್ಯಾಕ್ಸವೆಲ್ ಅಂತಹ ಆಟಗಾರರು ಭಾಗವಹಿಸಬೇಕಿತ್ತು. ಕೋಚ್‌ಗಳಾದ ಟಿಮ್ ಪೈನ್, ಜೇಸನ್ ಗಿಲಿಪ್ಸ್ ಕೂಡ ಪಾಕಿಸ್ತಾನದ ಲೀಗ್‌ನಲ್ಲಿ ಭಾಗವಹಿಸಬೇಕಿತ್ತು. ಆಸ್ಟ್ರೇಲಿಯಾದ ಸ್ಥಳೀಯ ಕ್ರೀಡಾ ಪತ್ರಿಕೆಯಾದ ಕೋಡ್ ಸ್ಪೋರ್ಟ್ಸ್ ವರದಿಯ ಪ್ರಕಾರ, ಆಟಗಾರರಿಗೆ ಪಾಕಿಸ್ತಾನಕ್ಕೆ ತೆರಳಲು ಅವಕಾಶ ಕೊಟ್ಟರೂ ಪೇಶಾವರಕ್ಕೆ ಮಾತ್ರ ಕಾಲಿಡದಂತೆ ಸೂಚಿಸಿದೆ. ಇದಲ್ಲದೆ, ಯುದ್ಧದ ಸನ್ನಿವೇಶ ಸೃಷ್ಟಿಯಾದರೆ ಸಂಸ್ಥೆಯಿಂದ ವಿಶೇಷ ವಿಮಾನ ಕಳುಹಿಸುವುದಾಗಿ ತಿಳಿಸಿದೆ. ಪೇಶಾವರದಲ್ಲಿ ಹಲವು ಪಂದ್ಯಗಳು ನಡೆಯಬೇಕಿದ್ದವು.

#### ಪಿಎಸ್‌ಎಲ್ ತ್ಯಜಿಸಿದ ಆಫ್ಘನ್



ಇದಲ್ಲದೆ ಪಾಕಿಸ್ತಾನ ಸೂಪರ್ ಲೀಗ್‌ಗೆ ಮೊದಲೇ ಹಿನ್ನಡೆಯಾಗಿದೆ. ಹಲವು ತಂಡಗಳಿಗೆ ಆಯ್ಕೆಯಾಗಿದ್ದ ಅಫ್ಘಾನಿಸ್ತಾನ ಆಟಗಾರರು ಯಾವುದೇ ಕಾರಣಕ್ಕೂ ಪಾಕ್ ಅಂತಹ ದೇಶಗಳಲ್ಲಿ ನಾವು ಆಡಲ್ಲ ಎಂಬ ನಿರ್ಧಾರ ಕೈಗೊಂಡಿದ್ದರು. ಇಲ್ಲಿಂದ ಶುರುವಾದ ಪಿಎಸ್‌ಎಲ್ ಹಿನ್ನಡೆ ಈಗ ನಿಷೇಧವಾಗುವ ತನಕ ವಿಸ್ತರಿಸಿದೆ.

## ಮೋದಿ ಕ್ರೀಡಾಂಗಣದಲ್ಲಿ ಗೆಲ್ಲಲೇಬೇಕಿತ್ತು: ಸೂರ್ಯ

**ಹೊಸದಿಲ್ಲಿ:** ಭಾರತದಲ್ಲಿ ಅದರಲ್ಲೂ ಅದೇ ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಾವು ಕಪ್ ಗೆಲ್ಲಲೇಬೇಕಿತ್ತು ಎಂದು ವಿಶ್ವಕಪ್ ವಿಜೇತ ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್ ಪ್ರತಿಪಾದಿಸಿದರು. ವಿಶ್ವಕಪ್ ಗೆದ್ದ ಬಳಿಕ ಪಿಟಿಐದೊಂದಿಗೆ ಮಾತನಾಡಿದ ಅವರು, ನಾವು ಇಲ್ಲೇ ಕಳೆದ ವಿಶ್ವಕಪ್ ಕಳೆದುಕೊಂಡಿದ್ದೇವು. ಇಲ್ಲೇ ಪಡೆಯುವುದು ಅನಿವಾರ್ಯವಾಗಿತ್ತು. 2024ರ ತಂಡಕ್ಕೂ, ಈಗಿನ ತಂಡಕ್ಕೂ ವ್ಯತ್ಯಾಸವಿದೆ. ಆಗ ತಂಡದಲ್ಲಿ ಅನುಭವವಿತ್ತು. ಈ ತಂಡದಲ್ಲಿ ಉತ್ಸಾಹವಿತ್ತು ಎಂದಿದ್ದಾರೆ.

ಮೈದಾನಕ್ಕೆ ಸಾವಿರಾರು ಜನರು ಬರುತ್ತಾರೆ. ಮೊನ್ನೆಯ ಪಂದ್ಯದಲ್ಲಿ ಲಕ್ಷ ಜನರು ಬಂದಿದ್ದರು.



ತವರಲ್ಲಿ ನಡೆಯುವ ಪ್ರತಿ ಪಂದ್ಯದಲ್ಲೂ ಹೀಗೆ ಲಕ್ಷಾಂತರ ಜನರು ಬಂದು ಬೆಂಬಲಿಸುತ್ತಾರೆ. ಅವರಿಗೆ ತವರಲ್ಲೇ ಗೆದ್ದು ಗಿಫ್ಟ್ ಕೊಡುವುದು ತುಂಬಾ ಮುಖ್ಯವಾಗಿತ್ತು ಎಂದರು.

**ಯಾರಿಗೂ ಸೋಲುವ ಆಸೆ ಇರಲ್ಲ:** ಸೂರ್ಯಕುಮಾರ್ ಯಾದವ್ ನಾಯಕರಾದ ಮೇಲೆ ಹೊಸ ತಂಡ ಕಟ್ಟಬೇಕಾದ ಜವಾಬ್ದಾರಿಯಿತ್ತು. ಇದರ ಹೊರತಾಗಿ ತಂಡವನ್ನು ಕಟ್ಟಿ, ಶೇಕಡ 80ರಷ್ಟು ಪಂದ್ಯಗಳಲ್ಲಿ ಗೆಲುವು ಸಾಧಿಸಿದ್ದು ಹೇಗೆ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ನಾನು ಶಾಲೆಯಲ್ಲಿದ್ದಾಗ ವಿದ್ಯಾಭ್ಯಾಸದಲ್ಲಿ ತೆಗೆದುಕೊಳ್ಳಬೇಕಾದ ಫಲಿತಾಂಶ ಇಲ್ಲಿ ಪಡೆಯುತ್ತಿದ್ದೇನೆ. ಆದರೆ ನಾಯಕನಾದ ಯಾವುದೇ ವ್ಯಕ್ತಿಗೆ ಗೆಲ್ಲುವುದೊಂದೇ ಗುರಿಯಾಗಿರುತ್ತದೆ. ಶೇಕಡಾವಾರು ಲೆಕ್ಕಾಚಾರ ಬಿಟ್ಟಾಗ ಯಾವುದೇ ತಂಡದ ಯಾವುದೇ ನಾಯಕರೂ ಸೋಲಲು ಇಚ್ಚಿಸುವುದಿಲ್ಲ. ಆದರೂ ಇಂತಹ ಫಲಿತಾಂಶ ಬಂದ ತಕ್ಷಣ ಖುಷಿ ಸಿಗುತ್ತದೆ ಎಂದರು.

## ತಂಡಗಳಿಗೆ ಗಾಯದ ಬಿಸಿ

**ಮುಂಬೈ:** ಸನ್‌ರೈಸರ್ಸ್ ಹೈದರಾಬಾದ್ ನಾಯಕ ಪ್ಯಾಟ್ ಕಮ್ಮಿನ್ಸ್ ಮತ್ತು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಭರವಸೆಯ ಬೌಲರ್ ಜೋಷ್ ಹ್ಯಾಜೆಲ್ವುಡ್ ಐಪಿಎಲ್ ಆಡುವ ಬಗ್ಗೆ ಅನಿಶ್ಚಿತತೆ ಸೃಷ್ಟಿಯಾಗಿದೆ. ಗಾಯದಿಂದ ಚೇತರಿಸಿಕೊಳ್ಳದಿರುವ ನಿಟ್ಟಿನಲ್ಲಿ ಮೊದಲಿನ ಪಂದ್ಯಗಳಲ್ಲಿ ಲಭ್ಯರಿರುವುದಿಲ್ಲ ಎಂದು ತಿಳಿದುಬಂದಿದೆ.

ಐಪಿಎಲ್‌ಗೆ ಕೆಲವೇ ದಿನಗಳು ಇರುವ ಬೆನ್ನಲ್ಲೇ ಬಹುತೇಕ ತಂಡಗಳಿಗೆ ಗಾಯದ ಸಮಸ್ಯೆ ಎದುರಾಗಿದೆ. ಈ ಮಧ್ಯೆ ಕೋಲ್ಕತ್ತಾ ನೈಟ್‌ರೈಡರ್ಸ್ ತಂಡ ಮಹತ್ವದ ನಿರ್ಧಾರ ಪ್ರಕಟಿಸಿದ್ದು, ವೇಗದ ಬೌಲರ್‌ಗಳಾದ ಹರ್ಷಿತ್ ರಾಣಾ ಮತ್ತು ಮತೀಶಾ ಪಥಿರಾಣ ಅವರಿಗೆ ಬದಲಿ ಆಟಗಾರರನ್ನು ಹುಡುಕುವುದಿಲ್ಲವೆಂದು ಫ್ರಾಂಚೈಸಿ ಸ್ಪಷ್ಟಪಡಿಸಿದೆ. ಹರ್ಷಿತ್ ರಾಣಾ ಇತ್ತೀಚೆಗೆ ಮೊಣಕಾಲಿನ ಗಾಯದಿಂದ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದು, ಸಂಪೂರ್ಣ ಚೇತರಿಕೆಗೆ ಸಮಯ ಬೇಕಾಗಿದೆ. ಇದರಿಂದ ಅವರು ಈ ಸೀಸನ್‌ಗೆ ಲಭ್ಯವಿರುವುದಿಲ್ಲ. ಕಳೆದ ಎರಡು ಸೀಸನ್‌ಗಳಲ್ಲಿ ರಾಣಾ ಉತ್ತಮ ಪ್ರದರ್ಶನ ನೀಡಿದ್ದು, 2024ರಲ್ಲಿ 19 ಮತ್ತು





2025ರಲ್ಲಿ 15 ವಿಕೆಟ್‌ಗಳನ್ನು ಪಡೆದು ತಂಡದ ಪ್ರಮುಖ ಬೌಲರ್ ಆಗಿ ಹೊರಹೊಮ್ಮಿದ್ದರು. ತಂಡದ ಬಳಿಯಲ್ಲಿ ಸಾಕಷ್ಟು ಭಾರತೀಯ ವೇಗದ ಬೌಲರ್‌ಗಳಿರುವುದರಿಂದ ಬದಲಿ ಆಟಗಾರರ ಅಗತ್ಯವಿಲ್ಲವೆಂದು ನಿರ್ವಹಣೆಯ ಅಭಿಪ್ರಾಯವಾಗಿದೆ. ವೇಗಿಗಳಾದ ವೈಭವ್ ಆರೋರಾ, ಉಮ್ರಾನ್ ಮಲಿಕ್, ಕಾರ್ತಿಕ್ ತ್ಯಾಗಿ ಮತ್ತು ಆಕಾಶ್ ದೀಪ್ ಇರುವುದು ತಂಡಕ್ಕೆ ಬಲ ತಂದಿದೆ ಎಂದು ಹೇಳಿದೆ. ಇನ್ನೊಂದೆಡೆ, ಪತಿರಣಾ ಗಾಯದಿಂದ ಹೊರಗುಳಿದರೂ, ಅವರು ಟೂರ್ನಿಯ ಕೆಲವು ಹಂತಗಳಲ್ಲಿ ಲಭ್ಯವಾಗಬಹುದು ಎಂಬ ನಿರೀಕ್ಷೆಯಿದೆ. ಈ ಕಾರಣದಿಂದಲೇ ಅವರನ್ನು ತಕ್ಷಣ ಬದಲಾಯಿಸುವ ಯೋಚನೆ ಇಲ್ಲ ಎಂದಿದೆ.

## ಬೆಂಗಳೂರು ಎಫ್‌ಸಿ ಪಂದ್ಯ ಡ್ರಾ

**ಬೆಂಗಳೂರು:** ಇಂಡಿಯನ್ ಸೂಪರ್ ಲೀಗ್ ಪಂದ್ಯಾವಳಿಯ ಪಂದ್ಯದಲ್ಲಿ ಬೆಂಗಳೂರು ಎಫ್‌ಸಿ ಹಾಗೂ ಮೋಹನ್ ಬಗಾನ್ ನಡುವಿನ ರೋಚಕ ಪಂದ್ಯ ಡ್ರಾದಲ್ಲಿ ಮುಕ್ತಾಯವಾಯಿತು.

ಪಂದ್ಯದ ಮೊದಲಾರ್ಧದಲ್ಲಿ ಎರಡೂ ತಂಡಗಳು ಸಮಾನ ಪೈಪೋಟಿ ನೀಡಿದವು. ಮೋಹನ್ ಬಗಾನ್ ತಂಡದ ಒತ್ತಡವನ್ನು ಸಮರ್ಥವಾಗಿ ಎದುರಿಸಿದ ಬೆಂಗಳೂರು ಎಫ್‌ಸಿ, ವೇಗದ ಪ್ರತಿದಾಳಿ ನಡೆಸಲು ಪ್ರಯತ್ನಿಸಿತು. ಕೊನೆಯಲ್ಲಿ ಪ್ರತಿರೋಧದೊಂದಿಗೆ ಪಂದ್ಯಾವನ್ನು ಡ್ರಾ ಮಾಡಿಕೊಂಡಿತು. ಪಂದ್ಯದ ಮೊದಲ 2 ನಿಮಿಷಗಳಲ್ಲೇ ರಿಯಾನ್ ವಿಲಿಯಮ್ಸ್ ಗೋಲು ಗಳಿಸುವ ಸನಿಹಕ್ಕೆ ಬಂದಿದ್ದರು, ಆದರೆ ವಿಶಾಲ್ ಕೈತ್ ಆ ಹೊಡೆತವನ್ನು ಅದ್ಭುತವಾಗಿ ತಡೆದು ಕಾರ್ನರ್ ಆಗುವಂತೆ ನೋಡಿಕೊಂಡರು.

ಅದಾದ ಸ್ವಲ್ಪ ಸಮಯದಲ್ಲೇ ಮ್ಯಾಕ್ಲಾರೆನ್ ಅವರ ಕಠಿಣ ಹೊಡೆತವನ್ನು ಗುರುಪ್ರೀತ್ ಸಿಂಗ್ ಸಂಧು ತಡೆದರು. ಎರಡೂ ತಂಡಗಳ ರಕ್ಷಣಾ ವಿಭಾಗವು ಶಿಸ್ತಿನ ಪ್ರದರ್ಶನ ನೀಡಿದ್ದರಿಂದ, ವಿರಾಮದ ವೇಳೆಗೆ ಪಂದ್ಯವು ಗೋಲುರಹಿತ ಸಮಬಲದಲ್ಲಿತ್ತು. ದ್ವಿತೀಯಾರ್ಧದಲ್ಲಿಯೂ ಮೈದಾನದ ಮಧ್ಯಭಾಗದಲ್ಲಿ ಜಿದ್ದಾಜಿದ್ದಿನ ಹೋರಾಟ ಮುಂದುವರಿಯಿತು.

**ಹೋರಾಡಿದರೂ ದಕ್ಕದ ಗೋಲು:** 60ನೇ ನಿಮಿಷದಲ್ಲಿ ಬ್ರಿಯಾನ್ ಮಾಡಿದ ಕಠಿಣ ಟ್ಯಾಕಲ್‌ನಿಂದಾಗಿ ಅವರಿಗೆ ಹಳದಿ ಕಾರ್ಡ್ ನೀಡಲಾಯಿತು. ಮೋಹನ್ ಬಗಾನ್ ತಂಡಕ್ಕೆ



ಫ್ರೀ ಕಿಕ್ ಲಭಿಸಿತು. ಈ ಅಪಾಯಕಾರಿ ಅವಕಾಶದಲ್ಲಿ ಗೋಲಾಗದಂತೆ ತಡೆದ ಗುರುಪ್ರೀತ್ ಸಿಂಗ್ ಸಂಧು, ಬಿಎಫ್‌ಸಿ ಪರ ರಕ್ಷಣಾ ಗೋಡೆಯಾಗಿ ನಿಂತರು. ಮತ್ತೊಂದೆಡೆ, ಆಶಿಕ್ ಕುರುನಿಯನ್ ಎಡಭಾಗದಿಂದ ಅತ್ಯಂತ ವೇಗವಾಗಿ ಓಡಿಬಂದು ಸುನಿಲ್ ಛೇಟ್ರಿ ಅವರಿಗೆ ಚೆಂಡನ್ನು ಪಾಸ್ ಮಾಡಿದರು. ಛೇಟ್ರಿ ಅವರಿಗೆ ಸತತ ಎರಡು ಬಾರಿ ಅವಕಾಶ ಸಿಕ್ಕಿತಾದರೂ ಮೋಹನ್ ಬಗಾನ್‌ನ ಗೋಲ್ ಕೀಪರ್ ಅವುಗಳನ್ನು ವಿಫಲಗೊಳಿಸಿದರು. 85ನೇ ನಿಮಿಷದಲ್ಲಿ ಪೆಟ್ರಾಟೋಸ್ ಅವರಿಗೆ ಗೋಲು ಗಳಿಸುವ ಸುವರ್ಣಾವಕಾಶ ಲಭಿಸಿತ್ತು. ಗುರುಪ್ರೀತ್ ಅವರ ಎದುರು ಒಬ್ಬಂಟಿಯಾಗಿ ಗೋಲು ಗಳಿಸುವ ಹಂತದಲ್ಲಿದ್ದರೂ, ಆ ನಂಬರ್ 9 ಆಟಗಾರ ಚೆಂಡನ್ನು ಪೋಸ್ಟ್‌ನ ಹೊರಕ್ಕೆ ಹೊಡೆದರು. ಅಂತಿಮವಾಗಿ ಈ ರೋಚಕ ಪಂದ್ಯವು 0–0 ಡ್ರಾನಲ್ಲಿ ಅಂತ್ಯಗೊಂಡಿತು.

### ದಾವಣಗೆರೆ ದಕ್ಷಿಣ ಕ್ಷೇತ್ರ ಮೊದಲ ಬಾರಿಗೆ ಉಪಚುನಾವಣೆ

# ಮಹಿಳಾ ಮತದಾರರೇ ನಿರ್ಣಾಯಕ

**ಅರ್ಪಿತ್ ಎನ್.ಜಿ**

**ದಾವಣಗೆರೆ:** ಕ್ಷೇತ್ರ ರಚನೆಗೊಂಡ ಬಳಿಕ ಇದುವರೆಗೂ ನಾಲ್ಕು ಸಾರ್ವತ್ರಿಕ ಚುನಾವಣೆ ಕಂಡಿರುವ ದಾವಣಗೆರೆ ದಕ್ಷಿಣ ಕ್ಷೇತ್ರ ಮೊದಲ ಬಾರಿಗೆ ಉಪಚುನಾವಣೆ ಕಾಣುತ್ತಿದೆ. ಶಾಸಕರಾಗಿದ್ದ ಶಾಮನೂರು ಶಿವಶಂಕರಪ್ಪ ಅವರ ನಿಧನದಿಂದ ಕ್ಷೇತ್ರದಲ್ಲಿ ಉಪ ಚುನಾವಣೆ ಎದುರಾಗಿದೆ.



ಕ್ಷೇತ್ರದಲ್ಲಿ ಕಳೆದ 18 ವರ್ಷಗಳಲ್ಲಿ ಶೇ.40ರಷ್ಟು ಮತದಾರರ ಪ್ರಮಾಣ ಹೆಚ್ಚಳಗೊಂಡಿದೆ. ಆದರೆ ನಾಲ್ಕು ಚುನಾವಣೆಗಳಲ್ಲೂ ಶೇ.30ಕ್ಕೂ ಹೆಚ್ಚು ಮತದಾರರು ನಿರಾಸಕ್ತಿ ತೋರಿದ್ದಾರೆ. ಮತದಾನ ಪ್ರಮಾಣ ಮೂರು ಚುನಾವಣೆಯಲ್ಲಿ ಏರಿಕೆ ಕಂಡಿರುವುದು ಸಮಾಧಾನಕರ. ಕ್ಷೇತ್ರದಲ್ಲಿ ಶೇ.69.47ರಷ್ಟು ಮತದಾನ ಪ್ರಮಾಣವೇ ಇದುವರೆಗಿನ ಗರಿಷ್ಠ.

ಮತದಾನ ಹೆಚ್ಚಳಕ್ಕೆ ಪ್ರತಿಬಾರಿಯೂ ಜಿಲ್ಲಾಡಳಿತ ಮತದಾರರ ಪರಿಷ್ಕರಣೆ, ಹೊಸದಾಗಿ ಸೇರ್ಪಡೆ ಹಾಗೂ ಮತದಾನ ಹೆಚ್ಚಳಕ್ಕೆ ಬೀದಿ ನಾಟಕ, ಜಾಗೃತಿ ಕಾರ್ಯಕ್ರಮಗಳನ್ನು ನಡೆಸುತ್ತಿದೆ. ಆದಾಗ್ಯೂ ಶೇ.70ರ ಗಡಿಯನ್ನು ಒಮ್ಮೆಯೂ ದಾಟಿಲ್ಲ. ಮೊದಲ ಉಪಚುನಾವಣೆ ಹೊಸ ದಾಖಲೆ ನಿರ್ಮಿಸುವುದೇ ಎಂದು ಕಾದುನೋಡಬೇಕಿದೆ. 2023ರ ಚುನಾವಣೆಯಲ್ಲಿ 1,01,874 ಪುರುಷ ಮತದಾರರು, 1,02,533 ಮಹಿಳಾ ಮತದಾರರಿದ್ದರು. ಪ್ರಸ್ತುತ ಉಪಚುನಾವಣೆಯಲ್ಲಿ 1,13,654 ಪುರುಷರು, 1,17,986 ಮಹಿಳಾ ಮತದಾರರು ಇದ್ದಾರೆ. ಕಳೆದ ಬಾರಿ ಅಲ್ಪಪ್ರಮಾಣದಲ್ಲಿ ಹೆಚ್ಚಿದ್ದ ಮಹಿಳಾ ಮತದಾರರ ಸಂಖ್ಯೆ ಈ ಬಾರಿ ಮತ್ತಷ್ಟು ಹೆಚ್ಚಳಗೊಂಡಿದೆ. ಹೀಗಾಗಿ ಮಹಿಳೆಯರೇ ಫಲಿತಾಂಶದಲ್ಲಿ ನಿರ್ಣಾಯಕರೂ ಆಗಲಿದ್ದಾರೆ.

**ಕಾಂಗ್ರೆಸ್-ಬಿಜೆಪಿ ಹಣಾಹಣಿ:** ಪ್ರತೀ ಬಾರಿಯೂ ಇಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿಯ ನಡುವೆಯೇ ನೇರ ಹಣಾಹಣಿ ನಡೆದಿದೆ. ಒಮ್ಮೆ ಮಾತ್ರ ಜೆಡಿಎಸ್ ಇಲ್ಲಿ ಗಣನೀಯ ಮತಗಳನ್ನು ಗಳಿಸಿದೆ. ಮತ್ತೊಂದೆಡೆ ಶಾಮನೂರು ಕುಟುಂಬದೆದುರು ಅಲ್ಪಸಂಖ್ಯಾತರು ಹಿಂದಿನ ಚುನಾವಣೆಗಳಲ್ಲಿ ಸ್ಪರ್ಧೆ ಮಾಡಿದ್ದರೂ ಅವರಾರೂ ಗಣನೀಯ ಮತ ಪಡೆದಿಲ್ಲ. ಅಲ್ಪಸಂಖ್ಯಾತರೇ ಇಲ್ಲಿ ನಿರ್ಣಾಯಕ ಸ'ಂಖ್ಯೆ ಯ'ಲ್ಲಿ'ದ್ದ'ರ'ೂ ಬಿಜೆಪಿಯೇ ಕಾಂಗ್ರೆಸ್‌ಗೆ ಪೈಪೋಟಿ ನೀಡಿದೆ.

**ಕುಸಿತ ಕಂಡಿದ್ದ ನೋಟಾ ಮತ:** ನೋಟಾ ಮತ ಚಲಾವಣೆ 2018, 2023ರ ಚುನಾವಣೆಯಲ್ಲಿ ದಾಖಲಾಗಿದೆ. 2018ರ ಚುನಾವಣೆಯಲ್ಲಿ 888 ಮತದಾರರು ಯಾವುದೇ ಅಭ್ಯರ್ಥಿಗೂ ತಮ್ಮ ಮತ ನೀಡದೇ ನೋಟಾ ಒತ್ತಿದ್ದರು. ಆದರೆ 2023ರ ಚುನಾವಣೆಯಲ್ಲಿ ನೋಟಾ ಕೊಂಚ ಇಳಿಕೆ ಕಂಡು 655 ಮತ ದಾಖಲಾಗಿದೆ. 2018ರ ಚುನಾವಣೆಯಲ್ಲಿ ಒಟ್ಟು 11 ಜನ ಅಭ್ಯರ್ಥಿಗಳು ಸ್ಪರ್ಧಿಸಿದ್ದು, 6 ಅಭ್ಯರ್ಥಿಗಳು ನೋಟಾ ಮತಗಳಿಗಿಂತಲೂ ಕಡಿಮೆ ಮತ ಪಡೆದಿದ್ದಾರೆ. 2023ರಲ್ಲಿ ನಡೆದ ಚುನಾವಣೆಯಲ್ಲಿ ಒಟ್ಟು 16 ಅಭ್ಯರ್ಥಿಗಳು ಕಣದಲ್ಲಿದ್ದು 10 ಮಂದಿ ನೋಟಾ ಮತಗಳಿಗಿಂತ ಕಡಿಮೆ ಮತ ಪಡೆದಿದ್ದಾರೆ. ಜೆಡಿಎಸ್‌ನ ಅಮಾನುಲ್ಲಾ ಖಾನ್ ಅವರು 2018ರಲ್ಲಿ 6020 ಮತ, 2023ರ ಚುನಾವಣೆಯಲ್ಲಿ 1296 ಮತ ಗಳಿಸಿ ನೋಟಾಗಿಂತ ಹೆಚ್ಚು ಮತ ಪಡೆದ ಸಾಮೀಪ್ಯದ ಅಭ್ಯರ್ಥಿಯಾಗಿದ್ದಾರೆ.

ದಿಗಂತ ವಿಶೇಷ

**2008**
ಮತದಾರರು 1,61,435
ಮತ ಚಲಾಯಿಸಿದ ಮತದಾರರು 1,00,415
ಮತಪ್ರಮಾಣ ಶೇ.62.02

**2013**
ಮತದಾರರು 1,82,370
ಮತ ಚಲಾಯಿಸಿದ ಮತದಾರರು 1,20,410
ಮತಪ್ರಮಾಣ ಶೇ.66.03

**2018**
ಮತದಾರರು 2,01,158
ಮತ ಚಲಾಯಿಸಿದ ಮತದಾರರು 1,36,073
ಮತಪ್ರಮಾಣ ಶೇ.65.81
ನೋಟಾ 888

**2023**
ಮತದಾರರು 2,04,442
ಪುರುಷ 1,01,874
ಮಹಿಳೆ 1,02,533

**ಹಾಲಿ ಇರುವ ಮತದಾರರು**
ಮತದಾರರು 2,31,683
ಪುರುಷ 1,13,654
ಮಹಿಳೆ 1,17,986
ಇತರೆ 43

**ಇತರೆ 35**
ಮತ ಚಲಾಯಿಸಿದ ಮತದಾರರು 1,46,382
ಮತಪ್ರಮಾಣ ಶೇ.69.47
ನೋಟಾ 655

**18 ವರ್ಷಗಳಲ್ಲಿ ಶೇ.40ರಷ್ಟು ಮತದಾರರ ಪ್ರಮಾಣ ಹೆಚ್ಚಳ**



## ಆರೆಸ್ಸೆಸ್ ನಿಷೇಧ ಅಸಾಧ್ಯ: ಈಶ್ವರಪ್ಪ

**ಕಲಬುರಗಿ:** ಭಾರತವಲ್ಲದೇ ಇಡೀ ವಿಶ್ವದ ಗಮನ ಸೆಳೆದಿರುವ ಆರೆಸ್ಸೆಸ್‌ನ್ನು ನಿಷೇಧ ಮಾಡಲು ಯಾರಿಂದಲೂ ಸಾಧ್ಯವಿಲ್ಲ ಎಂದು ಮಾಜಿ ಉಪಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ ಹೇಳಿದರು.



ನಗರರ ಐವನ್ ಶಾಹಿ ಅತಿಥಿ ಗೃಹದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಭಾರತದ ಆಂತರೀಕ ವಿಷಯಗಳಲ್ಲಿ ಅಮೇರಿಕಾ ಹಸ್ತಕ್ಷೇಪ ಮಾಡುತ್ತಿದ್ದು,ಧಾರ್ಮಿಕ ಸ್ವಾತಂತ್ರ್ಯ ಉಲ್ಲಂಘನೆ ಮಾಡುತ್ತಿರುವ ಆರೆಸ್ಸೆಸ್‌ನ್ನು ನಿಷೇಧ ಮಾಡುವಂತೆ ಆಗ್ರಹ ಮಾಡುತ್ತಿದೆ. ಆರೆಸ್ಸೆಸ್ ಎಂದಿಗೂ ಕೂಡ ಧರ್ಮ,ವ್ಯಕ್ತಿಗಳ ವಿರುದ್ಧ ಗಲಾಟೆ ಮಾಡಿಲ್ಲ. ದೇಶದ ಲಕ್ಷಾಂತರ ನಗರಗಳಲ್ಲಿ, ಗ್ರಾಮಾಂತರಗಳಲ್ಲಿ ಕಳೆದ ನೂರು ವರ್ಷಗಳಿಂದ ದೇಶ, ಧರ್ಮದ ಜಾಗೃತಿ ಕಾರ್ಯಕ್ರಮಗಳನ್ನು ಮಾಡಿಕೊಂಡು ಬರುತ್ತಿದೆ ಎಲ್ಲೂ ಗಲಾಟೆ ನಡೆದಿಲ್ಲ ಎಂದರು.

**ಹಿಂದೂ ವಿರೋಧಿ ಸರ್ಕಾರ:** ರಾಜ್ಯದ ಮದ್ದೂರು, ನೆಲಮಂಗಲದಲ್ಲಿ ಶಾಂತಿಯಿಂದ ಹೋದ ಗಣೇಶನ ಮೆರವಣಿಗೆಯಲ್ಲಿ ಕಲ್ಲೂ ತೂರಾಟ, ಬಾಗಲಕೋಟೆಯಲ್ಲಿ ಶಿವಾಜಿ ಮೆರವಣಿಗೆ ವೇಳೆ ಮಸೀದಿ ಬಳಿ ನಿಂತು ಕಲ್ಲು, ಚಪ್ಪಲಿ ಎಸೆತ ಹೀಗೆ ದಾವಣಗೆರೆ, ಶಿವಮೊಗ್ಗದಲ್ಲಿ ಹುಡುಕಿ ಹಲ್ಲೆ ಮಾಡುತ್ತಿದ್ದಾರೆ. ಹೀಗಾಗಿ ಮುಸ್ಲಿಂರ ಮನಸ್ಥಿತಿ ಬದಲಾಗಬೇಕಿದೆ, ಇಲ್ಲಾಂದ್ರೆ ರಾಜ್ಯದಲ್ಲಿ ಹಾಗೂ ದೇಶದಲ್ಲಿ ತೊಂದರೆ ಅನುಭವಿಸಬೇಕಾಗುತ್ತದೆ. ಇನ್ನೊಂದೆಡೆ ಭಾರತದ ಮುಸ್ಲಿಮರು ದೇಶದಲ್ಲಿ ಸಾಕಷ್ಟು ಗೊಂದಲ ಸೃಷ್ಟಿ ಮಾಡುತ್ತಿದ್ದಾರೆ. ಅಮೆರಿಕಾ-ಇಸ್ರೇಲ್ ಜೊತೆಗೆ ಇರಾನ್ ಯುದ್ಧದ ಸಂದರ್ಭದಲ್ಲಿ ಇರಾನಿನಲ್ಲಿ ಖಮೇನ ಹತ್ಯೆಯಾದರೇ, ಭಾರತದಲ್ಲಿ ಏಕೆ ಪ್ರತಿಭಟನೆ? ಇರಾನಿನಲ್ಲಿ ನಡೆದ ಹತ್ಯೆಗೂ ಭಾರತಕ್ಕೂ ಯಾವುದೇ ರೀತಿಯ ಸಂಬಂಧವಿಲ್ಲ ಎಂದ ಅವರು, ಇಡೀ ವಿಶ್ವದಲ್ಲಿಯೇ ಮುಸಲ್ಮಾನರು ಸುರಕ್ಷಿತವಾಗಿ, ಸುಭದ್ರವಾಗಿ ಇದ್ದಾರೆ ಎಂದು ಅದು ಭಾರತದಲ್ಲಿ ಮಾತ್ರ ಎಂದು ಹೇಳಿದರು.

## ಖೋಟಾ ನೋಟು ಜಾಲ ಪತ್ತೆ: ಬಂಧನ

**ಬೆಳಗಾವಿ:** ದೊಡ್ಡ ವ್ಯಾಪಾರಿಗಳಿಗೆ ಪಂಗನಾಮ ಹಾಕಲು ಯತ್ನಿಸಿದ್ದ ಅಂತರ್ ರಾಜ್ಯ ಖೋಟಾ ನೋಟು ಜಾಲದ ಕಿಲಾಡಿಗಳು ಇದೀಗ ನ್ಯಾಯಾಂಗ ಬಂಧನದ ಭೀತಿ ಎದುರಾಗಿದೆ. ನಗರ ಪೊಲೀಸ್ ಆಯುಕ್ತರ ಭರ್ಜರಿ ಕಾರ್ಯಾಚರಣೆಯ ಬಳಿಕ, ಬಂಧಿತ ನಾಲ್ವರು ಆರೋಪಿಗಳನ್ನು ಮಾರ್ಚ್ 27ರ ವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ನ್ಯಾಯಾಲಯ ಆದೇಶಿಸಿದೆ.

ನಗರದ ಖಡೇಬಜಾರ್ ಹಾಗೂ ಬಾಜಿ ಮಾರ್ಕೆಟ್ ಪ್ರದೇಶದಲ್ಲಿ ಖೋಟಾ ನೋಟು ಚಲಾವಣೆ ಮಾಡುತ್ತಿದ್ದ ಗೋವಾ ಮತ್ತು ಬಿಹಾರ ಮೂಲದ ನಾಲ್ವರು ಆರೋಪಿಗಳನ್ನು ಬೆಳಗಾವಿ ಜೆ.ಎನ್.ಎಂ.ಸಿ ಎರಡನೇ ನ್ಯಾಯಾಲಯವು ಮಾರ್ಚ್ 27ರ ವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ. ಪ್ರಕರಣದ





ಕುರಿತು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ನಗರ ಪೊಲೀಸ್ ಆಯುಕ್ತ ಭೂಷಣ ಬೋರಸೆ ಅವರು, ಆರೋಪಿಗಳಿಂದ 500 ರೂಪಾಯಿ ಮುಖ ಬೆಲೆಯ 495 ನಕಲಿ ನೋಟುಗಳು, ಒಂದು ಕಾರು ಹಾಗೂ ಮೊಬೈಲ್‌ಗಳನ್ನು ಜಪ್ತಿ ಮಾಡಲಾಗಿದೆ. ವ್ಯಾಪಾರಿಯೊಬ್ಬರು ನೀಡಿದ ಸಮಯೋಚಿತ ಮಾಹಿತಿಯಿಂದ ಈ ಬೃಹತ್ ಜಾಲವನ್ನು ಭೇದಿಸಲು ಸಾಧ್ಯವಾಯಿತು ಎಂದು ಹೇಳಿದರು. ಈ ಜಾಲವು ಕೇವಲ ಬೆಳಗಾವಿ ಮಾತ್ರವಲ್ಲದೆ ಅಕ್ಕಪಕ್ಕದ ರಾಜ್ಯಗಳಿಗೂ ಹರಡಿರುವ ಶಂಕೆ ವ್ಯಕ್ತವಾಗಿದ್ದು, ತಲೆಮರೆಸಿಕೊಂಡಿರುವ ಇನ್ನಿಬ್ಬರು ಆರೋಪಿಗಳ ಪತ್ತೆಗಾಗಿ ಪೊಲೀಸರು ಬಲೆ ಬೀಸಿದ್ದಾರೆ. ಮಾರ್ಕೆಟ್ ಠಾಣೆಯ ಇನ್ಸ್‌ಪೆಕ್ಟರ್ ಜೆ.ಎಂ.ಕಾಲಿಮಿರ್ಚಿ ನೇತೃತ್ವದ ತಂಡದ ಕಾರ್ಯದಕ್ಷತೆಯನ್ನು ಆಯುಕ್ತರು ಶ್ಲಾಘಿಸಿದ್ದಾರೆ.

ಸಾರ್ವಜನಿಕರು ಅದರಲ್ಲೂ ವಿಶೇಷವಾಗಿ ಸಣ್ಣ ವ್ಯಾಪಾರಿಗಳು 500 ರೂಪಾಯಿ ನೋಟುಗಳನ್ನು ಸ್ವೀಕರಿಸುವಾಗ ಹೆಚ್ಚಿನ ಜಾಗರೂಕತೆ ವಹಿಸಬೇಕು ಮತ್ತು ಯಾವುದೇ ಅನುಮಾನ ಬಂದರೆ ತಕ್ಷಣ ಪೊಲೀಸರಿಗೆ ಮಾಹಿತಿ ನೀಡಬೇಕು ಎಂದು ಅವರು ಮನವಿ ಮಾಡಿದರು.

## ಸರ್ವಪಕ್ಷ ನಿಯೋಗ ಕೊಂಡೊಯ್ಯಲು ತೀರ್ಮಾನ

**ಹೊಸದಿಲ್ಲಿ:** ಕೃಷ್ಣಾ ಮೇಲ್ದಂಡೆ ಯೋಜನೆ 3ನೇ ಹಂತದ (ಯುಕೆಪಿ-3) ಕಾಮಗಾರಿ ಸೇರಿದಂತೆ ರಾಜ್ಯದ ನೀರಾವರಿ ಯೋಜನೆಗಳಿಗೆ ಸಂಬಂಧಿಸಿದಂತೆ ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಜಲಶಕ್ತಿ ಸಚಿವರ ಬಳಿಗೆ ಸರ್ವಪಕ್ಷ ನಿಯೋಗ ಕೊಂಡೊಯ್ಯಲು ರಾಜ್ಯ ಸರ್ಕಾರ ತೀರ್ಮಾನಿಸಿದೆ. ಇದಕ್ಕೆ ಸರ್ವಪಕ್ಷಗಳ ಸಂಸದರೂ ಸಮ್ಮತಿ ಸೂಚಿಸಿದ್ದಾರೆ.



ಮಂಗಳವಾರ ದಿಲ್ಲಿಯಲ್ಲಿ ರಾಜ್ಯದ ಸಂಸದರು, ವಕೀಲರ ತಂಡದೊಂದಿಗೆ ಸಭೆ ನಡೆಸಿದ ಜಲಸಂಪನ್ಮೂಲ ಸಚಿವರೂ ಆಗಿರುವ ಡಿಸಿಎಂ ಡಿ.ಕೆ ಶಿವಕುಮಾರ್ ಹಾಗೂ ರಾಜ್ಯ ಸಚಿವರು ರಾಜ್ಯದ ನೀರಾವರಿ ಯೋಜನೆಗಳಿಗೆ ಸಂಬಂಧಿಸಿದ ಮುಂದಿನ ಹೆಜ್ಜೆ ಬಗ್ಗೆ ಸುದೀರ್ಘ ಸಮಾಲೋಚನೆ ನಡೆಸಿದರು.

ಇದುವರೆಗೆ ಯೋಜನೆಗಳ ಸ್ಥಿತಿಗತಿ ಏನೇನಾಗಿದೆ, ನಮ್ಮ ಸರ್ಕಾರ ಏನೆಲ್ಲಾ ಮಾಡಿದೆ ಎಂಬುದನ್ನು ವಿವರಿಸಿದರಲ್ಲದೆ, ಕಾನೂನು ಸಂಘರ್ಷಗಳಿಂದ ಹೊರಬರುವುದರ ಜತೆಗೆ ಕೇಂದ್ರ ಸರ್ಕಾರದ ಅನುಮತಿಗಳನ್ನು ಪಡೆದುಕೊಳ್ಳುವುದಕ್ಕೆ ಸಂಬಂಧಿಸಿದಂತೆಯೂ ವಿಸ್ತೃತ ಚರ್ಚೆ ನಡೆಸಲಾಯಿತು.

**ನಾಡು, ನುಡಿ, ಜಲ ವಿಚಾರವಾಗಿ ರಾಜ್ಯದ ಹಿತ ದೃಷ್ಟಿಯಿಂದ ಪಕ್ಷಭೇದ ಮರೆತು ಒಂದಾಗಿರುತ್ತೇವೆ. ಸಮಸ್ಯೆಗಳ ನಿವಾರಣೆಗೆ ನಾವು ಕೇಂದ್ರದ ಮೇಲೆ ಒತ್ತಡ ಹಾಕುತ್ತೇವೆ.**

■ ಬಸವರಾಜ ಬೊಮ್ಮಾಯಿ, ಸಂಸದ

#### ಒಮ್ಮತದ ತೀರ್ಮಾನ


ಮುಂದಿನ ಹೆಜ್ಜೆಗಳ ಬಗ್ಗೆ ಇನ್ನೊಮ್ಮೆ ರಾಜ್ಯದ ಸಂಸದರು, ಕಾನೂನು ತಂಡದೊಂದಿಗೆ ದಿಲ್ಲಿಯಲ್ಲೇ ಸಭೆ ನಡೆಸಿ, ಪ್ರಧಾನಿ ಹಾಗೂ ಜಲಶಕ್ತಿ ಸಚಿವರ ಭೇಟಿಗೆ ದಿನಾಂಕಗಳನ್ನು ನಿಗದಿಪಡಿಸುತ್ತೇವೆ. ಒಟ್ಟಿಗೆ ಸರ್ವಪಕ್ಷ ನಿಯೋಗ ಕೊಂಡೊಯ್ಯುತ್ತೇವೆ. ಎಲ್ಲರೂ ಒಮ್ಮತದಿಂದ ಈ ತೀರ್ಮಾನ ಕೈಗೊಂಡಿದ್ದೇವೆ ಎಂದು ಡಿಸಿಎಂ ಡಿ.ಕೆ ಶಿವಕುಮಾರ್ ಸ್ಪಷ್ಟಪಡಿಸಿದರು.

ಸಭೆ ಬಳಿಕ ಜಂಟಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಕೃಷ್ಣಾ, ಕಾವೇರಿ, ತುಂಗಭದ್ರಾ ಸೇರಿದಂತೆ ಹಲವು ನೀರಾವರಿ ಯೋಜನೆಗಳಿಗೆ ಸಂಬಂಧಿಸಿದಂತೆ ಬಹಳ ವರ್ಷಗಳಿಂದ ಇರುವ ಸಮಸ್ಯೆ, ಹೋರಾಟಗಳಿಗೆ ಪರಿಹಾರ ಹತ್ತಿರ ಬಂದಿದೆ ಎಂದು ಆಶಾವಾದ ವ್ಯಕ್ತಪಡಿಸಿದರು. ಯುಕೆಪಿ-3 ಗೆ 1.33 ಲಕ್ಷ ಎಕರೆ ಭೂಮಿ ಒಂದೇ ಬಾರಿಗೆ ಸ್ವಾಧೀನ ಮಾಡಿಕೊಳ್ಳಲು ನಿರ್ಧರಿಸಿದ್ದು, ನೀರಾವರಿ ಜಮೀನಿಗೆ 40ಲಕ್ಷ ರೂ., ಒಣಭೂಮಿಗೆ 30 ಲಕ್ಷ ರೂ.ನಂತೆ ಪ್ರತಿ ಎಕರೆಗೆ ಪರಿಹಾರ ನಿಗದಿಪಡಿಸಿರುವುದರಲ್ಲದೆ, ಈ ಬಾರಿಯ ಬಜೆಟ್‌ನಲ್ಲೂ ಘೋಷಿಸಿದ್ದೇವೆ. ಸುಪ್ರೀಂ ಕೋರ್ಟ್ ಆದೇಶದಂತೆ ತಯಾರಿ ಮಾಡಿಕೊಳ್ಳುತ್ತೇವೆ ಎಂದು ಹೇಳಿದರು.

## ಪದಬಂಧ

**5927**

» ರಾಜಾ ಸಂಗಮೇಶ ಹಿರೇಮಠ





**5926 ಉತ್ತರ**

ಎಡದಿಂದ ಬಲಕ್ಕೆ:
2.ಗರಡಿ 5.ಗುಬ್ಬಿಗೂಡು
6.ಗೇರುಬೀಜ
7.ಕುಂಬಾರ 8.ನಜರು
10.ಅಂತರಿಕ್ಷ 11.ಸಂಕುಚಿತ
13.ಕೀರ್ತನಕಾರ
15.ಕರುಳು 16.ಸಹಿಸು

ಮೇಲಿನಿಂದ ಕೆಳಕ್ಕೆ:
1.ತೆಂಗು 2.ಗಡುತರ
3.ನಗೆಗೇಡಿ 4.ರಾಜ
7.ಕುಂಠಿತ 9.ಚಿಗುರು
10.ಅಂಗಾರಕ 12.ತತ್ತರಿಸು
13.ಕೀಳು 14.ರಸ

ಎಡದಿಂದ ಬಲಕ್ಕೆ
2.ಮಠದ ನಡುವೆ ಗಾಳಿ ಬೀಸುತ್ತಿದೆ (3)
5.ಯಶಸ್ಸನ್ನು ಹೊಂದಿದವ-ಪ್ರಸಿದ್ಧ ವ್ಯಕ್ತಿ (4)
6.ಕಲಿಸು-ವಿದ್ಯಾಭ್ಯಾಸ ಮಾಡಿಸು (4)
7.ಹೋರಾಟಕ್ಕೆ ಇಳಿಯುವುದು (3)
8.ಮದುವೆಯಾಗುವಿಕೆ ತಿರುಗಿದೆ (3)
10.ಕೆಲಸ ವ್ಯವಸ್ಥೆಗೊಳಿಸುವ ವ್ಯಕ್ತಿ (4)
12.ಇದು ಗಜಾಸುರನ ವೈರಿ-ಸಿಂಹ (4)
14.ಮಟ್ಟಸ, ಚಪ್ಪಟೆಯಾದುದು (3)
15.ಸುರನ ನಡುವೆ ಅಡಗಿದ ಚಂದ್ರ (4)
16.ಈ ರೀತಿಯಲ್ಲಿ ಬಿಡಲ್ಪಟ್ಟದ್ದು (4)

ಮೇಲಿನಿಂದ ಕೆಳಕ್ಕೆ
1.ವ್ಯಕ್ತಿಗಳ ಪರ ವಾದ ಮಾಡುವ ಕಾನೂನು ತಜ್ಞ (3)
2.ಜನರ ಪ್ರಜಾಪ್ರಭುತ್ವದ ಮುಖ್ಯ ಹಕ್ಕು (4)
3.ಕೂಲಂಕಷವಾಗಿ ಪರಿಶೀಲಿಸು (4)
4.ಜೀವಮಾನ-ಸಂಸಾರದ ಸಮಾನಪದ (3)
7.ವಾಹನ ಓಡಿಸುವ ವ್ಯಕ್ತಿ ತಲೆಕೆಳಗಾಗಿದ್ದಾನೆ (3)
9.ಮಂತ್ರಿ ಕಡೆಯಲ್ಲಿ ದೀರ್ಘವಾಗಿದ್ದಾನೆ (3)
10.ಸೂಚನೆಯನ್ನು ನೀಡು (4)
11. ಕಸದಲ್ಲಿ ಅವರ ಕಣ್ಣಿಗೆ ಬಿದ್ದ ಚಿನ್ನ (4)
12.ಇದು ಸಮರ್ಪಕವಲ್ಲದ ಕಾರಣ (4)
13.ಸಾಲವನ್ನು ಸಂಪೂರ್ಣವಾಗಿ ತೀರಿಸಿಕೊಳ್ಳುವುದು (4)

## ಕಿರುಸುದ್ದಿ

### ನಾಳೆಯಿಂದ ಜಾತ್ರೆ

**ಗದಗ:** ತಾಲೂಕಿನ ಮುಳಗುಂದದ ಐತಿಹಾಸಿಕ ದೇವಸ್ಥಾನ ಸಿದ್ದೇಶ್ವರ ಜಾತ್ರಾ ಮಹೋತ್ಸವ ಮಾ.19 ಮತ್ತು 20 ರಂದು ಹಮ್ಮಿಕೊಳ್ಳಲಾಗಿದೆ.

ಮಾ.19 ರಂದು ಸಂಜೆ 5ಕ್ಕೆ ಸಕಲ ವಾದ್ಯ ವೈಭವಗಳೊಂದಿಗೆ ಸಿದ್ದೇಶ್ವರ ರಥೋತ್ಸವ ಜರಗುವುದು. ಸಂಜೆ 7ಕ್ಕೆ ನಡೆಯುವ ಅನುಭಾವ ಗೋಷ್ಠಿಯಲ್ಲಿ ಮಣಕವಾಡ ದೇವಮಂದಿರದ ಅಭಿನವ ಮೃತ್ಯುಂಜಯ ಸ್ವಾಮೀಜಿ, ನೀಲಗುಂದ ಗುದ್ನೇಶ್ವರ ಮಠದ ಪ್ರಭುಲಿಂಗ ದೇವರು ಸಾನ್ನಿಧ್ಯ ವಹಿಸುವರು. ಮಾಜಿ ಶಾಸಕ ಡಿ.ಆರ್.ಪಾಟೀಲ ಕಾರ್ಯಕ್ರಮ ಉದ್ಘಾಟಿಸುವರು. ರಾಮಣ್ಣ ಕಮಾಜಿ ಅಧ್ಯಕ್ಷತೆ ವಹಿಸಲಿದ್ದು, ಬಸವ ಬೆಳವಿ ಶರಣಬಸವ ದೇವರಿಂದ ಉಪನ್ಯಾಸ, ಮುಖ್ಯ ಅತಿಥಿಗಳಾಗಿ ಗೌರಮ್ಮ ಬಡ್ನಿ, ಎಂ.ಡಿ.ಬಟ್ಟೂರ ಮೊದಲಾದವರು ಭಾಗವಹಿಸುವರು. ನಂತರ ವಿಜಯಲಕ್ಷ್ಮೀ ಹಿರೇಮಠ ಅವರಿಂದ ಸಂಗೀತ ಹಾಗೂ ಕೊತಬಾಳದ ಜೀವನ ಬೆಳಕು ಜಾನಪದ ವೈವಿಧ್ಯಮಯ ಕಲಾತಂಡದಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ.

ಮಾ.20ರಂದು ಸಂಜೆ 5ಕ್ಕೆ ಕಡುಬಿನ ಕಾಳಗ ಜರುಗುವುದು. ಸಂಜೆ 7ಕ್ಕೆ ನಡೆಯುವ ಅನುಭಾವ ಗೋಷ್ಠಿಯಲ್ಲಿ ಕುಕನೂರು ಅನ್ನದಾನೇಶ್ವರ ಶಾಖಾ ಮಠದ ಮಹಾದೇವ ಸ್ವಾಮೀಜಿ, ನೀಲಗುಂದ ಗುದ್ನೇಶ್ವರಮಠದ ಪ್ರಭುಲಿಂಗ ದೇವರು ಸಾನ್ನಿಧ್ಯ ವಹಿಸುವರು. ಬಿ.ವಿ.ಸುಂಕಾಪುರ ಅಧ್ಯಕ್ಷತೆ ವಹಿಸಲಿದ್ದು, ಕರಿಯಪ್ಪ ಕೊಡವಳ್ಳಿ ಅವರಿಂದ ಉಪನ್ಯಾಸ, ಮುಖ್ಯ ಅತಿಥಿಗಳಾಗಿ ಕೃಷ್ಣಗೌಡ ಎಚ್.ಪಾಟೀಲ,ರಾಜು ಕುರಡಗಿ ಮೊದಲಾವದರು ಭಾಗವಹಿಸುವರು. ಕೊಪ್ಪಳದ ಗುರು ಅಭಿನವ ಮೆಲೋಡಿ ಆರ್ಕೆಸ್ಟ್ರಾ ತಂಡದವರಿಂದ ರಸಮಂಜರಿ ನಡೆಯಲಿದೆ ಎಂದು ಸಂಜಯ ನೀಲಗುಂದ ತಿಳಿಸಿದ್ದಾರೆ.

### ಏ.7ರಿಂದ ಜಾತ್ರೆ

**ಲಕ್ಷ್ಮೇಶ್ವರ:** ತಾಲೂಕು ಬಾಳೇಹೊಸೂರ ದಿಂಗಾಲೇಶ್ವರಮಠದ ಜಾತ್ರಾ ಮಹೋತ್ಸವ ಏ.7 ಮತ್ತು 8 ರಂದು ನೆರವೇರಲಿದೆ.

ಜಾತ್ರಾಮಹೋತ್ಸವ ಹಿನ್ನೆಲೆಯಲ್ಲಿ ಏ.5 ಮತ್ತು 6ರಂದು ಉಚ್ಚಾಯ ನೆರವೇರಲಿದೆ. ಏ.7ರಂದು ಪ್ರಾತಃಕಾಲ ಕರ್ತೃ ಗದ್ದುಗೆಗೆ ಮಹಾ ರುದ್ರಾಭಿಷೇಕ, ಬೆಳಗ್ಗೆ 6.30ಕ್ಕೆ ಇಷ್ಟಲಿಂಗ ದೀಕ್ಷೆ ಹಾಗೂ ಅಯ್ಯಾಚಾರ. ನಂತರ 8.30ಕ್ಕೆ ಷಟಸ್ಥಲ ಧ್ವಜಾರೋಹಣ, ಮಧ್ಯಾಹ್ನ 12.30ಕ್ಕೆ ಸಾಮೂಹಿಕ ವಿವಾಹಗಳು ಹಲವು ಪೂಜ್ಯರ ಸಾನ್ನಿಧ್ಯದಲ್ಲಿ ನೆರವೇರಲಿವೆ. ಸಂಜೆ 5.30 ಕ್ಕೆ ಮಹಾರಥೋತ್ಸವ ಬಳಿಕ 6.30ಕ್ಕೆ ಪುರಾಣ ಪ್ರವಚನ ಮಹಾಮಂಗಲ ಧಾರ್ಮಿಕ ಸಭೆ ಅನೇಕ ಮಠಾಧೀಶರ ಸಾನ್ನಿಧ್ಯ ಮತ್ತು ಗಣ್ಯರ ಉಪಸ್ಥಿತಿಯಲ್ಲಿ ನೆರವೇರಲಿದೆ. ಏ.8ರಂದು ಸಂಜೆ 5.30 ಕ್ಕೆ ಕಡುಬಿನ ಕಾಳಗ ನೆರವೇರಲಿದೆ. ಮಾ. 28ರಿಂದ ಮಠದ ಪ್ರಾಂಗಣದಲ್ಲಿ ಪ್ರತಿದಿನ ಸಂಜೆ 6.30ಕ್ಕೆ ಗುಡ್ಡಾಪುರ ದಾನಮ್ಮದೇವಿ ಪುರಾಣ ನೆರವೇರಲಿದೆ. ಜಮಖಂಡಿಯ ಜ್ಞಾನಯೋಗಿನಿ, ಶ್ರೀದೇವಿ ಮಾತಾಜಿ ಪುರಾಣ ಪ್ರವಚನ ಮಾಡುವರು. ಗದುಗಿನ ವೀರೇಶ್ವರ ಪುಣ್ಯಾಶ್ರಮದ ಪುಟ್ಟರಾಜ ರೋಣ ರುದ್ರೇಶ ಕರಡಕಲ್ಲ ಸಂಗೀತ ಸೇವೆ ನೀಡುವರು.

ಸಾಮೂಹಿಕ ವಿವಾಹ ನೋಂದಣಿಗಾಗಿ ಮಾ. 31 ರೊಳಗಾಗಿ ಸಂಬಂಧಪಟ್ಟ ದಾಖಲೆಗಳೊಂದಿಗೆ ಶ್ರೀಮಠದಲ್ಲಿ ಹೆಸರು ನೋಂದಾಯಿಸಬೇಕು ಎಂದು ಶ್ರೀ ದಿಂಗಾಲೇಶ್ವರ ಮಠದ ಜಾತ್ರಾ ಸಮಿತಿ ಪ್ರಕಟಣೆಯಲ್ಲಿ ತಿಳಿಸಿದೆ.

### ಮಾರುಕಟ್ಟೆ ಧಾರಣೆ

ಗದಗ — ಕ್ವಿಂಟಲ್

| | |
|---|---|
| ತೇಂಗಾ | 5272-7885 |
| ಅಜವಾನ | 5500-8219 |
| ಅಲಸಂದಿ | 1999-6269 |
| ಕಡಲೆ | 1109-5569 |
| ಹತ್ತಿ | 7601-7601 |
| ಹೆಸರು | 1012-5009 |
| ಹುರಳಿ | 2877-2877 |
| ಜೋಳ | 1212-4625 |
| ಗೋವಿನಜೋಳ | 1450-1736 |
| ಮಡಕಿ | 6044-10839 |
| ಉದ್ದು | 4014-4014 |
| ಎಳ್ಳು | 6612-6612 |
| ಕುಸುಬಿ | 3819-5306 |
| ಸೂರ್ಯಕಾಂತಿ | 3011-6842 |
| ತೊಗರಿ | 2412-5931 |
| ಗೋಧಿ | 1902-5259 |



ಗಜೇಂದ್ರಗಡ: ತಾಲೂಕಿನ ಕೊಡಗಾನೂರ ಗ್ರಾಮದ ವೀರಭದ್ರೇಶ್ವರ ಕ್ರೀಡಾ ಸಂಸ್ಥೆ ಕೊಡಗಾನೂರ, ಕೊಡಗಾನೂರ ಪ್ರೀಮಿಯರ್ ಲೀಗ್ ಸೀಸನ್-4 ಕ್ರೀಕೆಟ್ ಪಂದ್ಯಾವಳಿಯ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜಿಸಲಾಗಿತ್ತು.

## ಸರ್ಕಾರಿ ಹುದ್ದೆ ಶೀಘ್ರ ಭರ್ತಿಗೆ ಆಗ್ರಹ

**ಶಿರಹಟ್ಟಿ:** ವಿವಿಧ ಇಲಾಖೆಗಳಲ್ಲಿ ಖಾಲಿ ಉಳಿದ 2 ಲಕ್ಷಕ್ಕೂ ಅಧಿಕ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿ, ನೇಮಕಾತಿ ಮಾಡಿಕೊಳ್ಳಬೇಕು ಎಂದು ಎಬಿವಿಪಿ ನಗರ ಕಾರ್ಯದರ್ಶಿ ಪರಶುರಾಮ ಕಳ್ಳಿಮನಿ ಆಗ್ರಹಿಸಿದರು.

ಪಟ್ಟಣದಲ್ಲಿ ಭಾರತೀಯ ವಿದ್ಯಾರ್ಥಿ ಪರಿಷತ್ ವತಿಯಿಂದ ರಾಜ್ಯ ಸರ್ಕಾರದ ಸುಮಾರು 43 ಇಲಾಖೆಗಳಲ್ಲಿ ಖಾಲಿ ಇರುವ ಸರ್ಕಾರಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವಂತೆ ಆಗ್ರಹಿಸಿ ತಹಶೀಲ್ದಾರ್ ಕೆ. ರಾಘವೇಂದ್ರ ರಾವ್ ಅವರ ಮೂಲಕ ಸಿಎಂ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿ ಮಾತನಾಡಿದರು. ಸುಮಾರು 43 ಇಲಾಖೆಯಡಿ 2 ಲಕ್ಷ 81 ಸಾವಿರದ 881 ಹುದ್ದೆಗಳು ಖಾಲಿ ಇದ್ದರೂ ಸಹ ನೇಮಕಾತಿ ಆದೇಶ ಹೊರಡಿಸುತ್ತಿಲ್ಲ. ಮೂರು ವರ್ಷದಿಂದ ಯಾವುದೇ ಒಂದು ಹುದ್ದೆಗೆ ಅರ್ಜಿ ಆಹ್ವಾನಿಸಿಲ್ಲ, ಶೀಘ್ರವಾಗಿ ನಿರುದ್ಯೋಗ ಯುವಕರಿಗೆ ಉದ್ಯೋಗ ನೀಡುವ ಮೂಲಕ ನಿರುದ್ಯೋಗ ಹೋಗಲಾಡಿಸಬೇಕು ಎಂದು ಆಗ್ರಹಿಸಿದರು. ಸ್ಪರ್ಧಾತ್ಮಕ ಪರೀಕ್ಷೆಗಳ ಸಿದ್ದತೆಗಾಗಿ ವರ್ಷಾನುಗಟ್ಟಲೆ ಊರು ಬಿಟ್ಟು, ಪಟ್ಟಣ ಸೇರಿ, ಸರಿಯಾಗಿ ಊಟ, ನಿದ್ದೆ ಇಲ್ಲದೇ ಕಷ್ಟಪಟ್ಟು ಓದುತ್ತಾರೆ. ಆದರೆ ಸರ್ಕಾರ ಸರಿಯಾದ ಸಮಯಕ್ಕೆ ಖಾಲಿ ಇರುವ ಹುದ್ದೆಗಳಿಗೆ ಅರ್ಜಿ ಆಹ್ವಾನ ಮಾಡದೇ ಪ್ರತಿಭಾವಂತ ವಿದ್ಯಾರ್ಥಿಗಳ ಭವಿಷ್ಯದ ಜೊತೆ ಆಟವಾಡುತ್ತಿದೆ ಎಂದು ಆರೋಪಿಸಿದರು.

ರಾಜ್ಯ ಹಾಸ್ಟೆಲ್ ಪ್ರಮುಖರಾದ ಅಭಿಷೇಕ್ ಉಮಚಗಿ, ರಾಜ್ಯ ವಿದ್ಯಾರ್ಥಿನಿ ಸಹ ಪ್ರಮುಖ ರಾಧಾ ಸಂಜನಾ ಪಾಟೀಲ್, ಸೋಮಶೇಖರ ದೇಸಾಯಿಪಟ್ಟಿ, ಶಶಾಂಕ ಪಲ್ಲೇದ, ಪಾರ್ವತಿ ಬಳಿಗಾರ, ಅನು ಅಣ್ಣಿಗೇರಿ, ಸವಿತಾ ಹಾಗೂ ಇನ್ನಿತರ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ಶಿರಹಟ್ಟಿ : ವಿವಿಧ ಇಲಾಖೆಗಳಲ್ಲಿ ಖಾಲಿ ಉಳಿದ 2 ಲಕ್ಷಕ್ಕೂ ಅಧಿಕ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿ, ನೇಮಕಾತಿ ಮಾಡಿಕೊಳ್ಳಬೇಕು ಎಂದು ಆಗ್ರಹಿಸಿ ತಹಶೀಲ್ದಾರ್ ಕೆ. ರಾಘವೇಂದ್ರ ರಾವ್ ಅವರ ಮೂಲಕ ಸಿಎಂ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಲಾಯಿತು.

### ಇಂದಿನಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆ । ಜಿಲ್ಲೆಯಲ್ಲಿ 61 ಪರೀಕ್ಷಾ ಕೇಂದ್ರಗಳು

# 17,146 ವಿದ್ಯಾರ್ಥಿಗಳಿಗೆ ಪರೀಕ್ಷೆ



**ಗದಗ:** ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳು ಮಾ.18 ರಿಂದ ಏ.2ರವರೆಗೆ ಬೆಳಗ್ಗೆ 10 ರಿಂದ ಮಧ್ಯಾಹ್ನ 1.15ರ ವರೆಗೆ ನಡೆಯಲಿದ್ದು, ಜಿಲ್ಲೆಯ 61 ಪರೀಕ್ಷಾ ಕೇಂದ್ರಗಳಲ್ಲಿ ಒಟ್ಟು 17,146 ವಿದ್ಯಾರ್ಥಿಗಳು ಪರೀಕ್ಷೆ ಎದುರಿಸಲಿದ್ದಾರೆ.

ಶಹರ ವ್ಯಾಪ್ತಿಯಲ್ಲಿ12 ಪರೀಕ್ಷಾ ಕೇಂದ್ರಗಳಿದ್ದು 2,940 ವಿದ್ಯಾರ್ಥಿಗಳು. ಗದಗ ಗ್ರಾಮೀಣ ಭಾಗದಲ್ಲಿ 10 ಪರೀಕ್ಷಾ ಕೇಂದ್ರಗಳಿದ್ದು 2,884 ವಿದ್ಯಾರ್ಥಿಗಳು, ಮುಂಡರಗಿ ತಾಲೂಕಿನಲ್ಲಿ 8 ಪರೀಕ್ಷಾ ಕೇಂದ್ರಗಳನ್ನು ತೆರೆಯಲಾಗಿದ್ದು 2,401 ವಿದ್ಯಾರ್ಥಿಗಳು.

ನರಗುಂದ ತಾಲೂಕಿನ 5 ಪರೀಕ್ಷಾ ಕೇಂದ್ರಗಳಲ್ಲಿ 1,548 ವಿದ್ಯಾರ್ಥಿಗಳು. ರೋಣ ತಾಲೂಕು ವ್ಯಾಪ್ತಿಯ 14 ಪರೀಕ್ಷಾ ಕೇಂದ್ರಗಳಲ್ಲಿ 4,421 ವಿದ್ಯಾರ್ಥಿಗಳು ಹಾಗೂ ಶಿರಹಟ್ಟಿ ತಾಲೂಕಿನ 12 ಪರೀಕ್ಷಾ ಕೇಂದ್ರಗಳಲ್ಲಿ 2,952 ವಿದ್ಯಾರ್ಥಿಗಳು. ಒಟ್ಟಾರೆ ಜಿಲ್ಲೆಯ 61 ಪರೀಕ್ಷಾ ಕೇಂದ್ರಗಳಲ್ಲಿ 17,146 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ.

ಪ್ರಶ್ನೆಪತ್ರಿಕೆಗಳನ್ನು ಸಕಾಲದಲ್ಲಿ ಪರೀಕ್ಷಾ ಕೇಂದ್ರಗಳಿಗೆ ತಲುಪಿಸಲು ಒಟ್ಟು 26 ಮಾರ್ಗಗಳನ್ನು ರಚಿಸಲಾಗಿದೆ. ಪರೀಕ್ಷಾ ಸಮಯದಲ್ಲಿ ನಕಲು ಮಾಡುವುದು, ಪರೀಕ್ಷಾರ್ಥಿಗಳ ಬದಲು ಬೇರೆಯವರು ಪರೀಕ್ಷೆಗೆ ಹಾಜರಾಗುವುದು ಮುಂತಾದ ಅವ್ಯವಹಾರ ತಡೆಗಟ್ಟಲು ಮತ್ತು ಪರೀಕ್ಷಾ ಕೇಂದ್ರಗಳಲ್ಲಿ ಶಿಸ್ತು ಮತ್ತು ಶಾಂತಿ ಸುವ್ಯವಸ್ಥೆ ಕಾಪಾಡುವ ಹಿತದೃಷ್ಟಿಯಿಂದ ಜಿಲ್ಲೆಯ 61 ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ಪರಿಮಿತಿಯೊಳಗೆ ಮಾ. 18ರಿಂದ ಏ. 2ರ ವರೆಗೆ ಬೆಳಗ್ಗೆ 9.30ರಿಂದ ಮಧ್ಯಾಹ್ನ 2.30ರ ವರೆಗೆ ಪ್ರತಿಬಂಧಕಾಜ್ಞೆ ಜಾರಿಗೊಳಿಸಲಾಗಿದೆ.

ಉಚಿತ ಬಸ್ ಪ್ರಯಾಣಕ್ಕೆ ಅವಕಾಶ: ವಿದ್ಯಾರ್ಥಿಗಳಿಗೆ ಅವರ ವಿದ್ಯಾಸಂಸ್ಥೆಯ ಹೊರತಾಗಿಯೂ ಇತರೆ ವಿದ್ಯಾಸಂಸ್ಥೆಗಳಲ್ಲಿ ಪರೀಕ್ಷಾ ಕೇಂದ್ರಗಳ ನಿಯೋಜನೆಯಾಗಿರುವುದರಿಂದ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ವಾಯವ್ಯ ರಸ್ತೆ ಸಾರಿಗೆ ಸಂಸ್ಥೆ ನಿಗಮವು ಎಸ್‌ಎಸ್‌ಎಲ್‌ಸಿ ಪರೀಕ್ಷೆ ನಡೆಯುವ ದಿನದಂದು ಪರೀಕ್ಷೆಗೆ ಹಾಜರಾಗುವ ಎಲ್ಲ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು ತಮ್ಮ ವಾಸಸ್ಥಳದಿಂದ ಪರೀಕ್ಷಾ ಕೇಂದ್ರಗಳವರೆಗೆ ಮತ್ತು ವಾಸಸ್ಥಳಕ್ಕೆ ಹಿಂದಿರುಗುವಾಗ ಪರೀಕ್ಷಾ ಪ್ರವೇಶ ಪತ್ರವನ್ನು ತೋರಿಸಿ ನಿಗಮದ ನಗರ, ಹೊರವಲಯ, ಸಾಮಾನ್ಯ ಹಾಗೂ ವೇಗದೂತ ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣಿಸಲು ಅವಕಾಶ ಕಲ್ಪಿಸಿದೆ.

#### ಎಸ್‌ಎಸ್‌ಎಲ್‌ಸಿ ಪರೀಕ್ಷಾ ವೇಳಾಪಟ್ಟಿ

- ಮಾ. 18ಕ್ಕೆ ಬೆಳಗ್ಗೆ 10ರಿಂದ ಮಧ್ಯಾಹ್ನ 1.15ರ ವರೆಗೆ ಪ್ರಥಮ ಭಾಷೆ
- ಮಾ.23ರಂದು ಬೆಳಗ್ಗೆ 10ರಿಂದ 1.15ರ ವರೆಗೆ ವಿಜ್ಞಾನ
- ಮಾ. 25ಕ್ಕೆ ಬೆಳಗ್ಗೆ 10ರಿಂದ 1ರ ವರೆಗೆ ದ್ವಿತೀಯ ಭಾಷೆ ಇಂಗ್ಲಿಷ್
- ಮಾ.28ರಂದು ಬೆಳಗ್ಗೆ 10ರಿಂದ 1.15ರ ವರೆಗೆ ಗಣಿತ
- ಮಾ. 30ರಂದು ಬೆಳಗ್ಗೆ 10ರಿಂದ 1ರ ವರೆಗೆ ತೃತೀಯ ಭಾಷೆ ಹಿಂದಿ
- ಏ.2ರಂದು ಬೆಳಗ್ಗೆ 10ರಿಂದ 1.15ರ ವರೆಗೆ ಸಮಾಜ ವಿಜ್ಞಾನ ಪರೀಕ್ಷೆ

"ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳನ್ನು ಶಾಂತಿಯುತ ಹಾಗೂ ಸುವ್ಯವಸ್ಥಿತವಾಗಿ ಜರುಗಿಸಲು ಅಗತ್ಯ ಕ್ರಮ ವಹಿಸಲಾಗಿದೆ. ವಿದ್ಯಾರ್ಥಿಗಳು ಯಾವುದೇ ಭಯವಿಲ್ಲದೆ ಮುಕ್ತ ಮನಸ್ಸಿನಿಂದ ಪರೀಕ್ಷೆ ಬರೆಯಲು ಪರೀಕ್ಷಾ ಕೇಂದ್ರಗಳಲ್ಲಿ ಅಗತ್ಯ ತಯಾರಿ ಮಾಡಿಕೊಳ್ಳಲಾಗಿದೆ.

■ ಆರ್.ಎಸ್.ಬುರಡಿ, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ

#### ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನಕ್ಕೆ ವಾಗ್ದಾನ

ಎಸ್‌ಎಸ್‌ಎಲ್‌ಸಿ ಪರೀಕ್ಷೆ -1ರಲ್ಲಿ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಯನ್ನು ಉತ್ತೇಜಿಸುವ ನಿಟ್ಟಿನಲ್ಲಿ ಇಂಡಿಯನ್ ಮೆಡಿಕಲ್ ಅಸೋಸಿಯೇಷನ್‌ಯಿಂದ ಪ್ರತಿ ತಾಲೂಕು ಮಟ್ಟದಲ್ಲಿ ಪ್ರೋತ್ಸಾಹಧನ ನೀಡುವುದಾಗಿ ವಾಗ್ದಾನ ಮಾಡಿದೆ. ಪ್ರಥಮ ಸ್ಥಾನ ಪಡೆದ ಒಬ್ಬ ವಿದ್ಯಾರ್ಥಿಗೆ 10,000 ರೂ.ನಂತೆ ಜಿಲ್ಲೆಗೆ 60,000 ರೂ.,ದ್ವಿತೀಯ ಸ್ಥಾನ ಪಡೆದ ತಲಾ 3 ವಿದ್ಯಾರ್ಥಿಗಳಿಗೆ ತಲಾ 5,000 ರೂ. ನಂತೆ ಜಿಲ್ಲೆಗೆ 90,000 ರೂ., ತೃತೀಯ 6 ಸ್ಥಾನಗಳ ವಿದ್ಯಾರ್ಥಿಗಳಿಗೆ ತಲಾ 2,500 ರೂ.ನಂತೆ ಜಿಲ್ಲೆಗೆ 90,000. ಪ್ರತಿ ತಾಲೂಕಿಗೆ 40,000 ರೂ. ನಂತೆ ಪ್ರೋತ್ಸಾಹಧನ ವಿತರಣೆ ಆಗಲಿದ್ದು, ಜಿಲ್ಲೆಯ ಎಲ್ಲಾ ತಾಲೂಕುಗಳನ್ನು ಒಳಗೊಂಡು ಒಟ್ಟು 2,40,000 ರೂ. ಅನುದಾನ ನೀಡುವುದಾಗಿ ವಾಗ್ದಾನ ಮಾಡಿದೆ.

## ಎಸ್ಸೆಸ್ಸೆಲ್ಸಿ ಪರೀಕ್ಷೆ ಸುಸೂತ್ರವಾಗಿ ನಡೆಯಲಿ



**ಮುಂಡರಗಿ:** ಮಾ.18ರಿಂದ ನಡೆಯಲಿರುವ ಎಸ್ಸೆಸ್ಸೆಲ್ಸಿ ಪರೀಕ್ಷೆ ಮುಂಡರಗಿ ತಾಲೂಕಿನಲ್ಲಿ ಕೈಗೊಂಡಿರುವ ಕ್ರಮ ಮತ್ತು ಮುಂದೆ ಕೈಗೊಳ್ಳುವ ಸಿದ್ಧತೆ ಕುರಿತು ತಹಶೀಲ್ದಾರ್ ಪಿ.ಎಸ್ .ಯರ್ರಿಸ್ವಾಮಿ ಅಧ್ಯಕ್ಷತೆ ಪೂರ್ವಭಾವಿ ಸಭೆ ಜರುಗಿತು.

ಈ ಸಂದರ್ಭದಲ್ಲಿ ಮಾಹಿತಿ ಒದಗಿಸಿದ ಬಿಇಒ ಗಂಗಾಧರ ಅಣ್ಣಿಗೇರಿ, ಮುಂಡರಗಿ ತಾಲೂಕಿನಲ್ಲಿ ಮುಂಡರಗಿ ಜೆ.ಎ. ಹೈಸ್ಕೂಲ್, ಎಸ್‌ಎಫ್‌ಎಸ್, ಶಾಲೆ ಹಾಗೂ ವಿ.ಜಿ.ಲಿಂಬಿಕಾಯಿ ಪ್ರೌಢಶಾಲೆ, ಡಂಬಳ, ಪೇಠಾಲೂರ, ಬಾಗೇವಾಡಿ, ಕೊರ್ಲಹಳ್ಳಿ ಆದರ್ಶ ವಿದ್ಯಾಲಯ, ಕದಾಂಪೂರ ಗ್ರಾಮಗಳಲ್ಲಿ ಒಟ್ಟು 8 ಪರೀಕ್ಷಾ ಕೇಂದ್ರಗಳಿದ್ದು ಇಲ್ಲಿ 8 ಅಧೀಕ್ಷಕರನ್ನು ನೇಮಕ ಮಾಡಲಾಗಿದೆ. ತಾಲೂಕಿನಲ್ಲಿ ಒಟ್ಟು 2,255 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಲಿದ್ದಾರೆ.ಪರೀಕ್ಷೆಸಂದರ್ಭದಲ್ಲಿ ಪರೀಕ್ಷೆಗೆ ಹಾಜರಾಗುವ ಗ್ರಾಮೀಣ ವಿದ್ಯಾರ್ಥಿಗಳಿಗೆ ಅನುಕೂಲವಾಗಲು ಸಾರಿಗೆ ಸಂಸ್ಥೆಯ ಬಸ್ಸುಗಳ ಸೌಲಭ್ಯ, ವಿದ್ಯುತ್ ಪೂರೈಕೆ, ಕುಡಿಯುವ ನೀರು, ಸಿಸಿ ಕ್ಯಾಮೆರಾ ವ್ಯವಸ್ಥೆ, ಡೆಸ್ಕ್‌ಗಳನ್ನು ಒದಗಿಸಿ. ಒಂದು ಕೊಠಡಿಯಲ್ಲಿ 24 ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಲಿದ್ದು, ಒಂದು ಡೆಸ್ಕ್‌ಗೆ ಒಬ್ಬ ವಿದ್ಯಾರ್ಥಿ ಕುಳಿತುಕೊಳ್ಳುವಂತೆ ಮಾಡಲಾಗುವುದು. ವಿದ್ಯಾರ್ಥಿಗಳ ಆರೋಗ್ಯ ದೃಷ್ಟಿಯಿಂದ ಆರೋಗ್ಯ ಇಲಾಖೆ ಸಿಬ್ಬಂದಿ ಹಾಜರಿದ್ದು ಮುಂಜಾಗ್ರತೆ ವಹಿಸಬೇಕು. ಆಯಾ ಶಾಲೆಯಲ್ಲಿ ಡೆಸ್ಕ್‌ಗಳ ಕೊರತೆ ಇದ್ದರೆ ಕೂಡಲೇ ಆಯಾ ಶಾಲೆಯ ಅಧೀಕ್ಷಕರು ತಮ್ಮ ಗಮನಕ್ಕೆ ತರಬೇಕು ಎಂದರು.

ತಾಪಂ ಇಒ ವಿಶ್ವನಾಥ ಹೊಸಮನಿ, ವಿವಿಧ ಕೇಂದ್ರದ ಅಧೀಕ್ಷಕರು, ಕಸ್ಟಡಿಯನ್, ಮಾರ್ಗಾಧಿಕಾರಿಗಳು ಹಾಗೂ ಪಿಎಸ್ಐ ಬಿ.ಎನ್.ಯಳವತ್ತಿ, ಪುರಸಭೆ ಅಧಿಕಾರಿ ಹನುಮರೆಡ್ಡಿ ಇಟಗಿ ಇತರರಿದ್ದರು.

#### ಬಸ್ ಸಂಚಾರಕ್ಕೆ ಕ್ರಮವಾಗಲಿ

ಗ್ರಾಪಂ ಕೇಂದ್ರಗಳಲ್ಲಿ ಸ್ವಚ್ಛತೆ, ಕುಡಿಯುವ ನೀರು, ಬೆಳಕು, ವಿದ್ಯುತ್ ಪೂರೈಕೆ ಸಮರ್ಪಕವಾಗಿರಲಿ. ಸರಿಯಾಗಿ ಕಾರ್ಯ ನಿರ್ವಹಿಸುವ ಸಿಸಿ ಕ್ಯಾಮೆರಾ ಅಳವಡಿಸಿ. ಸಾರಿಗೆ ಸಂಸ್ಥೆ ಡಿಪೋ ಒಳಮಾರ್ಗದ ಗ್ರಾಮಗಳಿಗೆ ಕಡ್ಡಾಯವಾಗಿ ಬಸ್‌ಗಳು ಸಂಚರಿಸಲಿ. ವಿದ್ಯುತ್ ಇಲಾಖೆ ಅಂದು ಕರೆಂಟ್ ತೆಗೆಯದಂತೆ ನೋಡಿಕೊಳ್ಳಬೇಕು ಎಂದು ತಹಶೀಲ್ದಾರ್ ಪಿ.ಎಸ್. ಯರ್ರಿಸ್ವಾಮಿ ಹೇಳಿದರು.

## ಪಂಚವಾರ್ಷಿಕ ನಂದಿ ಪಾಟಾರೋಹಣ ಸಮಾರಂಭ ನಾಳೆ: ಲಿಂಬಯ್ಯಸ್ವಾಮಿಮಠ

**ಲಕ್ಷ್ಮೇಶ್ವರ:** ಪಟ್ಟಣದ ಲಿಂಬಯ್ಯಸ್ವಾಮಿಮಠದಲ್ಲಿ ಮಾ.19ರಂದು ಪಂಚವಾರ್ಷಿಕ ನಂದಿ ಪಾಟಾರೋಹಣ ಸಮಾರಂಭ, ಜಂಗಮ ವಟುಗಳಿಗೆ ಅಯ್ಯಾಚಾರ, ಹಠಯೋಗ ಸಾಧನಗಳ ಪೂಜಾಕೈಂಕರ್ಯದ ಕಾರ್ಯಕ್ರಮಗಳು ನೆರವೇರಲಿವೆ ಎಂದು ಲಿಂಬಯ್ಯಸ್ವಾಮಿ ಪ್ರತಿಭಾ ಪ್ರತಿಷ್ಠಾನದ ಅಧ್ಯಕ್ಷ ಶಿವಪ್ರಕಾಶ ಲಿಂಬಯ್ಯಸ್ವಾಮಿಮಠ ತಿಳಿಸಿದರು.

ಅವರು ಪಟ್ಟಣದ ಶ್ರೀಮಠದಲ್ಲಿ ಈ ಕುರಿತು ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿ, ಲಿಂಬಯ್ಯಸ್ವಾಮಿಮಠ 14 ತಲೆಮಾರುಗಳ ಧಾರ್ಮಿಕ ವೈಶಿಷ್ಟ್ಯತೆ ಹೊಂದಿದ್ದು ಹಿರಿಯರ ಕಾಲದಿಂದಲೂಶ್ರೀಮಠದಸಂಪ್ರದಾಯಬದ್ಧ ಆಚರಣೆಗಳನ್ನು ಹಲವಾರು ಸಮಾಜಮುಖಿ ಕಾರ್ಯಕ್ರಮಗಳ ಮೂಲಕ ಮುನ್ನಡೆಸಿಕೊಂಡು ಹೋಗಲಾಗುತ್ತಿದೆ. ಲಿಂಬಯ್ಯಸ್ವಾಮಿ ದಂಪತಿ ಗುರುವಿನ ಅನುಗ್ರಹ ಮತ್ತು ಹಠಯೋಗದ ಮೂಲಕ ಶಿವಸಾಮಗ್ರಿಗಳನ್ನು ಪಡೆದು ಲಕ್ಷ್ಮೇಶ್ವರದಲ್ಲಿ ಶಿರಸ್ಥಪವಾಡಗೈದಿರುವುದು ಅಲ್ಲದೇ ಹಠಯೋಗದ ಸಾಧನಗಳಾದ ನಂದಿಪಠ, ಗಂಡುಗತ್ತರಿ, ಬಲಮುರಿ ಶಂಖ, ಎಡಮುರಿ ಬೆತ್ತ, ಏಕಗಳಲಿನ ಬೆತ್ತ, ಚಾಪಗೋಡಲಿ, ವೀರಕಂಕಣಗಳ ಮಹತ್ವದ ಬಗ್ಗೆ ತಿಳಿಸಿದರು. ಕಾರ್ಯಕ್ರಮದ ದಿನ ಬೆಳಗ್ಗೆಯಿಂದ ಸಂಜೆವರೆಗೂ ವಾದ್ಯಮೇಳದೊಂದಿಗೆ ಸಾಧನಗಳಿಗೆ ಅಭಿಷೇಕ, ಪೂಜೆ ನೆರವೇರಲಿದೆ ಎಂದರು.

ಲಕ್ಷ್ಮೇಶ್ವರ ಕರೇವಾಡಿಮಠದ ಮಳೇಮಲ್ಲಿಕಾರ್ಜುನ ಶಿವಾಚಾರ್ಯರ ಸಾನ್ನಿಧ್ಯ ವಹಿಸುವರು. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂದು ಕೋರಿದರು.

ಈ ವೇಳೆ ವಿ.ಜಿ. ಪಡಗೇರಿ, ಕೃಷ್ಣ ಕುಲಕರ್ಣಿ, ಈರಣ್ಣ ಅಂಕಲಕೋಟಿ ಮಾತಾಡಿದರು. ಚಿದಾನಂದ ಲಿಂಬಯ್ಯಸ್ವಾಮಿಮಠ, ನಿರಂಜನ ಲಿಂಬಯ್ಯಸ್ವಾಮಿಮಠ, ಶರಣಪ್ಪ ಗುಳಗಣ್ಣವರ, ಶಾಂತರಾಜ ಓದುನವರ, ರಾಮಣ್ಣ ಪಡಗೇರಿ, ಮಹೇಶ ಲಿಂಬಯ್ಯಸ್ವಾಮಿಮಠ ಮತ್ತಿತರರಿದ್ದರು.



## ಇಂದಿನಿಂದ ಜಾತ್ರಾಮಹೋತ್ಸವ



**ಗದಗ:** ನಗರದ ಕರಿಯಮ್ಮಕಲ್ಲು ಬಡಾವಣೆ ಸುಧಾರಣಾ ಸಮಿತಿಯಿಂದ ಕರಿಯಮ್ಮದೇವಿಯ 97ನೇ ಜಾತ್ರಾಮಹೋತ್ಸವ ಮಾ.18 ರಿಂದ 20 ರವರೆಗೆ ವಿವಿಧ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಕರಿಯಮ್ಮಕಲ್ಲು ಬಡಾವಣೆ ಸುಧಾರಣಾ ಸಮಿತಿಯ ಗೌರವಾಧ್ಯಕ್ಷ ಎಲ್.ಡಿ. ಚಂದಾವರಿ ಹೇಳಿದರು.

ನಗರದ ಪತ್ರಿಕಾಭವನದಲ್ಲಿ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮಾ.18 ರಂದು ಬೆಳಗ್ಗೆ 8ಕ್ಕೆ ಚಂಡಿಕಾ ಹೋಮ ಹಾಗೂ ಜಾತ್ರಾ ಪ್ರಾರಂಭೋತ್ಸವದ ಉದ್ಘಾಟಿಸಲಾಗುತ್ತದೆ. ಕರಿಯಮ್ಮದೇವಿ ಬೆಳ್ಳಿ ಉತ್ಸವ ಮೂರ್ತಿ ಸಾರ್ವಜನಿಕರಿಗೆ ದರ್ಶನ ಅವಕಾಶ ನೀಡಲಾಗಿದೆ ಎಂದರು. ಮಾಜಿ ಶಾಸಕ ಡಿ.ಆರ್. ಪಾಟೀಲ ಕಾರ್ಯಕ್ರಮ ಉದ್ಘಾಟಿಸುವರು. ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮ ಹಾಗೂ ರಂಗೋಲಿ ಸ್ಪರ್ಧೆ, ಚಿತ್ರಕಲಾ ಸ್ಪರ್ಧೆ, ವಚನ ಸ್ಪರ್ಧೆ, ಸಂಜೆ 6ಕ್ಕೆ ಸಾಂಸ್ಕೃತಿಕ ವೇದಿಕೆ ಕಾರ್ಯಕ್ರಮ ಹಮ್ಮಿಕೊಂಡಿದೆ ಎಂದರು. ಒಪ್ಪತ್ತೇಶ್ವರ ಮಠದ ಅಭಿನವ ಒಪ್ಪತ್ತೇಶ್ವರ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಜಾತ್ರಾ ಸಮಿತಿ ಅಧ್ಯಕ್ಷ ಶಂಕರ ಹಾನಗಲ್ಲ ಅಧ್ಯಕ್ಷತೆ ವಹಿಸಿದ್ದರು. ನಗರಸಭೆ ಪೌರಾಯುಕ್ತ ರಾಜಾರಾಮ ಪವಾರ, ನಗರಸಭೆ ಸದಸ್ಯೆ ವಿಜಯಲಕ್ಷ್ಮೀ ದಿಂಡೂರ, ನಿಂಗನಗೌಡ ಮರಿಗೌಡ್ರ, ಸಿದ್ಧಲಿಂಗಪ್ಪ ಮಲ್ಲಾಡದ, ನಾಘರತ್ನ ಸಾಲಿಮಠ, ಎಲ್.ಡಿ. ಚಂದಾವರಿ, ಸಿ.ಕೆ. ಮಾಳಶೆಟ್ಟಿ, ರಾಜಶೇಖರ ಭಾಗವಹಿಸುವರು ಎಂದರು.

ಮಾ.19 ರಂದು ಸಂಜೆ 6ಕ್ಕೆ ಕರಿಯಮ್ಮದೇವಿ ಮಹಾ ರಥೋತ್ಸವ ಹಮ್ಮಿಕೊಳ್ಳಲಾಗಿದೆ. ಸಂಜೆ 7.30ಕ್ಕೆ ಕರಿಯಮ್ಮದೇವಿ ಸಮುದಾಯ ಭವನ ಮತ್ತು ಸಂಕೀರಣ ಶಂಕು ಸ್ಥಾಪನೆ ಮಾಡಲಾಗುತ್ತಿದೆ. ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲ ಶಂಕು ಸ್ಥಾಪನೆ ಮಾಡುವರು. ಕರಿಯಮ್ಮಕಲ್ಲು ಬಡಾವಣೆ ಸುಧಾರಣಾ ಸಮಿತಿಯ ಗೌರವಾಧ್ಯಕ್ಷ ಎಲ್.ಡಿ. ಚಂದಾವರಿ ಅಧ್ಯಕ್ಷತೆ ವಹಿಸುವರು. ಶಾಸಕ ಸಿ.ಸಿ. ಪಾಟೀಲ, ಪರುಶುರಾಮ ಖಟವಟೆ, ಸಿ.ಬಿ.ಸೊಲಬಣ್ಣವರ, ಸಿ.ಕೆ. ಮಾಳಶೆಟ್ಟಿ ಭಾಗವಹಿಸುವರು. ಸಂಜೆ 8ಕ್ಕೆ ಸಾಂಸ್ಕೃತಿಕ ವೇದಿಕೆ ಕಾರ್ಯಕ್ರಮಗಳು ಹಾಗೂ ದಾನಿಗಳಿಗೆ ಹಾಗೂ ಗಣ್ಯ ವ್ಯಕ್ತಿಗಳಿಗೆ ಸನ್ಮಾನ ಕಾರ್ಯಕ್ರಮ, ಮಾ.20 ರಂದು ಮಧ್ಯಾಹ್ನ 1ಕ್ಕೆ ಅನ್ನ ಸಂತರ್ಪಣೆ ಕಾರ್ಯಕ್ರಮಕ್ಕೆ ಕಿರಣ ಭೂಮಾ ಚಾಲನೆ ನೀಡುವರು. ಸಂಜೆ 6ಕ್ಕೆ ಸಕಲ ಮಂಗಳವಾದ್ಯಗಳೊಂದಿಗೆ ಕಡುಬಿನ ಕಾಳಗ, 7ಕ್ಕೆ ಸಾಂಸ್ಕೃತಿಕ ವೇದಿಕೆ ಕಾರ್ಯಕ್ರಮದ ಅಧ್ಯಕ್ಷತೆ ಸಿ.ಕೆ. ಮಾಳಶೆಟ್ಟಿ, ಕೃಷ್ಣಗೌಡ ಪಾಟೀಲ, ರಾಮಕೃಷ್ಣ ಪಾಂಡ್ರೆ, ಬಾಪುಗೌಡ ಕರಿಸೋಮನಗೌಡ್ರ, ಎಲ್.ಡಿ. ಚಂದವಾರಿ, ಶಂಕರ ಹಾನಗಲ್ಲ ಭಾಗವಹಿಸುವರು. ದಾನಿಗಳಿಗೆ ಹಾಗೂ ಗಣ್ಯ ವ್ಯಕ್ತಿಗಳಿಗೆ ಸನ್ಮಾನ ಹಮ್ಮಿಕೊಂಡಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಎಚ್.ಬಿ.ಶಿರಗುಂಪಿ, ಸಿ.ಕೆ. ಮಾಳಶೆಟ್ಟಿ, ಎಚ್.ಬಿ. ಶಿರಗುಂಪಿ, ಜಿ.ಕೆ. ತಮ್ಮಣ್ಣವರ, ಜೆ.ಬಿ. ಗಾರವಾಡ, ಬಿ.ಎಸ್. ಕಂಠಿ, ಜಗದೀಶ ಪೂಜಾರ, ವಿಜಯಲಕ್ಷ್ಮೀ ದಿಂಡೂರ, ಎಸ್. ಬಿ. ಹಡಗಲಿ, ಎಂ.ಡಿ. ದೇಸಾಯಿಗೌಡ್ರ, ಆರ್.ಬಿ. ಕುಲಕರ್ಣಿ ಸೇರಿದಂತೆ ಇತರರಿದ್ದರು.

## ಗ್ರಾಮೀಣ ಕ್ರೀಡಾ ಪ್ರತಿಭೆಗಳಿಗೆ ಸೂಕ್ತ ಪ್ರೋತ್ಸಾಹ ಅಗತ್ಯ: ಮಿಥುನ್ ಪಾಟೀಲ್

**ಗಜೇಂದ್ರಗಡ:** ಗ್ರಾಮೀಣ ಪ್ರದೇಶಗಳ ಯುವಕರಲ್ಲಿ ಅಡಗಿರುವ ಕ್ರೀಡಾ ಪ್ರತಿಭೆ ಹೊರಹೊಮ್ಮಲು ಕ್ರೀಡೆಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡುವುದು ಅಗತ್ಯ. ಹಳ್ಳಿಗಳಲ್ಲಿ ಉತ್ತಮ ಸಾಮರ್ಥ್ಯ ಹೊಂದಿರುವ ಅನೇಕ ಯುವಕರು ಇದ್ದರೂ ಸೂಕ್ತ ಅವಕಾಶಗಳ ಕೊರತೆಯಿಂದ ಅವರ ಪ್ರತಿಭೆ ಬೆಳಕಿಗೆ ಬರುವುದಿಲ್ಲ, ಗ್ರಾಮ ಮಟ್ಟದಲ್ಲಿ ಕ್ರೀಡಾಕೂಟಗಳನ್ನು ಆಯೋಜಿಸುವ ಮೂಲಕ ಯುವಕರಿಗೆ ವೇದಿಕೆ ಕಲ್ಪಿಸಬೇಕು ಎಂದು ರೋಣ ತಾಲೂಕು ಗ್ಯಾರಂಟಿ ಸಮಿತಿ ಅಧ್ಯಕ್ಷರು ಮಿಥುನ್ ಪಾಟೀಲ ಹೇಳಿದರು.

ತಾಲೂಕಿನ ಕೊಡಗಾನೂರ ಗ್ರಾಮದ ವೀರಭದ್ರೇಶ್ವರ ಕ್ರೀಡಾ ಸಂಸ್ಥೆ ಕೊಡಗಾನೂರ, ಕೊಡಗಾನೂರ ಪ್ರೀಮಿಯರ್ ಲೀಗ್ ಸೀಸನ್-4 ಕ್ರಿಕೆಟ್ ಪಂದ್ಯಾವಳಿಯ ಕಾರ್ಯಕ್ರಮದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿ, ಹಳ್ಳಿಗಳಲ್ಲಿ ಸಾಕಷ್ಟು ಕ್ರೀಡಾ ಪ್ರತಿಭೆಗಳು ಅಡಗಿವೆ. ಆದರೆ ಸೂಕ್ತ ತರಬೇತಿ, ಕ್ರೀಡಾಂಗಣಗಳು ಮತ್ತು ಮೂಲಸೌಕರ್ಯಗಳ ಕೊರತೆಯಿಂದಾಗಿ ಅನೇಕ ಯುವಕರು ತಮ್ಮ ಸಾಮರ್ಥ್ಯ ಸಾಧ್ಯವಾಗುತ್ತಿಲ್ಲ, ಸರ್ಕಾರ ಮತ್ತು ಪ್ರದರ್ಶಿಸಲು ಸ್ಥಳೀಯ ಸಂಸ್ಥೆಗಳು ಗ್ರಾಮೀಣ ಮಟ್ಟದಲ್ಲಿ ಕ್ರೀಡಾ ಸೌಕರ್ಯಗಳನ್ನು ಅಭಿವೃದ್ಧಿಪಡಿಸಿದರೆ ಹೆಚ್ಚಿನ ಅವಕಾಶಗಳು ಲಭ್ಯವಾಗುತ್ತವೆ ಎಂದರು.

ರಾಜು ಸಾಂಗ್ಲಿಕರ ಮಾತನಾಡಿದರು. ಸರ್ಕಾರಿ ಇಲಾಖೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರಿಗೆ ಹಾಗೂ ಗ್ರಾಮ ಪಂಚಾಯಿತಿ ಪತ್ರಿನಿಧಿಗಳಿಗೆ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವರಿಗೆ, ಪ್ರಸ್ತುತ ಭಾರತೀಯ ಸೇನೆ ಹಾಗೂ ಪೊಲೀಸ್ ಇಲಾಖೆಯಲ್ಲಿ ಕರ್ತವ್ಯ ನಿರಂತರ ಕುಟುಂಬದವರಿಗೆ, ಪ್ರಾಥಮಿಕ ಶಿಕ್ಷಣ ವೃಂದದರಿಗೆ ವೀರಭದ್ರೇಶ್ವರ ಕ್ರೀಡಾ ಸಂಸ್ಥೆ ವತಿಯಿಂದ ಸನ್ಮಾನಿಸಲಾಯಿತು. ಚಂದ್ರಶೇಖರಯ್ಯ ರು. ಹಿರೇಮಠ, ಬಸಯ್ಯ ಕಪ್ಲಿಮಠ,ಬಾಲಚಂದ್ರ ವಾಲ್ಮೀಕಿ, ಅರಿಹಂತ ಬಾಗಮಾರ,ಭೀಮಣ್ಣ ತಳವಾರ, ಹನಮಂತ ರಾಮಜಿ, ಮಾಂತಯ್ಯ ಕಪ್ಲಿಮಠ, ರಾಚಯ್ಯ ಬಾಳಿಕಾಯಿಮಠ, ನಿರ್ಮಲಾ ಸೋಲಬಗೌಡ್ರ,ಅಕ್ಕಮಹಾದೇವಿ ವಾಲ್ಮೀಕಿ, ಭರಮಪ್ಪ ಹುಣಸಿಗಿಡದ, ಕುಮಾರ ರಾಠೋಡ,ಬಸುವರಾಜ ನಡಕಟ್ಟಿನ, ಶರಣಪ್ಪ ಮಾಳವತ್ತ, ಪ್ರಶಾಂತ ಗಾಳಪೂಜಮಠ,ಆನಂದ ಮಾಳವತ್ತ, ರಾಜು ನದಾಫ, ರಮೇಶ ರಾಮಜಿ, ಶರಣಪ್ಪ ಹೂಗಾರ, ರಮೇಶ ರಾಠೋಡ ಹಾಗೂ ಕ್ರೀಡಾಪಟುಗಳು ಉಪಸ್ಥಿತರಿದ್ದರು.

## ಎಲ್‌ಪಿಜಿ ಸಿಲಿಂಡರ್ ಪೂರೈಕೆ ಸಮಸ್ಯೆಗಳಿಗೆ ಜಿಲ್ಲಾಡಳಿತದ ಹೆಲ್ಪ್‌ಲೈನ್

**ಗದಗ:** ಜಿಲ್ಲೆಯಲ್ಲಿ ಎಲ್‌ಪಿಜಿ (ಅಡುಗೆ ಅನಿಲ) ಸಿಲಿಂಡರ್ ಪೂರೈಕೆಯಲ್ಲಿ ಉಂಟಾಗುವ ವಿಳಂಬ, ಹೆಚ್ಚುವರಿ ಹಣ ವಸೂಲಿ, ಬುಕ್ಕಿಂಗ್ ಮಾಡಿದ ಬಳಿಕ ಸಮಯಕ್ಕೆ ಸಿಲಿಂಡರ್ ದೊರೆಯದಿರುವುದು ಸೇರಿದಂತೆ ವಿವಿಧ ಸಮಸ್ಯೆಗಳನ್ನು ಪರಿಹರಿಸಲು ಗದಗ ಜಿಲ್ಲಾಡಳಿತವು ವಿಶೇಷ ದೂರವಾಣಿ ಸಂಪರ್ಕ ವ್ಯವಸ್ಥೆ ಕಲ್ಪಿಸಿದೆ ಎಂದು ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ ತಿಳಿಸಿದ್ದಾರೆ.

ನಗರದ ಜಿಲ್ಲಾಡಳಿತದಲ್ಲಿ ನಡೆದ ಅಡುಗೆ ಅನಿಲ ಸಮರ್ಪಕ ಸರಬರಾಜು ಕುರಿತು ಗ್ಯಾಸ್ ವಿತರಣಾ ಎಜನ್ಸಿಗಳ ಮಾಲೀಕರೊಂದಿಗೆ ಜರುಗಿದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಅಗತ್ಯ ಸೂಚನೆಗಳನ್ನು ನೀಡಿದರು. ಜಿಲ್ಲೆಯ ಎಲ್ಲ ಎಲ್‌ಪಿಜಿ ಗ್ರಾಹಕರು ತಮ್ಮ ಸಮಸ್ಯೆಗಳನ್ನು ಸಂಬಂಧಿತ ಅಧಿಕಾರಿಗಳಿಗೆ ತಿಳಿಸಿ ತ್ವರಿತ ಪರಿಹಾರ ಪಡೆಯಬಹುದು ಎಂದರು.

ಜಿಲ್ಲೆಯ ವಿವಿಧ ತಾಲೂಕು ಹಾಗೂ ನಗರ ಪ್ರದೇಶಗಳ ಗ್ರಾಹಕರು ತಮ್ಮ ಸಮಸ್ಯೆಗಳ ಕುರಿತು ಸಂಬಂಧಿತ ಅಧಿಕಾರಿಗಳನ್ನು ಸಂಪರ್ಕಿಸಬಹುದು. ಗದಗ ಜಿಲ್ಲೆಯ ಉಪನಿರ್ದೇಶಕರ ಕಚೇರಿ ದೂರವಾಣಿ ಸಂಖ್ಯೆ 08372-239443 ಆಗಿದೆ. ಗದಗ ನಗರ ಪ್ರದೇಶದ ಗ್ರಾಹಕರು ಸಹಾಯಕ ನಿರ್ದೇಶಕರು (ಆಹಾರ) ಅವರನ್ನು ಮೊ.9481241607 ಅಥವಾ ಮೊ.9972956834 ಸಂಖ್ಯೆಗಳ ಮೂಲಕ ಸಂಪರ್ಕಿಸಬಹುದು. ಗ್ರಾಮೀಣ ಪ್ರದೇಶದ ಗ್ರಾಹಕರು ಆಹಾರ ನಿರೀಕ್ಷಕ ಮೊ.9916763033 ಅಥವಾ ಮೊ.9606301190 ಸಂಖ್ಯೆಗೆ ಕರೆಮಾಡಿ ಅಹವಾಲು ಸಲ್ಲಿಸಬಹುದು. ರೋಣ ತಾಲೂಕಿನ ಗ್ರಾಹಕರು ಮೊ.9916890282 ಅಥವಾ 6364381607 ಸಂಖ್ಯೆಗೆ ಸಂಪರ್ಕಿಸಬಹುದು. ನರಗುಂದ ತಾಲೂಕಿನವರು ಮೊ.9606281029 ಸಂಖ್ಯೆಗೆ ಕರೆಮಾಡಬಹುದು. ಗಜೇಂದ್ರಗಡ ಪ್ರದೇಶದ ಗ್ರಾಹಕರು ಮೊ.9916890282 ಅಥವಾ 8105201560, ಮುಂಡರಗಿ ತಾಲೂಕಿನವರು 9980252047, ಶಿರಹಟ್ಟಿ ತಾಲೂಕಿನವರು 7829960469 ಹಾಗೂ ಲಕ್ಷ್ಮೇಶ್ವರ ತಾಲೂಕಿನವರು 96164249118 ಸಂಖ್ಯೆಗಳ ಮೂಲಕ ಸಂಪರ್ಕಿಸಿ ಅಡುಗೆ ಅನಿಲ ಸಂಬಂಧಿತ ಸಮಸ್ಯೆಗಳಿಗೆ ಪರಿಹಾರ ಪಡೆಯಬಹುದು ಎಂದರು.



"ಸರ್ಕಾರದ ನಿಯಮಾನುಸಾರ ಎಲ್‌ಪಿಜಿ ಸಿಲಿಂಡರ್ ಪೂರೈಕೆ Liquified Petroleum Gas (Regulation of Supply and Distribution) Orde 2000 ಅನ್ವಯ ನಡೆಯಬೇಕು. ಗ್ರಾಹಕರಿಗೆ ಯಾವುದೇ ರೀತಿಯ ತೊಂದರೆ ಉಂಟಾದಲ್ಲಿ ಜಿಲ್ಲಾಡಳಿತದಿಂದ ತಕ್ಷಣ ಕ್ರಮ ಕೈಗೊಳ್ಳಲಾಗುತ್ತದೆ.

■ ಸಿ.ಎನ್. ಶ್ರೀಧರ, ಜಿಲ್ಲಾಧಿಕಾರಿ



- ಎಲ್‌ಪಿಜಿ ಗ್ರಾಹಕರು ಸಿಲಿಂಡರ್ ಬುಕ್ಕಿಂಗ್ ಮಾಡಲು IVRS, ಮಿಸ್ಡ್ ಕಾಲ್, ವಾಟ್ಸಪ್, ಮೊಬೈಲ್ ಅಪ್ಲಿಕೇಶನ್, ಫೋನ್‌ಪೆ ಆಪ್, ಪೇಟಿಎಂ ಆಪ್ ಹಾಗೂ OMC ಪೋರ್ಟಲ್ ಸೇರಿದಂತೆ ಹಲವು ಡಿಜಿಟಲ್ ಸೌಲಭ್ಯ ಬಳಸಿಕೊಳ್ಳಬಹುದು
- ಸಿಲಿಂಡರ್ ಬುಕ್ಕಿಂಗ್ ಮಾಡಿದ ಬಳಿಕ 25 ದಿನಗಳೊಳಗೆ ಪೂರೈಕೆ ಆಗಬೇಕು
- ಬುಕ್ಕಿಂಗ್ ನಂತರ ದೀರ್ಘ ವಿಳಂಬವಾಗುವುದು, ಹೆಚ್ಚುವರಿ ಹಣ ವಸೂಲಿ ಮಾಡುವುದು ಅಥವಾ ಸರಿಯಾದ ಸೇವೆ ದೊರೆಯದಿರುವಂತಹ ಸಮಸ್ಯೆಗಳು ಕಂಡುಬಂದಲ್ಲಿ ಗ್ರಾಹಕರು ದೂರವಾಣಿ ಸಂಖ್ಯೆಗಳ ಮೂಲಕ ತಕ್ಷಣ ಅಹವಾಲು ಸಲ್ಲಿಸಬಹುದು ಎಂದು ತಿಳಿಸಿದ ಜಿಲ್ಲಾಧಿಕಾರಿ

## ನೊಂದ ಮಹಿಳೆಯರು ಉಚಿತ ಕಾನೂನು ಸಲಹೆ ಪಡೆಯಲಿ

**ನರಗುಂದ:** ಮಹಿಳೆಯರ ಕಾನೂನು, ಕೌಟುಂಬಿಕ ರಕ್ಷಣೆ, ಬಾಲ್ಯ ವಿವಾಹ, ಸ್ತ್ರೀ-ಸಮಾನತೆ ಬಗ್ಗೆ ಹೇಳುತ್ತಾ ನೊಂದ ಮಹಿಳೆಯರಿದ್ದಲ್ಲಿ ಉಚಿತ ಕಾನೂನು ಸಲಹೆ ಪಡೆದುಕೊಳ್ಳಲು ದಿವಾಣಿ ನ್ಯಾಯಾಧೀಶ ಜಿನ್ನಪ್ಪಾ ಚೌಗಲಾ ಹೇಳಿದರು.

ಅವರು ಪಟ್ಟಣದ ತಾಲೂಕು ಪಂಚಾಯತ್ ಸಭಾಭವನದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ತಾಲೂಕು ಕಾನೂನು ಸೇವಾ ಸಮಿತಿ ವತಿಯಿಂದ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಸಿಡಿಪಿಒ ವೆಂಕಪ್ಪ ಗಿರಿತಿಮ್ಮಣ್ಣವರ ಮಾತನಾಡಿ, ಈ ವರ್ಷದ ಮಹಿಳಾ ದಿನಾಚರಣೆ ಥೀಮ್ ಪರಸ್ಪರ ಬೆಂಬಲ, ಸಹಯೋಗ ಎಂಬುದಾಗಿದೆ. ಹೆಣ್ಣು ಮನೆಯ ನಂದಾದೀಪವಾಗಿ, ತಾಯಿಯಾಗಿ ಮಗಳಾಗಿ, ಸೊಸೆಯಾಗಿ ಕುಟುಂಬದ ಯಜಮಾನಿಯಾಗಿ ಜೀವಿಸುತ್ತಿರುವಳು ಎಂದರು.

ಮಂಗಳಾ ಪಾಟೀಲ ಮಾತನಾಡಿ, ಮಹಿಳೆಗೆ ಅವಳದೇ ಆದ ಗೌರವವಿದೆ. ಮಹಿಳೆಯರಿಗೆ ಬೇಕಿರುವುದು ಅನುಕಂಪ ಅಲ್ಲ ಅವಕಾಶ ಎಂದರು.



ತಾಲೂಕು ವೈದ್ಯಾಧಿಕಾರಿ ರೇಣುಕಾ ಕೊರವನವರ ಮಾತನಾಡಿ, 14 ವರ್ಷದ ಕಿಶೋರಿಯರು ಕಡ್ಡಾಯವಾಗಿ ಹೆಚ್‌ಪಿವಿ ಲಸಿಕೆ ಪಡೆಯಬೇಕು. ಮಹಿಳೆಯರು ಇತ್ತೀಚಿನ ದಿನಗಳಲ್ಲಿ ಕ್ಯಾನ್ಸರ್‌ನಂತಹ ಮಾರಕ ರೋಗಗಳಿಗೆ ಬಲಿಯಾಗತ್ತಿದ್ದು, ಕಾಲ ಕಾಲಕ್ಕೆ ಆರೋಗ್ಯ ತಪಾಸಣೆ ಮಾಡಿಸಬೇಕೆಂದು ಹೇಳಿದರು.

ತಾಲೂಕು ದಂಡಾಧಿಕಾರಿ ಶ್ರೀಶೈಲ ತಳವಾರ ಮಾತನಾಡಿ, ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರ ಸಾಧನೆ ಅಪಾರ. ಮಹಿಳೆಯರು ಪುರುಷರಿಗೆ ಸಮಾನವಾಗಿ ಬೆಳೆಯುತ್ತಿದ್ದಾರೆ ಎಂದರು.

ಇಲಾಖೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತಿ ಅಂಚಿನಲ್ಲಿರುವ ಕಾರ್ಯಕರ್ತೆ-ಸಹಾಯಕಿಯರನ್ನು ಸನ್ಮಾನಿಸಲಾಯಿತು. ತಾಪಂ ಇಒ ಎಸ್.ಕೆ. ಇನಾಮದಾರ, ಬಿಇಒ ಎಂ.ಎಸ್. ಕಂಬಳಿ, ಸಿಪಿಐ ಮಂಜುನಾಥ ನಡುವಿನಮನಿ, ಸಹಾಯಕ ಸರ್ಕಾರಿ ಅಭಿಯೋಜಕ ಹನುಮಂತಪ್ಪ ಅರಳಿ, ವಕೀಲರ ಸಂಘದ ಅಧ್ಯಕ್ಷ ಕೆ.ಎಸ್. ಹೂಲಿ, ಮೇಲ್ವಿಚಾರಕಿ ಭಾರತಿ ಕಾಲಬೆಟ್ಟಿ, ಪರಿಮಳ ಹೂಗಾರ, ಜಗದೀಶ ಜ್ಞಾನೋಪಂತ, ಪ್ರ.ದ.ಸ. ಸಿಬ್ಬಂದಿ ಪ್ರಶಾಂತ ಹಳೇಮನಿ, ಉಮೇಶ ಕಳಸಾ, ಅಬ್ದುಲ ತಹಶೀಲ್ದಾರ ಇತರರಿದ್ದರು. ಮಂಜುನಾಥ ಗುಗ್ಗರಿ ನಿರೂಪಿಸಿ, ವಂದಿಸಿದರು.

### ಉತ್ತರ ಕರ್ನಾಟಕದಾದ್ಯಂತ ಬಿರುಗಾಳಿ ಸಹಿತ ಮಳೆ | ಜನಜೀವನ ಅಸ್ತವ್ಯಸ್ತ

# ಆಲಿಕಲ್ಲು ಮಳೆಗೆ ಜನ ಕಂಗಾಲು




**ಧಾರವಾಡ:** ಬೆಳ್ಳಂಬೆಳಗ್ಗೆ ಬಿಸಿಲಿನ ಬೇಗೆಯಿಂದ ಕಂಗಾಲಾಗಿದ್ದ ಉತ್ತರ ಕರ್ನಾಟಕದ ಜನರಿಗೆ ಮಂಗಳವಾರ ಸಂಜೆ ವರುಣ ತಂಪೆರೆಯುವ ಬದಲು ಅಕ್ಷರಶಃ ಅಬ್ಬರಿಸಿದ್ದಾನೆ.

ಮೊಡಕವಿದ ವಾತಾವರಣದಿಂದ ಗುಡುಗು, ಸಿಡಿಲು ಹಾಗೂ ಬಿರುಗಾಳಿ ಸಹಿತ ಸುರಿದ ಧಾರಾಕಾರ ಮಳೆಯಿಂದ ಜನಜೀವನ ಸಹ ಸಂಪೂರ್ಣ ಅಸ್ತವ್ಯಸ್ತಗೊಂಡಿದೆ.

**ಧಾರವಾಡದಲ್ಲಿ ಒಂದು ಗಂಟೆಗೂ ಹೆಚ್ಚು ಮಳೆ:** ಧಾರವಾಡದಲ್ಲಿ ಒಂದು ಗಂಟೆಗೂ ಹೆಚ್ಚು ಕಾಲ ಸುರಿದ ಮಳೆಗೆ ನಗರದ ಪ್ರಮುಖ ರಸ್ತೆಗಳು ಕೆರೆಯಂತಾಗಿದ್ದವು. ಮೊಣಕಾಲುದ್ದ ನೀರು ನಿಂತಿದ್ದರಿಂದ ವಾಹನ ಸವಾರರು ತೀವ್ರ ಪರದಾಡಿದರು.

ಮಳೆಗೆ ಚರಂಡಿ ತುಂಬಿ, ನೀರು ರಸ್ತೆಯ ಮೇಲೆ ಹರಿಯುತ್ತಿವೆ. ಧಾರವಾಡದ ಟೋಲ್‌ನಾಕ್ ಅಕ್ಷರಶಃ ನಡುಗಡೆಯಾಗಿ ಮಾರ್ಪಟ್ಟ ಪರಿಣಾಮ ಸವಾರರು ಪಚೇಗೆ ಸಿಲುಕಿದ್ದಾರೆ. ಏಕಾಏಕಿ ಸುರಿದ ಮಳೆಗೆ ದ್ವಿಚಕ್ರ ವಾಹನ ಸವಾರರು ಫ್ಲೈಓವರ್ ಕೆಳಗೆ, ಅಂಗಡಿ ಮುಂಗಟ್ಟುಗಳಲ್ಲಿ ಆಸರೆ ಪಡೆದರು. ತಗ್ಗು ಪ್ರದೇಶಗಳಿಗೆ ನೀರು ನುಗ್ಗಿ ಸಾರ್ವಜನಿಕರು ಹೈರಾಣಾದರು.

**ಧರೆಗುರುಳಿದ ಮರಗಳು:** ಮಳೆ ಗಾಳಿಗೆ ನಗರದ ಹಲವೆಡೆ ಮರಗಳು, ವಿದ್ಯುತ್ ಕಂಬಗಳು ನೆಲಕ್ಕಚ್ಚಿವೆ. ಸಪ್ತಾಪುರ ಮತ್ತು ಕಲ್ಯಾಣ ನಗರದಲ್ಲಿ ಮರದ ಕೊಂಬೆಗಳು ರಸ್ತೆಗೆ ಬಿದ್ದು ಸಂಚಾರ ಸ್ಥಗಿತಗೊಂಡಿತ್ತು.

**ಕತ್ತಲಲ್ಲಿ ಮಹಾನಗರ:** ಮಳೆಯಿಂದ ಮುನ್ನೆಚ್ಚರಿಕೆ ಕ್ರಮವಾಗಿ ಬಹುತೇಕ ಕಡೆಗಳಲ್ಲಿ ವಿದ್ಯುತ್‌ಸಂಪರ್ಕ ಕಡಿತಗೊಂಡಿತು. ಗಾಳಿಗೆ ವಿದ್ಯುತ್ ತಂತಿಗಳ ಮೇಲೆ ಮರದ ಕೊಂಬೆಗಳು ಬಿದ್ದ ಪರಿಣಾಮ ಲೈನ್ ಹಾಳಾಗಿವೆ.

ನಗರದ ಮಾಳಮಡ್ಡಿ, ಸಾರಸ್ವತಪುರ ಮತ್ತು ಸಾಧನಕೇರಿ ಭಾಗಗಳಲ್ಲಿ ಗಂಟೆಗಳ ಕಾಲ ಕತ್ತಲೆ ಆವರಿಸಿತ್ತು. ರಾತ್ರಿಯವರೆಗೆ ರಿಪೇರಿ ಕೆಲಸ ನಡೆದಿದರೂ, ವಿದ್ಯುತ್ ಸಮಸ್ಯೆ ಬಗೆಹರಿಯಲಿಲ್ಲ.

### ರೈತರಲ್ಲಿ ಹರ್ಷ–ಜನರಲ್ಲಿ ಆತಂಕ

ಒಂದೆಡೆ ಮಳೆಯಿಂದ ನಗರವಾಸಿಗಳು ವಿದ್ಯುತ್ ಹಾಗೂ ಸಂಚಾರದ ಸಮಸ್ಯೆಗೆ ತತ್ತರಿಸಿದರೆ, ಇನ್ನೊಂದೆಡೆ ಸುಡು ಬಿಸಿಲಿನಿಂದ ಕಂಗೆಟ್ಟಿದ್ದ ಜನತೆಗೆ ವಾತಾವರಣ ತಂಪಾದ ಸಮಾಧಾನ ತಂದಿದೆ. ಮಳೆ ಭೂಮಿಯನ್ನು ಹದಗೊಳಿಸಿರುವುದರಿಂದ ರೈತರಲ್ಲಿ ಹೊಸ ಆಶಾವಾದ ಮೂಡಿತು.

### ಜಿಲ್ಲಾಡಳಿತ ಮುನ್ನೆಚ್ಚರಿಕೆ

ಮುಂಬರುವ ದಿನಗಳಲ್ಲಿಯೂ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದ್ದು, ಸಾರ್ವಜನಿಕರು ಹಳೆಯ ಮರಗಳ ಕೆಳಗೆ ನಿಲ್ಲದಂತೆ, ವಿದ್ಯುತ್ ಕಂಬಗಳಿಂದ ದೂರವಿರಲು ಜಿಲ್ಲಾಡಳಿತ ಸೂಚಿಸಿದೆ.

### ಮಳೆಯಿಂದ ಮಾವು ಬೆಳೆ ಹಾನಿ



# ಕಾಶ್ಮೀರದಂತಾದ ಕಲಘಟಗಿ

**ಕಲಘಟಗಿ:** ತಾಲೂಕಿನ ಬಹುತೇಕ ಭಾಗಗಳಲ್ಲಿ ಮಂಗಳವಾರ ಮಧ್ಯಾಹ್ನ ಭಾರೀ ಗಾಳಿ ಮಳೆ ಸುರಿದಿದೆ. ವರ್ಷದ ಮೊದಲ ದೊಡ್ಡ ಮಳೆಯೇ ಆಲಿಕಲ್ಲು ಸುರಿದಿದ್ದು ರೈತ ಜನ ಚಿಂತಾಕ್ರಾಂತರಾಗಿದ್ದಾರೆ.

**ಮಾಚಾಪುರದಲ್ಲಿ ರಾಶಿ ರಾಶಿ ಆಲಿಕಲ್ಲು:** ಕಲಘಟಗಿ ಪಟ್ಟಣ, ಮಾಚಾಪುರ, ಬೆಲವಂತರ ಸೋಮನಕೊಪ್ಪ ಹೀಗೆ ಹಲವು ಊರುಗಳ ರಸ್ತೆಗಳಲ್ಲಿ ಆಲಿಕಲ್ಲು ರಾಶಿ ರಾಶಿ ಸುರಿದು ಬಿದ್ದಿದ್ದು, ಮನೆಗಳ ಮೇಲೆ ಕೂಡ ಆಲಿಕಲ್ಲು ರಾಶಿ ಬಿದ್ದಿದ್ದವು. ನಿರಂತರ ಮಳೆ ಜೊತೆಗೆ ಆಲಿಕಲ್ಲು ಸುರಿದು ಜನ ಆಶ್ಚರ್ಯಚಕಿತರಾದರು. ಮಾಚಾಪುರದ ಹತ್ತಿರ ರಸ್ತೆ ಮೇಲೆ ಪೂರ್ತಿಯಾಗಿ ಆಲಿಕಲ್ಲು ರಾಶಿ ಬಿದ್ದಿದ್ದು ವಾಹನ ಸಂಚಾರಕ್ಕೆ ಅಡೆತಡೆ ಆಗಿತ್ತು.

**ಯುಗಾದಿ ಸಂತೆ ಮಾಡಿಸದ ಮಳೆ:** ಪಟ್ಟಣದಲ್ಲಿ ಮಂಗಳವಾರಕ್ಕೊಮ್ಮೆ ವಾರದ ಸಂತೆ ಇರುತ್ತದೆ, ಆದರೆ ಯುಗಾದಿ ಅಮಾವಾಸ್ಯೆ ಹಾಗೂ ಪಾಡ್ಯದ ತರಕಾರಿ ಕಿರಾಣಿ ಸಂತೆ ಮಾಡಲು ಬಂದ ಗ್ರಾಹಕರಿಗೆ ಹಾಗೂ ವ್ಯಾಪಾರಸ್ಥರಿಗೆ ಅಕಾಲಿಕ ಮಳೆ ತನ್ನ ಕೈಚಳಕ ತೋರಿತು. ತಾಲೂಕಿನ ಅರ್ಧದಷ್ಟು ಹಳ್ಳಿಗಳು ಕಲಘಟಗಿ ಮಂಗಳವಾರ ಸಂತೆಯ ಮೇಲೆಯೇ ಅವಲಂಬಿತರಿದ್ದು ಮಧ್ಯಾಹ್ನ 3.30ರಿಂದಲೇ ಮಳೆ ಸುರಿದು ಸಂತೆ ಕೂಡ ಮೊಟಕುಗೊಳಿಸಿದೆ.

**ಆಲಿಕಲ್ಲು ಮಳೆಗೆ ನಷ್ಟ :** ಅಕಾಲಿಕವಾಗಿ ಸುರಿದ ಆಲಿಕಲ್ಲು ಮಳೆಯಿಂದ ಹಿಂಗಾರಿ ಬೆಳೆಗಳು ಹಾಗೂ ಮಾವಿನ ಬೆಳೆಗೆ ಹಾನಿಯಾಗಿದೆ ಕೆಲವು ಕಡೆ ಮಾವಿನ ಕಾಯಿಗಳು ನೆಲಕಚ್ಚಿವೆ. ಈಗಾಗಲೇ ಉತ್ತಮ ಇಳುವರಿಯ ಭರವಸೆಯಲ್ಲಿದ್ದ ಮಾವು ಬೆಳೆಗಾರರಿಗೆ ಆಲಿಕಲ್ಲು ಮಳೆ ನಿರಾಸೆ ತಂದಿದೆ ಎನ್ನುತ್ತಾರೆ ರೈತ ಮುಖಂಡ ಪರಶುರಾಮ ಎತ್ತಿನಗುಡ್ಡ.

ತಾಲೂಕಿನ ತಬಕದಹೊನ್ನಳ್ಳಿ, ಜಿನ್ನೂರು, ಬೀರವಳ್ಳಿ, ಅಸ್ತಕಟ್ಟಿ, ಹುಣಸಿಕಟ್ಟಿ ಸುತ್ತಮುತ್ತಲಿನ ಗ್ರಾಮಗಳಲ್ಲಿಯೂ ಕೂಡ ಗಾಳಿ ಸಹಿತ ಆಲಿಕಲ್ಲು ಮಳೆಯಾಗಿದೆ, ಮಾವಿನ ಮರಗಳಲ್ಲಿ ಕಾಯಿಗಳು ಉದುರಿಹೋಗಿವೆ. ತಾಲೂಕಿನ ರೈತರಿಗೆ ಭಾರೀ ನಷ್ಟವಾಗಿದೆ ಎಂದು ಹಿರಿಯ ರೈತ ಮುಖಂಡ ಉಳುವಪ್ಪ ಬಳಿಗೇರ ತಿಳಿಸಿದರು.

**ಜಿಲ್ಲೆಯಾದ್ಯಂತ ವೈರಲ್ ಆದ ವಿಡಿಯೋಗಳು:** ಮಂಗಳವಾರ ಸುರಿದ ಭಾರೀ ಮಳೆಯ ದೃಶ್ಯಾವಳಿಗಳು ತಾಲೂಕಿನಾದ್ಯಂತ ಎಲ್ಲರ ಮೊಬೈಲ್‌ನಲ್ಲಿ ವೈರಲ್ ಆಗಿವೆ. ಎಲ್ಲರೂ ತಮ್ಮ ಸ್ಟೇಟಸ್ ಹಾಗೂ ಫೇಸ್‌ಬುಕ್ ಇನ್‌ಸ್ಟಾಗ್ರಾಂ ದಲ್ಲಿಯೂ ಮಳೆ ವಿಡಿಯೋ ಫೋಟೋಗಳನ್ನು ಇಟ್ಟುಕೊಂಡಿದ್ದಾರೆ.

# ಹುಬ್ಬಳ್ಳಿಯಲ್ಲಿ ಭಾರೀ ಮಳೆ

**ಹುಬ್ಬಳ್ಳಿ:** ನಗರದ ವಿವಿಧೆಡೆ ಮಂಗಳವಾರ ಸುರಿದ ಮಳೆಯು, ಬಿಸಿಲಿನ ಝಳಕ್ಕೆ ಬಸವಳಿದಿದ್ದ ವಾಣಿಜ್ಯ ನಗರಿಗೆ ತಂಪೆರೆಯಿತು. ಮಧ್ಯಾಹ್ನ 3 ಗಂಟೆ ಸುಮಾರಿಗೆ ಆರಂಭವಾದ ಮಳೆ ಭಾರೀ ಗಾಳಿಯೊಂದಿಗೆ ಶುರುವಾಗಿ ಅರ್ಧಗಂಟೆಗೂ ಹೆಚ್ಚು ಕಾಲ ಸುರಿಯಿತು.

ಸಿಡಿಲು ಹಾಗೂ ಗುಡುಗಿನ ಸದ್ದು ಕೇಳಿ ಬಂದವು. ಮಳೆಯಾಗುವ ಮುಂಚೆ ಮೋಡ ಕವಿದಿತ್ತು. ಬಳಿಕ ಮಳೆ ಸುರಿದಿದ್ದರಿಂದ ದ್ವಿಚಕ್ರ ವಾಹನ ಸವಾರರು ಹಾಗೂ ಪಾದಚಾರಿಗಳು ತೊಂದರೆ ಅನುಭವಿಸಿದರು. ರಸ್ತೆ ಬದಿಯ ಕಟ್ಟಡಗಳ ಬಳಿ ನಿಂತು, ಮಳೆಯಿಂದ ನೆನೆಯದಂತೆ ರಕ್ಷಣೆ ಪಡೆದರು. ಕೆಲವರು ಛತ್ರಿ ಹಿಡಿದು ಸಾಗಿದರು.

ಜೋರಾಗಿ ಮಳೆ ಸುರಿದಿದ್ದರಿಂದ ಕ್ಷಣಾರ್ಧದಲ್ಲಿ ರಸ್ತೆ–ಗಟಾರು ಜಲಾವೃತವಾದವು. ವಾಹನ ಸವಾರರು ಮಳೆಯಲ್ಲಿ ಸಂಚಾರ ನಡೆಸಿದರು. ಮಾರುಕಟ್ಟೆ ಪ್ರದೇಶದಲ್ಲಿ ವ್ಯಾಪಾರಿಗಳು ಮಳೆಯಿಂದ ರಕ್ಷಿಸಿಕೊಳ್ಳಲು ಪರದಾಡಿದ ದೃಶ್ಯಗಳು ಕಂಡು ಬಂದವು. ವರ್ಷದ ಮೊದಲ ಮಳೆಯಾಗಿದ್ದರಿಂದ ಕೆಲವರು ಮಳೆಯಲ್ಲಿ ನೆನೆದು ಸಂಭ್ರಮಿಸಿದರು. ಮಳೆ ಜೋರಾಗಿ ಸುರಿದಿದ್ದರಿಂದ ಇಲ್ಲಿಯ ಗೋಕುಲ ರಸ್ತೆಯಲ್ಲಿರುವ ಅರ್ಬನ್ ಓಯಸಿಸ್ ಮಾಲ್ ಮೇಲ್ಚಾವಣಿ ಕುಸಿದು ಬಿದ್ದು, ಮಳೆ ನೀರು ಮಾಲ್‌ಗೆ ಸೇರಿತು. ಈ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದೆ.



### ಸಿಡಿಲು ಬಡಿದು ರೈತ ಸಾವು

**ರೋಣ:** ತಾಲೂಕಿನ ಮೆಣಸಗಿ ಗ್ರಾಮದಲ್ಲಿ ಮಂಗಳವಾರ ಸುರಿದ ಧಾರಾಕಾರ ಮಳೆಯಿಂದ ಸಿಡಿಲು ಬಡಿದು ರೈತ ನಿಂಗಪ್ಪ ರಾಮಪ್ಪ ಅಮಾತಿ (58) ಎಂಬ ರೈತ ಮೃತಪಟ್ಟಿದ್ದಾನೆ. ರೋಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಮುದ್ದೇಬಿಹಾಳದಲ್ಲಿ ಆಲಿಕಲ್ಲು ಸಹಿತ ಮಳೆ

**ಮುದ್ದೇಬಿಹಾಳ:** ಮಂಗಳವಾರ ಮಧ್ಯಾಹ್ನದ ವೇಳೆಗೆ ಏಕಾಏಕಿ ಮೋಡ ತುಂಬಿಕೊಂಡು, ಗುಡುಗು ಸಹಿತ ಬಿರುಗಾಳಿ ಜೊತೆಗೆ ಆಲಿಕಲ್ಲಿನ ಮಳೆ ಹಠಾತ್ತಾಗಿ ಸುರಿದ ಕಾರಣದಿಂದ ಸಾರ್ವಜನಿಕ ಜನಜೀವನ ಅಸ್ತವ್ಯಸ್ತಗೊಂಡಿತು. ಬೇಸಿಗೆಯ ಬಿಸಿಲಿನ ಪ್ರಖರತೆಯಿಂದ ಬಸವಳಿದ ಧರೆಗೆ ಮಳೆಯ ಸಿಂಚನ ತಂಪೇರುವಂತೆ ಮಾಡಿತು.

ಯುಗಾದಿಯ ಪೂರ್ವದಲ್ಲಿ 36% ಸೆಲ್ಸಿಯಸ್ ಬಿಸಿಲಿನ ಪ್ರಖರತೆಯಿಂದ ಕಾವೇರಿದ ಭೂಮಿಗೆ ಸುರಿದ ಮಳೆಗೆ ಭೂಮಿಯಿಂದ ಹೊಗೆಯುಗುಳುವಂತೆ ವಾತಾವರಣ ತಂದಿತು. ಸಂಜೆ 4ಕ್ಕೆ ಬಿರುಗಾಳಿ ಪ್ರಾರಂಭವಾಗಿ ಮೊಡಗಟ್ಟಲು ಪ್ರಾರಂಭಿಸಿತು. ನಂತರ ಏಕಾಏಕಿ ಆಲಿಕಲ್ಲಿನ ಮಳೆ ಬಂದಿತು. ಇದರಿಂದ ಬಿಸಿಲಿನ ತಾಪ ಕಡಿಮೆಯಾಗಿ ಭೂಮಿಯಿಂದ ತಂಪು ಹವೆ ಜನರ ಮೊಗದಲ್ಲಿ ಮಂದಹಾಸ ಮೂಡಿಸಿತು.

ಯುಗಾದಿ ಪಾಡ್ಯದ ಪೂರ್ವದಲ್ಲಿ ರೈತರು ಇನ್ನೂ ಹೊಲಗಳಲ್ಲಿ ಅಲ್ಪ ಸ್ವಲ್ಪ ಬೆಳೆಯನ್ನು ಇಟ್ಟುಕೊಂಡು ಕೀಳುವ ದಾವಂತದಲ್ಲಿ ಇದ್ದಾಗ ಶತತಾರ ಮಳೆ ಸುರಿಯಿತು. ಹಬ್ಬದ ನಂತರ ಅಶ್ವಿನಿ ಮಳೆ ದಿನ 21 ಪ್ರಾರಂಭವಾಗುತ್ತದೆ.ಈ ಸಂದರ್ಭದಲ್ಲಿ ಅವಕಾಳಿ ಮಳೆ ಕೆಲವು ರೈತರಲ್ಲಿ ಆತಂಕವನ್ನು ತಂದಿಟ್ಟಿದೆ.

ಹೊಲಗಳಲ್ಲಿ ಕುಸುಬಿ, ಜೋಳ ಹಾಗೂ ಗೋದಿಯ ರಾಶಿ ಮಾಡಲು ತೊಂದರೆ ಆಗಬಹುದು ಎಂದು ರೈತರು ಆತಂಕದಲ್ಲಿದ್ದು, ತಾಲೂಕು ಕೇಂದ್ರದಲ್ಲಿ ಮಳೆಯ ಜೊತೆ ಆಲಿಕಲ್ಲು ಸುರಿದು ಶಾಲೆ ಬಿಟ್ಟು ಬರುತ್ತಿದ್ದ ಮಕ್ಕಳಿಗೆ ಕುತೂಹಲವನ್ನು ಉಂಟು ಮಾಡಿತು. ರಸ್ತೆಯಲ್ಲಿ ವಾಹನ ಸವಾರರು ಆಲಿಕಲ್ಲು ಹೊಡೆತಕ್ಕೆ ತಮ್ಮ ವಾಹನಗಳನ್ನು ರಸ್ತೆ ಬದಿ ನಿಲ್ಲಿಸಿ ಅಂಗಡಿ ಮುಂಗಟ್ಟುಗಳ ಮುಂದೆ ಆಶ್ರಯ ಪಡೆಯುವಂತೆ ಆಯಿತು.



ತಾಲೂಕಿನ ಆಲೂರು, ಬಿದರಕುಂದಿ ಕೋಳೂರು ಸೇರಿದಂತೆ ಹಲವು ಗ್ರಾಮಗಳಲ್ಲಿ ಬಿರುಗಾಳಿ ದೊಡ್ಡ ಪ್ರಮಾಣದಲ್ಲಿ ಬೀಸಿ ದ್ರಾಕ್ಷಿ, ತೆಂಗಿನ ಮರ, ಮಾವು ಮತ್ತು ಚಿಕ್ಕು ಹಣ್ಣಿನ ಗಿಡಗಳು ಬಿದ್ದು ಹೋದ ಘಟನೆ ಜರುಗಿದೆ ಇದರಿಂದ ರೈತರಿಗೆ ಹಾನಿಯಾಗಿದೆ.

# ಹೊಟ್ಟು, ಮೇವು ರಕ್ಷಣೆಗೆ ರೈತರ ಪರಗಾಟ



**ರೋಣ:** ಪಟ್ಟಣ ಸೇರಿದಂತೆ ಅನೇಕ ಗ್ರಾಮಗಳಲ್ಲಿ ಮಂಗಳವಾರ ಸಂಜೆ ಆಲಿಕಲ್ಲು ಸಮೇತ ಭಾರೀ ಪ್ರಮಾಣದ ಮಳೆಯಾಗಿದ್ದು, ಇದರಿಂದ ಹೊಟ್ಟು ,ಮೇವು ರಕ್ಷಣೆ ಮಾಡಿಕೊಳ್ಳಲು ಹೆಣಗಾಡುವ ಸ್ಥಿತಿ ನಿರ್ಮಾಣವಾಯಿತು.

ಸಂಜೆ 4ಕ್ಕೆ ಸುಮಾರಿಗೆ ಭಾರೀ ಗಾಳಿ, ಮಿಂಚು ಗುಡುಗು ಸಿಡಿಲಿನೊಂದಿಗೆ ಮತ್ತು ಆಲಿಕಲ್ಲು ಸಮೇತ ವರುಣ ತನ್ನ ಆರ್ಭಟ ಮೆರೆದಿದ್ದು, ಇದರ ಪರಿಣಾಮ ಎರಡು ಘಂಟೆಗೂ ಹೆಚ್ಚು ಕಾಲ ವಿದ್ಯುತ್, ಸಂಚಾರ ಕೂಡ ಸ್ಥಗಿತಗೊಂಡಿತು.

ಮಳೆಗೆ ಚರಂಡಿ ನೀರು ರಸ್ತೆಗೆ ದುಮುಕಿದ ಹಿನ್ನೆಲೆಯಲ್ಲಿ ವ್ಯಾಪಾರಸ್ಥರು ವಾಹನ ಸವಾರರು ಪರದಾಡುವಂತಾಯಿತು. ಇನ್ನು ಕುರಹಟ್ಟಿ, ಜಕ್ಕಲಿ, ಮಲ್ಲಾಪೂರ, ಸೂಡಿ, ಅಬ್ಬಿಗೇರಿ ಮಳೆಯಾಗಿದೆ. ಒಟ್ಟಿನಲ್ಲಿ ಅಕಾಲಿಕವಾಗಿ ಸುರಿದ ಮಳೆಯಿಂದ ಜಾನುವಾರುಗಳಿಗೆ ಒದಗಿಸಬೇಕಿದ್ದ ಹೊಟ್ಟು ಮೇವು ನೀರು ಪಾಲಗಿದ್ದು, ರೈತರನ್ನು ಮತ್ತಷ್ಟು ಸಂಕಷ್ಟಕ್ಕೆ ತಳ್ಳುವಂತೆ ಮಾಡಿದೆ.

# ಬೆಳಗಾವಿಯಲ್ಲೂ 2 ಗಂಟೆ ಮಳೆ

**ಬೆಳಗಾವಿ:** ಯುಗಾದಿಗೆ ಮುನ್ನವೇ ಬೆಳಗಾವಿಯಲ್ಲಿ ಆಲಿಕಲ್ಲು ಮಳೆ ಆರ್ಭಟ ಜೋರಾಗಿದ್ದು, ಸುಮಾರು ಎರಡು ಗಂಟೆಗಳ ಕಾಲ ಸುರಿದ ಮಳೆಯಿಂದ ನಗರದಲ್ಲಿ ವಾಹನ ಸವಾರರು ಪರದಾಡುವಂತಾಯಿತು.

ಗುಡುಗು, ಮಿಂಚು ಇಲದೇ ಏಕಾಏಕಿ ಮಳೆಯಿಂದ ನಗರ ನಿವಾಸಿಗಳಿಗೆ ಅಚ್ಚರಿ ಉಂಟಾಯಿತು. ಭೀಕರವಾಗಿ ಸುರಿದ ಆಲಿಕಲ್ಲು ಮಳೆಯಿಂದ ಬೆಳಗಾವಿ ರಸ್ತೆಗಳು ಹೊಳೆಯಂತೆ ಕಂಡವು.

ಕಳೆದ ಕೆಲ ದಿನಗಳಿಂದ ಹೆಚ್ಚುತ್ತಿದ್ದ ತಾಪಮಾನ, ಬಿಸಿಲ ಝಳಕ್ಕೆ ಕಾದ ಕಾವಲಿಯಂತಾಗಿದ್ದ ಬೆಳಗಾವಿಗೆ ವರುಣದೇವ ತಂಪೆರೆದಿದ್ದಾನೆ. ರಣಬಿಸಿಲ ಹೊಡೆತಕ್ಕೆ ತತ್ತರಿಸಿದ್ದ ಜನತೆಗೆ ಆಲಿಕಲ್ಲು ಮಳೆಗೆ ಕುಣಿದು ಕುಪ್ಪಳಿಸಿದರು. ಮಳೆಯಿಂದ ಜನರು ನಿಟ್ಟುಸಿರು ಬಿಡುವಂತಾಯಿತು.

ಗಾಂಽನಗರ, ಶಿವಬಸವ ನಗರ, ನೆಹರು ನಗರ, ಎಸ್‌ಪಿ ಕಚೇರಿ ಸುತ್ತಮುತ್ತ ಆಲಿಕಲ್ಲು ಮಳೆಯಾಗುತ್ತಿದ್ದು, ಎಸ್‌ಪಿ ಕಚೇರಿ ಬಳಿ ಆಲಿಕಲ್ಲು ರಾಶಿ ಹಾಕಿದಂತೆ ಬಿದ್ದಿದ್ದವು. ಮಳೆಯಿಂದ ಗಾಂಽನಗರ ಸೇತುವೆಗೆ ಚರಂಡಿ ನೀರು ನುಗ್ಗಿ ಅವಾಂತರ ಸೃಷ್ಟಿಯಾಗಿದೆ.



# ವಿಜಯಪುರದಲ್ಲಿ ಧಾರಾಕಾರ ಮಳೆ



**ವಿಜಯಪುರ:** ನಗರ ಸೇರಿದಂತೆ ಜಿಲ್ಲೆಯ ಕೆಲ ಭಾಗದಲ್ಲಿ ಮಂಗಳವಾರ ಸಂಜೆ ಅಕಾಲಿಕ ಆಲಿಕಲ್ಲು ಮಳೆಯಾಗಿದೆ. ಜಿಲ್ಲೆಯ ಮುದ್ದೇಬಿಹಾಳ, ನಿಡಗುಂದಿ, ಬಸವನಬಾಗೇವಾಡಿ, ಕೊಲ್ಹಾರ, ಮುಳವಾಡ ಭಾಗದಲ್ಲಿ ಜೋರಾದ ಗಾಳಿ ಸಹಿತ ಮಳೆಯಾಗಿದ್ದು, ಧಾರಾಕಾರ ಆಲಿಕಲ್ಲು ಬಿದ್ದಿವೆ. ಬೇಸಿಗೆ ಬಿಸಿಲಿನಿಂದ ಕಂಗೆಟ್ಟಿದ್ದ ಜನರಿಗೆ ಮಳೆ ತಂಪೆರೆದಿದ್ದು, ರಸ್ತೆ ಮೇಲೆಲ್ಲ ಬಿದ್ದ ಆಲೀಕಲ್ಲುಗಳನ್ನು ಜನರು ಪಾತ್ರೆಗಳಲ್ಲಿ ತುಂಬಿಕೊಳ್ಳುವಂತಾಯಿತು. ಅಕಾಲಿಕ ಆಲಿಕಲ್ಲು ಮಳೆಯಿಂದ ದ್ರಾಕ್ಷಿ, ದಾಳಿಂಬೆ ಬೆಳೆಗಳು ಹಾನಿಯಾಗಿದ್ದು, ಬೆಳೆಗಾರರು ನಷ್ಟ ಅನುಭವಿಸುವಂತಾಗಿದೆ.

# ಕಾವೇರಿದ ಭೂಮಿಗೆ ತಂಪೆರೆದ ಮಳೆ

**ಬಸವನಬಾಗೇವಾಡಿ:** ಬಿಸಿಲಿನಿಂದ ಕಾವೇರಿದ ಭೂಮಿಗೆ ಮಂಗಳವಾರ ಪಟ್ಟಣ ಸೇರಿ ತಾಲೂಕಿನ ಹಲುವು ಕಡೆಗಳಲ್ಲಿ ಮಧ್ಯಾಹ್ನದ ವೇಳೆಗೆ ಆಲಿಕಲ್ಲು ಮಳೆ ಸುರಿದು ಭೂಮಿ ತಂಪೆರುವಂತೆ ಮಾಡಿತು.

ಬಿಸಿಲಿನ ಬಿಗಿನಿಂದ ತತ್ತರಿಸಿದ ಜನತೆಗೆ ಸ್ವಲ್ಪ ಮಟ್ಟಿಗೆ ಸಂತಸವುಂಟು ಮಾಡಿದರೆ.ಇನ್ನೂ ದ್ರಾಕ್ಷಿ ಬೆಳೆಗಾರರಿಗೆ, ಜೋಳ, ಗೋಽ, ಕಡಲೆ ಇತರೆ ಬೆಳೆಗಳು ಇರುವ ರೈತರಿಗೆ ಸಂಕಷ್ಟ ಎದುರಾಗುವಂತೆ ಮಾಡಿತು.

ಸಂಜೆ ಬಿಸಿದ ರಭಸದ ಗಾಳಿಗೆ ವಿದ್ಯುತ್ ಕೈಕೊಟ್ಟಿತು. ಇದ್ದರಿಂದ ಬೀದಿ ಬದಿ ವ್ಯಾಪಾರಸ್ಥರು ಸೇರಿ ಕೆಲ ವ್ಯಾಪಾರಸ್ಥರಿಗೆ ತೊಂದರೆ ಉಂಟುಮಾಡಿತು. ಕೆಲ ಪತ್ರಾಸ ಹಾರಿ ಯಾವುದೇ ಪ್ರಾಣ–ಹಾನಿ ಉಂಟಾಗಿಲ್ಲ ಎಂಬುವುದು ತಿಳಿದು ಬಂದಿದೆ. ಮಳೆಯಿಂದ ಅಗಸಿ ಒಳಗಡೆ ಒಳಚರಂಡಿಯ ನೀರು ರಸ್ತೆ ಮೇಲೆ ಹರಿಯಿತು.



# ಬೀದರನಲಿ ಭಾರೀ ಮಳೆ

**ಬೀದರ್:** ನಗರ ಸೇರಿದಂತೆ ಜಿಲ್ಲೆಯ ಹಲವೆಡೆ ಮಂಗಳವಾರ ಸಾಯಂಕಾಲ ಗುಡುಗು ಸಹಿತ ಆಲಿಕಲ್ಲು ಮಳೆಯಾದ ಪರಿಣಾಮ ಲಕ್ಷಾಂತರ ರೂಪಾಯಿ ಬೆಳೆ ನಷ್ಟವಾದ ಘಟನೆ ನಡೆದಿದೆ.

ಕಳೆದ ಮೂರು ದಿನಗಳಿಂದ ಸಾಯಂಕಾಲದ ಸಮಯದಲ್ಲಿ ಜಿಲ್ಲೆಯ ಹಲವೆಡೆ ಗುಡುಗು ಸಹಿತ ಮಳೆಯಾಗುತ್ತಿದ್ದು, ಇಂದು ಮಂಗಳವಾರ ಸಾಯಂಕಾಲ ಜೋರಾದ ಬಿರುಗಾಳಿ ಬಿಸಿ ಗುಡುಗು ಸಹಿತ ಆಲಿಕಲ್ಲು ಮಳೆಯಾಗಿದೆ. ನಗರದ ಬ್ರಿಮ್ಸ್ ಆಸ್ಪತ್ರೆ, ಶಿವನಗರ್, ನೌಬಾದ್ ಸೇರಿದಂತೆ ಚಿಟಗುಪ್ಪಾ, ಭಾಲ್ಕಿ, ಔರಾದ್, ಹುಮನಾಬಾದ್ ಹುಲಸುರ, ಕಮಾಲನಗರ ಹಾಗೂ ಬಸವಕಲ್ಯಾಣದ ತಾಲೂಕಿನ ಹಲವೆಡೆ ಮಳೆಯಾಗಿದೆ. ಇದರಿಂದ ರೈತರಿಗೆ ಭಾರೀ ಪ್ರಮಾಣದಲ್ಲಿ ಹಾನಿ ಉಂಟು ಮಾಡಿದೆ.

ಸತತವಾಗಿ ಮೂರು ದಿನಗಳಿಂದ ಮಳೆ ಬೀಳುತಿದ್ದು, ಸಾಯಂಕಾಲದ ತಂಪಾದ ವಾತಾವರಣ ನಿರ್ಮಾಣವಾಗಿದೆ ಮಳೆಗಾಲದ ಹಾಗೆ ವಾತಾವರಣ ನಿರ್ಮಾಣವಾಗುತ್ತಿದೆ.

# ಇಳೆಗೆ ತಂಪೆರೆದ ವರುಣ



**ಸಿರುಗುಪ್ಪ:** ಬಿರುಬಿಸಿಲಿಗೆ ಕಾದು ಕೆಂಡದಂತಾಗಿದ್ದ ಭೂಮಿಗೆ ಮಂಗಳವಾರ ಸಂಜೆ ಆಲಿಕಲ್ಲು ಸಮೇತ ಜೋರಾಗಿ ಸುರಿದ ಮಳೆಯಿಂದ ಇಳೆ ತಂಪರೆಯಿತು.

ಹಲವು ದಿನಗಳಿಂದ ವಿಪರೀತ ಬಿಸಿಲಿನಿಂದಾಗಿ ಜನ ಬೇಸತ್ತು ಹೋಗಿದ್ದರು. ಮಂಗಳವಾರ ಬೆಳಗ್ಗೆ ಎಂದಿಗಿಂತಲೂ ಕಡಿಮೆ ಪ್ರಮಾಣದಲ್ಲಿ ಬಿಸಿಲು ಇತ್ತು. ಸಂಜೆಯಾಗುತ್ತಿದ್ದಂತೆಯೇ, ಗಾಳಿ, ಗುಡುಗು, ಸಿಡಿಲಿನ ಅರ್ಭಟದೊಂದಿಗೆ ಮಳೆ ಸುರಿಯಿತು.

ಸಿರುಗುಪ್ಪ, ತಾಲೂಕಿನ, ಅಗಸನೂರು, ಇಬ್ರಾಹಿಂಪುರ, ಬಾಗೇವಾಡಿ, ರಾರಾವಿ, ಬಗ್ಗೂರು, ಬಂಡ್ರಾಳ, ಶಾಲಿಗನೂರು,ಮೊಪ್ಪನಾಳನಲ್ಲಿ ಆಲಿಕಲ್ಲು ಮಳೆ ಸುರಿದಿದೆ. ಮಳೆ ನೀರಿನಿಂದಾಗಿ ಚರಂಡಿ ತ್ಯಾಜ್ಯ ನೀರು ರಸ್ತೆ ಮೇಲೆ ಹರಿದು ಸುಗಮ ಸಂಚಾರಕ್ಕೆ ಕೆಲ ಕಾಲ ಅಡ್ಡಿಯಾಗಿತ್ತು.

# ನವಲಗುಂದದಲ್ಲಿ ಬೆಳೆಗಳಿಗೆ ಹಾನಿ

**ನವಲಗುಂದ:** ಪಟ್ಟಣ ಸೇರಿದಂತೆ ತಾಲೂಕಿನಲ್ಲಿ ಮಂಗಳವಾರ ಸಂಜೆ ವೇಳೆ ಆಲಿಕಲ್ಲು ಸಹಿತ ಭಾರೀ ಮಳೆಯಾಗಿದ್ದು, ಸುಡುವ ಬಿಸಿಲಿಗೆ ಬೆಂದಿದ್ದ ಜನರಿಗೆ ಸಮಾಧಾನ ತಂದಿದೆ. ಆದರೆ, ಕೆಲವು ಕಡೆ ಆಲಿಕಲ್ಲು ಮಳೆಯಿಂದಾಗಿ ಅಳಿದ ಉಳಿದ ಜೋಳ, ಗೋಧಿ ಬೆಳೆಗಳ ಹಾನಿಯಿಂದಾಗಿ ರೈತರಿಗೆ ಸಂಕಷ್ಟವೂ ಎದುರಾಗಿದೆ.

ತಾಲೂಕಿನ ದಾಟನಾಳ ಗ್ರಾಮದಲ್ಲಿ ಆಲಿಕಲ್ಲು ಮಳೆಯ ಆರ್ಭಟದ ವೇಳೆ ಸಿಡಿಲು ಬಡೆದು ಎಮ್ಮೆ ಮೃತಪಟ್ಟಿರುವ ಘಟನೆ ನಡೆದಿದೆ.

ದಾಟನಾಳ ಗ್ರಾಮದ ಮೈಲಾರಲಿಂಗೇಶ್ವರ ದೇವಸ್ಥಾನದ ಹತ್ತಿರರುವ ಶೇಖಪ್ಪ ಹೂಗಾರ ಎಂಬವರಿಗೆ ಸೇರಿದ ಎಮ್ಮೆ ಮನೆಯ ಬಾಗಿಲು ಬಳಿ ಕಟ್ಟಿರುವ ಎಮ್ಮೆ ಸಿಡಿಲಿಗೆ ಸ್ಥಳದಲ್ಲೇ ಸತ್ತಿದೆ ಎಂದು ಮಾಜಿ ಗ್ರಾಮ ಪಂಚಾಯತ ಅಧ್ಯಕ್ಷರಾದ ಕಸ್ತೂರೆವ್ವ ರಾಯನಾಯ್ಕರ ತಿಳಿಸಿದ್ದಾರೆ.

ತಹಶೀಲ್ದಾರ ಸುಧೀರ್ ಸಾವುಕಾರ ಫೋನ್ ಮೂಲಕ ಮಾತನಾಡಿ ಪಶು ವೈದ್ಯರ ಜೊತೆ ಮಾತನಾಡಿದ್ದೇನೆ . ನಾಳೆ ಸ್ಥಳಕ್ಕೆ ಭೇಟಿ ನೀಡಿ ಪರಿಹಾರಕ್ಕೆ ಕ್ರಮಕ್ಕೆ ಗೊಳ್ಳಲಾಗುವುದು ಎಂದರು.

ತಾಲೂಕಿನ ಬೋಗಾನೂರ ಗ್ರಾಮದಲ್ಲಿ ಮಳೆಗಾಳಿ ಅಬ್ಬರಕ್ಕೆ ಮನೆಯೊಂದರ ಮೇಲೆ ಕೊಂಬೆ ಬಿದ್ದು ಹಾನಿಯಾಗಿದೆ. ಆದರೆ ಯಾವುದೇ ಸಾವು–ನೋವು ಸಂಭವಿಸಿಲ್ಲ, ಹಾಗೇ ತೆರವುಗೊಳಿಸುವು ಕಾರ್ಯ ನಡೆದಿದೆ ಎಂದು ಪಿಡಿಒ ರಗಟಿ ತಿಳಿಸಿದ್ದಾರೆ.



Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

## ಕಿರುಸುದ್ದಿ

### ಮಾ.21ಕ್ಕೆ ಗಣಪತಿ ದೇವಾಲಯದ ವಾರ್ಷಿಕೋತ್ಸವ, ಬೆಳ್ಳಿ ಹಬ್ಬ

**ಅಂಕೋಲಾ:** ತಾಲೂಕಿನ ಬೆಲೇಕೇರಿ ಸೀಬರ್ಡ್ ಕಾಲನಿಯ ಮಹಾಗಣಪತಿ ದೇವಾಲಯದ 25ನೇ ವರ್ಷದ ವಾರ್ಷಿಕೋತ್ಸವ ಬೆಳ್ಳಿ ಹಬ್ಬ ಮಾ.21 ಮತ್ತು 22ರಂದು ಎರಡು ದಿನಗಳ ಕಾಲ ನಡೆಯಲಿದೆ.

ಮಾ. 21ರಂದು ಬೆಳಗ್ಗೆ ಗಣಪತಿ ಹವನ, ವಾಸ್ತು ರಾಕೋಘ್ನ ನವಗ್ರಹ ಹವನ, ಮೃತ್ಯುಂಜಯ ಹವನ, ಕಲಾವೃದ್ಧಿ ಹವನಗಳು ನಡೆಯಲಿದ್ದು, ಸಂಜೆ ಜಾನಪದ ಗುಮಟೆ ಪದ ಕಾರ್ಯಕ್ರಮ ನಡೆಯಲಿದೆ.

ಮಾ. 22ರಂದು ಬೆಳಗ್ಗೆ ಸಾಮೂಹಿಕ ಗಣಹವನ ಮತ್ತು ಸತ್ಯ ಗಣಪತಿ ವ್ರತ, ಕಲಾಭಿಷೇಕ, ಮಹಾಪೂಜೆ, ಪ್ರಸಾದ ವಿತರಣೆಮಧ್ಯಾಹ್ನ ಸಾರ್ವಜನಿಕ ಅನ್ನ ಸಂತರ್ಪಣೆ ಕಾರ್ಯಕ್ರಮ ನಡೆಯಲಿದ್ದು, ರಾತ್ರಿ 8.30ಕ್ಕೆದೇವರ ಮಹಾಪೂಜೆ, 9.30 ಗಂಟೆಗೆ ಸನ್ಮಾನ ಕಾರ್ಯಕ್ರಮ ಮತ್ತು ರಾತ್ರಿ 10.30 ಗಂಟೆಗೆ ಶ್ರೀರಾಘವೇಂದ್ರ ನವ ನಾಟ್ಯ ಮಂಡಳಿ ಸೀ ಬರ್ಡ್ ಕಾಲನಿ ಬೆಲೇಕೇರಿ ಇವರಿಂದ ಮುಕ್ತಿ ಹೊಂದಿದ ಮುತ್ತೈದೆ ಎಂಬ ಸಾಮಾಜಿಕ ನಾಟಕ ಪ್ರದರ್ಶನಗೊಳ್ಳಲಿದೆ. ಕಾರ್ಯಕ್ರಮಗಳಲ್ಲಿ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಸಹಕಾರ ನೀಡುವಂತೆ ಸಂಘಟಕರು ಕೋರಿದ್ದಾರೆ.

### ವಿದ್ಯಾರ್ಥಿಗಳಿಗೆ ವಿನಯವೇ ಭೂಷಣ: ಪಾಂಡುರಂಗ



**ಮುಂಡಗೋಡ:** ಓದಿನ ಜೊತೆಗೆ ಉತ್ತಮ ನಡತೆಯನ್ನು ಜೀವನದಲ್ಲಿ ಅಳವಡಿಸಿಕೊಂಡು ಉಜ್ವಲ ಭವಿಷ್ಯ ಕಾಣಬೇಕು ವಿನಯವೇ ವಿದ್ಯಾರ್ಥಿಗಳಿಗೆ ಭೂಷಣ ಎಂದು ಶಿಕ್ಷಣ ಸಂಯೋಜಕ ಪಾಂಡುರಂಗ ಟಿಕ್ಕೋಜಿ ಹೇಳಿದರು.ತಾಲೂಕಿನ ಸನವಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಂಗಳವಾರ ಏರ್ಪಡಿಸಿದ್ದ 7ನೇ ತರಗತಿ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭ ಮತ್ತು ಶಾರದಾ ದೇವಿ ಪೂಜಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಶಿಕ್ಷಕಿ ನೇತ್ರಾವತಿ ಗೌಡ 7ನೇ ತರಗತಿ ವಿದ್ಯಾರ್ಥಿಗಳಿಗೆ ದೀಪದಾನ ಕಾರ್ಯಕ್ರಮ ನೆರವೇರಿಸಿದರು. ಎಸ್‌ಡಿಎಂಸಿ ಅಧ್ಯಕ್ಷ ನಾಗರಾಜ ಗುಬ್ಬಕ್ಕನವರ ಅಧ್ಯಕ್ಷತೆ ವಹಿಸಿದ್ದರು. ಚಿಗಳ್ಳಿ ಕ್ಲಸ್ಟರ್‌ನ ಸಂಪನ್ಮೂಲ ವ್ಯಕ್ತಿ ಪ್ರಶಾಂತ ಸಾವಳಗಿ, ಎಸ್‌ಡಿಎಂಸಿ ಉಪಾಧ್ಯಕ್ಷ ಮಧು ಕೆರಿಹೊಲದವರ, ಸದಸ್ಯ ಪಂಚಯ್ಯ ಹಿರೇಮಠ, ಗ್ರಾಪಂ ಸದಸ್ಯೆ ರೇಣುಕಾ ಕೋಣನಕೇರಿ, ಗ್ರಾಮಸ್ಥರಾದ ಮಂಜು ಕ್ಯಾಮಣಕೇರಿ, ಪ್ರಕಾಶ ಕೆರಿಹೊಲದವರ ಮತ್ತು ಚಂದ್ರು ಬೋಕಿಯವರ ಉಪಸ್ಥಿತರಿದ್ದರು. ಪ್ರಭಾರ ಮುಖ್ಯ ಶಿಕ್ಷಕ ದೇವೇಂದ್ರಪ್ಪ ದೊಡ್ಡಗೌಡ್ರ ಸ್ವಾಗತಿಸಿದರು. ಶಕುಂತಲಾ ಬಿಸಗಣ್ಣವರ ನಿರೂಪಿಸಿ, ವಂದಿಸಿದರು.

### ಎಪಿಎಂಸಿ ಕೃಷಿ ಧಾರಣೆ

| ಶಿರಸಿ | ಕನಿಷ್ಠ | ಗರಿಷ್ಠ |
|---|---|---|
| ಕಾಳುಮೆಣಸು | 61000 | 71929 |
| ಬಿಳಿಗೋಟು | 26699 | 39900 |
| ಕೆಂಪುಗೋಟು | 25900 | 38218 |
| ಬೆಟ್ಟೆ | 40018 | 52699 |
| ರಾಶಿ | 49609 | 53698 |
| ಚಾಲಿ | 43898 | 47919 |

| ಯಲ್ಲಾಪುರ | ಕನಿಷ್ಠ | ಗರಿಷ್ಠ |
|---|---|---|
| ಅಪಿ | 56595 | 64295 |
| ರಾಶಿ | 50009 | 55900 |
| ಬೆಟ್ಟೆ | 37870 | 50009 |
| ಕೆಂಪುಗೋಟು | 24099 | 37699 |
| ಬಿಳಿಗೋಟು | 17909 | 39499 |
| ಚಾಲಿ | 37011 | 48599 |
| ಚಾಲಿ ಹೊಸದು | 50199 | 50199 |
| ಕೋಕಾ | 14899 | 34212 |
| ಕಾಳುಮೆಣಸು | 60599 | 70305 |



ಯಲ್ಲಾಪುರ : ಪಟ್ಟಣದ ಕಾಳಮ್ಮ ನಗರದ ತಾಲೂಕಾ ಕ್ರೀಡಾಂಗಣದಲ್ಲಿ ಮಂಗಳವಾರ ಸಂಜೆ ಯುಗಾದಿ ಉತ್ಸವದ ಜಾಗೃತಿ ಪ್ರಯುಕ್ತ ನಡೆದ ಬೈಕ್ ರ್‍ಯಾಲಿ ನಡೆಯಿತು. ಉದ್ಯಮನಗರ ಸೇರಿದಂತೆ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಗ್ರಾಮದೇವಿ ದೇವಸ್ಥಾನದಲ್ಲಿ ಸಂಪನ್ನಗೊಂಡಿತು.

## ಪ್ರವಾಸಿ ತಾಣ: ರೋಗಹರಡುವ ಭೀತಿ

**ಗೋಕರ್ಣ:** ಸಮುದ್ರ ಸೇರುವ ಇಲ್ಲಿನ ಸಂಗಮ ನಾಲಾದ ಹೊಲಸು ನೀರು ವಿವಿಧೆಡೆ ನಿಂತು ಗಬ್ಬು ವಾಸನೆ ಹರಡುತ್ತಿದ್ದು, ಈ ಭಾಗದ ನಿವಾಸಿಗಳಿಗೆ ರೋಗ ರುಜನ ಹರಡುವ ಭೀತಿ ಎದುರಾಗಿದೆ. ಪ್ರತಿ ವರ್ಷ ಬೇಸಿಗೆಯಲ್ಲಿ ಈ ಸಮಸ್ಯೆ ಇದ್ದರೂ ಸಹ ಸ್ಥಳೀಯ ಆಡಳಿತ ಯಾವುದೇ ಕ್ರಮ ತೆಗೆದುಕೊಳ್ಳದ ಪರಿಣಾಮ ವರ್ಷದಿಂದ ವರ್ಷಕ್ಕೆ ತೊಂದರೆ ಹೆಚ್ಚಾಗುತ್ತಿದೆ. ಮಳೆಗಾಲದಲ್ಲಿ ಊರಿನ ವಿವಿಧೆಡೆಯ ನೀರು ಈ ನಾಲಾದ ಮೂಲಕ ಸಮುದ್ರ ಸೇರುತ್ತದೆ. ಈ ನಾಲಾದ ಅಂಚಿನ ಹೊಟೇಲ್ ಹಾಗೂ ಮನೆಯವರು ನೇರವಾಗಿ ನೀರು ನಾಲಾಕ್ಕೆ ಬಿಡುತ್ತಿರುವುದರಿಂದ ಬೇಸಿಗೆಯಲ್ಲಿ ಅಲಲ್ಲಿ ನಿಂತು ಗಬ್ಬು ನಾರುತ್ತಿದೆ. ಪ್ರಸ್ತುತ ಮಹಾಬಲೇಶ್ವರ ಮಂದಿರದ ಮಂಭಾಗದ ಮುಖ್ಯಕಡಲತೀರಕ್ಕೆ ಸಾಗುವ ಮಾರ್ಗದಲ್ಲಿ ಮೂಗು ಮುಚ್ಚಿಕೊಂಡು ಹೋಗುವ ಸ್ಥಿತಿಯಿದೆ. ಸಂಗಮ ನಾಲಾ ಸಮುದ್ರ ಸೇರುವಲ್ಲಿ ಮರಳು ತುಂಬಿ ರಾಶಿಯಾಗಿದ್ದು, ಇದನ್ನ ತೆರವುಗೊಳಿಸಿ ಕೊಟ್ಟರೆ ನೀರು ಹರಿದು ಹೋಗಿ ವಾಸನೆ ಕಡಿಮೆಯಾಗಬಹುದಾಗಿದ್ದು, ಈ ಬಗ್ಗೆ ತ್ವರಿತ ಕ್ರಮ ಅಗತ್ಯವಿದೆ. ಈ ನಾಲಾದ ಹೂಳೆತ್ತಿ ನೀರು ಸರಿಯಾದ ರೀತಿಯಲ್ಲಿ ಹರಿದು ಹೋಗುವಂತೆ ಮಾಡಲು ಹಲವು ಬಾರಿ ಯೋಜನೆ ರೂಪಿಸಿದರೂ, ಅದು ಕಡತದಲ್ಲೆ ಉಳಿದ್ದು, ಯಾವುದೇ ಕ್ರಮವಾಗಿಲ್ಲ, ನೇರವಾಗಿ ತ್ಯಾಜ್ಯ ನೀರು ಬಿಡುವವರ ಮೇಲೆ ಕಾನೂನು ಕ್ರಮ ಜರುಗಿಸುವಂತೆ ಸಂಬಂಧಿಸಿದ ಇಲಾಖೆ ಹಾಗೂ ಜಿಲ್ಲಾಡಳಿತ ಹಲವು ಬಾರಿ ಗ್ರಾಪಂ ಸೂಚಿಸಿದರು ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಇದೆಲ್ಲದರ ಪರಿಣಾಮ ಪ್ರವಾಸಿ ತಾಣ ರೋಗರುಜಿನದ ನಿಲ್ದಾಣವಾಗಿ ಮಾರ್ಪಟ್ಟಿದೆ.



ಸಿದ್ದಾಪುರ: ತಾಲೂಕಿನ ಹೊಸೂರಿನ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಶಾಖೆಯಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಆಚರಿಸಲಾಯಿತು. ಸಾಹಿತಿ ಮಾಲತಿ ರಾಮಕೃಷ್ಣ ಭಟ್ಟ ಕಾರ್ಯಕ್ರ4ಮವನ್ನು ಉದ್ಘಾಟಿಸಿದರು. ಈ ವೇಳೆ ಬಟ್ಟೆವಿನಾಯಕ ಮಂಡಳಿಯಿಂದ ಭಜನೆ, ಶಾರದಾ ಭಜನಾ ಮಂಡಳಿಯಿಂದ ಪ್ರಾರ್ಥನೆ, ಕೋಲಾಟ ನೃತ್ಯ, ಜಾನಪದ ನೃತ್ಯ ನಡೆಯಿತು.

## ಕದಂಬೋತ್ಸವ ಆಚರಣೆಯಲ್ಲಿ ಸರ್ಕಾರದ ನಿರ್ಲಕ್ಷ್ಯ
# ಬನವಾಸಿ ಜನರಿಗೆ ಅಸಮಾಧಾನ

▸ಸುಧೀರ ನಾಯರ್

ದಿಗಂತ ವಿಶೇಷ

**ಬನವಾಸಿ:** ಕನ್ನಡದ ಪ್ರಥಮ ರಾಜಧಾನಿ, ಐತಿಹಾಸಿಕ ನಗರಿ ಬನವಾಸಿಯಲ್ಲಿ ಆಚರಿಸಲಾಗುವ 'ಕದಂಬೋತ್ಸವ'ವು ಕೇವಲ ಸಾಂಸ್ಕೃತಿಕ ಹಬ್ಬವಲ್ಲ, ಅದು ಕೋಟ್ಯಂತರ ಕನ್ನಡಿಗರ ಹೆಮ್ಮೆಯ ಸಂಕೇತ. ಆದರೆ ಕಳೆದ ಕೆಲವು ವರ್ಷಗಳಿಂದ ಈ ಉತ್ಸವದ ಸಂಘಟನೆಯಲ್ಲಿ ಸರ್ಕಾರ ತೋರುತ್ತಿರುವ ಉದಾಸೀನತೆ ಮತ್ತು ನಿರಾಸಕ್ತಿಯ ಬಗ್ಗೆ ಬನವಾಸಿ ಸೇರಿದಂತೆ ಕನ್ನಡಾಭಿಮಾನಿಗಳಲ್ಲಿ ತೀವ್ರ ಅಸಮಾಧಾನ ಉಂಟಾಗಿದೆ.

ರಾಜ್ಯದ ಸಾಂಸ್ಕೃತಿಕ ಪರಂಪರೆಯನ್ನು ಎತ್ತಿ ಹಿಡಿಯಬೇಕಾದ ಸರ್ಕಾರವೇ ಉತ್ಸವದ ಆಚರಣೆಯಲ್ಲಿ ವಿಳಂಬಧೋರಣೆಅನುಸರಿಸುತ್ತಿರುವುದು ವಿಷಾದನೀಯ ಎಂಬ ಮಾತುಗಳು ಕೇಳಿಬರುತ್ತಿವೆ. ಕದಂಬೋತ್ಸವವನ್ನು ರಾಜ್ಯದ ಮುಖ್ಯಮಂತ್ರಿಗಳೇ ಬನವಾಸಿಗೆ ಬಂದು ಉದ್ಘಾಟಿಸಿ ನಾಡಿನ ಶ್ರೇಷ್ಠ ಸಾಹಿತಿಯೋರ್ವರಿಗೆ ಪ್ರತಿಷ್ಠಿತ ಪಂಪ ಪ್ರಶಸ್ತಿ ನೀಡಿ ಗೌರವಿಸುತ್ತಾರೆ. ಕದಂಬೋತ್ಸವಕ್ಕೆ ಬಂದಾಗ ಬನವಾಸಿಯ ಅಭಿವೃದ್ಧಿಯ ಕುರಿತು ಸಾಕಷ್ಟು ಘೋಷಣೆಗಳನ್ನು ಮಾಡುತ್ತಾರೆ. ಆದರೆ ಅದು ಕೇವಲ ವೇದಿಕೆ ಮೇಲಿನ ಭಾಷಣಕ್ಕೆ ಮಾತ್ರ ಸೀಮಿತವಾಗಿರುತ್ತದೆ ಎಂದು ಬನವಾಸಿ ಭಾಗದ ಜನರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪ್ರತಿ ವರ್ಷವೂ ಉತ್ಸವದ ದಿನಾಂಕ ಘೋಷಿಸುವಲ್ಲಿ ಜಿಲ್ಲಾಡಳಿತ ಮತ್ತು ಸರ್ಕಾರ ಅಂತಿಮ ಕ್ಷಣದವರೆಗೆ ಕಾಯುತ್ತವೆ. ಈ ಗೊಂದಲದಿಂದಾಗಿ ಪ್ರವಾಸಿಗರು ಮತ್ತು ಕಲಾತಂಡಗಳು ಪೂರ್ವಸಿದ್ಧತೆ ಮಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಕನ್ನಡದ ಮೊದಲ ಸಾಮ್ರಾಜ್ಯದ ನೆನಪಿಗಾಗಿ ನಡೆಯುವ ಈ ಉತ್ಸವಕ್ಕೆ ಬಿಡುಗಡೆಯಾಗುವ ಅನುದಾನದಲ್ಲಿ ಕಡಿತ ಉಂಟಾಗುತ್ತಿದೆ ಎಂಬ ಆರೋಪ ಕೇಳಿಬಂದಿದೆ. ಸಾಹಿತ್ಯ ಲೋಕದ ಅತ್ಯುನ್ನತ 'ಪಂಪ ಪ್ರಶಸ್ತಿ'ಯನ್ನು ಇದೇ ವೇದಿಕೆಯಲ್ಲಿ ನೀಡುವುದು ಸಂಪ್ರದಾಯ. ಆದರೆ ಪ್ರಶಸ್ತಿ ವಿಜೇತರ ಆಯ್ಕೆ ಮತ್ತು ವಿತರಣೆಯಲ್ಲಿನ ವಿಳಂಬವು ಉತ್ಸವದ ಗಾಂಭೀರ್ಯವನ್ನು ಕಡಿಮೆ ಮಾಡುತ್ತಿದೆ. ಸರ್ಕಾರ ಕದಂಬೋತ್ಸವವನ್ನು ನಿರ್ಲಕ್ಷೀಸುತ್ತಿರುವುದು ಸರಿಯಲ್ಲ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಕರಾವಳಿ ಉತ್ಸವಕ್ಕೆ ತೋರಿದ ಆಸಕ್ತಿ ಕದಂಬೋತ್ಸವಕ್ಕಿಲ್ಲ: ಕಾರವಾರದಲ್ಲಿ ನಡೆಯುವ ಕರಾವಳಿ ಉತ್ಸವಕ್ಕೆ ತೋರಿದ ಆಸಕ್ತಿಯನ್ನು ಸರ್ಕಾರ ಕದಂಬೋತ್ಸವ ಆಚರಣೆಗೆ ತೋರುತ್ತಿಲ್ಲ. ಡಿಸೆಂಬರ್‌ನಲ್ಲಿನಡೆಯಬೇಕಾದಉತ್ಸವವು ಮಾರ್ಚ್ ಬಂದರೂ ನಡೆದಿಲ್ಲ. ಈ ಬಗ್ಗೆ ಸರ್ಕಾರವಾಗಲಿ ಜಿಲ್ಲಾಡಳಿತವಾಗಲಿ ಎಲ್ಲಿಯೂ ವಿಷಯ ಪ್ರಸ್ತಾಪಿಸಿದ ಬಗ್ಗೆ ಮಾಹಿತಿಯೂ ಇಲ್ಲ. ಈ ವರ್ತನೆ ಕದಂಬ ರಾಜವಂಶಕ್ಕೆ ಮಾಡಿದ ಅವಮಾನವಾಗಿದೆ ಎಂದು ಬನವಾಸಿಭಾಗದಜನರು ತೀವ್ರ ಬೇಸರ ವ್ಯಕ್ತಪಡಿಸಿದ್ದಾರೆ.

> **ಗಮನ ಹರಿಸಿ**
> ಡಿಸೆಂಬರ್‌ನಲ್ಲಿ ನಡೆಯಬೇಕಾದ ಕದಂಬೋತ್ಸವವು ಮಾರ್ಚ್ ತಿಂಗಳ ಬಂದರೂ ನಡೆದಿಲ್ಲ. ಸರ್ಕಾರಕ್ಕೆ ಕದಂಬೋತ್ಸವ ನಡೆಸಲು ಆಸಕ್ತಿ ಇಲ್ಲದಿದ್ದರೆ ತಿಳಿಸಲಿ. ಕದಂಬರ ಅಭಿಮಾನಿಗಳು, ಕನ್ನಡಿಗರೆಲ್ಲಾ ಸೇರಿ ಕದಂಬೋತ್ಸವವನ್ನು ನಡೆಸುತ್ತೇವೆ. ಒಂದಲ್ಲಾ ಒಂದು ಕಾರಣದಿಂದ ಕದಂಬೋತ್ಸವ ಆಚರಣೆಯನ್ನು ವಿಳಂಬಮಾಡುವುದು ಸರಿಯಲ್ಲ. ಸರ್ಕಾರ ಹಾಗೂ ಜಿಲ್ಲಾಡಳಿತ ತಕ್ಷಣ ಕದಂಬೋತ್ಸವ ಆಚರಣೆ ಕುರಿತು ಗಮನ ಹರಿಸಬೇಕು ಎಂದು ಬನವಾಸಿ ತಾಲೂಕಾ ಹೋರಾಟ ಸಮಿತಿ ಆಗ್ರಹಿಸಿದೆ.

ಕದಂಬರ ಇತಿಹಾಸವನ್ನು ನಾಡಿಗೆ ತಿಳಿಸುವ ಉದ್ದೇಶದಿಂದಲೇ ಬನವಾಸಿಯಲ್ಲೇ ಕದಂಬೋತ್ಸವ ಆಚರಣೆ ಮಾಡಲಾಗುತ್ತದೆ. ಮಾಧ್ಯಮಗಳಲ್ಲಿ ಸುದ್ದಿಗಳು ಬಿತ್ತರವಾಗುತ್ತಿದ್ದಂತೆ ಜಿಲ್ಲಾಡಳಿತಕ್ಕೆ ಕದಂಬೋತ್ಸವ ಆಚರಣೆ ನೆನಪಾಗುತ್ತದೆ. ಇದು ಒಳ್ಳೆಯ ಬೆಳವಣಿಗೆಯಲ್ಲ ಎಂದು ಬನವಾಸಿ ಭಾಗದ ಹಿರಿಯರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.ಬನವಾಸಿ ಅಭಿವೃದ್ಧಿ ಪ್ರಾಧಿಕಾರ ಹೆಸರಿಗಷ್ಟೇ: ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ಬನವಾಸಿ ಅಭಿವೃದ್ಧಿಗಾಗಿ ಬನವಾಸಿ ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸಿದ್ದಾರೆ. ಅದು ಕೇವಲ ಹೆಸರಿಗಷ್ಟೇ ಆದಂತಾಗಿದೆ. ಬಜೆಟ್‌ನಲ್ಲಿ ಕದಂಬೋತ್ಸವಕ್ಕಾಗಲಿ ಬನವಾಸಿ ಅಭಿವೃದ್ಧಿ ಪ್ರಾಧಿಕಾರಕ್ಕಾಗಲಿ ಯಾವುದೇ ಅನುದಾನ ಬಿಡುಗಡೆ ಮಾಡಿಲ್ಲ, ಇದು ಬನವಾಸಿ ಭಾಗದ ಜನರಿಗೆ ಮತ್ತಷ್ಟು ಬೇಸರ ತರಿಸಿದಂತಾಗಿದೆ.

## ಶಾಂತಿ, ಸೌಹಾರ್ದತೆಯಿಂದ ರಂಜಾನ್ ಆಚರಿಸಿ

**ಅಂಕೋಲಾ:** ಯುಗಾದಿ ಮತ್ತು ರಂಜಾನ್ ಹಬ್ಬಗಳನ್ನು ತಾಲೂಕಿನಲ್ಲಿ ಯಾವುದೇ ರೀತಿಯ ಅಹಿತಕರ ಘಟನೆಗಳಿಗೆ ಅವಕಾಶ ಆಗದಂತೆ ಶಾಂತಿ, ಸೌಹಾರ್ದತೆ ಮತ್ತು ಸಂಭ್ರಮದಿಂದ ಆಚರಿಸಿ ಎಂದು ಅಂಕೋಲಾ ಪೊಲೀಸ್ ನಿರೀಕ್ಷಕ ಚಂದ್ರಶೇಖರ ಮಠಪತಿ ಹೇಳಿದರು.

ತಾಲೂಕಿನ ತಹಶೀಲ್ದಾರರ ಕಾರ್ಯಾಲಯದ ಸಭಾಭವನದಲ್ಲಿ ಆಯೋಜಿಸಲಾಗಿದ್ದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು ಅಂಕೋಲಾ ತಾಲೂಕು ಈ ಹಿಂದಿನಿಂದಲೂ ಶಾಂತಿ, ಸೌಹಾರ್ದತೆಯ ಮೂಲಕ ಗುರುತಿಸಿಕೊಂಡಿದ್ದು ಅದೇ ರೀತಿಯ ವಾತಾವರಣ ಮುಂದುವರಿಯಲಿ ಎಂದರು.

ಯುಗಾದಿ ಹಬ್ಬದ ಪ್ರಯುಕ್ತ ತಾಲೂಕಿನ ಬೊಬ್ರವಾಡದಿಂದ ನಡೆಯುವ ಬೈಕ್ ರ್‍ಯಾಲಿ, ತಾಲೂಕಿನ ಬಡಗೇರಿಯಲ್ಲಿ ನಡೆಯುವ ಹಾಲಕ್ಕಿ ಒಕ್ಕಲಿಗರ ಹಗರಣ ಪ್ರದರ್ಶನದ ಕುರಿತು ವಿವರಗಳನ್ನು ಪಡೆದ ಪೊಲೀಸ್ ನಿರೀಕ್ಷಕರು ರಂಜಾನ್ ಹಬ್ಬದ ಆಚರಣೆ ಕುರಿತಂತೆ ಸಂಬಂಧಿಸಿದವರಿಂದ ಮಾಹಿತಿ ಪಡೆದುಕೊಂಡರು.ಯುಗಾದಿ ಹಬ್ಬದ ದಿನದಂದು ಬೆಳಗ್ಗೆ ಬೊಬ್ರವಾಡದ ಬೊಬ್ರದೇವಾಲಯದಲ್ಲಿ ಪೂಜೆ ಸಲ್ಲಿಸಿ ಬೈಕ್ ರ್‍ಯಾಲಿ ಆರಂಭವಾಗಲಿದ್ದು, ಅಂಕೋಲಾ ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ ಕನಸೆಗದ್ದೆ, ಬೇಲಾ ಬಂದರ್, ಶೇಡಿಕುಳಿ ಮಾರ್ಗವಾಗಿ ಬಂದು ಬೊಬ್ರದೇವಾಲಯದ ಬಳಿ ಮುಕ್ತಾಯವಾಗಲಿದೆ ಎಂದು ಸಂಘಟಕರು ತಿಳಿಸಿದರು.

ಯುಗಾದಿ ದಿನದಂದು ಸಂಜೆ ಭಾವಿಕೇರಿ ಗ್ರಾಪಂ ವ್ಯಾಪ್ತಿಯ ಬಡಗೇರಿಯಲ್ಲಿ ಹಾಲಕ್ಕಿ ಸಮಾಜದ ಹಗರಣ ಅಣುಕು ಪ್ರದರ್ಶನಕ್ಕೆ ನೂರಾರು ವರ್ಷಗಳ ಇತಿಹಾಸವಿದ್ದು, ಪ್ರತಿ ವರ್ಷದಂತೆ ಈ ವರ್ಷ ಸಹ ನಡೆಯಲಿದೆ.

ಹಗರಣ ನೋಡಲು ಸಾವಿರಾರು ಜನರು ಸೇರುವ ನಿರೀಕ್ಷೆಯಿದ್ದು, ಹಗರಣ ಮೆರವಣಿಗೆ ಸಾಗುವ ಮಾರ್ಗದಲ್ಲಿ ವಾಹನಗಳ ಸಂಚಾರ ನಿರ್ಬಂಧಿಸಿ ಕ್ರಮ ಕೈಗೊಳ್ಳುವಂತೆ ಬಡಗೇರಿಯ ಹಾಲಕ್ಕಿಸಮಾಜದ ಪ್ರಮುಖರು ಆಗ್ರಹಿಸಿದರು.ಅಂಕೋಲಾ ತಾಲೂಕಿನ ಜನರು ತಮ್ಮ ಹಬ್ಬಗಳಿಗೆ ಹಿಂದಿನಿಂದಲೂಸಹಕಾರ ನೀಡುತ್ತ ಬರುತ್ತಿದ್ದಾರೆ ರಂಜಾನ್ ಸಂದರ್ಭದಲ್ಲಿ ಯಾವುದೇ ಮೆರವಣಿಗೆ ನಡೆಸುವುದಿಲ್ಲ ಸಾಮೂಹಿಕ ಪ್ರಾರ್ಥನೆ ನಡೆಸಿ ಪರಸ್ಪರ ಶುಭಾಶಯ ಕೋರಿ ಹಬ್ಬ ಆಚರಿಸುವುದಾಗಿ ಮುಸ್ಲಿಂ ಸಮುದಾಯದ ಪ್ರಮುಖರು ಸಭೆಯಲ್ಲಿ ತಿಳಿಸಿದರು.ಅಧ್ಯಕ್ಷತೆ ವಹಿಸಿದ್ದ ಉಪ ತಹಶೀಲ್ದಾರ್ ಗಿರೀಶ ಜಾಂಬಾವಳಿಕರ್ ಮಾತನಾಡಿದರು.ಪಿಎಸ್‌ಐ ಗುರುನಾಥ ಹಾದಿಮನಿ, ಹಾಲಕ್ಕಿ ಒಕ್ಕಲಿಗರ ಸಮಾಜದ ಪ್ರಮುಖ ಪಾಂಡುರಂಗ ಗೌಡ, ಬಡಗೇರಿಯ ಪ್ರಮುಖರುಗಳಾದ ಪಾಂಡು ಗೌಡ, ಸಾತು ಗೌಡ, ಮಹೇಶ ಗೌಡ, ಮುಸ್ಲಿಂ ಪ್ರಮುಖ ನವಾಜ ಶೇಖ್, ರಿಜ್ವಾನ್ ಶೇಖ್, ಮಂಜರ ಶೇಖ್ ಉಪಸ್ಥಿತರಿದ್ದರು.



## ನಾಳೆ ಗೋವಿಂದೋತ್ಸವ: ನಾಯಕ



**ಅಂಕೋಲಾ:** ಉತ್ತರ ಕನ್ನಡ ಜಿಲ್ಲೆಯ ತಿರುಪತಿಯಾಗಿ ಭಕ್ತರ ಶ್ರದ್ಧಾ ಭಕ್ತಿಯ ಕೇಂದ್ರವಾಗಿಸುವ ಮಹತ್ವಾಕಾಂಕ್ಷೆಯಿಂದ ಬಾರ್ಕೂರು ಸಂಸ್ಥಾನ ಉತ್ತರ ಕನ್ನಡ ಘಟಕದಿಂದ ಹೀರೆಗುತ್ತಿಯ ಯಶೋಧಾವನದಲ್ಲಿ ನಿರ್ಮಾಣಗೊಂಡು ನಿಂತಿರುವ ಶ್ರೀನಾಡ ವೆಂಕಟೇಶ್ವರ ಸ್ವಾಮಿ ದೇವಾಲಯದಲ್ಲಿ ಮಾ.19ರಂದು ಯುಗಾದಿಯ ಶುಭ ಸಂದರ್ಭದಲ್ಲಿ ಉತ್ತರ ಕನ್ನಡ ನಾಡ ಹಬ್ಬ ಗೋವಿಂದೋತ್ಸವ ಕಾರ್ಯಕ್ರಮ ಬಾರ್ಕೂರು ಸಂಸ್ಥಾನದ ಪರಮಪೂಜ್ಯ ಶ್ರೀವಿದ್ಯಾವಾಚಸ್ಪತಿ ಡಾ.ವಿಶ್ವಸಂತೋಷ ಭಾರತಿ ಶ್ರೀಪಾದರ ಉಪಸ್ಥಿತಿಯಲ್ಲಿನಡೆಯಲಿದೆಎಂದುಬಾರ್ಕೂರು ಮಹಾಸಂಸ್ಥಾನದ ಉತ್ತರ ಕನ್ನಡ ಜಿಲ್ಲಾ ಘಟಕದ ಅಧ್ಯಕ್ಷ ಡಿ.ಎನ್.ನಾಯಕ ಹೇಳಿದರು.ಸಂಸ್ಥಾನದ ಆವರಣದಲ್ಲಿ ಕಾರ್ಯಕ್ರಮದ ಕುರಿತು ವಿವರಗಳನ್ನು ನೀಡಿದ ಅವರು ಕ್ಷೇತ್ರ ತಿರುಪತಿಯ ನಂತರ ಅತಿದೊಡ್ಡ ವೆಂಕಟೇಶ್ವರ ಸ್ವಾಮಿಯ ಶಿಲಾ ವಿಗ್ರಹ ಹೊಂದಿರುವ ನಾಡ ವೆಂಕಟೇಶ್ವರ ದೇವಾಲಯದ ಗೋವಿಂದೋತ್ಸವದ ಪ್ರಯುಕ್ತ ಶ್ರೀಲಕ್ಷ್ಮೀ ವೆಂಕಟೇಶ್ವರ ಕಲಾತತ್ವ ಹೋಮ,ಸಂಜೆ ಪಲ್ಲಕ್ಕಿ ಉತ್ಸವ, ದೇವಾಲಯದ ಎದುರಿನ ಪುಷ್ಕರಣಿಯಲ್ಲಿ ದೇವರ ಉತ್ಸವ ಮೂರ್ತಿಯ ತೆಪ್ಪೋತ್ಸವ ಹಾಗೂ ಉಯ್ಯಾಲೆ ಸೇವೆ,ಗುರುಗಳ ಆಶೀರ್ವಚನ, ರಾತ್ರಿ 8 ಗಂಟೆಗೆ ಅನ್ನ ಪ್ರಸಾದ ವಿತರಣೆ, ಯಕ್ಷಗಾನ ಸೇವೆ ನಡೆಯಲಿದೆ ದೇವಾಲಯದಕಾರ್ಯಗಳುಭಕ್ತರಸಹಕಾರದಲ್ಲಿ ಭರದಿಂದ ಸಾಗಿದೆ ಎಂದು ಅವರು ತಿಳಿಸಿದರು. ದೇವಾಲಯ ಕಟ್ಟಡ ಸಮಿತಿಯ ಅಧ್ಯಕ್ಷ ಆನಂದು ಕವರಿ ಮಾತನಾಡಿದರು.

ಜಗದೀಶ ನಾಯಕ ಹೊಸ್ಕೇರಿ ಪ್ರಾಸ್ತಾವಿಕ ಮಾತನಾಡಿ, ಕಾರ್ಯಕ್ರಮದ ಕುರಿತು ತಿಳಿಸಿದರು. ಸಂಸ್ಥಾನದ ಟ್ರಸ್ಟಿ ನಾರಾಯಣ ನಾಯಕ, ರವಿ ನಾಯಕ, ಸತ್ಯಾನಂದ ನಾಯಕ ಉಪಸ್ಥಿತರಿದ್ದರು.



ಯಲ್ಲಾಪುರ: ಮಾ.18ರಿಂದ ಎ.2ರವರೆಗೆ ನಡೆಯಲಿರುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ತಾಲೂಕಿನಲ್ಲಿ ಆರು ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು ಪರೀಕ್ಷಾ ಕೇಂದ್ರಗಳಲ್ಲಿ ಎಲ್ಲರೀತಿಯ ಸಿದ್ಧತೆಗಳನ್ನು ಶಿಕ್ಷಣಾಧಿಕಾರಿ ರೇಖಾ ನಾಯ್ಕ ಮಂಗಳವಾರ ಪರಿಶೀಲಿಸಿದರು.

## ಸಾವಯವ ಕೃಷಿ ಬಗ್ಗೆ ರೈತರಲ್ಲಿ ಅರಿವು ಮೂಡಲಿ: ಹೆಗಡೆ

**ಯಲ್ಲಾಪುರ:** ಪಟ್ಟಣದ ರವೀಂದ್ರ ನಗರದ ಶಕ್ತಿ ಗಣಪತಿ ಸಭಾಭವನದಲ್ಲಿ ಮಂಗಳವಾರ ಜಿಪಂ ಕೃಷಿ ಇಲಾಖೆಯ ಆತ್ಮಾ ಯೋಜನೆಯ ಅಡಿಯಲ್ಲಿ ಹಮ್ಮಿಕೊಂಡಿದ್ದ ಕಿಸಾನ್ ಗೋಷ್ಠಿಯನ್ನು ಆತ್ಮಾಯೋಜನೆಯ ಸಲಹಾ ಸಮಿತಿಯ ಅಧ್ಯಕ್ಷ ಗಣೇಶ ಹೆಗಡೆ ಪಣತಗೇರಿ ಉದ್ಘಾಟಿಸಿದರು.

ಸಹಾಯಕ ಕೃಷಿ ನಿರ್ದೇಶಕ ನಾಗರಾಜ ನಾಯ್ಕ ಮಾತನಾಡಿ, ಕೃಷಿಯಲ್ಲಿ ತಾಂತ್ರಿಕತೆಯನ್ನು ಅಳವಡಿಸಿಕೊಳ್ಳುವ ಅವಕಾಶಗಳ ಬಗ್ಗೆ, ಕೃಷಿಯಲ್ಲಿ ವಿಸ್ತರಣೆ, ಸಮಗ್ರ ಕೃಷಿ ನಿರ್ವಹಣೆ ವಿಚಾರಗಳನ್ನು ರೈತರಿಗೆ ಮನವರಿಕೆ ಜಾಗೃತಿ ಕಾರ್ಯಕ್ರಮಗಳನ್ನು ಕಾಲಕಾಲಕ್ಕೆ ಹಮ್ಮಿಕೊಳ್ಳುತ್ತ ಬರಲಾಗಿದೆ. ರೈತರು ಇವುಗಳ ಸದುಪಯೋಗ ಪಡೆದುಕೊಳ್ಳಬೇಕು. ತಾಲೂಕಿನಲ್ಲಿ ಶೇ 70 ರೈತರು ಸಂಪ್ರದಾಯಿಕ ಸಾವಯುವ ಪದ್ಧತಿಯಲ್ಲಿ ಕೃಷಿ ಮಾಡುತ್ತಿದ್ದು, ಈ ಬಗ್ಗೆ ಇನ್ನಷ್ಟು ಅರಿವು ಮೂಡಿಸಲಾಗುತ್ತಿದೆ. ತಾಲೂಕಿನಲ್ಲಿ ಮೂರು ಗುಚ್ಚಗಳ ಮೂಲಕ ತರಬೇತಿ ನೀಡಿ ಸಂಪೂರ್ಣ ಸಾವಯುವ ಬೇಸಾಯದ ಬಗ್ಗೆ ಅರಿವು ಮೂಡಿಸಲಾಗುತ್ತಿದೆ. ಅಡಿಕೆಗೆ ವ್ಯಾಪಿಸುತ್ತಿರುವ ಎಲೆಚುಕ್ಕೆ ರೋಗದ ನಿಯಂತ್ರಣದ ಬಗ್ಗೆ ಈಗಾಗಲೇ ತಾಲೂಕಿನ ವಿವಿಧೆಡೆ ರೈತರಿಗೆ ಮಾರ್ಗದರ್ಶನ ಮಾಡಲಾಗಿದೆ ಎಂದರು.

ತೋಟಗಾರಿಕಾ ಇಲಾಖೆಯ ಸಹಾಯಕ ನಿರ್ದೇಶಕ ಸತೀಶ ಹೆಗಡೆ ಅಡಿಕೆ ಎಲೆಚುಕ್ಕಿ ರೋಗ ನಿಯಂತ್ರಣ, ಮಣ್ಣಿನ ಫಲವತ್ತತೆ ಕುರಿತು ಮಾಹಿತಿ ನೀಡಿದರು.



ಕೃಷಿಕ ಸಮಾಜದ ಅಧ್ಯಕ್ಷ ವೆಂಕಟ್ರಮಣ ಕಾರೆಮನೆ ಅಧ್ಯಕ್ಷತೆವಹಿಸಿ ಮಾತನಾಡಿ, ರೋಗಗಳು ಬಂದಾಗ ಅದರ ನಿಯಂತ್ರಣಕ್ಕೆ ಇಲಾಖೆಯವರು ಮಾರ್ಗದರ್ಶನ ನೀಡುತ್ತಾರೆ. ರೈತರೂ ಆಸಕ್ತಿಯಿಂದ ಇಲಾಖೆಯ ಜತೆ ಕೈ ಜೋಡಿಸಬೇಕು. ಇಲಾಖೆಗಳ ಕಾರ್ಯಗಳಿಗೆ ಸ್ಪಂದಿಸಬೇಕು ಎಂದರು.

ತಾಲೂಕಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಸುಬ್ರಾಯ ಬಿದ್ರೆಮನೆ ಉಪಸ್ಥಿತರಿದ್ದರು. ನಿವೃತ್ತ ಸಹಾಯಕ ಕೃಷಿ ನಿರ್ದೇಶಕ ಶಂಕರ ಹೆಗಡೆ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದರು.ಶ್ರೀಲತಾ ರಾಜೀವ ಪ್ರಾರ್ಥಿಸಿದರು. ಆತ್ಮಾಯೋಜನೆಯ ಸಂಯೋಜಕ ಎಂ.ಜಿ ಭಟ್ಟ ಇಡಗುಂದಿ ನಿರ್ವಹಿಸಿದರು.

## ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ವಿದ್ಯಾರ್ಥಿಗಳು ಸಜ್ಜು

**ಮುಂಡಗೋಡ:** ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬುಧವಾರದಿಂದ ಆರಂಭವಾಗಲಿದ್ದು, ತಾಲೂಕಿನಲ್ಲಿ ಒಟ್ಟು 1262 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲು ಉತ್ಸುಕರಾಗಿದ್ದಾರೆ.

ಈ ಬಾರಿ ಪರೀಕ್ಷೆಯಲ್ಲಿ 580 ಬಾಲಕರು ಹಾಗೂ 682 ಬಾಲಕಿಯರು ಸೇರಿ ಒಟ್ಟು 1262 ವಿದ್ಯಾರ್ಥಿಗಳು ಪರೀಕ್ಷೆ ಎದುರಿಸುತ್ತಿದ್ದಾರೆ.

ತಾಲೂಕಿನಲ್ಲಿ ಒಟ್ಟು 5 ಪರೀಕ್ಷಾ ಕೇಂದ್ರಗಳಿವೆ. ಮುಂಡಗೋಡದ ಸರ್ಕಾರಿ ಜೂನಿಯರ ಕಾಲೇಜಿನ ಪ್ರೌಡ ವಿಭಾಗ ಪರೀಕ್ಷಾ ಕೇಂದ್ರದಲ್ಲಿ 389., ರೋಟರಿ ಪ್ರೌಢಶಾಲೆ ಮುಂಡಗೋಡ ಪರೀಕ್ಷಾ ಕೇಂದ್ರದಲ್ಲಿ 234,. ಸರಕಾರಿ ಪ್ರೌಢಶಾಲೆ ಕಾತೂರನ ಪರೀಕ್ಷಾ ಕೇಂದ್ರದಲ್ಲಿ 193, ಲೊಯೋಲಾ ಪ್ರೌಢಶಾಲೆ ಕರಗಿನಕೊಪ್ಪ ಕೇಂದ್ರದಲ್ಲಿ 242, ಕೆ.ಪಿಎಸ್ ಮಳಗಿ ಶಾಲೆಯಲ್ಲಿ 204 ವಿದ್ಯಾರ್ಥಿಗಳು ಬುಧವಾರ ಪರೀಕ್ಷೆ ಬರೆಯಲು ತಯಾರಿಯಲ್ಲಿದ್ದಾರೆ.ಐದು ಪರೀಕ್ಷಾ ಕೇಂದ್ರದ ರೂಂ ಮೇಲ್ವಿಚಾರಕರ ಮುಖ್ಯಸ್ಥರನ್ನು, ವೀಕ್ಷಕರನ್ನು, ರೂಟ್ ಆಫೀಸರ ಸೇರಿ ಒಟ್ಟು 109 ಜನ ಪರೀಕ್ಷಾ ಸಿಬ್ಬಂದಿ ನೇಮಿಸಲಾಗಿದೆ. ಎಲ್ಲ ಪರೀಕ್ಷಾ ಕೇಂದ್ರದ ತರಗತಿಗಳಲ್ಲಿ ಸಿಸಿ ಕ್ಯಾಮರಾ ಅಳವಡಿಸಲಾಗಿದೆ. ಪರೀಕ್ಷೆಯ ಮುನ್ನ ಈ ಮೊದಲು ಮಕ್ಕಳಿಗೆ ಉತ್ತರ ಪತ್ರಿಕೆ ನೀಡಲಾಗುತ್ತಿತ್ತು. ನಂತರ ಪ್ರಶ್ನೆ ಪತ್ರಿಕೆ ನೀಡಲಾಗುತ್ತಿದ್ದೇವು. ಆದರೆ ಈ ಬಾರಿ ವಿಶೇಶವಾಗಿ ಕಾಲ್ ಗಂಟೆ ಮುಚ್ಚೆ ಪ್ರಶ್ನೆ ಪತ್ರಿಕೆ ನೀಡಲಾಗುತ್ತಿದೆ. ನಂತರ ಉತ್ತರ ಪತ್ರಿಕೆ ನೀಡಲಾಗುತ್ತಿದೆ. ಇದರಿಂದ ಮಕ್ಕಳು ಪೂರ್ಣ ಪ್ರಮಾಣದಲ್ಲಿ ಪ್ರಶ್ನೆಗಳನ್ನು ಓದಿ ಉತ್ತರ ಬರೆಯಲು ಸಹಕಾರಿ ಆಗುತ್ತದೆ. ನೀರಿನ ವ್ಯವಸ್ಥೆ ಮಾಡಲಾಗಿದೆ. ಬಿಸಿಲಿನ ತಾಪ ಹೆಚ್ಚು ಇರುವುದರಿಂದ ವಿದ್ಯಾರ್ಥಿಗಳಿಗಾಗಿ ಒಆರ್‌ಎಸ್ ಇಡಲಾಗಿದೆ. ಪೊಲೀಸ, ಆರೋಗ್ಯ ಇಲಾಖೆ ಸೇರಿದಂತೆ ಎಲ್ಲಾ ಇಲಾಖೆಯ ಅಧಿಕಾರಗಳ ಸಹಕಾರ ತೆಗೆದುಕೊಳ್ಳಲಾಗಿದೆ. ಇಲಾಖೆಯ ನಿರ್ದೇಶನದಂತೆ ಎಲ್ಲ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಬಿಇಓ ಸುಮಾ.ಜಿ ತಿಳಿಸಿದರು.



## ಉದ್ಯೋಗ ಖಾತರಿ: ಜನಜಾಗೃತಿ ಪಾದಯಾತ್ರೆ

**ಬನವಾಸಿ:** ಬಿಜೆಪಿ ಬನವಾಸಿ ಮಂಡಲ ಹಾಗೂ ವಿವಿಧ ಮೋರ್ಚಾಗಳ ಸಹಯೋಗದಲ್ಲಿ ಬನವಾಸಿ ಗ್ರಾಪಂಯಿಂದ ಪಟ್ಟಣದ ಪಂಪ ವೃತ್ತದವರೆಗೆ ವಿಕಸಿತ ಭಾರತ ಉದ್ಯೋಗ ಖಾತರಿ ಕುರಿತು ಜನ ಜಾಗೃತಿ ಪಾದಯಾತ್ರೆ ಮಂಗಳವಾರ ಹಮ್ಮಿಕೊಳ್ಳಲಾಯಿತು.

ಈ ಕುರಿತು ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶಿವಾಜಿ ನರಸಾನಿ ಮಾತನಾಡಿ, ಮಹಾತ್ಮಾಗಾಂಧಿ ನರೇಗಾ ಯೋಜನೆಯಲ್ಲಿದ್ದ ಲೋಪದೋಷಗಳನ್ನು ಸರಿಪಡಿಸಿ ಪಾರದರ್ಶಕತೆ ಕಾಪಾಡಿಕೊಳ್ಳುವ ಉದ್ದೇಶದಿಂದ ವಿಕಸಿತ ಭಾರತ ಉದ್ಯೋಗ ಖಾತರಿ ಮತ್ತು ಜೀವನೋಪಾಯ ಮಿಷನ್ ಎಂದು ಬದಲಾಯಿಸಲಾಗಿದೆ. ನರೇಗಾ ಯೋಜನೆಯಿಂದ ಮಹಾತ್ಮಾ ಗಾಂಧೀಜಿ ಹೆಸರನ್ನು ತೆಗೆದು ಹಾಕಲಾಗಿದ್ದರೂ ಅವರಿಗೆ ಪ್ರೇರಣೆಯಾಗಿದ್ದ ರಾಮನ ಹೆಸರನ್ನು ಇಡಲಾಗಿದೆ. ಹೆಸರು ಬದಲಾವಣೆಯ ಹಿಂದೆ ವಿಕಸಿತ ಭಾರತ ನಿರ್ಮಾಣದ ಉದ್ದೇಶವಿದೆಯೇ ಹೊರತು ದುರುದ್ದೇಶಗಳಿಲ್ಲ. ವಿಬಿ ಜಿ ರಾಮ್ ಜಿ ಯೋಜನೆ ಜಾರಿಗೂ ಮುನ್ನ ಎಲ್ಲ ರಾಜ್ಯಗಳ ಜೊತೆ ಕೇಂದ್ರ ಸರ್ಕಾರ ಸಭೆ, ಸಮಾಲೋಚನೆ ಹಾಗೂ ಕಾರ್ಯಾಗಾರಗಳನ್ನು ನಡೆಸಿದೆ. ಆದರೂ ವಿರೋಧ ಪಕ್ಷಗಳು ನಿರಾಧಾರ ಆರೋಪ ಮಾಡುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.



ರೈತ ಮೋರ್ಚಾ ಜಿಲ್ಲಾಧ್ಯಕ್ಷ ಅನಂತಮೂರ್ತಿ ಹೆಗಡೆ ಮಾತನಾಡಿ, 2011ರ ಬಜೆಟ್‌ನಲ್ಲಿ ಯುಪಿಎ ಸರ್ಕಾರ ನರೇಗಾ ಯೋಜನೆಗೆ 40,000 ಕೋಟಿ ಮೀಸಲಿಟ್ಟಿತ್ತು. ಬಿಜೆಪಿ ನೇತೃತ್ವದ ನರೇಂದ್ರ ಮೋದಿ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಅನುದಾನವನ್ನು 2.86 ಲಕ್ಷ ಕೋಟಿಗೆ ಹೆಚ್ಚಿಸಲಾಯಿತು. ರಾಜ್ಯಗಳಿಗೆ ಸರಾಸರಿ 17000 ಕೋಟಿ ಅನುದಾನ ಹೆಚ್ಚಾಯಿತು. 2025ರಲ್ಲಿ ಯೋಜನೆಗೆ85,334 ಕೋಟಿವೆಚ್ಚಮಾಡಲಾಗಿದ್ದು 5.78 ಕೋಟಿ ಮಂದಿಗೆ ಉದ್ಯೋಗ ನೀಡಲಾಗಿದೆ. 14 ದಿನಗಳ ಒಳಗೆ ಫಲಾನುಭವಿಗಳ ಖಾತೆಗೆ ನೇರವಾಗಿ ಕೂಲಿ ಜಮೆಯಾಗಲಿದೆ. ಕಾಂಗ್ರೆಸ್ ಸರ್ಕಾರಕ್ಕೆ ಬಡವರ ಬಗ್ಗೆ ಕಾಳಜಿಯಿಲ್ಲವಾಗಿದೆ. ಇತ್ತೀಚೆಗೆ ಮುಂಡಗೋಡದಲ್ಲಿ ರೈತನೊಬ್ಬ ಆತ್ಮಹತ್ಯೆ ಮಾಡಿಕೊಂಡಿದ್ದರು. ಅಲ್ಲಿಗೆ ಯಾವೊಬ್ಬ ಅಧಿಕಾರಿಗಳು ಭೇಟಿ ನೀಡಲಿಲ್ಲ.ಯಾವುದೇ ಆಶೆ ಆಮಿಷಗಳಿಗೆ ಒಳಗಾಗದೇ ಬಿಜೆಪಿ ಪಕ್ಷದ ಸಂಘಟನೆಯಲ್ಲಿ ತೊಡಗಿಕೊಂಡು ಮುಂಬರುವ ಎಲ್ಲಾ ಚುನಾವಣೆಯಲ್ಲಿ ಬಿಜೆಪಿ ಪಕ್ಷವನ್ನು ಅಧಿಕಾರಕ್ಕೆ ತರಲು ಶ್ರಮಿಸಬೇಕು ಎಂದರು.

ಯುವ ಮೋರ್ಚಾ ಜಿಲ್ಲಾಧ್ಯಕ್ಷ ಪ್ರೇಮ್ ಕುಮಾರ್ ನಾಯ್ಕ್ ಮಾತನಾಡಿದರು. ಬನವಾಸಿ ಮಂಡಲದ ಅಧ್ಯಕ್ಷ ರಮೇಶ ನಾಯ್ಕ್, ಪ್ರಧಾನ ಕಾರ್ಯದರ್ಶಿ ಶಂಕರ ಗೌಡ, ಮಹಿಳಾ ಮೋರ್ಚಾ ಪ್ರಧಾನ ಕಾರ್ಯದರ್ಶಿ ಸತ್ಯಾವತಿ, ಮಾತನಾಡಿದರು. ಜನ ಜಾಗೃತಿ ಪಾದಯಾತ್ರೆಯಲ್ಲಿ ಹಿರಿಯರಾದ ವಿ.ಎಮ್. ಹೆಗಡೆ, ಗಣೇಶ ಸಣ್ಣಲಿಂಗಣ್ಣನವರ, ಮುತ್ತಣ್ಣ ಚೌದರಿ, ಅರವಿಂದ ಶೆಟ್ಟಿ, ಸಾಯಿರಾಂ ಕಾನಳ್ಳಿ ಹಾಗೂ ಪಕ್ಷದ ಪ್ರಮುಖರು, ವಿವಿಧ ಮೋರ್ಚಾದ ಅಧ್ಯಕ್ಷರು, ಪದಾಧಿಕಾರಿಗಳು, ಪಕ್ಷದ ಕಾರ್ಯಕರ್ತರು ಮತ್ತಿತರರಿದ್ದರು.

## ತಾಲೂಕು ಘಟಕಕ್ಕೆ ಅಧ್ಯಕ್ಷ ಭೇಟಿ

**ಅಂಕೋಲಾ:** ಭಾರತೀಯ ವೈದ್ಯಕೀಯ ಸಂಘದ ಕರ್ನಾಟಕ ರಾಜ್ಯ ಘಟಕದ ಅಧ್ಯಕ್ಷ ಡಾ.ವೀರಭದ್ರಯ್ಯ ಅವರು ಸಂಘದ ಅಂಕೋಲಾ ತಾಲೂಕು ಘಟಕಕ್ಕೆ ಭೇಟಿ ನೀಡಿ ವೈದ್ಯರೊಂದಿಗೆ ಸಮಾಲೋಚನೆ ನಡೆಸಿದರು.

ತಾಲೂಕಿನ ವೈದ್ಯರ ಕಾರ್ಯ ಚಟುವಟಿಕೆ ಮತ್ತು ಸಮಸ್ಯೆಗಳ ಕುರಿತಂತೆ ಚರ್ಚಿಸಿದ ಅವರು ಭಾರತೀಯ ವೈದ್ಯಕೀಯ ಸಂಘದಿಂದ ದೊರಕುವ ಸೌಲಭ್ಯಗಳ ಕುರಿತಂತೆ ಮಾಹಿತಿ ನೀಡಿದರು.

ಭಾರತೀಯ ವೈದ್ಯಕೀಯ ಸಂಘದ ರಾಜ್ಯ ಉಪಾಧ್ಯಕ್ಷ ಡಾ.ಅಣ್ಣಯ್ಯ ಕುಲಾಲ್,ವಿಭಾಗೀಯ ಸಂಯೋಜಕಡಾ.ಜಿ.ಕೆ.ಭಟ್, ಸಹಾಯಕ ಕಾರ್ಯದರ್ಶಿ ಡಾ.ಮಹೇಶ ಸ್ಥಳೀಯ ಘಟಕದ ಡಾ.ಶ್ರೀದೇವಿ ತಿನೇಕರ್, ಡಾ.ಅನುಪಮಾ ನಾಯಕ, ಡಾ.ಮಾನ್ವಿ, ಡಾ.ಎನ್. ಎಂ.ಹೆಗಡೆ, ಡಾ.ದತ್ತಾತ್ರೇಯ, ಡಾ.ಅಕ್ಷರ ದುಗ್ಗಾನಿ ಉಪಸ್ಥಿತರಿದ್ದರು.ಭಾರತೀಯ ವೈದ್ಯಕೀಯ ಸಂಘದ ಅಂಕೋಲಾ ಘಟಕದ ಅಧ್ಯಕ್ಷೆ ಡಾ.ಜಯಶ್ರೀ ನಾಯಕ ಸ್ವಾಗತಿಸಿದರು. ಕಾರ್ಯದರ್ಶಿ ಡಾ.ಅರ್ಚನಾ ನಾಯಕ ಕಾರ್ಯಕ್ರಮ ನಿರ್ವಹಿಸಿದರು.



## ಕಲಿಕಾ ಸಾಮರ್ಥ್ಯ ಹೆಚ್ಚಿಸಲು ಪಠ್ಯೇತರ ಸೌಲಭ್ಯ ಸಹಕಾರಿ

**ಶಿರಸಿ:** ಪಠ್ಯೇತರ ಸೌಲಭ್ಯಗಳೂ ಸಹ ಮಕ್ಕಳ ಕಲಿಕಾ ಸಾಮರ್ಥ್ಯವನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ನಾಗರಾಜ ನಾಯ್ಕ ಹೇಳಿದರು.

ಇಂದು ಸ್ಕೊಡ್‌ವೆಸ್ ಮಹಿಳಾ ಸೌಹಾರ್ದ ಸಹಕಾರಿ ಹಾಗೂ ರೋಟರಿ ಕ್ಲಬ್ ಶಿರಸಿ ರವರ ಸಹಯೋಗದಲ್ಲಿ ಗಣೇಶನಗರ ಸರ್ಕಾರಿ ಪ್ರಾಥಮಿಕ ಶಾಲೆಗೆ ನೀಡಲಾದ ಡೆಸ್ಕ್ ಮತ್ತು ಬೆಂಚ್ ಪೀಠೋಪಕರಣಗಳನ್ನು ಹಸ್ತಾಂತರಿಸಿ ಮಾತನಾಡಿದರು.

ಗಣೇಶ ನಗರ ಸರ್ಕಾರಿ ಪ್ರಾಥಮಿಕ ಶಾಲೆಯ ಹೆಚ್ಚಿನ ಮಕ್ಕಳು ಬಡ ಕುಟುಂಬಗಳ ಮಕ್ಕಳೇ ಆಗಿರುವುದರಿಂದ ಅವರಿಗೆ ಅಗತ್ಯವಿರುವ ಪೀಠೋಪಕರಣಗಳನ್ನು ಒದಗಿಸಿರುವುದು ಮಕ್ಕಳಲ್ಲಿ ಶಿಸ್ತು ಹಾಗೂ ಕಲಿಕಾ ಸಾಮರ್ಥ್ಯವನ್ನು ಹೆಚ್ಚಿಸಲು ಸಹಾಯವಾಗುತ್ತದೆ ಎಂದರು.

ಶಿರಸಿ ರೋಟರಿ ಕ್ಲಬ್‌ನ ಅಧ್ಯಕ್ಷ ಶ್ರೀನಿವಾಸ ನಾಯ್ಕ ಮಾತನಾಡಿ, ರೋಟರಿ ಕ್ಲಬ್ ಶಿಕ್ಷಣ ಕ್ಷೇತ್ರದಲ್ಲಿ ಮಾದರಿ ಕಾರ್ಯಕ್ರಮಗಳನ್ನು ರೂಪಿಸಿ ಶಾಲಾ ವಿದ್ಯಾರ್ಥಿಗಳಿಗೆ ಸಹಾಯಕಾರಿ, ಮುಂದಿನ ದಿನಗಳಲ್ಲಿ ರೋಟರಿ ಕ್ಲಬ್‌ನಿಂದ ಹೆಚ್ಚಿನ ಕಾರ್ಯಕ್ರಮಗಳನ್ನು ಶಿರಸಿ ನಗರದ ಶಾಲೆಗಳಲ್ಲಿ ಆಯೋಜಿಸಲಾಗುವುದು ಎಂದರು.



ಸ್ಕೊಡ್‌ವೆಸ್ ಮಹಿಳಾ ಸೌಹಾರ್ದ ಸಹಕಾರಿಯ ಅಧ್ಯಕ್ಷೆಸರಸ್ವತಿಎನ್.ರವಿಯವರು ಮಾತನಾಡಿದರು. ಸ್ಕೊಡ್‌ವೆಸ್ ಸಂಸ್ಥೆಯ ಆಡಳಿತ ಮಂಡಳಿ ನಿರ್ದೇಶಕ ರೋ.ಪ್ರೊ.ಕೆ.ಎನ್. ಹೊಸಮನಿ, ಸ್ಕೊಡ್‌ವೆಸ್ ಮಹಿಳಾ ಸೌಹಾರ್ದ ಸಹಕಾರಿಯ ನಿರ್ದೇಶಕಿ ಮಾಲಿನಿ ಎಸ್. ಸಂದರ್ಭೋಚಿತವಾಗಿ ಮಾತನಾಡಿದರು. ರೋಟರಿ ಖಜಾಂಚಿ ರೋ. ವಿನಾಯಕ್ ಶೇಟ್, ಎಕ್ಸಿಕ್ಯೂಟಿವ್ ಸೆಕ್ರೇಟರಿ ರೋ. ಸತೀಶ ಭಟ್, ಆರ್.ಎ. ಖಾಜಿ, ಗಣೇಶ ಕೂರ್ಸೆ, ಶ್ರೀಪತಿ ಹೆಗಡೆ, ಡಾ.ದಿನೇಶ ಹೆಗಡೆ, ರಾಮಚಂದ್ರ ಪ್ರಭು, ಶಾಲಾ ಮುಖ್ಯೋಪಾಧ್ಯಾಯ ತೇಲು ಬೋರ್‌ಕರ್, ಸ್ಕೊಡ್‌ವೆಸ್ ಮಹಿಳಾ ಸೌಹಾರ್ದ ಸಹಕಾರಿಯ ಶಾಖಾ ವ್ಯವಸ್ಥಾಪಕಿ ವಂದನಾ ಜೇಕಬ್ ಹಾಗೂ ಶಾಲಾ ಎಸ್‌ಡಿಎಮ್‌ಸಿ ಸದಸ್ಯರು ಉಪಸ್ಥಿತರಿದ್ದರು. ಶಾಲಾ ಶಿಕ್ಷಕ ಮೋಹನ ನಾಯ್ಕ ಸ್ವಾಗತಿಸಿದರು. ಶಿಕ್ಷಕಿ ಹೆಗಡೆ ವಂದಿಸಿದರು. ಶಿಕ್ಷಕಿ ಜಯಶ್ರೀ ಭಟ್ ಕಾರ್ಯಕ್ರಮ ನಿರ್ವಹಿಸಿದರು.

## ಕಿರುಸುದ್ದಿ


### ಪಿಯು ಪರೀಕ್ಷೆ: ಶೇ.92.64ರಷ್ಟು ವಿದ್ಯಾರ್ಥಿಗಳು ಹಾಜರು

**ಹಾವೇರಿ:** ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ ಹಿನ್ನೆಲೆ ಕೊನೆಯ ದಿನವಾದ ಮಂಗಳವಾರ ಜಿಲ್ಲೆಯ ಎರಡು ಪರೀಕ್ಷಾ ಕೇಂದ್ರಗಳಲ್ಲಿ ಮಾಹಿತಿ ತಂತ್ರಜ್ಞಾನ ಹಾಗೂ ಆಟೋ ಮೊಬೈಲ್ ವಿಷಯದ ಪರೀಕ್ಷೆ ಶಾಂತಿಯುತವಾಗಿ ನಡೆದವು. ಮಾಹಿತಿ ತಂತ್ರಜ್ಞಾನ ವಿಷಯದ ಪರೀಕ್ಷೆಗೆ ಒಟ್ಟು 38 ವಿದ್ಯಾರ್ಥಿಗಳು ನೊಂದಾಯಿಸಿಕೊಂಡಿದ್ದು, ಈ ಪೈಕಿ 35 ವಿದ್ಯಾರ್ಥಿಗಳು ಹಾಜರಾಗಿದ್ದರು. ಮೂರು ವಿದ್ಯಾರ್ಥಿಗಳು ಗೈರು ಹಾಜರಾಗಿದ್ದರು. ಅದೇ ರೀತಿ ಆಟೋಮೊಬೈಲ್ ವಿಷಯದ ಪರೀಕ್ಷೆಗೆ 30 ವಿದ್ಯಾರ್ಥಿಗಳು ನೊಂದಾಯಿಸಿಕೊಂಡರೆ, 28 ವಿದ್ಯಾರ್ಥಿಗಳು ಹಾಜರಾಗಿದ್ದು, ಇಬ್ಬರು ವಿದ್ಯಾರ್ಥಿಗಳು ಗೈರಾಗಿದ್ದರು. ಒಟ್ಟಾರೆ ಮಾಹಿತಿ ತಂತ್ರಜ್ಞಾನ ಹಾಗೂ ಆಟೋಮೊಬೈಲ್ ವಿಷಯದ ಪರೀಕ್ಷೆಗಳಿಗೆ ಶೇ.92.64ರಷ್ಟು ವಿದ್ಯಾರ್ಥಿಗಳು ಹಾಜರಾಗಿದ್ದರು ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕರ ಕಚೇರಿ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ವಿವಿಧೆಡೆ ಗುಡುಗು ಸಹಿತ ಭಾರೀ ಮಳೆ

**ಹಾವೇರಿ:** ಜಿಲ್ಲೆಯ ವಿವಿಧೆಡೆ ಮಂಗಳವಾರ ಸಂಜೆ ಗುಡುಗು, ಗಾಳಿ ಸಹಿತ ಕೆಲಕಾಲ ಮಳೆಯಾಗಿದ್ದರಿಂದ ವಾತಾವರಣ ತಂಪಾಯಿತು. ದಿನವಿಡಿ ಬೆಳಗ್ಗೆಯಿಂದ ಸಂಜೆವರೆಗೆ ಬಿಸಿಲಿನ ವಾತಾವರಣದಿಂದ ಕೂಡಿತ್ತು. ಸಂಜೆ ಏಕಾಏಕಿ ಜೋರಾದ ಗಾಳಿ ಸಹಿತ ಕೆಲಕಾಲ ಮಳೆಯಾಯಿತು. ಬಿಸಿಲಿನ ಬೇಗೆಯಿಂದ ಕಂಗೆಟ್ಟಿದ್ದ ಜನರಿಗೆ ತಂಪು ವಾತಾವರಣದ ಅನುಭವ ನೀಡಿತು. ಹಾವೇರಿ ನಗರದಲ್ಲಿ ಸಂಜೆ ಏಕಾಏಕಿ ಗಾಳಿ ಸಹಿತ ಕೆಲಕಾಲ ಮಳೆಯಾಗಿದ್ದರಿಂದ ಯುಗಾದಿ ಹಬ್ಬದ ಹಿನ್ನೆಲೆಯಲ್ಲಿ ಸಿದ್ಧತೆಗೆ ಮಾರುಕಟ್ಟೆಗೆ ಆಗಮಿಸಿದ್ದ ಜನರು ಸಮಸ್ಯೆ ಎದುರಿಸುವಂತಾಯಿತು. ಉಳಿದಂತೆ ಜಿಲ್ಲೆಯ ರಾಣೆಬೆನ್ನೂರ, ಬ್ಯಾಡಗಿ, ಶಿಗ್ಗಾವಿ, ಸವಣೂರು, ಹಾನಗಲ್ಲ, ಹಿರೇಕೆರೂರು ಹಾಗೂ ರಟ್ಟೀಹಳ್ಳಿ ತಾಲೂಕಿನ ಭಾಗದಲ್ಲಿ ಮಳೆಯಾಗಿದೆ. ಇನ್ನೂ ಗ್ರಾಮೀಣ ಪ್ರದೇಶದಲ್ಲಿ ಮೆಕ್ಕೆಜೋಳ ಸೇರಿದಂತೆ ವಿವಿಧ ಬೆಳೆಗಳ ಒಕ್ಕಲುತನದಲ್ಲಿ ತೊಡಗಿದ್ದ ರೈತರು ಬೇಸಿಗೆಯ ಅಕಾಲಿಕ ಮಳೆಯಿಂದ ಸಮಸ್ಯೆ ಎದುರಿಸುವಂತಾಯಿತು.

### ಇಂದು ವಿಶ್ವರಾಧ್ಯರ ರಥೋತ್ಸವ



**ಶಿಗ್ಗಾವಿ:** ತಾಲೂಕಿನ ಹಿರೇಬೆಂಡಿಗೇರಿ ಗ್ರಾಮದ ಹಿರೇಮಠದಲ್ಲಿ ಯುಗಾದಿ ಹಬ್ಬದ ಪ್ರಯುಕ್ತ ಪ್ರತಿ ವರ್ಷದಂತೆ ಈ ವರ್ಷವೂ ಸಹಿತ ಸರ್ವಧರ್ಮ ಸಾಮೂಹಿಕ ವಿವಾಹ ಹಾಗೂ ವಿಶ್ವರಾಧ್ಯರ ರಥೋತ್ಸವ ಮಾ. 19ರಂದು ಜರುಗಲಿದೆ. ಅಂದು ಮಧ್ಯಾಹ್ನ 12 ಘಂಟೆಗೆ ಸರ್ವಧರ್ಮ ಸಾಮೂಹಿಕ ವಿವಾಹಗಳು ಜರುಗಲಿದ್ದು, ಸಂಜೆ 4 ಘಂಟೆಗೆ ವಿಶ್ವರಾಧ್ಯರ ರಥೋತ್ಸವ ಜರುಗಲಿದೆ. ಗಂಜಿಗಟ್ಟಿ ಶಿವಲಿಂಗೇಶ್ವರ ಶಿವಾಚಾರ್ಯರು, ಬಂಕಾಪುರ ಅರಳೆಲೆ ಹಿರೇಮಠದ ರೇವಣಸಿದ್ದೇಶ್ವರ ಶಿವಾಚಾರ್ಯರು, ಹಿರೇಮಣಿಕಟ್ಟಿ ವಿಶ್ವರಾಧ್ಯ ಶಿವಾಚಾರ್ಯರು, ಶಿಗ್ಗಾವಿ ವಿರಕ್ತಮಠದ ಸಂಗನಬಸವ ಶ್ರೀಗಳು, ಹಿರೇಬೆಂಡಿಗೇರಿ ಹಿರೇಮಠದ ನೂತನ ವಿಶ್ವೇಶ್ವರ ಶ್ರೀಗಳು ಸೇರಿದಂತೆ ರಾಜಕೀಯ ಮುಖಂಡರು, ಸಮಾಜ ಸೇವಕರು, ಭಾಗವಹಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಬೆಂಕಿ ಅವಘಡ: ಅಪಾರ ಹಾನಿ



**ಬ್ಯಾಡಗಿ:** ಪಟ್ಟಣದ ಛತ್ರ ಗ್ರಾಮಕ್ಕೆ ಹೋಗುವ ದಾರಿಯಲ್ಲಿರುವ ಚನ್ನಬಸಪ್ಪ ಕಲವೀರಪ್ಪ ಎಲಿ.ಲಲಿತಾ ಕೋಂ ಅಣ್ಣಪ್ಪ ಎಲಿ. ಶಿವಾಜೆಪ್ಪ ಪುಟ್ಟಪ್ಪ ನೆಗಳೂರ. ಬರಮಜ್ಜ ಪುಟ್ಟಪ್ಪ ನೆಗಳೂರ ಅವರಿಗೆ ಸೇರಿದ ಜಾನುವಾರುಗಳ ಮೇವಿನ ಬಣವೆಗೆ ಬೆಂಕಿ ಬಿದು, ಸುಮಾರು 2 ಲಕ್ಷ ಬೆಲೆಯ ಜೋಳದ ಹುಲ್ಲು, ಬಿಳಿಜೋಳದ ಮೇವು, ಸೋಯಾ ಹೊಟ್ಟು, ಅಲಸಂದಿ ಹೊಟ್ಟು, ಪುಚ್ಚ ಹಾಗೂ ಬೆಂಡು ಬೆಂಕಿಗೆ ಆಹುತಿಯಾಗಿದೆ. ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಆಗಮಿಸಿ ಬೆಂಕಿ ನಂದಿಸಿದ್ದಾರೆ.



ಹಾನಗಲ್ಲ: ಹಾನಗಲ್ಲ ತಾಲೂಕಿನ 74 ಪ್ರೌಢಶಾಲೆಗಳ 3601 ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯಲು ಸಿದ್ಧವಾಗಿದ್ದು, ತಾಲೂಕಿನ 14 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ವಿ.ಚೆನ್ನಿಕಟ್ಟಿ ತಿಳಿಸಿದರು. ಈ ವೇಳೆ ಪರೀಕ್ಷಾ ವಿಭಾಗದ ಬಿ.ಉಮೇಶ ಮತ್ತಿತರರಿದ್ದರು.

## ಸರ್ಕಾರಿ ಹುದ್ದೆ ಶೀಘ್ರ ಭರ್ತಿಗೆ ಆಗ್ರಹ

**ಶಿರಹಟ್ಟಿ:** ವಿವಿಧ ಇಲಾಖೆಗಳಲ್ಲಿ ಖಾಲಿ ಉಳಿದ 2 ಲಕ್ಷಕ್ಕೂ ಅಧಿಕ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿ, ನೇಮಕಾತಿ ಮಾಡಿಕೊಳ್ಳಬೇಕು ಎಂದು ಎಬಿವಿಪಿ ನಗರ ಕಾರ್ಯದರ್ಶಿ ಪರಶುರಾಮ ಕಳ್ಳಿಮನಿ ಆಗ್ರಹಿಸಿದರು. ಪಟ್ಟಣದಲ್ಲಿ ಭಾರತೀಯ ವಿದ್ಯಾರ್ಥಿ ಪರಿಷತ್ ವತಿಯಿಂದ ರಾಜ್ಯ ಸರ್ಕಾರದ ಸುಮಾರು 43 ಇಲಾಖೆಗಳಲ್ಲಿ ಖಾಲಿ ಇರುವ ಸರ್ಕಾರಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವಂತೆ ಆಗ್ರಹಿಸಿ ತಹಶೀಲ್ದಾರ್ ಕೆ. ರಾಘವೇಂದ್ರ ರಾವ್ ಅವರ ಮೂಲಕ ಸಿಎಂ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿ ಮಾತನಾಡಿದರು. ಸುಮಾರು 43 ಇಲಾಖೆಯಡಿ 2 ಲಕ್ಷ 81 ಸಾವಿರದ 881 ಹುದ್ದೆಗಳು ಖಾಲಿ ಇದ್ದರೂ ಸಹ ನೇಮಕಾತಿ ಆದೇಶ ಹೊರಡಿಸುತ್ತಿಲ್ಲ, ಮೂರು ವರ್ಷದಿಂದ ಯಾವುದೇ ಒಂದು ಹುದ್ದೆಗೆ ಅರ್ಜಿ ಆಹ್ವಾನಿಸಿಲ್ಲ, ಶೀಘ್ರವಾಗಿ ನಿರುದ್ಯೋಗ ಯುವಕರಿಗೆ ಉದ್ಯೋಗ ನೀಡುವ ಮೂಲಕ ನಿರುದ್ಯೋಗ ಹೋಗಲಾಡಿಸಬೇಕು ಎಂದು ಆಗ್ರಹಿಸಿದರು. ಸ್ಪರ್ಧಾತ್ಮಕ ಪರೀಕ್ಷೆಗಳ ಸಿದ್ಧತೆಗಾಗಿ ವರ್ಷಾನುಗಟ್ಟಲೆ ಊರು ಬಿಟ್ಟು, ಪಟ್ಟಣ ಸೇರಿ, ಸರಿಯಾಗಿ ಊಟ, ನಿದ್ದೆ ಇಲ್ಲದೇ ಕಷ್ಟಪಟ್ಟು ಓದುತ್ತಾರೆ. ಆದರೆ ಸರ್ಕಾರ ಸರಿಯಾದ ಸಮಯಕ್ಕೆ ಖಾಲಿ ಇರುವ ಹುದ್ದೆಗಳಿಗೆ ಅರ್ಜಿ ಆಹ್ವಾನ ಮಾಡದೇ ಪ್ರತಿಭಾವಂತ ವಿದ್ಯಾರ್ಥಿಗಳ ಭವಿಷ್ಯದ ಜೊತೆ ಆಟವಾಡುತ್ತಿದೆ ಎಂದು ಆರೋಪಿಸಿದರು. ರಾಜ್ಯ ಹಾಸ್ಟೆಲ್ ಪ್ರಮುಖರಾದ ಅಭಿಷೇಕ್ ಉಮಚಗಿ, ರಾಜ್ಯ ವಿದ್ಯಾರ್ಥಿನಿ ಸಹ ಪ್ರಮುಖ ರಾಧಾ ಸಂಜನಾ ಪಾಟೀಲ್, ಸೋಮಶೇಖರ ದೇಸಾಯಿಪಟ್ಟಿ, ಶಶಾಂಕ ಪಲ್ಲೇದ, ಪಾರ್ವತಿ ಬಳಿಗಾರ, ಅನು ಅಣ್ಣಿಗೇರಿ, ಸವಿತಾ ಹಾಗೂ ಇನ್ನಿತರ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ಹಾವೇರಿ : ಇಲ್ಲಿನ ಜಿಲ್ಲಾ ಗುರುಭವನದಲ್ಲಿ ಆಯೋಜಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ, ಕಾರ್ಯಾಗಾರ ಹಾಗೂ ಮಹಿಳಾ ಸಾಧಕರಿಗೆ ಸನ್ಮಾನ ಕಾರ್ಯಕ್ರಮವನ್ನು ಡಿಸಿ ವಿಜಯಮಹಾಂತೇಶ ದಾನಮ್ಮನವರ ಉದ್ಘಾಟಿಸಿದರು.

ದಿನಕ್ಕೊಂದೇ ಸಿಲಿಂಡರ್ | ಹಾಸ್ಟೆಲ್‌ಗಳಲ್ಲಿ ಎಸ್ಸೆಸ್ಸೆಲ್ಸಿ ಮಕ್ಕಳು ಮಾತ್ರ

## ಹಾಸ್ಟೆಲ್‌ಗೆ ತಾಗಿದ ಸಿಲಿಂಡರ್ ಬಿಸಿ

ಕಿರಣ ಮಾಸಣಗಿ

ದಿಗಂತ ವಿಶೇಷ

**ಹಾವೇರಿ:** ಮಧ್ಯಪ್ರಾಚ್ಯ ದೇಶಗಳಲ್ಲಿನ ಯುದ್ಧ ನಡೆಯುತ್ತಿದ್ದು ತಲ್ಲಣ ಮೂಡಿಸಿದ್ದು, ಇದರ ಬೆನ್ನಲ್ಲೇ ಕಚ್ಚಾ ಪೆಟ್ರೋಲ್ ಸಾಗಾಣಿಕೆ ಏರಿಳಿತದ ಕಾರಣದಿಂದ ದೇಶಾದ್ಯಂತ ಅಡುಗೆ ಅನಿಲದ ಕೊರತೆ ಎದುರಾಗಿದೆ. ಇದು ದೇಶಾದ್ಯಂತ ಎಲ್‌ಪಿಜಿ ಕೊರತೆಗೆ ಕಾರಣವಾಗಿದ್ದು, ಇದೀಗ ಹಾಸ್ಟೆಲ್‌ಗಳಿಗೂ ಇದರ ಬಿಸಿ ತಲುಪಿದೆ. ಇದರಿಂದಾಗಿ ದಿನನಿತ್ಯ ನೂರಾರು ಮಕ್ಕಳಿಗೆ ಅನ್ನ ನೀಡುವ ಹಾಸ್ಟೆಲ್‌ಗಳಿಗೆ ದಿನಕ್ಕೊಂದೇ ಸಿಲಿಂಡರ್ ಹಂಚಿಕೆ ಎಂದು ನಿಶ್ಚಯಿಸಿದ್ದು, ಹೆಚ್ಚುವರಿ ಮಕ್ಕಳಿರುವ ಹಾಸ್ಟೆಲ್‌ಗಳು ಕೊಂಚ ಏರು-ಪೇರು ಅನುಭವಿಸುವಂತಾಗಿದೆ.

**ವಾಣಿಜ್ಯ ಸಿಲಿಂಡರ್ ಕೊರತೆ :** ಈಗಾಗಲೇ ವಾಣಿಜ್ಯ ಸಿಲಿಂಡರ್ ಕೊರತೆಯಿಂದ ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳು ತೊಂದರೆಗೆ ಸಿಲುಕಿ ಪರ್ಯಾಯ ದಾರಿ ಕಂಡುಕೊಂಡಿವೆ. ಕೆಲವೆಡೆ ದಿನನಿತ್ಯದ ವಿಶೇಷ ಖಾದ್ಯಕ್ಕೆ ತಿಲಾಂಜಲಿ ಇಟ್ಟು ಮೆನುವನ್ನೇ ಕಡಿತಗೊಳಿಸಿ ದೈನಂದಿನ ಸಿಲಿಂಡರ್ ಉಳಿತಾಯದ ಜತೆಗೆ 'ಬೆಂಕಿ ರಹಿತ' ಅಡುಗೆಗೆ ಮುಂದಾಗಿವೆ. ಮತ್ತೆ ಕೆಲವೆಡೆ ವ್ಯಾಪಾರ ಕುಂಠಿತದ ಭೀತಿಯಿಂದ ಕಟ್ಟಿಗೆ ಒಲೆಯನ್ನು ಹೊತ್ತಿಸಿದರೆ, ಮತ್ತೆ ಕೆಲವರು ಇಂಡಕ್ಷನ್ ಒಲೆಗೆ ಮಾರುಹೋಗಿ ದಿನ ನಿತ್ಯದ ವ್ಯಾಪಾರ ಮುಂದುವರೆಸಲು ಶ್ರಮ ಹಾಕುತ್ತಿದ್ದಾರೆ. ಒಟ್ಟಾರೆ ವಾಣಿಜ್ಯ ಸಿಲಿಂಡರ್ ಕೊರತೆಯ ನಡುವೆಯೂ ಸಹ ವಾಣಿಜ್ಯ ಸಿಲಿಂಡರ್ ಸಂಗ್ರಹ ಮಾಡಿಟ್ಟುಕೊಳ್ಳುವ ಸ್ಥಿತಿ ಇಲ್ಲ. ಹೀಗಾಗಿ ಸಣ್ಣ ಮತ್ತು ಮಧ್ಯಮ ತರಗತಿಯ ಹೋಟೆಲ್‌ಗಳ ಮೇಲೆ ಅಷ್ಟೇನೂ ಪರಿಣಾಮ ತಟ್ಟದಿದ್ದರೂ, ಬೃಹತ್ ಹೋಟೇಲ್‌ಗಳಿಗೆ ಕೊಂಚ ಎಫೆಕ್ಟ್ ತಟ್ಟಿದೆ.



ಸರ್ಕಾರಿ ಮತ್ತು ವಸತಿ ಶಾಲೆಗಳಿಗೆ ಇದೀಗ ಸಿಲಿಂಡರ್ ಕೊರತೆ ಬಿಸಿ ತಟ್ಟುತ್ತಿದೆ. ದಿನನಿತ್ಯ ನೂರಾರು ಮಕ್ಕಳಿಗೆ ಅನ್ನ ನೀಡುತ್ತಿದ್ದ ಹಾಸ್ಟೆಲ್‌ಗಳಿಗೆ ಸರ್ಕಾರ ಅಥವಾ ಸಂಬಂಧಿಸಿದ ಇಲಾಖೆಗಳು ದಿನಕ್ಕೊಂದು ಸಿಲಿಂಡರ್ ಎಂಬ ಫರ್ಮಾನು ಹೊರಡಿಸಿವೆ. ಕಡಿಮೆ ಮಕ್ಕಳ ಸಂಖ್ಯೆ ಇದ್ದಲ್ಲಿ ಎಂದರೆ 50-110 ಮಕ್ಕಳಿರುವ ಹಾಸ್ಟೆಲ್‌ಗಳಿಗೆ ಇದು ಸಾಕಾಗಬಹುದು. ಆದರೆ ಹೆಚ್ಚು ಮಕ್ಕಳಿರುವ ಕಡೆಗಳಲ್ಲಿ ಇದು ಸವಾಲಾಗಿದೆ. ಹೀಗಾಗಿ ಹಾಸ್ಟೆಲ್‌ಗಳು ಈ ಹಿಂದೆ ಹೊಂದಿದ್ದ ಕಟ್ಟಿಗೆ ಒಲೆಯ ವ್ಯವಸ್ಥೆಯನ್ನು ಮರು ಆರಂಭಿಸುವ ಚಿಂತನೆಯಲ್ಲಿವೆ. ಆದರೆ ಅದೃಷ್ಟಾವಶಾತ್ ಎಸ್ಸೆಸ್ಸೆಲ್ಸಿ ಹೊರತು ಪಡಿಸಿ ಉಳಿದೆಲ್ಲ ಮಕ್ಕಳ ಪರೀಕ್ಷೆಗಳು ಮುಗಿದಿರುವುದು ಹಾಸ್ಟೆಲ್ ನಿರ್ವಾಹಕರ ಭಾರವನ್ನು ಕಡಿಮೆ ಮಾಡಿವೆ.

ಇದೀಗ ಮಾ.18ರಿಂದ ಎಸ್ಸೆಸ್ಸೆಲ್ಸಿ ಮಕ್ಕಳ ಪರೀಕ್ಷೆ ಆರಂಭಗೊಳ್ಳುತ್ತಿದ್ದು, ಏಪ್ರೀಲ್ 2ರವರೆಗೂ ಈ ಪರೀಕ್ಷೆಗಳು ನಡೆಯಲಿವೆ. ಹೀಗಾಗಿ ಈ ಪ್ರಸ್ತುತ ವ್ಯವಸ್ಥೆ ಈ ಮಕ್ಕಳ ಮೇಲೆ ಪರಿಣಾಮ ಬೀರದು ಎಂದು ಅಂದಾಜಿಸಲಾಗಿದೆ. ಆದಾಗ್ಯೂ ನೂರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಇರುವ ಹಾಸ್ಟೆಲ್‌ಗಳಲ್ಲಿ ಮಿತವ್ಯಯದ ಅಡುಗೆಗೆ ಆದ್ಯತೆ ನೀಡಲಾಗುತ್ತಿದೆ. ಕೆಲ ವೇಳೆ ಮೆನುವನ್ನೂ ಸಹ ಹೊಂದಾಣಿಕೆ ಮಾಡಿ ಮಕ್ಕಳಿಗೆ ತೊಂದರೆಯಾಗದ ರೀತಿಯಲ್ಲಿ ಹಾಸ್ಟೆಲ್ ನಿರ್ವಹಣೆಗೆ ನಿರ್ವಾಹಕರು, ವಾರ್ಡನ್‌ಗಳು ಮುಂದಾಗಿದ್ದಾರೆ. ಒಟ್ಟಾರೆ ಒಂದು ಸಿಲಿಂಡರ್‌ನಲ್ಲಿ ಕನಿಷ್ಟ 300 ಜನರಿಗೆ ಕನಿಷ್ಠ ಅಡುಗೆ ಸಿದ್ಧಪಡಿಸಬಹುದಾಗಿದೆ. ಆದರೆ ಇಲ್ಲಿ ಮೆನು ಮತ್ತು ರೊಟ್ಟಿ, ಚಪಾತಿಗೂ ಕಡಿವಾಣ ಹಾಕಬೇಕಿದೆ. ಈ ನಿಟ್ಟಿನಲ್ಲಿ ಸಿಲಿಂಡರ್ ಹೊಂದಾಣಿಕೆ ಅನಿವಾರ್ಯವಾಗಿದ್ದು ಹಾಸ್ಟೆಲ್ ನಿವಾಸಿ ಮಕ್ಕಳೂ ಸಹ ಇದಕ್ಕೆ ಹೊಂದಿಕೊಳ್ಳುತ್ತಿರುವುದು ಆಶಾವಾದ ಮೂಡಿಸಿದೆ.

> ಈಗಾಗಲೇ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳನ್ನು ಬಿಟ್ಟು ಉಳಿದೆಲ್ಲಾ ತರಗತಿಯ ಪರೀಕ್ಷೆಗಳು ಮುಗಿದು ಆ ಮಕ್ಕಳು ಮನೆಗೆ ಹೋಗಿದ್ದಾರೆ. ಕೇವಲ ಎಸ್ಸೆಸ್ಸೆಲ್ಸಿ ಮಕ್ಕಳು ಮಾತ್ರ ವಸತಿ ಶಾಲೆಯಲ್ಲಿ ಇರುವ ಹಿನ್ನೆಲೆಯಲ್ಲಿ ಮಕ್ಕಳಿಗೆ ಮೆನು ಪ್ರಕಾರ ಆಹಾರ ನೀಡಲಾಗುತ್ತಿದೆ. ಪ್ರಸ್ತುತ ದಿನಕ್ಕೊಂದು ಸಿಲಿಂಡರ್ ನೀಡುತ್ತಿದ್ದು ಇದರಿಂದ ದೈನಂದಿನ ಆಹಾರ ನೀಡಲು ಯಾವುದೇ ತೊಂದರೆ ಇಲ್ಲ.
>
> ■ **ಎಂ.ಎಂ. ಬಣಕಾರ, ಪ್ರಾಂಶುಪಾಲರು, ಮೋರಾರ್ಜಿ ವಸತಿ ಶಾಲೆ, ನೆಗಳೂರು**

## ಸೌಹಾರ್ದಯುತ ರಂಜಾನ್ ಆಚರಿಸಿ

**ಬ್ಯಾಡಗಿ:** ಪಟ್ಟಣದಲ್ಲಿ ಯುಗಾದಿ ಹಾಗೂ ರಂಜಾನ್ ಹಬ್ಬವನ್ನು ಸೌಹಾರ್ದಯುತವಾಗಿ ಆಚರಿಸಲು ಎಲ್ಲ ಸಮುದಾಯಗಳು ಸಹಕಾರ ನೀಡಬೇಕೆಂದು ಬ್ಯಾಡಗಿ ಪೊಲೀಸ್ ಠಾಣೆ ವೃತ್ತ ನಿರೀಕ್ಷಕ ಮಂಜುನಾಥ್ ಚಿಕ್ಕಣ್ಣನವರ್ ಮನವಿ ಮಾಡಿದರು.

ಪಟ್ಟಣದ ಪೊಲೀಸ್ ಠಾಣೆ ಆವರಣದಲ್ಲಿ ರಂಜಾನ್ ಹಬ್ಬದ ಅಂಗವಾಗಿ ಆಯೋಜಿಸಿದ್ದ ಶಾಂತಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು. ಎಲ್ಲ ಧರ್ಮಗಳಲ್ಲಿ ಹಬ್ಬಗಳನ್ನು ಆಚರಿಸಲಾಗುತ್ತದೆ ತಾಲೂಕಿನಲ್ಲಿ ಹಿಂದಿನಿಂದಲೂ ಎಲ್ಲ ಧರ್ಮಗಳ ಹಬ್ಬಗಳು ಶಾಂತಿ ಸೌಹಾರ್ದತೆಯುತವಾಗಿ ನಡೆದುಕೊಂಡು ಬಂದಿದ್ದು ಈ ವರ್ಷವೂ ಸಂಪ್ರದಾಯ ಮುಂದುವರಿಯಲ್ಲಿ ಎಂದು ಹೇಳಿದರು. ವೃತ್ತ ಉಪನಿರೀಕ್ಷಕಿ ಭಾರತಿ ಕುರಿ ಮಾತನಾಡಿ, ಕೋಮು ಸೌಹಾರ್ದತೆಗೆ ತಾಲೂಕು ರಾಜ್ಯದಲ್ಲಿ ಮಾದರಿಯಾಗಿದೆ ಆದ್ದರಿಂದ ಹಿಂದೂ ಮತ್ತು ಮುಸ್ಲಿಂ ಬಾಂಧವರು ವದಂತಿಗಳಿಗೆ ಕಿವಿಕೊಡದೆ ಯಾವುದೇ ಸಂದರ್ಭದಲ್ಲಿಯೂ ಕಾನೂನನ್ನು ಕೈಗೆತ್ತಿಕೊಳ್ಳದೆ ಸಮಾಜದ ಶಾಂತಿಯ ಕದಡುವ ಕಿಡಿಗೇಡಿಗಳಿಗೆ ಬಗ್ಗೆ ಎಚ್ಚರದಿಂದ ಇದ್ದು, ಅಂಥವರ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಬೇಕು ಮತ್ತು ಹಬ್ಬದ ದಿನ ವಾಹನಗಳ ಸೈಲೆನ್ಸರ ಸೌಂಡ್ ಮಾಡುತ್ತ ಸಾರ್ವಜನಿಕ ತೊಂದರೆಯಾಗುವ ರೀತಿಯಲ್ಲಿ ವೀಲಿಂಗ್ ಹಾಗೂ ತ್ರಿಬಲ್ ರೈಡಿಂಗ್ ಹತ್ತಿಕೊಂಡು ವಾಹನ ಚಲಾಯಿಸುತ್ತಾರೆ ಅಂತವರ ವಿರುದ್ಧ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಸೂಚಿಸಿದರು.

ಸಮಾಜದ ಮುಖಂಡ ಹಾಗೂ ಮಾಜಿ ಅಂಜುಮನ್ ಎ ಇಸ್ಲಾಂ ಕಮಿಟಿ ಅಧ್ಯಕ್ಷ ಡಾ.ಎ.ಎಂ.ಸೌಧಾಗರ ಮಾತನಾಡಿ, ಹಬ್ಬದ ಸಂದರ್ಭದಲ್ಲಿ ನಾವು ಜಾಮಿಯಾ ಮಜೀದನಿಂದ ಈದ್ಗಾ ಮೈದಾನ ವರಿಗೆ ಶಾಂತಿಯುತವಾಗಿ ಮೆರವಣಿಗೆ ಹೋಗುತ್ತೇವೆ ಆ ಸಮಯದಲ್ಲಿ ವಾಹನಗಳ ಟ್ರಾಫಿಕ್ ಸಮಸ್ಯೆ ಆಗದಂತೆ ನೋಡಿಕೊಳ್ಳುವಂತೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಎಸ್ಐ ಪೂಜಾರ್. ಮುಸ್ಲಿಂ ಸಮಾಜದ ಮುಖಂಡರಾದ ಖಾದರ್ ಸಾಬ್ ದೊಡ್ಮನಿ ಮಜೀದ್ ಮುಲ್ಲಾ ಮಂಜೂರ್ ಅಲಿ ಹಕಿಮ್, ಮೆಹಬೂಬ್ ಆಗಸನಹಳ್ಳಿ, ಮುಕ್ತಿಯರ್ ಮುಲ್ಲಾ ಹಾಗೂ ಎಲ್ಲ ಗ್ರಾಮದ ಮುಸ್ಲಿಂ ಸಮುದಾಯದ ಅಧ್ಯಕ್ಷರು ಉಪಸ್ಥಿತರಿದ್ದರು.



## ಮಹಿಳೆ ಅಬಲೆ ಅಲ್ಲ ಸಬಲೆ: ಓಲೇಕಾರ

**ಹಾವೇರಿ:** ಮನೆಯ, ಕುಟುಂಬದ ಜವಾಬ್ದಾರಿ ಹೊತ್ತಿರುವ ಮಹಿಳೆ, ಶಿಕ್ಷಣ ಪಡೆದು ಜಗತ್ತಿನ ಎಲ್ಲ ಕ್ಷೇತ್ರದಲ್ಲೂ ಮುಂಚೂಣಿಯಲ್ಲಿದ್ದಾಳೆ. ಹಾಗಾಗಿ ಮಹಿಳೆಯರು ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಿ ಸಮಾಜದಲ್ಲಿ ಉತ್ತಮ ಮಾದರಿ ವ್ಯಕ್ತಿಗಳನ್ನಾಗಿಸಬೇಕು ಎಂದು ಮಾಜಿ ಶಾಸಕ ನೆಹರು ಓಲೇಕಾರ ಕರೆ ನೀಡಿದರು.

ಮಾನವ ಬಂಧುತ್ವ ವೇದಿಕೆ ಹಾಗೂ ಮಹಿಳಾ ಬಂಧುತ್ವ ವೇದಿಕೆ ಜಿಲ್ಲಾ ಘಟಕದಿಂದ ಸೋಮವಾರ ನಗರದ ವಿದ್ಯಾನಗರ 2ನೇ ಕ್ರಾಸ್‌ನಲ್ಲಿ ಹಮ್ಮಿಕೊಂಡಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ಮಹಿಳಾ ಸಾಧಕರಿಗೆ ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿ, ಅಡುಗೆ ಮನೆಗೆ ಸೀಮಿತವಾಗಿದ್ದ ಹೆಣ್ಣುಮಗಳು ಇಂದು ಜಗತ್ತಿನ ಪ್ರತಿ ವಲಯದಲ್ಲೂ ತನ್ನದೇ ಆದ ಛಾಪು ಮೂಡಿಸುತ್ತಿದ್ದಾಳೆ. ತಾಯಂದಿರು ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಬೇಕು. ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಮಹಿಳಾ ಶಕ್ತಿ ದೊಡ್ಡ ಶಕ್ತಿಯಾಗಿ ಹೊರಹೊಮ್ಮುತ್ತಿದೆ. ಮಹಿಳೆಯರು ಸರ್ಕಾರದ ಸೌಲಭ್ಯಗಳನ್ನು ಸದ್ಬಳಕೆ ಮಾಡಿಕೊಂಡು ಜೀವನ ನಡೆಸಬೇಕು ಎಂದು ಹೇಳಿದರು.

ಜಿಲ್ಲಾ ಕಾಂಗ್ರೆಸ್‌ನ ಅಧ್ಯಕ್ಷ ಸಂಜೀವ ಕುಮಾರ ನೀರಲಗಿ ಮಾತನಾಡಿ, ಬುದ್ಧ, ಬಸವ, ಅಂಬೇಡ್ಕರರು ಸ್ತ್ರೀ ಸಮಾನತೆಗಾಗಿ ಹೋರಾಡಿದರು. ಮಾಜಿ ಪ್ರಧಾನಿ ಇಂದಿರಾ ಗಾಂಧಿ ಮಹಿಳೆ ಅಬಲೆಯಲ್ಲ ಸಬಲೆ ಎಂದು ತೋರಿಸಿಕೊಟ್ಟ ಉಕ್ಕಿನ ಮಹಿಳೆಯಾಗಿದ್ದಾರೆ. ಅಂತಹ ಅನೇಕ ಮಹಿಳಾ ಸಾಧಕರ ಜೀವನಾದರ್ಶಗಳು, ತತ್ವಸಿದ್ಧಾಂತಗಳು ಇಂದಿನ ಮಹಿಳೆಯರಿಗೂ ಆದರ್ಶವಾಗಬೇಕು. ಜತೆಗೆ ಇಂತಹವರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಮಹಿಳಾ ಸಾಧಕರನ್ನು ಸನ್ಮಾನಿಸಿ ಗೌರವಿಸಲಾಯಿತು. ಮಾನವ ಬಂಧುತ್ವ ವೇದಿಕೆ ಜಿಲ್ಲಾಧ್ಯಕ್ಷೆ ಸುಮಂಗಲಾ ಇಪ್ಪಿಕೊಪ್ಪ ಅಧ್ಯಕ್ಷತೆ ವಹಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಈ ವೇಳೆ ವಾಲ್ಮೀಕಿ ಸಮಾಜದ ಜಿಲ್ಲಾಧ್ಯಕ್ಷ ರಮೇಶ ಆನವಟ್ಟಿ, ಕೆಡಿಪಿ ಸದಸ್ಯ ಮಲ್ಲಿಕಾರ್ಜುನ ಬೂದಗಟ್ಟಿ, ವೇದಿಕೆಯ ತಾಲೂಕಾ ಸಂಚಾಲಕಿ ಗೀತಾ ಪ್ರಕಾಶ, ನಾಗರಾಜ ಬಡೆಮ್ಮನವರ, ಪರಿಮಳಾ ಜೈನ್, ತನುಶ್ರೀ ಯು.ಡಿ, ಮಂಜುಳಾ ಕರಬಸಮ್ಮನವರ, ಪ್ರೇಮಾ ಜೋಗುಳ, ಬಾಬುಸಾಬ ಮೋಮಿನಗಾರ, ಶಾಂತಕ್ಕ ಶಿರೂರ, ರವಿ ಪುತ್ರನ್, ಸೌಭಾಗ್ಯ ಹಿರೇಮಠ, ಮಂಜುಳಾ ಅಕ್ಕಿ, ಇಂದಿರಾ ಬಾಗಲಕೋಟೆ, ಎಸ್.ಎಲ್. ಮಠದ, ನಾಗರಾಜ ಮೇದಾರ, ಅಕ್ಷತಾ ಶೆಟ್ಟರ್ ಮತ್ತಿತರರು ಉಪಸ್ಥಿತರಿದ್ದರು.



## ಎಲ್ಲ ಕ್ಷೇತ್ರದಲ್ಲಿ ಮಹಿಳೆ ಮುಂಚೂಣಿ: ತಳವಾರ

**ಶಿಗ್ಗಾವಿ:** ಮಹಿಳೆಯರಿಗೆ ಸಂವಿಧಾನದಲ್ಲಿ ಸಮಾನತೆ ಹಕ್ಕು ಹಾಗೂ ವಿಶೇಷ ಕಾನೂನುಗಳನ್ನು ನೀಡಲಾಗಿದ್ದು, ಅವುಗಳ ಸದುಪಯೋಗ ಪಡೆದುಕೊಳ್ಳಬೇಕು ಎಂದು ಶಿಗ್ಗಾವಿ ಹಿರಿಯ ನ್ಯಾಯಾಲಯದ ನ್ಯಾಯಾಧೀಶರಾದ ಸುನೀಲ್ ತಳವಾರ ಹೇಳಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಸರ್ಕಾರಿ ಕಚೇರಿಗಳ ಸಂಕೀರ್ಣದಲ್ಲಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ತಾಲೂಕಾ ಕಾನೂನು ಸೇವಾ ಸಮಿತಿ ಹಾಗೂ ವಕೀಲರ ಸಂಘದ ಸಹಯೋಗದಲ್ಲಿ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಮಾತನಾಡಿದರು. ಮಹಿಳೆಯರು ಕುಟುಂಬದ ಜವಾಬ್ದಾರಿಯೊಂದಿಗೆ ಎಲ್ಲ ಕ್ಷೇತ್ರಗಳಲ್ಲಿ ಯಶಸ್ವಿಯಾಗಿ ಸಾಧನೆ ಮಾಡುತ್ತಿದ್ದಾರೆ. ಸಮಾನವಾಗಿ ಪ್ರತಿ ಇಲಾಖೆಗಳಲ್ಲಿ ಪ್ರತಿಭೆ ತೋರಿದ್ದಾರೆ, ಸಮಾಜದಲ್ಲಿ ಮಹಿಳೆಯರಿಗೆ ಪೂಜ್ಯನೀಯ ಸ್ಥಾನ ಇದೆ. ಮಹಿಳೆಯರಿಗೆ ಸಮಾನತೆ ಹಾಗೂ ಶಿಕ್ಷಣ ನೀಡುವುದರಿಂದ ಎಲ್ಲ ಕ್ಷೇತ್ರಗಳಲ್ಲಿ ಉತ್ತಮ ಸಾಧನೆ ಮಾಡಲು ಸಾಧ್ಯವಾಗಿದೆ ಎಂದರು.



ಶಿಗ್ಗಾವಿ ನ್ಯಾಯಾಲಯದ ನ್ಯಾಯಾಧೀಶರಾದ ಅಶ್ವಿನಿ ಚಂದ್ರಕಾಂತ್ ಮಾತನಾಡಿ, ಮಹಿಳಾ ಸಾಕ್ಷರತೆ ಪ್ರಮಾಣ ಹೆಚ್ಚಳದಿಂದಾಗಿ ತನ್ನ ಕಾರ್ಯ ಸಾಧನೆಗಳನ್ನು ಪ್ರತಿ ಕ್ಷೇತ್ರದಲ್ಲಿ ಚಾಚುವಂತಾಗಿದೆ. ಹೀಗಾಗಿ ಶಿಕ್ಷಣದ ಶಕ್ತಿ ಸಾಮರ್ಥ್ಯವನ್ನು ತುಂಬಿದೆ. ಆದರಿಂದ ಮಹಿಳೆಯರು ಸದೃಢರಾಗಿ ಸ್ವಾವಲಂಬನೆ ಜೀವನ ನಡೆಸಲು ಮುಂದಾಗಿದ್ದಾರೆ ಎಂದರು.ಸಿಡಿಪಿಓ ಗಣೇಶ ಲಿಂಗನಗೌಡ್ರ, ಮೇಲ್ವಿಚಾರಕಿ ಶೈಲಜಾ ತಳವಾರ, ವಕೀಲರಾದ ಚೆನ್ನಮ್ಮ ಬಡ್ಡಿ ಪ್ಯಾನಲ್ ವಕೀಲರಾದ ವಸಂತಾ ಬಾಗೂರ ಮಾತನಾಡಿದರು. ಅಂಗನವಾಡಿಯ ನಿವೃತ್ತ ಕಾರ್ಯಕರ್ತೆ ಹಾಗೂ ಸಹಾಯಕಿಯರಿಗೆ ಸನ್ಮಾನಿಸಲಾಯಿತು. ಲಲಿತಾ ಪಾಟೀಲ, ದೀಪಾ ಭಜಂತ್ರಿ, ಜಯಶ್ರೀ ಕಾವಲಕೊಪ್ಪ, ಲಕ್ಷ್ಮೀ ಬಾಯಿ ಬಗಾಡೆ ಸೇರಿದಂತೆ ಸಿಡಿಪಿಓ ಇಲಾಖೆಯ ಹಾಗೂ ವಕೀಲರ ಸಂಘದ ಸದಸ್ಯರು ಇದ್ದರು.

## ಯೋಜನೆ ಸದುಪಯೋಗ ಪಡೆದುಕೊಳ್ಳಿ: ಶಿವರಾಯ ಪ್ರಭು

**ರಾಣೇಬೆನ್ನೂರ:** ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಬಡವರಿಗೆ, ನಿರ್ಗತಿಕರಿಗೆ ಹಾಗೂ ದೀನ ದಲಿತರು ಸೇರಿದಂತೆ ಎಲ್ಲ ವರ್ಗದವರಿಗೂ ಅನುಕೂಲವಾಗುವ ನಿಟ್ಟಿನಲ್ಲಿ ಹಲವಾರು ಯೋಜನೆಗಳನ್ನು ಜಾರಿಗೆ ತಂದಿದೆ ಅದರ ಸದುಪಯೋಗ ಪಡೆದುಕೊಂಡು ಸರ್ವರೂ ಆರ್ಥಿಕ ಸ್ವಾವಲಂಬಿಗಳಾಗಿ ನೆಮ್ಮದಿಯ ಬದುಕು ರೂಪಿಸಿಕೊಳ್ಳಿರಿ ಎಂದು ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜಿಲ್ಲಾ ನಿರ್ದೇಶಕ ಶಿವರಾಯಪ್ರಭು ಹೇಳಿದರು.

ತಾಲೂಕಿನ ಯಕ್ಲಾಸಪುರ ಗ್ರಾಮದಲ್ಲಿ ಫಲಾನುಭವಿ ನೇತ್ರಾ ಹಿರಿಯಕ್ಕನವರ ಅವರಿಗೆ ವಾತ್ಸಲ್ಯ ಮನೆ ಹಸ್ತಾಂತರಿಸಿ ಮಾತನಾಡಿದ ಅವರು ,ಯಾರೂ ಇಲ್ಲದ ನಿರ್ಗತಿಕರಿಗೆ ಯೋಜನೆಯಿಂದ ವಾತ್ಸಲ್ಯ ಮನೆ ನಿರ್ಮಿಸಿ ಕೊಡುತ್ತಿರುವುದು ಹೆಮ್ಮೆಯ ಸಂಗತಿ ಜೊತೆಗೆ ಮಾಶಾಸನ ಪಡೆಯುವ ಫಲಾನುಭವಿಗೆ ವಾತ್ಸಲ್ಯ ಮಿಕ್ಸ್, ಕಿಟ್ ಸೇರಿದಂತೆ ಹಲವಾರು ದಿನಬಳಕೆಯ ಸಾಮಗ್ರಿಗಳನ್ನು ನೀಡಲಾಗುತ್ತಿದೆ. ಇದರಸದುಪಯೋಗಪಡೆದುಕೊಳ್ಳಿ ಎಂದು ಹೇಳಿದರು.ಜ್ಞಾನ ವಿಕಾಸ ಯೋಜನಾಧಿಕಾರಿ ಸುಧಾ, ತಾಲೂಕು ಯೋಜನಾಧಿಕಾರಿ ಮಂಜುನಾಥ ಎಂ,ಪಿ, ಮಾತನಾಡಿ, ವೀರೇಂದ್ರ ಹೆಗ್ಗಡೆಯವರು ದೂರದೃಷ್ಟಿಯಿಂದ ಸರ್ವರಿಗೂ ಒಳಿತಾಗಲಿ ಎಂಬ ಸದುದ್ದೇಶದಿಂದ ಇಂತಹ ಹಲವಾರು ಕಾರ್ಯಕ್ರಮಗಳನ್ನು ರೂಪಿಸಿದ್ದಾರೆ ಸರ್ಕಾರ ಮಾಡದಂತಹ ಹಕವಾರು ಕೆಲಸ ಕಾರ್ಯಗಳನ್ನು ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮಾಡುತ್ತಿದೆ ಎಂದು ಯೋಜನೆಗಳ ಮಾಹಿತಿ ನೀಡಿದರು.



ಗ್ರಾಪಂ ಸದಸ್ಯೆ ಅಶ್ವಿನಿ, ಜ್ಞಾನ ವಿಕಾಸ ಸಮನ್ವಯಾಧಿಕಾರಿ ವೆಂಕಟ ಮಾಲಾ, ವಲಯ ಮೇಲ್ವಿಚಾರಕ ಮಂಜುನಾಥ ಸೇವಾಪ್ರತಿನಿಧಿ ರೇಣುಕಾ, ಅಕ್ಷತಾ ಸೇರಿದಂತೆ ಒಕ್ಕೂಟದ ಪದಾಧಿಕಾರಿಗಳು, ಗ್ರಾಮದ ಗಣ್ಯರು ಸಂಘದ ಸದಸ್ಯರು ಮತ್ತಿತರರು ಇದ್ದರು.

## 1.77 ಕೋಟಿ ರೂ. ಉಳಿತಾಯ ಬಜೆಟ್ ಮಂಡಿಸಿದ ಜಿಲ್ಲಾಧಿಕಾರಿ

**ರಾಣೇಬೆನ್ನೂರ:** ಮಹಿಳೆಯರಿಗಾಗಿ ಪಿಂಕ್ ಪಾರ್ಕ್ ನಿರ್ಮಾಣಕ್ಕೆ ಹಾಗೂ ಉದ್ಯಾನಗಳ ಅಭಿವೃದ್ಧಿಗೆ 4.61 ಕೋಟಿ ರೂ., ನಗರದ ಪ್ರಮುಖ ವೃತ್ತಗಳ ಅಭಿವೃದ್ಧಿಗೆ 50 ಲಕ್ಷ ರೂ., ರಸ್ತೆ ಹಾಗೂ ಒಳಚರಂಡಿ ಕಾಮಗಾರಿಗೆ 7.14 ಕೋಟಿ ರೂ., ಸುರಕ್ಷತೆ ದೃಷ್ಟಿಯಿಂದ ಅಲ್ಲಲ್ಲಿ ಸಿಸಿ ಕ್ಯಾಮರಾ ಅಳವಡಿಸಲು 1 ಕೋಟಿ ರೂ. ಹಾಗೂ ನಗರಸಭೆ ಮಳಿಗೆ ನಿರ್ಮಿಸಲು 3 ಕೋಟಿ ರೂ. ಮೀಸಲು. ಇರಿಸಲಾಗಿದೆ ಎಂದು ಜಿಲ್ಲಾಧಿಕಾರಿ ವಿಜಯಮಹಾಂತೇಶ ದಾನಮ್ಮನವರ ಹೇಳಿದರು.

ಇಲ್ಲಿಯ ನಗರಸಭೆ ಸರ್.ಎಂ. ವಿಶ್ವೇಶ್ವರಯ್ಯ ಸಭಾಭವನದಲ್ಲಿ ಮಂಗಳವಾರ ಆಡಳಿತಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಮಂಡಿಸಿದ 2026-27ನೇ ಸಾಲಿನ ಬಜೆಟನ ಪ್ರಮುಖ ಅಂಶಗಳನ್ನು ಓದಿದರು.

ನಗರದ ಪ್ರತಿ ವಾರ್ಡ್‌ಗಳಲ್ಲಿ ರಸ್ತೆ ಹಾಗೂ ಚರಂಡಿ ನಿರ್ಮಾಣಕ್ಕಾಗಿ ಒಟ್ಟು 7.54 ಕೋಟಿ ರೂ. ಮೀಸಲಿಡಲಾಗಿದೆ. 24★7 ಕುಡಿಯುವ ನೀರು ಸರಬರಾಜು ನಿರ್ವಹಣೆಗಾಗಿ 5.75 ಕೋಟಿ ರೂ. ಹಾಗೂ ಬೀದಿ ದೀಪಗಳ ನಿರ್ವಹಣೆಗೆ 2.55 ಕೋಟಿ ರೂ. ಮೀಸಲಿರಿಸಲಾಗಿದೆ. ಸಾರ್ವಜನಿಕ ಸ್ಥಳಗಳಲ್ಲಿ ಹೊಸದಾಗಿ ಶೌಚಗೃಹ ನಿರ್ಮಾಣ ಮತ್ತು ಹಳೆಯ ಶೌಚಗೃಹ ನಿರ್ವಹಣೆ ಸೇರಿ ಒಟ್ಟು 40 ಲಕ್ಷ ರೂ. ಮೀಸಲಿಡಲಾಗಿದೆ. ಪ್ರಯಾಣಿಕರ ಅನುಕೂಲಕ್ಕಾಗಿ ಅಲ್ಲಲ್ಲಿ ಬಸ್ ನಿಲ್ದಾಣ ನಿರ್ಮಿಸಲು 20 ಲಕ್ಷ ರೂ., ಮುನ್ಸಿಪಲ್ ಹೈಸ್ಕೂಲ್ ಅಭಿವೃದ್ಧಿ ಮತ್ತು ಪೀಠೋಪಕರಣಗಳ ಖರೀದಿಗಾಗಿ 70 ಲಕ್ಷ ರೂ. ಹಾಗೂ ಶಾಲೆಗೆ ಅತಿಥಿ ಶಿಕ್ಷಕರಿಗೆ ಗೌರವಧನ ನೀಡಲು 9 ಲಕ್ಷ ರೂ. ಮೀಸಲಿಡಲಾಗಿದೆ ಎಂದರು.



ರಾಜ ಕಾಲುವೆ ಅಭಿವೃದ್ಧಿಗಾಗಿ 50 ಲಕ್ಷ ರೂ., ನಗರದ ವಿವಿಧೆಡೆ ಅಂಗನವಾಡಿ ಕಟ್ಟಡ ನಿರ್ಮಾಣಕ್ಕೆ 20 ಲಕ್ಷ ರೂ., ಘನತ್ಯಾಜ್ಯ ನಿರ್ವಹಣೆ, ಕಾರ್ಮಿಕರ ವೇತನ, ಬೀದಿ ನಾಯಿಗಳ ಸಂತಾನ ಹರಣ ಚಿಕಿತ್ಸೆ ಸೇರಿ ಒಟ್ಟು 9.62 ಕೋಟಿ ರೂ. ಮೀಸಲಿಡಲಾಗಿದೆ. ಇಂದಿರಾ ಕ್ಯಾಂಟಿನ್ ಯೋಜನೆಯಡಿ ಸಾರ್ವಜನಿಕರಿಗೆ ನಿತ್ಯ ಆಹಾರ ನೀಡಲು 20 ಲಕ್ಷ ರೂ., ನಗರಸಭೆ ದಾಖಲೆಗಳ ಡಿಜಿಟಲೀಕರಣಕ್ಕಾಗಿ 40 ಲಕ್ಷ ರೂ. ಮೀಸಲಿಡಲಾಗಿದೆ ಎಂದು ಜಿಲ್ಲಾಧಿಕಾರಿ ಡಾ. ವಿಜಯಮಹಾಂತೇಶ ದಾನಮ್ಮನವರ ಬಜೆಟ್ ಕುರಿತು ವಿವರಿಸಿದರು.

ನಗರಸಭೆ ಆಯುಕ್ತ ಫಕ್ಕೀರಪ್ಪ ಇಂಗಳಗಿ, ಲೆಕ್ಕಾಧಿಕಾರಿ ಬಿ. ವಾಣಿಶ್ರೀ, ಎಇಇ ಎಸ್.ಬಿ. ಮರಿಗೌಡ್ರ, ಸಹಾಯಕ ಲೆಕ್ಕಾಧಿಕಾರಿ ಅರುಣ ಕುಮಾರ ಇದ್ದರು.

> **ಉಳಿತಾಯ ಬಜೆಟ್‌ನ ವಿವರ**
>
> ಬಜೆಟ್ ಪ್ರಾರಂಭಿಕ ಶಿಲ್ಕು 5.47 ಕೋಟಿ ರೂ., ನಿರೀತ ರಾಜಸ್ವ ಜಮೆಗಳು 42.86 ಕೋಟಿ ರೂ., ನಿರೀತ ಬಂಡವಾಳ ಜಮೆಗಳು 13.91 ಕೋಟಿ ರೂ., ನಿರೀತ ಅಸಮಾನ್ಯ ಜಮೆಗಳು 19.02 ಕೋಟಿ ರೂ. ಹಾಗೂ ಪ್ರಾರಂಭಿಕ ಶುಲ್ಕ ಸೇರಿ ಒಟ್ಟು 81.27 ಕೋಟಿ ರೂ. ಜಮೆಗಳಾಗಿದೆ. ನಿರೀತ ರಾಜಸ್ವ ಪಾವತಿಗಳು 31.77 ಕೋಟಿ ರೂ., ನಿರೀತ ಬಂಡವಾಳ ಪಾವತಿಗಳು 27.58 ಕೋಟಿ ರೂ., ನಿರೀತ ಅಸಮಾನ್ಯ ಪಾವತಿಗಳು 20.14 ಕೋಟಿ ರೂ., ಒಟ್ಟು ನಿರೀತ ಪಾವತಿಗಳು 79.51 ಕೋಟಿ ರೂ. ಇದ್ದು, ಒಟ್ಟು 1.77 ಕೋಟಿ ರೂ. ಉಳಿತಾಯವಾಗಲಿದೆ ಎಂದು ಜಿಲ್ಲಾಧಿಕಾರಿ ಡಾ. ವಿಜಯಮಹಾಂತೇಶ ದಾನಮ್ಮನವರ ತಿಳಿಸಿದರು.

## ಸಮಾಜದ ಅಭಿವೃದ್ಧಿಗೆ ಮಹಿಳೆ ಕೊಡುಗೆ ಅಪಾರ

**ಹಾವೇರಿ:** ಮಹಿಳೆ ತಾಯಿಯಾಗಿ, ಸಹೋದರಿಯಾಗಿ, ಗೆಳತಿಯಾಗಿ, ಮಡದಿಯಾಗಿ ಮನೆ ಬೆಳಗುವ ಜ್ಯೋತಿಯಾಗಿ, ಕಷ್ಟ ಕಾರ್ಪಣ್ಯ ಎದುರಿಸುವ ಯೋಗಿನಿಯಾಗಿ, ಸೂರ್ತಿಯ ಸೆಲೆಯಾಗಿ ಮನೆಯ ಹೊರಗೂ, ಒಳಗೂ ಗಂಡಿಗೆ ಹೆಗಲಾಗಿ ಪ್ರತಿ ಹೆಜ್ಜೆಯಲ್ಲೂ ಇರುತ್ತಾಳೆ. ಕುಟುಂಬ, ಸಮಾಜ, ದೇಶಕ್ಕೆ ಮಹಿಳೆಯ ಕೊಡುಗೆ ಅಪಾರವಾಗಿದೆ ಎಂದು ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಕೊಂಡಾಡಿದರು.

ರಾಜ್ಯ ಸರ್ಕಾರಿ ಮಹಿಳಾ ನೌಕರರ ಸಂಘ ಜಿಲ್ಲಾ ಘಟಕದಿಂದ ಮಂಗಳವಾರ ನಗರದ ಜಿಲ್ಲಾ ಗುರುಭವನದಲ್ಲಿ ಆಯೋಜಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ, ಕಾರ್ಯಾಗಾರ ಹಾಗೂ ಮಹಿಳಾ ಸಾಧಕರಿಗೆ ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಮಹಿಳೆ ಗೃಹಿಣಿಯಾಗಿ ಅಡುಗೆ ಮನೆಯಲ್ಲಿ ಕೆಲಸ ಮಾಡುತ್ತಾಳೆಂದರೆ ಅದು ಆಕೆಯ ಯೋಗ್ಯತೆ, ದುರ್ಬಲತೆಯಲ್ಲ, ಗೌರವ, ಪ್ರೀತಿ, ಮಮತೆಯ ಸಹಾನುಭೂತಿಯಿಂದ ಕೆಲಸ ಮಾಡುತ್ತಾರೆ. ಎಲ್ಲವನ್ನೂ ನಿಭಾಯಿಸುವ ಸೃಷ್ಟಿಯ ಕೊಡುಗೆ, ಅಪ್ರತಿಮ ಶಕ್ತಿಯೇ ಹೆಣ್ಣು. ಮಹಿಳೆಯ ಸ್ಥಾನಮಾನ, ಹಕ್ಕು, ಸಮಸ್ಯೆಗಳ ಬಗ್ಗೆ ಚಿಂತನೆ ಮಾಡುವ ಸಂದರ್ಭವೇ ಈ ಕಾರ್ಯಕ್ರಮವಾಗಿದೆ. ಸ್ತ್ರೀ ಶಕ್ತಿಯನ್ನು ಆರಾಧಿಸುವ ದೇಶ ನಮ್ಮದಾಗಿದೆ ಎಂದರು.



**ಜಿಲ್ಲೆಗೆ ಅಪಾರ ಕೊಡುಗೆ:** ರಾಜ್ಯದ ಪ್ರತಿ ಜಿಲ್ಲೆಯಲ್ಲಿ ಡಿಸಿ, ಎಸ್ಪಿ, ಸಿಇಓ ಸೇರಿದಂತೆ ಮಹಿಳೆಯರು ಪುರುಷರಷ್ಟೇ ಸ್ಥಾನಮಾನ ಪಡೆದಿದ್ದಾರೆ. ಹಾವೇರಿಯಲ್ಲೂ ಜಿಪಂ ಸಿಇಓ, ಎಸ್‌ಪಿ, ಎಸಿ, ತಹಸೀಲ್ದಾರ, ಆರ್‌ಟಿಓ ಹೀಗೆ ಅನೇಕ ಉನ್ನತ ಮಹಿಳಾ ಅಧಿಕಾರಿಗಳ ಕೊಡುಗೆ ಅಪಾರವಾಗಿದೆ. ಅತ್ಯುತ್ತಮ ಸೇವೆ ಸಲ್ಲಿಸಿದ ಅಧಿಕಾರಿ ವರ್ಗದವರನ್ನು ಮಹಿಳೆಯರ ದಿನಾಚರಣೆ ನಿಮಿತ್ತ ಸನ್ಮಾನಿಸುತ್ತಿರುವುದು ಔಚಿತ್ಯ ಪೂರ್ಣವಾದುದು ಎಂದರು.

ರಾಜ್ಯ ಸರ್ಕಾರಿ ಮಹಿಳಾ ನೌಕರರ ಸಂಘದ ರಾಜ್ಯಾಧ್ಯಕ್ಷೆ ಶೈಲಜಾ ಗೌಡರ ,ಎಸ್ಪಿ ಯಶೋಧಾ ವಂಟಗೋಡಿ ಮಾತನಾಡಿದರು. ಸಂಘದ ಜಿಲ್ಲಾಧ್ಯಕ್ಷೆ ಅಕ್ಕಮಹಾದೇವಿ ಕಾಕೋಳ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಗ್ಯಾರಂಟಿ ಸಮಿತಿ ಅಧ್ಯಕ್ಷ ಎಂ.ಎಂ. ಹಿರೇಮಠ, ಡಿಡಿಪಿಐ ಮೋಹನ್ ದಂಡಿನ, ಬಿಇಓ ಎಂ.ಎಚ್. ಪಾಟೀಲ, ವೀಣಾ ಹೊಸಮನಿ, ರೇಷ್ಮಾ ಬಳ್ಳಾರಿ, ಭಾಗ್ಯ ಎಂ.ಕೆ., ರೇವತಿ ಹೊಸಮಠ, ಜಯಶ್ರೀ ಪಾಟೀಲ, ತನುಜಾ, ಲತಾ ಬಿ.ಎಚ್, ಆಶು ನದಾಫ, ಎ.ಟಿ. ನೀರಲಗಿ, ಶಾಹಿನಾ ಬೇಗಂ, ವಿಜಯಮ್ಮ ಪಾಟೀಲ, ದಾಕ್ಷಾಯಣಿ ವಾಲ್ಮೀಕಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

> **ಸಾಧಕರಿಗೆ ಸನ್ಮಾನ**
>
> ಜಾನಪದ ವಿದ್ವಾಂಸ ಡಾ.ಶಂಭು ಬಳಿಗಾರ ಉದ್ಯೋಗಸ್ಥ ಮಹಿಳೆ ಎದುರಿಸುತ್ತಿರುವ ತಲ್ಲಣಗಳು ವಿಷಯದ ಕುರಿತು, ವರದಶ್ರೀ ಫೌಂಡೇಶನ್ ಸಂಸ್ಥಾಪಕ ಮಲ್ಲಿಕಾರ್ಜುನ ರೆಡ್ಡೇರ ಉದ್ಯೋಗಸ್ಥ ಮಹಿಳೆಯರಿಗೆ ಆರೋಗ್ಯ ಸೂತ್ರಗಳು ಕುರಿತು ಉಪನ್ಯಾಸ ನೀಡಿದರು. ವಿವಿಧ ಇಲಾಖೆಗಳಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದ ಮಹಿಳಾ ಅಧಿಕಾರಿಗಳಿಗೆ ಸನ್ಮಾನಿಸಿ ಗೌರವಿಸಲಾಯಿತು.

## ಕಿರುಸುದ್ದಿ

### ಎಸ್ಸೆಸ್ಸೆಲ್ಸಿ ಪರೀಕ್ಷೆ: ಶುಭ ಕೋರಿದ ಸಚಿವ



• **ಬೆಳಗಾವಿ:** ರಾಜ್ಯದಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆ ಮಾ.18ರಿಂದ ಪ್ರಾರಂಭವಾಗಲಿದ್ದು, ಪರೀಕ್ಷೆ ಬರೆಯುತ್ತಿರುವ ಎಲ್ಲಾ ವಿದ್ಯಾರ್ಥಿಗಳಿಗೂ ಸಚಿವ ಸತೀಶ್ ಜಾರಕಿಹೊಳಿ ಅವರು ಶುಭ ಕೋರಿದ್ದಾರೆ. ಈ ಕುರಿತು ಮಾಹಿತಿ ನೀಡಿದ ಸಚಿವರು, ಎಸ್ಸೆಸ್ಸೆಲ್ಸಿ ಪರೀಕ್ಷೆ ಎಲ್ಲರ ಜೀವನದಲ್ಲೂ ಅತಿ ಮುಖ್ಯ ಪರೀಕ್ಷೆ. ಹೀಗಾಗಿ ಎಲ್ಲರೂ ಶಾಂತಚಿತ್ತರಾಗಿ, ಏಕಾಗ್ರತೆಯಿಂದ ಮತ್ತು ಆತ್ಮವಿಶ್ವಾಸದಿಂದ ಪರೀಕ್ಷೆ ಎದುರಿಸಿ ಉತ್ತೀರ್ಣರಾಗುವುದರ ಜೊತೆಗೆ ಉತ್ತಮ ಅಂಕಗಳನ್ನು ಗಳಿಸಿ ಜಿಲ್ಲೆಗೆ ಕೀರ್ತಿ ತರಬೇಕು. ಉಜ್ವಲ ಭವಿಷ್ಯ ರೂಪಿಸಿಕೊಳ್ಳಬೇಕು ಎಂದು ಶುಭ ಹಾರೈಸಿದ್ದಾರೆ.

### ಜಯಂತಿ ಅರ್ಥಪೂರ್ಣ ಆಚರಣೆಗೆ ಸೂಚನೆ



• **ಬೆಳಗಾವಿ:** ಪ್ರತಿ ವರ್ಷದಂತೆ ಏಪ್ರಿಲ್ 14 ರಂದು ಅಂಬೇಡ್ಕರ್ ಉದ್ಯಾನವನದಲ್ಲಿ ಸಂವಿಧಾನ ಶಿಲ್ಪಿ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಜನ್ಮ ದಿನಾಚರಣೆಯನ್ನು ಅರ್ಥಪೂರ್ಣ, ವಿಜೃಂಭಣೆಯಿಂದ ಆಚರಿಸಲಾಗುವುದು ಎಂದು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಅವರು ತಿಳಿಸಿದರು. ಸೋಮವಾರ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆದ ಸಂವಿಧಾನ ಶಿಲ್ಪಿ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಜನ್ಮ ದಿನಾಚರಣೆ ಪೂರ್ವಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಮೆರವಣಿಗೆ ಸಮಯದಲ್ಲಿ ಡಾಲ್ಬಿ, ಡಿಜೆ ಇನ್ನಿತರ ಮಾರಕ ಧ್ವನಿವರ್ಧಕಗಳ ಅಳವಡಿಕೆ, ಬಳಕೆ ಕಡ್ಡಾಯವಾಗಿ ನಿಷೇಧಿಸಲಾಗಿದೆ ಎಂದು ತಿಳಿಸಿದರು. ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ರಾಮನಗೌಡ ಕನ್ನೊಳ್ಳಿ ಸಭೆ ನಿರ್ವಹಿಸಿದರು. ಈ ವೇಳೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಕೆ. ರಾಮರಾಜನ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಪ ನಿರ್ದೇಶಕಿ ವಿದ್ಯಾವತಿ ಭಜಂತ್ರಿ, ಜಿಲ್ಲಾ ಪಂಚಾಯತ್ ಯೋಜನಾ ನಿರ್ದೇಶಕ ರವಿ ಬಂಗಾರಪ್ಪನವರ, ಮುಖಂಡರಾದ ಮಹಾದೇವ ತಳವಾರ, ಭಾವಕಣ್ಣ ಭಂಗ್ಯಾಗೋಳ, ಕರೆಪ್ಪ ಗುಡ್ಡೆನ್ನವರ, ಸಿದ್ರಾಯಿ ಮೇತ್ರಿ, ಮಹೇಶ್ ಶೀಗಿಹಳ್ಳಿ, ವಿವಿಧ ಸಂಘಟನೆಗಳ ಪದಾಧಿಕಾರಿಗಳು, ಸದಸ್ಯರು ಸಭೆಯಲ್ಲಿ ಉಪಸ್ಥಿತರಿದ್ದರು.

### ಪರೀಕ್ಷಾ ಕೇಂದ್ರದಲ್ಲಿ ಜಾಗೃತಿ: ಫಲಕ ಅನಾವರಣ



• **ತೆಲಸಂಗ:** ಗ್ರಾಮದ ಬಸವೇಶ್ವರ ವಿದ್ಯಾವರ್ಧಕ ಸಂಘದ ಎಸ್ಎಸ್ಎಲ್‌ಸಿ ಪರೀಕ್ಷಾಕೇಂದ್ರದಲ್ಲಿ ಪರೀಕ್ಷಾ ಪಾವಿತ್ರ್ಯತೆಕಾಪಾಡುವ ನಿಟ್ಟಿನಲ್ಲಿಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿಯ ಅಿಕೃತ ಮಾರ್ಗಸೂಚಿಗಳ ಕುರಿತುಜಾಗೃತಿ ಮೂಡಿಸಲಾಯಿತು. ಪರೀಕ್ಷಾಕೇಂದ್ರದ ಮುಖ್ಯಅೀಕ್ಷಕರಾದ ಎನ್.ಡಿ. ಅತ್ತಾರ ಅವರು ಪರೀಕ್ಷಾಕೇಂದ್ರದಲ್ಲಿಕಡ್ಡಾಯವಾಗಿಅನುಸರಿಸಬೇಕಾದ ಮತ್ತುಅನುಸರಿಸಬಾರದಾದ ಕ್ರಮಗಳ ಕುರಿತು ಮಾಹಿತಿ ನೀಡಿ, ಅಿಕೃತಜಾಗೃತಿ ಫಲಕವನ್ನು ಅಳವಡಿಸಿದರು. ಈ ಸಂದರ್ಭದಲ್ಲಿ ಮಾತನಾಡಿದಅವರು, ಪರೀಕ್ಷಾ ಕೇಂದ್ರದೊಳಗೆ ಮೊಬೈಲ್ ನಿಷೇಸಲಾಗಿದೆ. ಡಿಜಿಟಲ್‌ಅಥವಾ ಸ್ಮಾರ್ಟ್ ವಾಚ್‌ಗಳಿಗೆ ಅವಕಾಶವಿಲ್ಲ. ಕಿಟಕಿಗಳ ಮೂಲಕ ಹೊರಗಿನವರು ನಕಲು ಮಾಡಲು ಪ್ರೋತ್ಸಾಹಿಸದಂತೆ ನಿಗಾ ವಹಿಸಲಾಗಿದೆ. ಯಾವುದೇ ಸಿಬ್ಬಂದಿ ನಕಲು ಮಾಡಲು ಸಹಾಯ ಮಾಡುವುದುಕಂಡುಬಂದಲ್ಲಿ ಅವರನ್ನುತಕ್ಷಣವೇಕರ್ತವ್ಯದಿಂದ ಬಿಡುಗಡೆಗೊಳಿಸಿ ಶಿಸ್ತುಕ್ರಮ ಜರುಗಿಸಲಾಗುವುದು. ಪರೀಕ್ಷೆಯ ಪಾವಿತ್ರ್ಯತೆಯನ್ನುಕಾಪಾಡಲು ಮತ್ತು ವಿದ್ಯಾರ್ಥಿಗಳು ಯಾವುದೇಆತಂಕವಿಲ್ಲದೆ ಪರೀಕ್ಷೆಎದುರಿಸಲು ಈ ಕ್ರಮಗಳು ಅತಿಅವಶ್ಯಕ. ಪೊಲೀಸ್ ಭದ್ರತೆ ಹಾಗೂ ವಿದ್ಯಾರ್ಥಿಗಳಿಗೆ ಕುಡಿಯುವ ನೀರು ಮತ್ತು ಸುಸಜ್ಜಿತಆಸನದ ವ್ಯವಸ್ಥೆ ಮಾಡಲಾಗಿದೆ. ಮುಖ್ಯ ಶಿಕ್ಷಕ ಗಫೂರ್ ಮುಲ್ಲಾ, ಅನಿಲ್ ಹಿರೇಮಠ, ಸೋಮಯ್ಯ ಮಠಪತಿ, ಬುರಾನ ಅರಟಾಳ ಉಪಸ್ಥಿತರಿದ್ದರು.



ತೆಲಸಂಗ: ಕರ್ನಾಟಕ ರತ್ನ, ಪವರ್ ಸ್ಟಾರ್ ಪುನೀತ್ ರಾಜಕುಮಾರ್ ಅವರ ಜನ್ಮದಿನದ ಅಂಗವಾಗಿ ಗ್ರಾಮದ ಬಿ.ವಿ.ವಿ.ಸಂಘದ ಪಿಯು ಕಾಲೇಜಿನಲ್ಲಿ ವಿದ್ಯಾರ್ಥಿನಿಯರು ಅಪ್ಪು ಜನ್ಮದಿನವನ್ನು ಅರ್ಥಪೂರ್ಣವಾಗಿ ಆಚರಿಸಿದರು.

## ಕಲಾ ಸಂತೆ ವಿಭಿನ್ನ ಜನಪದ ಜಾತ್ರೆ

• **ಬೆಳಗಾವಿ:** ನಮ್ಮ ನಾಡಿನ ಕಲಾವಿದರು ತಮ್ಮ ಕೈಚಳಕದಿಂದ ತಯಾರಿಸಿದ ಹಸ್ತಕಲಾ ವಸ್ತುಗಳು, ಆಹಾರ ಪದಾರ್ಥಗಳು ಹಾಗೂ ಜನಪದ ಪರಂಪರೆಯ ಉತ್ಪನ್ನಗಳನ್ನು ಪ್ರದರ್ಶಿಸಿ ಮಾರಾಟ ಮಾಡಲು ಅವಕಾಶ ನೀಡುವ ಕಲಾ ಸಂತೆ ಒಂದು ವಿಭಿನ್ನ ಜನಪದ ಜಾತ್ರೆಯಾಗಿದ್ದು, ಸ್ಥಳೀಯ ಕಲೆ, ಸಂಸ್ಕೃತಿ ಮತ್ತು ಗ್ರಾಮೀಣ ಉದ್ಯಮಿತ್ವವನ್ನು ಉತ್ತೇಜಿಸುವ ಪ್ರಮುಖ ವೇದಿಕೆಯಾಗಿದೆ ಎಂದು ನಾಗನೂರು ರುದ್ರಾಕ್ಷಿ ಮಠದ ಡಾ. ಅಲ್ಲಮಪ್ರಭು ಮಹಾಸ್ವಾಮಿಗಳು ಅಭಿಪ್ರಾಯಪಟ್ಟರು. ಲಿಂಗಾಯತ ಮಹಿಳಾ ಸಮಾಜದಿಂದ ನಾಗನೂರು ರುದ್ರಾಕ್ಷಿ ಮಠದ ಎಸ್‌ಜಿಬಿಐಟಿ ಕಾಲೇಜು ಆವರಣದಲ್ಲಿ ಮಹಿಳಾ ದಿನಾಚರಣೆಯ ಅಂಗವಾಗಿ ಹಮ್ಮಿಕೊಂಡ ಕಲಾ ಸಂತೆ ಜನಪದ ಜಾತ್ರೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದ ಅವರು, ನಾಡಿನ ಜನಪದ ಸಂಸ್ಕೃತಿ, ಕಲೆ ಮತ್ತು ಮಹಿಳಾ ಉದ್ಯಮಿತ್ವವನ್ನು ಉತ್ತೇಜಿಸುವ ಉದ್ದೇಶದಿಂದ ಈ ಜಾತ್ರೆಯನ್ನು ಶ್ರೀಮಠದ ಆವರಣದಲ್ಲಿ ನಡೆಸಲಾಗುತ್ತಿದೆ. ಜನಪದ ಕಲೆಗಳ ಪ್ರದರ್ಶನ, ಸಾಂಪ್ರದಾಯಿಕ ಜನಪದ ಸಂಸ್ಕೃತಿಯ ಸೊಗಡನ್ನು ಪರಿಚಯಿಸುವ ದೃಷ್ಟಿಯಿಂದ ಹಮ್ಮಿಕೊಂಡ ಈ ಕಲಾಸಂತೆಯ ಪ್ರಯೋಜನವನ್ನು ನಾಡಿನ ಜನತೆ ಪಡೆದುಕೊಳ್ಳಬೇಕು ಎಂದು ಹೇಳಿದರು. ಮರಾಠಾ ಮಂಡಳ ಸಮೂಹ ಸಂಸ್ಥೆಗಳ ಅಧ್ಯಕ್ಷೆ ರಾಜಶ್ರೀ ಹಲಗೇಕರ ಮಾತನಾಡಿದರು. ಬೆಳಗಾವಿ, ಸೊಂಡೂರು, ವಿಜಯಪುರ, ದಾವಣಗೆರೆ, ಧಾರವಾಡ ಹಾಗೂ ಮಹಾರಾಷ್ಟ್ರದ ಕೊಲ್ಲಾಪುರ ಸೇರಿದಂತೆ ವಿವಿಧ ಭಾಗಗಳಿಂದ ಮಹಿಳಾ ಉದ್ಯಮಿಗಳು ಸೇರಿಂದರೆ ಹಲವರು ಇದ್ದರು.



ಬೆಳಗಾವಿ: ಲಿಂಗಾಯತ ಮಹಿಳಾ ಸಮಾಜದಿಂದ ನಾಗನೂರು ರುದ್ರಾಕ್ಷಿ ಮಠದ ಎಸ್‌ಜಿಬಿಐಟಿ ಕಾಲೇಜು ಆವರಣದಲ್ಲಿ ಮಹಿಳಾ ದಿನಾಚರಣೆಯ ಅಂಗವಾಗಿ ಕಲಾ ಸಂತೆ ಜನಪದ ಜಾತ್ರೆ, ಕಾರ್ಯಕ್ರಮ ನಡೆಯಿತು. ಡಾ. ಅಲ್ಲಮಪ್ರಭು ಸ್ವಾಮೀಜಿ ಸಾನ್ನಿಧ್ಯ ವಹಿಸಿ ಮಾತನಾಡಿದರು.

## ಅಕಾಲಿಕ ಮಳೆ: ಕುಂದಾನಗರಿ ಜನಜೀವನ ಅಸ್ತವ್ಯಸ್ತ

# ವ್ಯಾಪಾರಸ್ಥರ ಬದುಕು ಬೀದಿ ಪಾಲು

• **ಬೆಳಗಾವಿ:** ಕುಂದಾನಗರಿ ಬೆಳಗಾವಿಯಲ್ಲಿ ಮಂಗಳವಾರ ಸಂಜೆ ಅಕಾಲಿಕ ಸುರಿದ ಆಲಿಕಲ್ಲು ಸಹಿತ ಬಿರುಗಾಳಿ ಮಳೆ ಭಾರಿ ಅವಾಂತರ ಸೃಷ್ಟಿಸಿದೆ. ವಿಶೇಷವಾಗಿ ನಗರದ ವೀರಭದ್ರ ನಗರ ಮತ್ತು ಖುಸ್ರೋ ನಗರದಲ್ಲಿ ಮಳೆಯ ಆರ್ಭಟಕ್ಕೆ ಜನಜೀವನ ಸಂಪೂರ್ಣ ಅಸ್ತವ್ಯಸ್ತಗೊಂಡಿದೆ. ರಂಜಾನ್ ಹಬ್ಬದ ನಿಮಿತ್ತ ತಾತ್ಕಾಲಿಕವಾಗಿ ಹಾಕಲಾಗಿದ್ದ ಇಪ್ಪತ್ತಕ್ಕೂ ಹೆಚ್ಚು ಗೂಡಂಗಡಿಗಳು ಬಿರುಗಾಳಿಯ ರಭಸಕ್ಕೆ ನೆಲಕ್ಕುರುಳಿವೆ. ಬಲವಾದ ಗಾಳಿಗೆ ಅಂಗಡಿಗಳ ಮೇಲ್ಛಾವಣಿಗಳು ಹಾರಿಹೋಗಿದ್ದು, ವ್ಯಾಪಾರಕ್ಕಾಗಿ ಸಂಗ್ರಹಿಸಿಟ್ಟಿದ್ದ ಆಹಾರ ಸಾಮಗ್ರಿಗಳು ಹಾಗೂ ಇತರ ವಸ್ತುಗಳು ಮಳೆ ನೀರಿನಲ್ಲಿ ನೆನೆದು ಹಾನಿಯಾಗಿವೆ.

ಸಂಜೆ ಸುಮಾರು 7 ಗಂಟೆ ಸುಮಾರಿಗೆ ವ್ಯಾಪಾರಸ್ಥರು ಹಬ್ಬದ ನಿಮಿತ್ತ ಗ್ರಾಹಕರಿಗಾಗಿ ಆಹಾರ ಪದಾರ್ಥಗಳನ್ನು ಸಿದ್ಧಪಡಿಸುತ್ತಿದ್ದಾಗಲೇ ಏಕಾಏಕಿ ವರುಣನ ಆರ್ಭಟ ಶುರುವಾಗಿದೆ. ಬಿರುಗಾಳಿ ಸಹಿತ ಸುರಿದ ಮಳೆಯಿಂದಾಗಿ ವ್ಯಾಪಾರಿಗಳು ಹಾಗೂ ಸಾರ್ವಜನಿಕರು ದಿಕ್ಕುತೋಚದಂತಾಗಿ ಗೊಂದಲದ ವಾತಾವರಣ ನಿರ್ಮಾಣವಾಯಿತು. ಇಡೀ ರಸ್ತೆಗಳು ಕೆರೆಯಂತಾಗಿದ್ದು, ಚರಂಡಿ ನೀರು ಅಂಗಡಿಗಳ ಒಳಗೆ ನುಗ್ಗಿದ್ದರಿಂದ ವ್ಯಾಪಾರಸ್ಥರು ದೊಡ್ಡ ಮಟ್ಟದ ಆರ್ಥಿಕ ನಷ್ಟ ಅನುಭವಿಸುವಂತಾಗಿದೆ. ವರ್ಷವಿಡೀ ಕಾಯುತ್ತಿದ್ದ ಹಬ್ಬದ ಸೀಸನ್ನಲ್ಲಿ ಇಂತಹ ಅವಘಡ ಸಂಭವಿಸಿರುವುದು ಬಡ ವ್ಯಾಪಾರಿಗಳ ಕಣ್ಣೀರಿಗೆ ಕಾರಣವಾಗಿದೆ.

ಘಟನೆಯಸುದ್ದಿತಿಳಿಯುತ್ತಿದ್ದಂತೆಯೇಸ್ಥಳೀಯರು ಸ್ಥಳಕ್ಕೆ ಧಾವಿಸಿ ಸಂಕಷ್ಟದಲ್ಲಿದ್ದ ವ್ಯಾಪಾರಿಗಳಿಗೆ ನೆರವು ನೀಡಿದರು. ಬಿರುಗಾಳಿಗೆ ಉರುಳಿಬಿದ್ದಿದ್ದ ಅಂಗಡಿಗಳನ್ನು ಸರಿಪಡಿಸಲು ಮತ್ತು ಮಳೆ ನೀರಿನಲ್ಲಿ ಸಿಲುಕಿದ್ದ ವಸ್ತುಗಳನ್ನು ರಕ್ಷಿಸಲು ಶ್ರಮಿಸಿದರು. ಅದೃಷ್ಟವಶಾತ್ ಈ ಭೀಕರ ಗಾಳಿ-ಮಳೆಯಲ್ಲಿ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ.



### ಪರಿಹಾರಕ್ಕೆ ಆಗ್ರಹ

ಹಬ್ಬದ ಸಂಭ್ರಮದ ನಡುವೆಯೇ ವರುಣ ನೀಡಿದ ಈ ಆಘಾತದಿಂದಾಗಿ ವೀರಭದ್ರ ನಗರದ ವ್ಯಾಪಾರಸ್ಥರು ಕಂಗಾಲಾಗಿದ್ದು, ಹಾನಿಗೊಳಗಾದವರಿಗೆ ಸೂಕ್ತ ಪರಿಹಾರ ನೀಡಬೇಕೆಂಬ ಒತ್ತಾಯ ಕೇಳಿಬಂದಿದೆ. ಕಣಬರ್ಗಿಯಲ್ಲಿ ಭಾರಿ ಮಳೆಗೆ ಜನಜೀವನ ಅಸ್ತವಸ್ತ ಗೊಂಡಿದೆ. ಮನೆಗಳಿಗೆ ನೀರು ನುಗ್ಗಿದೆ. ಅಲ್ಲದೇ, ಬಸ್ ಶೇರ್ ಅಂಗಡಿಗಳಿಗೆ ನೀರು ನುಗ್ಗಿ ಅವಾಂತರ ಸೃಷ್ಟಿಯಾಗಿದೆ.

## ಕೈಗಾರಿಕೆ ನಿರ್ಮಾಣಕ್ಕೆ ಕೃಷಿಭೂಮಿ ನೀಡುವುದಿಲ್ಲ

• **ಯಮಕನಮರಡಿ:** ಕೃಷಿಭೂಮಿಯನ್ನು ಯಾವುದೇ ಕಾರಣಕ್ಕೂ ಕೈಗಾರಿಕೆಗೆ ಬಳಸುವುದಿಲ್ಲ ಎಂದು ಮಾಸ್ತಿಹೊಳಿ ರೈತ ಮುಖಂಡರಾದ ಬಾಳೇಶ ಮಾವನೂರಿ ಹೇಳಿದರು.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮಣಗುತ್ತಿ ಗ್ರಾಮದವರು 9 ಎಕರೆ ಭೂಮಿ ಮಾರಾಟ ಮಾಡಲು ಒಪ್ಪಂದ ಮಾಡಿಕೊಂಡಿದ್ದಾರೆ. ಆದರೆ, ಜಮೀನು ಮಾಸ್ತಿಹೊಳಿ ಗ್ರಾಮದ ಹದ್ದಿನಲ್ಲಿದೆ. ಮೋಲ್ಯಾಸಿಸ್ ತಯಾರಿಕೆಗೆ ಘಟಕಕ್ಕೆನೀಡಿದರೆನಮಗೆಸಮಸ್ಯೆಯಾಗುತ್ತದೆ ಪ್ರಾಣ ಹೋದರು ಹೋರಾಟದಿಂದ ಹಿಂದೆ ಸರಿಯುವುದಿಲ್ಲ ಎಂದರು.

ಸಂಬಂಧಪಟ್ಟವರ ಗಮನಕ್ಕೆ ವಿಷಯ ತರಲಾಗಿದೆ. ಪೊಲೀಸರಿಗೂ ಮಾಹಿತಿ ನೀಡಿದ್ದೇವೆ. ಈ ಬಗ್ಗೆ ಜಿಲ್ಲಾಕಾರಿ ಕಚೇರಿ ಎದುರು ಧರಣಿ ಮಾಡಲು ಹಿಂಜರಿಯುವುದಿಲ್ಲ.

ನಮ್ಮ ಗ್ರಾಮದ ಬಳಿಯೇ ಏಕಸ್ ವಿಶೇಷ ಆರ್ಥಿಕ ವಲಯದವರು ಕೈಗಾರಿಕೆಗಾಗಿ ಮೊದಲು 10 ಎಕರೆ ಜಮೀನು ತೆಗೆದುಕೊಂಡು ಇಂದು 500 ಎಕರೆ ಜಮೀನನ್ನು ಖರೀದಿಸಿದ್ದಾರೆ. ಅಲ್ಲಿ ಭೂಮಿ ನೀಡಿದ ರೈತರ ಮಕ್ಕಳಿಗೆ ಕೆಲಸ ಕೊಟ್ಟಿಲ್ಲ. ಕೊಲೆ ಬೆದರಿಕೆಗೆ ಹೆದರುವುದಿಲ್ಲ, ರೈತರು ದಲ್ಲಾಳಿಗಳಲ್ಲ ಎಂದರು.

### ರೈತರ ವಿರೋಧ

ಹಿಡಕಲ್ ಡ್ಯಾಂ ಜಲಾಶಯ ನಿರ್ಮಾಣದ ಸಂದರ್ಭದಲ್ಲಿ 1974-75 ರಲ್ಲಿಸಾವಿರಾರು ಎಕರೆ ಕೃಷಿ ಜಮೀನು ಕಳೆದುಕೊಂಡಿದ್ದೇವೆ. ಭೂಮಿ ಕಳೆದುಕೊಂಡ ನಿರಾಶ್ರಿತ ರೈತರಿಗೆ ಸರ್ಕಾರ 2-3 ಎಕರೆಗಳಷ್ಟು ಬರಡು ಭೂಮಿಯನ್ನು ನೀಡಿತ್ತು. ಈ ಭೂಮಿಯಲ್ಲೆ ರೈತರು ಇಂದಿಗೂ ಜೀವನ ನಡೆಸುತ್ತಿದ್ದೇವೆ. ಇಂದು ಮಾಸ್ತಿಹೊಳಿ ಗ್ರಾಮದಲ್ಲಿ ದಲ್ಲಾಳಿಗಳ ಮೂಲಕ ಕೈಗಾರಿಕಾ ಪ್ರದೇಶ ನಿರ್ಮಿಸಲು ಮತ್ತೆ ಪ್ರಯತ್ನಿಸಲಾಗುತ್ತಿದೆ, ಇದಕ್ಕೆ ರೈತರ ವಿರೋಧವಿದೆ ಎಂದು ರಾಜಾಲಖಮಗೌಡಾ ಹೇಳಿದರು.



### ಆತ್ಮವಿಶ್ವಾಸದಿಂದ ಪರೀಕ್ಷೆ ಎದುರಿಸಿ



• **ಯರಗಟ್ಟಿ:** ಮತ ಕ್ಷೇತ್ರದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಹಾಜರಾಗುತ್ತಿರುವ ಒಟ್ಟು 5389 ವಿದ್ಯಾರ್ಥಿ ಮತ್ತು 20 ಪರೀಕ್ಷೆ ಕೇಂದ್ರಗಳನ್ನು ಶಿಕ್ಷಣ ಇಲಾಖೆ ಬಿಇಓ ಅಚ್ಚುಕ್ಕಾಗಿ ಕೆಲಸ ಮಾಡಿದ್ದಾರೆ ಮತ್ತು ಪರೀಕ್ಷೆ ಬರೆಯುವ ನಮ್ಮ ಎಲ್ಲಾ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಹಾರ್ದಿಕ ಶುಭಾಶಯಗಳು. ನೀವು ಇಷ್ಟು ದಿನ ಮಾಡಿದ ಪರಿಶ್ರಮಕ್ಕೆ ಉತ್ತಮ ಫಲ ಸಿಗಲಿ ಎಂದು ಹಾರೈಸುತ್ತೇನೆ. ಆತ್ಮವಿಶ್ವಾಸದಿಂದ, ಧೈರ್ಯದಿಂದ ಪರೀಕ್ಷೆ ಬರೆಯಿರಿ. ಪೋಷಕರ ಹಾಗೂ ಗುರುಗಳ ಆಶೀರ್ವಾದ ನಿಮ್ಮೊಂದಿಗಿದೆ. ನಿಮ್ಮ ಭವಿಷ್ಯ ಉಜ್ವಲವಾಗಲಿ, ಹೆಚ್ಚಿನ ಸಾಧನೆಗಳನ್ನು ಮಾಡಿ ತಮ್ಮ ಶಾಲೆಯ ಹಾಗೂ ನಮ್ಮ ಕ್ಷೇತ್ರದ ಕೀರ್ತಿಯನ್ನು ಹೆಚ್ಚಿಸಲಿ ಎಂದು ಆಶಿಸುತ್ತೇನೆ ಎಂದು ಸವದತ್ತಿ ಯಲ್ಲಮ್ಮ ವಿಧಾನ ಸಭಾ ಕ್ಷೇತ್ರದ ಶಾಸಕ ವಿಶ್ವಾಸ ವೈದ್ಯ ಅವರು ತಿಳಿಸಿದ್ದಾರೆ.

## ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಖೋ ಖೋ ತಂಡಕ್ಕೆ ಆಯ್ಕೆ

• **ಮೂಡಲಗಿ:** ಇತ್ತೀಚೆಗೆ ಮೂಡಲಗಿ ಶಿಕ್ಷಣ ಸಂಸ್ಥೆಯ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದ ಆತಿಥ್ಯದಲ್ಲಿ ಜರುಗಿದ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಅಂತರ ಕಾಲೇಜುಗಳ ಏಕವಲಯ ಪುರುಷ ಹಾಗೂ ಮಹಿಳಾ ಖೋ ಖೋ ಸ್ಪರ್ಧೆಯಲ್ಲಿ ತಾಲೂಕಿನ ಕಲ್ಲೋಳಿಯ ರಾಮಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಪ್ರಥಮ ದರ್ಜೆ ಮಹಾವಿದ್ಯಾಲಯದ ವಿದ್ಯಾರ್ಥಿಗಳಾದ ಆನಂದ ತಡಸನೂರ(ಬಿ.ಎ. 6ನೇ ಸೆಮ್) ಹಾಗೂ ಸಿದ್ಧಾರೂಢ ಕರೆನ್ನವರ (ಬಿಎ ನಾಲ್ಕನೇ ಸೆಮ್) ವಿಶ್ವವಿದ್ಯಾಲಯದ ಖೋ ಖೋ ತಂಡಕ್ಕೆ ಬ್ಲ್ಯೂ ಆಗಿ ಆಯ್ಕೆಯಾಗಿದ್ದಾರೆ.

ಸಾಧನೆಗೈದವಿದ್ಯಾರ್ಥಿನಿಯನ್ನುರಾಮಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಚೇರಮನ್ ಬಸಗೌಡ ಪಾಟೀಲ, ಆಡಳಿತ ಮಂಡಳಿಯ ಸದಸ್ಯರು, ಪ್ರಾಚಾರ್ಯ ಡಾ. ಸುರೇಶ ಹನಗಂಡಿ, ದೈಹಿಕ ನಿರ್ದೇಶಕ ಬಿ. ಕೆ. ಸೊಂಟನವರ, ಕ್ರೀಡಾ ಕಾರ್ಯದರ್ಶಿ ಬಿ. ಬಿ. ವಾಲಿ, ಎನ್.ಎಸ್.ಎಸ್. ಕಾರ್ಯಕ್ರಮ ಅಿಕಾರಿ ಶಂಕರ ನಿಂಗನೂರ, ಬೋಧಕ/ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಅಭಿನಂದಿಸಿದ್ದಾರೆ.



## ಹಸಿರು ಯರಗಟ್ಟಿ ನಮ್ಮ ಗುರಿ: ಶಾಸಕ ವಿಶ್ವಾಸ ವೈದ್ಯ

• **ಯರಗಟ್ಟಿ:** ಪಟ್ಟಣದ ವಿಜಯ ನಗರದಲ್ಲಿ ಸನ್ 2024-25ನೇ ಸಾಲಿನ ಅಮೃತ-2.0 ಯೋಜನೆಯಡಿಯಲ್ಲಿ ಉದ್ಯಾನವನ ಅಭಿವೃದ್ಧಿ ಕಾಮಗಾರಿಗೆ ಶಾಸಕ ವಿಶ್ವಾಸ ವೈದ್ಯ ಭೂಮಿ ಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಅವರು, ಸ್ಥಳೀಯ ನಿವಾಸಿಗಳಿಗೆ, ಮಕ್ಕಳಿಗೆ ಹಾಗೂ ಹಿರಿಯ ನಾಗರಿಕರಿಗೆ ಶುದ್ಧ ಗಾಳಿ, ವಿಶ್ರಾಂತಿ ಮತ್ತು ಮನರಂಜನೆಗಾಗಿ ಸುಸಜ್ಜಿತ ಉದ್ಯಾನವನ ನಿರ್ಮಾಣ. ಪರಿಸರ ಸಂರಕ್ಷಣೆ ಮತ್ತು ಪಟ್ಟಣದ ಸೌಂದರ್ಯೀಕರಣಕ್ಕೆ ನಾವು ಸದಾ ಬದ್ಧರಾಗಿದ್ದೇವೆ ಎಂದರು.

ಈ ಉದ್ಯಾನವನವು ಮುಂದಿನ ದಿನಗಳಲ್ಲಿ ಸಾರ್ವಜನಿಕರ ಉತ್ತಮ ಆರೋಗ್ಯ ಮತ್ತು ನೆಮ್ಮದಿಯ ತಾಣವಾಗಿ ರೂಪುಗೊಳ್ಳಲಿ ಹಾಗೂ ಗುಣಮಟ್ಟದ ಕಾಮಗಾರಿಯನ್ನು ಶೀಘ್ರವಾಗಿ ಮುಗಿಸಲು ಅಕಾರಿಗಳಿಗೆ ಸೂಚನೆ ನೀಡಲಾಗಿದೆ.

ಈ ಸಂದರ್ಭದಲ್ಲಿ ಈ ವೇಳೆ ತಹಶೀಲ್ದಾರ್ ಎಂ. ವ್ಹಿ. ಗುಂಡಪ್ಪಗೋಳ, ಪ. ಪಂ. ಮುಖ್ಯಾಕಾರಿ ಮಹೇಶ ಭಜಂತ್ರಿ, ಎಪಿಎಂಸಿ ಅಧ್ಯಕ್ಷ ನೀಲಕಂಠ ಸಿದ್ದಬಸನವರ, ಕೆಎಂಎಫ್ ನಿರ್ದೇಶಕ ಶಂಕರ ಇಟ್ನಾಳ, ಪ. ಪಂ. ಸದಸ್ಯರಾದ ನಿಖಿಲ ಪಾಟೀಲ, ಹನಮಂತ ಹಾರುಗೊಪ್ಪ, ಸಲಿಂಬೇಗ ಜಮಾದಾರ, ವಿಠ್ಠಲಗೌಡ ದೇವರಡ್ಡಿ, ಮಹಾಂತೇಶ ಜಕಾತಿ, ರಮೇಶ ದೇವರಡ್ಡಿ, ಬಾಸ್ಕರ ಹಿರೇಮೆತ್ರಿ, ಶಿವಾನಂದ ಪಟ್ಟಣಶೆಟ್ಟಿ, ಅರುಣ ಪಟ್ಟೇದ, ಶಿವಾನಂದ ಕರಿಗೊಣ್ಣವರ, ಸುರೇಶ ಭಜಂತ್ರಿ, ಪ್ರಕಾಶ ವಾಲಿ, ಉಮೇಶ ಮಾಗುಂಡನ್ನವರ, ಬಸವರಾಜ ಸತ್ತೂರಿ, ಕೆ. ಎಫ್. ನದಾಫ, ಪಿರೋಜ ಖಾದ್ರಿ, ಫಕ್ಕೀರಪ್ಪ ಕಿಲಾರಿ ಸೇರಿದಂತೆ ಪಟ್ಟಣ ಪಂಚಾಯತ ಅಕಾರಿಗಳು ಹಾಗೂ ಪಟ್ಟಣದ ನಿವಾಸಿಗಳು ಅನೇಕರು ಉಪಸ್ಥಿತರಿದ್ದರು.



### ಉದ್ಯಾನವನ ಅಭಿವೃದ್ಧಿಗೆ ಚಾಲನೆ

## ನಿಡಸೋಶಿ ಪಾಲಿಟೆಕ್ನಿಕ್ ವಿದ್ಯಾರ್ಥಿಗಳ ಸಾಧನೆ

• **ಸಂಕೇಶ್ವರ:** ಐಎಸ್‌ಟಿಇ ಹಾಗೂ ಶ್ರೀ ವಸಂತ ರಾವ್ ಪೋತದಾರ ಪಾಲಿಟೆಕ್ನಿಕ್ ಬೆಳಗಾವಿ ಸಹಯೋಗದಲ್ಲಿ ಇತ್ತೀಚೆಗೆನಡೆದ ರಾಷ್ಟ್ರಮಟ್ಟದ ತಾಂತ್ರಿಕ ಸ್ಪರ್ಧೆಯಲ್ಲಿ ನಿಡಸೋಶಿ ಪಾಲಿಟೆಕ್ನಿಕ್ ಕಾಲೇಜಿನ ವಿದ್ಯಾರ್ಥಿಗಳು ವಿವಿಧ ತಾಂತ್ರಿಕ ಸ್ಪರ್ಧೆಗಳಲ್ಲಿ ಭಾಗವಹಿಸಿ ವಿಜೇತರಾಗಿದ್ದಾರೆ.

ಸಿವಿಲ್ ವಿಭಾಗದಲ್ಲಿ ಪ್ರಥಮ ಸ್ಥಾನವನ್ನು ಪವನ್ ನಾರ್ವೇಕರ್ , ಆರ್ಯನ್ ಎಸ್ ನೀರವಾಣಿ ದ್ವಿತೀಯ ಸ್ಥಾನ, ಎಂಟಿಟಿ ವಿಭಾಗದಲ್ಲಿ ಆರ್ಯನ್ ಪಾಟೀಲ ದ್ವಿತೀಯ ಸ್ಥಾನ, ಇ ಆಂಡ್ ಸಿ ವಿಭಾಗ ಮತ್ತು ಇಶ್ರತಜಹಾನ್ ಮೊಮಿನ್ ತೃತೀಯ ಸ್ಥಾನ, ಸಿಎಸ್ ವಿಭಾಗದಲ್ಲಿ ವಿಜೇತರಾಗಿದ್ದಾರೆ.

ಸ್ಪರ್ಧೆಯಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಸಂಸ್ಥೆಯ ಅಧ್ಯಕ್ಷರು ಡಾ.ಶಿವಲಿಂಗೇಶ್ವರ ಸ್ವಾಮಿಗಳು,ಆಡಳಿತ ಮಂಡಳಿ, ಪ್ರಾಂಶುಪಾಲರಾದ ಪ್ರೊ. ಬಿ. ಆರ್. ಉಮರಾಣೆ ಹಾಗೂ ಉಪನ್ಯಾಸಕರು ಅಭಿನಂದಿಸಿ, ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.



## ಟ್ರ್ಯಾಕ್ಟರ್‌ಗಳಲ್ಲಿನ ಡಿಜೆ ಸೌಂಡ್ ತೆರವಿಗೆ ಆಗ್ರಹಿಸಿ ಧರಣಿ

• **ಬೆಳಗಾವಿ:** ಇತ್ತೀಚಿನ ದಿನಗಳಲ್ಲಿ ಉತ್ತರ ಕರ್ನಾಟಕದ ಜಾನಪದ ಹಾಡುಗಳ ಕಲೆಯನ್ನು ಕೆಲ ಗಾಯಕರ ಅಸಭ್ಯ ವರ್ತನೆಯ ಹಾಡುಗಳನ್ನು ಹಾಡಿ ಜಾನಪದಕಲೆಗಳನ್ನು ಹಾಳು ಮಾಡುತ್ತಿದ್ದಾರೆ ಎಂದು ಸಾಮಾಜಿಕ ಹೋರಾಟಗಾರ ಶ್ರೀನಿವಾಸ ಗೌಡ ಪಾಟೀಲ ಅಸಮಾಧಾನ ಹೊರ ಹಾಕಿದರು.

ಸೋಮಾವಾರ ನಗರದ ಜಂಟಿ ಸಾರಿಗೆ ಆಯುಕ್ತರ ಕಚೇರಿ ಎದುರು ಟ್ರ್ಯಾಕ್ಟರ್‌ಗಳಲ್ಲಿ ಅಕ್ರಮ ಡಿಜೆ ಸೌಂಡ್ ತೆರವುಗೊಳಿಸುವಂತೆ ಆಗ್ರಹಿಸಿ ಧರಣಿ ಪ್ರತಿಭಟನೆ ನಡೆಸಿದರು.

ಬೆಳಗಾವಿ, ಬಾಗಲಕೋಟೆ, ವಿಜಯಪುರ, ಜಿಲ್ಲೆಗಳಲ್ಲಿ ಟ್ರ್ಯಾಕ್ಟರ್‌ಗಳಲ್ಲಿ ವಿಪರಿತ ಶಬ್ದಗಳಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ. ಅಸಭ್ಯ ಹಾಡುಗಳನ್ನು ಹಾಕಿ ಸಾರ್ವಜನಿಕರಿಗೆ ಕಿರಿಕಿರಿ ಉಂಟು ಮಾಡಲಾಗುತ್ತಿದೆ. ಹೆಚ್ಚಿನ ಸೌಂಡ್‌ಗಳಿಂದ ರಸ್ತೆ ಅಪಘಾತಗಳು ಹೆಚ್ಚಾಗುತ್ತಿವೆ.

ಟ್ರಾಕ್ಟರ್ ಗಳಲ್ಲಿ ಡಿಜೆ ಸೌಂಡ್ ಗಳನ್ನು ಕೂಡಲೇ ತೆರವುಗೊಳಿಸಬೇಕು. ಇಲ್ಲವಾದರೆ ಸಂಭವಿಸುತ್ತಿರುವ ಅಪಘಾತಗಳ ಹೊಣೆ ಹೊರಬೇಕು. ಅನಿರ್ದಿಷ್ಟಾವಧಿ ಅಹೋರಾತ್ರಿ ಧರಣಿ ಸತ್ಯಾಗ್ರಹ ಮಾಡಲಾಗುವುದು ಎಂದು ಸಾಮಾಜಿಕ ಹೋರಾಟಗಾರ ಶ್ರೀನಿವಾಸ ಪಾಟೀಲ ಧರಣಿ ಪ್ರತಿಭಟನೆಯಲ್ಲಿ ಎಚ್ಚರಿಕೆ ನೀಡಿದರು.

ಈ ವೇಳೆ ಬುದ್ಧ ಬಸವ ಅಂಬೇಡ್ಕರ್ ಕಟ್ಟಡ ಮತ್ತು ಇತರೆ ನಿರ್ಮಾಣ ಕೂಲಿ ಕಾರ್ಮಿಕರ ಸಂಘದ ರಾಜ್ಯಾಧ್ಯಕ್ಷ ಮಾರುತಿ ಕೆಳಗೇರಿ, ಕೆಲ ದಲಿತ ಸಂಘಟನೆಗಳ ಕಾರ್ಯಕರ್ತರು ಸೇರಿದಂತೆ ಹಲವರು ಭಾಗಿಯಾಗಿದ್ದರು.



## ಗುಣಮಟ್ಟದ ಶಿಕ್ಷಣಕ್ಕೆ ಆದ್ಯತೆ




• **ಗೋಕಾಕ:** ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಜ್ಞಾನ ದಾಸೋಹ ನೀಡಿ ಲಕ್ಷ್ಮೀ ಎಜುಕೇಶನ್ ಟ್ರಸ್ಟ್ ಅವರ ಉಜ್ವಲ ಭವಿಷ್ಯಕ್ಕಾಗಿ ಶ್ರಮಿಸುತ್ತಿದೆ ಎಂದು ಖನಗಾಂವದ ಆದರ್ಶ ವಿದ್ಯಾಲಯದ ಮುಖ್ಯೋಪಾಧ್ಯಾಯ ಎಂ.ಬಿ.ಪಾಟೀಲ್ ಹೇಳಿದರು.

ಶನಿವಾರದಂದು ನಗರದ ಶ್ರೀ ಲಕ್ಷ್ಮಣರಾವ ಜಾರಕಿಹೊಳಿ ಕನ್ನಡ ಮತ್ತು ಆಂಗ್ಲ ಮಾಧ್ಯಮದ ಪೂರ್ವ ಪ್ರಾಥಮಿಕ ಶಾಲೆಗಳ ಗ್ರಾಜ್ಯುವೇಶನ ಡೆ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಸಮಾರಂಭವನ್ನು ಸಂಸ್ಥೆಯ ಉಪಾಧ್ಯಕ್ಷೆ ಸುವರ್ಣ ಭೀಮಶಿ ಜಾರಕಿಹೊಳಿ ಉದ್ಘಾಟಿಸಿದರು.

ವೇದಿಕೆಯಲ್ಲಿ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಸನತ್ ಜಾರಕಿಹೊಳಿ, ಎನ್.ಎಸ್ ಮಗದುಮ್ಮ, ಕ್ರೀಡಾ ತರಬೇತುದಾರೆ ಅರ್ಚನಾ ಅಮಟೆ, ಎಸ್‌ಎಲ್‌ಜೆ ಪಿಯು ಕಾಲೇಜಿನ ಪ್ರಾಚಾರ್ಯ ಅರುಣ ಪೂಜೇರ, ಮುಖ್ಯೋಪಾಧ್ಯಾಯರುಗಳಾದ ಎಚ್.ವಿ.ಪಾಗನೀಸ, ಎ.ಎಂ ಸರಕಾವಾಸ, ಪಿ.ವಿ.ಚಚಡಿ ಇದ್ದರು.

## ಏ.24ರವರೆಗೆ ರಾಜರಾಜೇಶ್ವರಿ ದೇವಿಜಾತ್ರೆ

• **ಯರಗಟ್ಟಿ:** ಪಟ್ಟಣದ ರಾಜರಾಜೇಶ್ವರಿ ದೇವಿ ಜಾತ್ರಾ ಮಹೋತ್ಸವದ ಪೂರ್ವಭಾವಿ ಸಭೆಯು ಗಣಪತಿ ಮಹಾರಾಜರ ನೇತೃತ್ವದಲ್ಲಿ ಯಶಸ್ವಿಯಾಗಿ ನೆರವೇರಿತು.

ರಾಜೇಂದ್ರ ಶೆಟ್ಟಿ ಮಾತನಾಡಿ, ಏ.20ರಂದು ಚಂಡಿಕಾ ಹೋಮ, ಏ.23ರಂದು ಉಡಿತುಂಬುವ ಕಾರ್ಯಕ್ರಮ, ವೇದಾಂತ ವೇದಿಕೆ, ಏ.24ರಂದು ವೇದಾಂತ ಪರಿಷತ್ ಹಾಗೂ ಸಂಜೆ 5ಗಂಟೆಗೆ ಶ್ರೀ ದೇವಿ ರಥೋತ್ಸವ ಜರುಗುವುದು ಎಂದು ಸಭೆಯಲ್ಲಿ ತಿಳಿಸಿದರು.

ಈ ವೇಳೆ ಹಿರಿಯರಾದ ರಾಜೇಂದ್ರಗೌಡ ಪಾಟೀಲ, ವಿಠ್ಠಲಗೌಡ ದೇವರಡ್ಡಿ, ಭಾಸ್ಕರ ಹಿರೇಮೆತ್ರಿ, ಎಸ್. ಎಚ್. ನಾಯ್ಕರ, ಸೋಮನಗೌಡ ದ್ಯಾಮನಗೌಡರ, ರಾಜು ತುಬಚಿ, ಸುಭಾಸ ಮೂಡಲಗಿ, ಜಗದೀಶ ಬಡಿಗೇರ, ವೀರೇಶ ಪತ್ತಾರ , ಬಾಳು ಮೂಲಿಮನಿ, ಹೊಸಮಠ ಗುರುಗಳು, ಬ್ಯಾಡಗಿ ಗುರುಗಳು, ಮೈತ್ರಾ ಹೊಂಗಲ, ಜಯಶ್ರೀ ಹಿರೇಮಠ, ಮಹಾಲಿಂಗಪ್ಪ ಕಟ್ಟಿ ಸೇರಿದಂತೆ ಸುತ್ತುಮುತ್ತಲಿಂದ ವಿವಿಧ ಗ್ರಾಮಗಳಿಂದ ಬಂದ ಆಶ್ರಮದ ಸದ್ಭಕ್ತರು, ಶ್ರೀ ರಾಜರಾಜೇಶ್ವರಿ ಸೊಸೈಟಿ ಸಿಬ್ಬಂದಿ ಇದ್ದರು.



## ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಸಿದ್ಧತೆ



• **ತೆಲಸಂಗ:** ಗ್ರಾಮದ ಮಹಾತ್ಮಗಾಂ ಪ್ರೌಢಶಾಲೆಯ ಎಸ್‌ಎಸ್‌ಎಲ್‌ಸಿ ಪರೀಕ್ಷಾಕೇಂದ್ರದಲ್ಲಿ 2026ರ ವಾರ್ಷಿಕ ಪರೀಕ್ಷೆಗಾಗಿ ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ. ಪರೀಕ್ಷಾರ್ಥಿಗಳು ಸುಗಮವಾಗಿ ಪರೀಕ್ಷೆ ಬರೆಯಲು ಅನುಕೂಲವಾಗುವಂತೆ ಶಿಕ್ಷಕರು ಪರೀಕ್ಷಾ ಕೊಠಡಿಗಳಲ್ಲಿ ವಿದ್ಯಾರ್ಥಿಗಳ ಹಾಲ್‌ಟಿಕೆಟ್ ನಂಬರ್ ಅಳವಡಿಸುವ ಕಾರ್ಯವನ್ನು ಪೂರ್ಣಗೊಳಿಸಿದ್ದಾರೆ.

ಈ ಪರೀಕ್ಷಾಕೇಂದ್ರದಲ್ಲಿಒಟ್ಟು 377 ವಿದ್ಯಾರ್ಥಿಗಳು ಪರೀಕ್ಷೆಗೆ ಬರೆಯಲಿದ್ದು, ಬಾಲಕರು 223, ಬಾಲಕಿಯರು 154. ರೆಗ್ಯುಲರ್ ವಿದ್ಯಾರ್ಥಿಗಳು 360, ರಿಪೀಟರ್ಸ್ 13 ಹಾಗೂ ಖಾಸಗಿ ಅಭ್ಯರ್ಥಿಗಳು 04. ಪ್ರತಿಯೊಬ್ಬ ವಿದ್ಯಾರ್ಥಿಗೂ ನಿಗದಿಪಡಿಸಿದ ಹಾಲ್‌ಟಿಕೆಟ್ ನಂಬರ್‌ಗಳನ್ನು ಕೊಠಡಿಗಳ ಡೆಸ್ಕ್‌ಗಳ ಮೇಲೆ ಸ್ಪಷ್ಟವಾಗಿ ನಮೂದಿಸಲಾಗಿದ್ದು, ಯಾವುದೇಗೊಂದಲವಿಲ್ಲದೆ ವಿದ್ಯಾರ್ಥಿಗಳು ತಮ್ಮ ಆಸನಗಳನ್ನು ಗುರುತಿಸಲು ಶಿಕ್ಷಕರು ಕ್ರಮ ವಹಿಸಿದ್ದಾರೆ. ಪರೀಕ್ಷಾಕೇಂದ್ರದ ಮುಖ್ಯ ಅೀಕ್ಷಕರಾದಎನ್.ಡಿ. ಅತ್ತಾರ, ಮುಖ್ಯ ಶಿಕ್ಷಕ ಗಫೂರ್ ಮುಲ್ಲಾ, ಅನಿಲ್ ಹಿರೇಮಠ, ಸೋಮಯ್ಯ ಮಠಪತಿ, ಬುರಾನ ಅರಟಾಳ ಉಪಸ್ಥಿತರಿದ್ದರು.

## ಬಸ್ ಚಾಲಕ ಅರುಣ ಹುಕ್ಕೇರಿಗೆ ಸನ್ಮಾನ

• **ನೇರಲಿ:** ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವ್ಯಾಪ್ತಿಯಲ್ಲಿ ಕಳೆದ ಹಲವು ವರ್ಷಗಳಿಂದ ಯಾವುದೇ ಅಪಘಾತವಿಲ್ಲದೆ, ಪ್ರಯಾಣಿಕರ ಸುರಕ್ಷತೆಗೆ ಮೊದಲ ಆದ್ಯತೆ ನೀಡಿ ಕರ್ತವ್ಯ ನಿರ್ವಹಿಸಿ ಬೆಳ್ಳಿ ಪದಕ ಪಡೆದ ಚಾಲಕ ಅರುಣ ಹನುಮಂತ ಹುಕ್ಕೇರಿ ಅವರನ್ನು ಗ್ರಾಮಸ್ಥರು ಸತ್ಕರಿಸಿ ಅಭಿನಂದಿಸಿದರು.

ಹುಕ್ಕೇರಿ ತಾಲೂಕು ಸಂಕೇಶ್ವರ ಘಟಕ ಕೇಂದ್ರ ಕಚೇರಿಯಲ್ಲಿ ಇತೀಚಿಗೆ ನಡೆದ ಸಮಾರಂಭದಲ್ಲಿ 'ಬೆಳ್ಳಿ ಪದಕ' ನೀಡಿ ಗೌರವಿಸಲಾಗಿತ್ತು. ಗ್ರಾಮದ ಪಿಡಿಒ ಸಂಜಯ ಹೊಸಮನಿ ಮಾತನಾಡಿ, ಸಾರಿಗೆ ಸಂಸ್ಥೆಯ ಬೆನ್ನೆಲುಬಾಗಿರುವ ಚಾಲಕರು ರಸ್ತೆಯ ಮೇಲಿನ ಸವಾಲುಗಳನ್ನು ಮೆಟ್ಟಿ ನಿಂತು ಪ್ರಯಾಣಿಕರನ್ನು ಸಾವಿರಾರು ಕಿಲೋಮೀಟರ್ ವಾಹನ ಚಲಾಯಿಸಿ ಸುರಕ್ಷಿತವಾಗಿ ಗುರಿ ತಲುಪಿಸುತ್ತಾರೆ. ಇಂತಹ ಶಿಸ್ತಿನ ಚಾಲಕರು ಇಡೀ ಸಾರಿಗೆ ಇಲಾಖೆಗೆ ಮಾದರಿಯಾಗಿದ್ದಾರೆ. ನಮ್ಮೂರಿನ ಉತ್ತಮ ಚಾಲಕರಾಗಿ ಹೊರಹೊಮ್ಮಿದ ಅರುಣ ಅವರಿಗೆ ಅಭಿನಂದನೆ ಸಲ್ಲಿಸುವುದಾಗಿ ತಿಳಿಸಿದರು. ಈ ಸಂದರ್ಭದಲ್ಲಿ ಗ್ರಾಮದ ಹಿರಿಯರಾದ ಭೀಮಪ್ಪ ಹುಕ್ಕೇರಿ, ವಿರೂಪಾಕ್ಷಿ ಹೊಸಮನಿ, ತಾಯವ್ವ ಹುಕ್ಕೇರಿ,ಪೀರಪ್ಪ ನಡುಮನಿ, ಸಹೋದರರಾದ ರಾಮಚಂದ್ರ, ಮಾರುತಿ,ಬಾಬಾಸಾಹೇಬ, ಅನಿಲ, ಸುನೀಲ, ಅಪ್ಪಣ್ಣ,ಪ್ರವೀಣ, ಗಂಗಾಧರ,ಸೇರಿದಂತೆ ಕುಟುಂಬಸ್ಥರು ಗ್ರಾಮಸ್ಥರು ಉಪಸ್ಥಿತರಿದ್ದರು. ಅನಿಲ ಹುಕ್ಕೇರಿ ಕಾರ್ಯಕ್ರಮ ಸ್ವಾಗತಿದ್ದರು. ಅಪ್ಪಣ್ಣ ಹುಕ್ಕೇರಿ ವಂದಿಸಿದರು.



## ಕಿರುಸುದ್ದಿ

### ಮಾ.20ರಿಂದ ಬಸವಧರ್ಮ ಉತ್ಸವ:ಬಸವಪ್ರಕಾಶ ಶ್ರೀ

**ರಾಮದುರ್ಗ:** ತಾಲೂಕಿನ ನಾಗನೂರ ಗ್ರಾಮದ ಗುರುಬಸವ ಮಠದಲ್ಲಿ ಮಾ.20 ಹಾಗೂ 21 ರಂದು ಬಸವಧರ್ಮ ಉತ್ಸವ ಹಾಗೂ ಅಲ್ಲಮಪ್ರಭುಗಳ ಜಯಂತಿ ಕಾರ್ಯಕ್ರಮ ನಡೆಯಲಿವೆ ಎಂದು ಶ್ರೀಮಠದ ಬಸವಪ್ರಕಾಶ ಸ್ವಾಮೀಜಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಮಾ.21ರ ಸಂಜೆ 7ಕ್ಕೆ 20 ಸಮಾರಂಭದ ಸಾನ್ನಿಧ್ಯವನ್ನು ಚಿತ್ತರಗಿ ಚಿತ್ತರಗಿ ಸಂಸ್ಥಾನ ಮಠದ ಗುರು ಮಹಾಂತ ಸ್ವಾಮಿಗಳು ವಹಿಸಲಿದ್ದು ಗುರುಬಸವ ಮಠದ ಬಸವಗೀತಾ ತಾಯಿ ನೇತೃತ್ವ ವಹಿಸಲಿದ್ದಾರೆ. ಬಸವಪ್ರಕಾಶ ಸ್ವಾಮೀಜಿ ಅಧ್ಯಕ್ಷತೆ ವಹಿಸುವರು.ಚೊಂಡಿ ಬಸವ ಮಂಟಪದ ವಚನ ಸಂಸ್ಕೃತಿ ತಾಯಿಯವರು ಅನುಭಾವ ನುಡಿಗಳನ್ನಾಡಲಿದ್ದು ಮುಖ್ಯ ಅತಿಥಿಗಳಾಗಿ ಬಟಕುರ್ಕಿ ಪಿಕೆಪಿಎಸ್ ಉಪಾಧ್ಯಕ್ಷ ನಾಗನಗೌಡ ಸಿದ್ದನಗೌಡ್ರ, ಅಶೋಕ ಕುಲಗೋಡ, ಶೇಖಪ್ಪ ಕಬಾಡದ, ವಿರುಪಾಕ್ಷ ಮುದಕವಿ ಸೇರಿದಂತೆ ಇತರರು ಪಾಲ್ಗೊಳ್ಳಲಿದ್ದಾರೆ.

21ರ ಬೆಳಿಗ್ಗೆ 8ಕ್ಕೆ ಸರ್ವ ಶ್ರೀಗಳ ನೇತೃತ್ವದಲ್ಲಿ ವಿಶ್ವಗುರು ಬಸವಣ್ಣನವರ ಭಾವಚಿತ್ರ ಹಾಗೂ ವಚನ ಸಾಹಿತ್ಯದ ಭವ್ಯ ಉತ್ಸವ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಲಿದೆ. ನಂತರ ಬೆಳಿಗ್ಗೆ 10ಕ್ಕೆ ಜರುಗಲಿರುವ ಸಮಾರೋಪ ಸಮಾರಂಭದ ಸಾನ್ನಿಧ್ಯವನ್ನು ಇಲಕಲ್‌ನ ಗುರುಮಹಾಂತ ಸ್ವಾಮೀಜಿ ವಹಿಸುವರು. ಗುರುಬಸವ ಮಠದ ಬಸವಗೀತಾ ತಾಯಿ, ಬಸವಪ್ರಕಾಶ ಸ್ವಾಮೀಜಿ ನೇತೃತ್ವ ವಹಿಸಲಿದ್ದಾರೆ. ಜಮಖಂಡಿಯ ಆನಂದ ದೇವರು, ಹೊಸಕೇರಿಯ ಮಾತೆ ನೀಲಲೋಚನ ತಾಯಿ ಸಮ್ಮುಖ ವಹಿಸಲಿದ್ದಾರೆ. ಶಾಸಕ ಅಶೋಕ ಪಟ್ಟಣ ಅಧ್ಯಕ್ಷತೆಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಶರಣೆ ಲಕ್ಷ್ಮೀ ಆರಿಬೆಂಚಿ, ಡಿಸಿಸಿ ಬ್ಯಾಂಕ್ ನಿರ್ದೇಶಕ ಮಲ್ಲಣ್ಣ ಯಾದವಾಡ, ಜಿ.ವಿ. ನಾಡಗೌಡ್ರ, ರವಿ ಯಡಹಳ್ಳಿ ವಿಜಯ್ ಶೆಟ್ಟಿ, ಗೀತಾ ಆರಿಬೆಂಚಿ ಸೇರಿದಂತೆ ಮತ್ತಿತರರು ಪಾಲ್ಗೊಳ್ಳಲಿದ್ದಾರೆ.ಎರಡು ದಿನಗಳ ಕಾಲ ನಡೆಯುವ ವಿವಿಧ ಧಾರ್ಮಿಕ ಸಮಾರಂಭದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡು, ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಶ್ರೀಮಠದ ಭಕ್ತ ಮಂಡಳಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಶಿಲಾ ಮಂದಿರ ಉದ್ಘಾಟನೆ ನಾಳೆ

**ಹುಬ್ಬಳ್ಳಿ:** ಇಲ್ಲಿನ ಉಣಕಲ್ಲ ಸದ್ಗುರು ಸಿದ್ಧೇಶ್ವರ ಸ್ವಾಮೀಜಿ ಯುಗಾದಿ ಜಾತ್ರಾ ಮಹೋತ್ಸವ ಅಂಗವಾಗಿ ಮಾ. 19 ರಂದು ನೂತನ ಶಿಲಾ ಮಂದಿರ ಉದ್ಘಾಟನೆ, ಶಿಲಾ ಮೂರ್ತಿಗಳ ಪ್ರಾಣ ಪ್ರತಿಷ್ಠಾಪಣೆ ಹಾಗೂ ರಥೋತ್ಸವ ಹಮ್ಮಿಕೊಳ್ಳಲಾಗಿದೆ ಎಂದು ಸದ್ಗುರು ಸಿದ್ಧೇಶ್ವರ ಸ್ವಾಮಿಯವರ ಹೊಸಮಠ ಟ್ರಸ್ಟ್ ಅಧ್ಯಕ್ಷ ರಾಜಣ್ಣ ಕೊರವಿ ತಿಳಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ ಗದ್ದುಗೆಗೆ ರುದ್ರಾಭಿಷೇಕ ಮತ್ತು ಮಹಾಪೂಜೆ ಜರುಗುವುದು. ಬೆಳಗ್ಗೆ 10.30ಕ್ಕೆ ಸದ್ಗುರು ಸಿದ್ಧೇಶ್ವರಸ್ವಾಮಿ ಕೈಲಾಸ ಮಂಟಪದಲ್ಲಿ ಹುಬ್ಬಳ್ಳಿ ರುದ್ರಾಕ್ಷಿ ಮಠದ ಬಸವಲಿಂಗ ಶ್ರೀಗಳ ಅಧ್ಯಕ್ಷತೆಯಲ್ಲಿ ಉಣಕಲ್ಲ ಗುರುಸಿದ್ದಯ್ಯ ಹಿರೇಮಠ ಹಾಗೂ ಸವಣೂರು ಮಹಾಂತಯ್ಯ ಹಿರೇಮಠ ಪೌರೋಹಿತ್ಯದಲ್ಲಿ ಸಾಮೂಹಿಕ ವಿವಾಹ ನೆರವೇರಲಿವೆ. ಸಂಜೆ 5.30ಕ್ಕೆ ರಥೋತ್ಸವ ಜರುಗಲಿದೆ. ಹುಕ್ಕೇರಿ ಬಸವಬೆಳವಿ ಚರಂತೇಶ್ವರ ವಿರಕ್ತಮಠದ ಶರಣಬಸವ ದೇವರು, ಕೊಪ್ಪಳ ಗವಿಸಿದ್ಧೇಶ್ವರ ಮಠದ ಅಭಿನವ ಗವಿಸಿದ್ಧೇಶ್ವರ ಶ್ರೀಗಳು, ರಬಕವಿ ಬ್ರಹ್ಮಾನಂದಮಠದ ಗುರುಸಿದ್ಧೇಶ್ವರ ಶ್ರೀ, ಉಪ್ಪಿನಬೆಟಗೇರಿಯ ಕುಮಾರ ವಿರೂಪಾಕ್ಷ ಶ್ರೀ, ಬಾಳೇಹೊನ್ನೂರಿನ ಪ್ರಸನ್ನ ರೇಣುಕಾ ವೀರಸೋಮೇಶ್ವರ ಶ್ರೀ, ಸಾಗರದ ಮುರುಘಾಮಠದ ಮುರುಘರಾಜೇಂದ್ರ ಶ್ರೀ, ಶಿರಹಟ್ಟಿ ಸಂಸ್ಥಾನ ಮಠದ ಫಕೀರದಿಂಗಾಲೇಶ್ವರ ಶ್ರೀ, ಹುಬ್ಬಳ್ಳಿ ರುದ್ರಾಕ್ಷಿ ಮಠದ ಬಸವಲಿಂಗ ಶ್ರೀ, ಆದಿಚುಂಚನಗಿರಿಯ ಡಾ. ನಿರ್ಮಲಾನಂದನಾಥ ಶ್ರೀಗಳಿಂದ ಪ್ರವಚನ ನಡೆಯಲಿದೆ ಎಂದರು. ಮಾ.19 ರಿಂದ 23ರ ವರೆಗೆ ಬಯಲುಗಣ ಕುಸ್ತಿಗಳು ನಡೆಯಲಿವೆ. 23ರಂದು ಸಂಜೆ 7 ಗಂಟೆಗೆ ಮಹಾರಥದ ಕಳಸ ಅವರೋಹಣ ಕಾರ್ಯಕ್ರಮ ನಡೆಯಲಿದ್ದು, ಅಂದು ಬೆಳಗ್ಗೆ 7 ಗಂಟೆಗೆ ಎತ್ತಿನಖಾಲಿ ಗಾಡಿ ಓಡಿಸುವ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ ಎಂದರು. ಟ್ರಸ್ಟ್ ಪದಾಧಿಕಾರಿ ರಾಮಣ್ಣ ಪದ್ಮಣ್ಣವರ, ಗುರುಸಿದ್ದಪ್ಪ ಬೆಂಗೇರಿ, ಎಸ್.ಐ. ನೇಕಾರ, ಗುರು ಹಿರೇಮಠ, ಗುರುಸಿದ್ದಪ್ಪ ಮೆಣಸಿನಕಾಯಿ, ಹನಮಂತಪ್ಪ ವಗ್ಗರ ಇದ್ದರು.

### ಮಾ.20ರಂದು ಶಿವದೀಕ್ಷೆ

**ಉಪ್ಪಿನಬೆಟಗೇರಿ:** ಸ್ಥಳೀಯ ವಿರೂಪಾಕ್ಷೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ಮಾ.20ರಂದು ಬೆಳಗ್ಗೆ 7 ಗಂಟೆಗೆ ದೊಡವಾಡ ಹಿರೇಮಠದ ಜಡಿಸಿದ್ಧೇಶ್ವರ ಶಿವಾಚಾರ್ಯರಿಂದ ದೇವಸ್ಥಾನದಲ್ಲಿ ಜಂಗಮ ವಟುಗಳಿಗೆ ಅಯ್ಯಾಚಾರ ಹಾಗೂ ಶಿವದೀಕ್ಷೆ ಕಾರ್ಯಕ್ರಮ ನಡೆಯಲಿದೆ.

### ಪಂತ ಬಾಳೇಕುಂದ್ರಿ ನಿಧನ



**ಬೆಳಗಾವಿ :** ಬೆಳಗಾವಿ ತಾಲೂಕಿನ ಶ್ರೀ ಕ್ಷೇತ್ರ ಪಂತ್ ಬಾಳೇಕುಂದ್ರಿಯಲ್ಲಿರುವ ಶ್ರೀ ದತ್ತ ಸಂಸ್ಥಾನದ ವ್ಯವಸ್ಥಾಪಕ ಟ್ರಸ್ಟ್‌ನ ಅಧ್ಯಕ್ಷ, ಕುಟುಂಬದ ಹಿರಿಯ ಸದಸ್ಯ ಮತ್ತು ಮಹಾರಾಷ್ಟ್ರ ಸರ್ಕಾರದ ನಿವೃತ್ತ ಸರ್ಕಾರಿ ಅಧಿಕಾರಿ, ದಾದಾಸಾಹೇಬ್ ಮತ್ತು ಪಂತ್ ಬಾಳೇಕುಂದ್ರಿ (89) ಅವರು ಸೋಮವಾರ ಠಾಣೆಯಲ್ಲಿರುವ ತಮ್ಮ ನಿವಾಸದಲ್ಲಿ ನಿಧನರಾಗಿದ್ದಾರೆ. ಅವರು ಪತ್ನಿ, ಪುತ್ರ ಅಭಿಜೀತ್, ವಿವಾಹಿತ ಪುತ್ರಿ ಮತ್ತು ಮೊಮ್ಮಕ್ಕಳನ್ನು ಅಗಲಿದ್ದಾರೆ.



ರಾಯಬಾಗ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್(ರಿ) ರಾಯಬಾಗ ವತಿಯಿಂದ ಸರ್ಕಾರಿ ಪ್ರೌಢಶಾಲೆ ದಿಗ್ಗೆವಾಡಿ ಸಹಯೋಗದೊಂದಿಗೆ ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮ ನಡೆಯಿತು.

## ಮಣ್ಣಿನ ಮಾಯೆ ಕೃತಿ ಲೋಕಾರ್ಪಣೆ

**ಬೆಳಗಾವಿ :** ಬರಹಗಾರರ ಜಾತಿ, ಧರ್ಮ, ಲಿಂಗತ್ವ ತಾರತಮ್ಯದ ಮಿತಿಗಳನ್ನು ಮೀರಿ ಮನುಷ್ಯತ್ವದ ಪರವಾಗಿ ಬರೆಯಬೇಕು, ಸಾಹಿತಿ ಸಮಾಜವನ್ನು ಒಗ್ಗೂಡಿಸಬೇಕು, ವಿಭಜಿಸಬಾರದು ಎಂದು ನಾಡಿನ ಖ್ಯಾತ ಕವಿ, ಸಾಂಸ್ಕೃತಿಕ ಚಿಂತಕ ಸತ್ಯಾನಂದ ಪಾತ್ರೋಟ ಹೇಳಿದರು. ನಗರದ ಬಸವರಾಜ ಕಟ್ಟೀಮನಿ ಪ್ರತಿಷ್ಠಾನದ ಸಭಾ ಭವನದಲ್ಲಿ ಬಂಡಾಯ ಸಾಹಿತ್ಯ ಸಂಘಟನೆ ಆಯೋಜಿಸಿದ್ದ, ವಿಜಯಪುರ ಮಹಿಳಾ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಡಾ. ವಿಷ್ಣು ಶಿಂದೆ ಅವರ ಮಣ್ಣಿನ ಮಾಯೆ ಕಥಾ ಸಂಕಲನ ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು. ಮುಖ್ಯ ಅತಿಥಿ, ರಾಯಣ್ಣ ಗೋಗ್ರೀನ್ ಫೌಂಡೇಶನ್ ಅಧ್ಯಕ್ಷ ಸದಾಶಿವ ದೇಶಿಂಗೆ, ಲೇಖಕ ವಿಷ್ಣು ಶಿಂದೆ ಮಾತನಾಡಿದರು.ಬಸವರಾಜ ಕಟ್ಟೀಮನಿ ಪ್ರತಿಷ್ಠಾನದ ಅಧ್ಯಕ್ಷ, ಯಲ್ಲಪ್ಪ ಹಿಮ್ಮಡಿ ಅಧ್ಯಕ್ಷತೆ ವಹಿಸಿದ್ದರು. ಶ್ರೀಧರ ಕಿಳ್ಳಿಖೇತರ, ಕೃಷ್ಣಾ ಘೋರ್ಪಡೆ, ಕೆ. ಆರ್. ಸಿದ್ದಗಂಗಮ್ಮ , ಹಮೀದಾಬೇಗಂ ದೇಸಾಯಿ, ಸುವರ್ಣಾ ಘೋರ್ಪಡೆ, ಮಚೆಂದ್ರ ಶಿಂಧೆ, ರಾಮಕೃಷ್ಣ ಮರಾಠೆ, ಸುಬ್ಬರಾವ್ ಎಂಟೆತ್ತಿನವರ, ಕೆ. ಎನ್. ದೊಡ್ಡಮನಿ, ಪ್ರೊ. ಮಾರುತಿ ಬುದ್ಯಾಳ, ರವಿ ಕೋಟಾರಗಸ್ತಿ, ರಾಮನಾಥ ಬನಶಂಕರಿ, ಶಂಕರ ಕೊಡತೆ, ಹನುಮಂತ ಮದಾಳೆ, ಸುಭಾಷ ಪಾಟೀಲ, ಶಶಿಕಾಂತ ಕಂಬನ್ನವರ, ರಾಜು ಬೆಂಡೆ ಮೊದಲಾದವರು ಉಪಸ್ಥಿತರಿದ್ದರು.



ಬೆಳಗಾವಿ: ನಗರದ ಬಸವರಾಜ ಕಟ್ಟೀಮನಿ ಪ್ರತಿಷ್ಠಾನದ ಸಭಾ ಭವನದಲ್ಲಿ ಬಂಡಾಯ ಸಾಹಿತ್ಯ ಸಂಘಟನೆ ಆಯೋಜಿಸಿದ್ದ ವಿಷ್ಣು ಶಿಂದೆ ಅವರ 'ಮಣ್ಣಿನ ಮಾಯೆ' ಕಥಾ ಸಂಕಲನವನ್ನು ಕವಿ ಸತ್ಯಾನಂದ ಪಾತ್ರೋಟ ಜನಾರ್ಪಣೆ ಗೊಳಿಸಿದರು.

## ಜಿಪಂ, ತಾಪಂ ಚುನಾವಣೆಗೆ ಸಿದ್ಧರಾಗಿರಿ

**ಚಿಕ್ಕೋಡಿ:** ಭಾರತದ ಸಂವಿಧಾನವೇ ಕಾಂಗ್ರೆಸ್ ಪಕ್ಷದ ಸಿದ್ಧಾಂತವಾಗಿದೆ. ಸಂವಿಧಾನದ ಆಶಯದಂತೆಯೇ ಪಕ್ಷ ಕಾರ್ಯಕ್ರಮ, ಯೋಜನೆಗಳನ್ನು ರೂಪಿಸಿದೆ ಎಂದು ಕರ್ನಾಟಕ ಪ್ರದೇಶ ಕಾಂಗ್ರೆಸ್ ಪ್ರಚಾರ ಸಮಿತಿ ರಾಜ್ಯಾಧ್ಯಕ್ಷ ವಿನಯಕುಮಾರ ಸೊರಕೆ ಹೇಳಿದರು.

ಪಟ್ಟಣದ ಪರಟಿ ನಾಗಲಿಂಗೇಶ್ವರ ಕಲ್ಯಾಣ ಮಂಟಪದಲ್ಲಿ ಕರ್ನಾಟಕ ಕಾಂಗ್ರೆಸ್ ಪ್ರಚಾರ ಸಮಿತಿ ಚಿಕ್ಕೋಡಿ ನೇತೃತ್ವದಲ್ಲಿ ಮಂಗಳವಾರ ಏರ್ಪಡಿಸಿದ್ದ ಚಿಕ್ಕೋಡಿ ಜಿಲ್ಲಾ ಮಟ್ಟದ ತರಬೇತಿ ಕಾರ್ಯಾಗಾರ ಹಾಗೂ ಕಾರ್ಯಕರ್ತರ ಸಮಾರಂಭ ಉದ್ದೇಶಿಸಿ ಮಾತನಾಡಿದರು.

ದೇಶದಲ್ಲಿ ಕಾಂಗ್ರೆಸ್ ಪಕ್ಷ ಜಾರಿಗೆ ತಂದಿರುವ ಮನರೇಗಾ ಸೇರಿದಂತೆ ವಿವಿಧ 35 ಯೋಜನೆಗಳನ್ನು ಪ್ರದಾನಮಂತ್ರಿ ನರೇಂದ್ರ ಮೋದಿ ಕಳೆದ 12 ವರ್ಷಗಳಲ್ಲಿ ನಿಷ್ಕ್ರಿಯಗೊಳಿಸುತ್ತಾ ಬಂದಿದ್ದಾರೆ. ಕಾಂಗ್ರೆಸ್ ಕಾರ್ಯಕರ್ತರು ಪಕ್ಷಸಂಘಟನೆಗೆ ಹೆಚ್ಚು ಒತ್ತು ನೀಡುವ ಮೂಲಕ ಮುಂಬರುವ ಜಿಲ್ಲಾ ಪಂಚಾಯಿತಿ, ತಾಲೂಕು ಪಂಚಾಯತಿ ಹಾಗೂ ಗ್ರಾಮ ಪಂಚಾಯತಿ ಚುನಾವಣೆಗಳಲ್ಲಿ ಗೆಲುವು ಸಾಧಿಸಬೇಕು ಎಂದರು.

ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಕಾಂಗ್ರೆಸ್ ಪಕ್ಷದ ಮುಖಂಡ ಸುಧೀರಕುಮಾರ ಪುರೋಹಿತ ಮಾತನಾಡಿ, ಕೇಂದ್ರದಲ್ಲಿ ಕಳೆದ 12 ವರ್ಷಗಳಿಂದ ಮೋದಿ ನೇತೃತ್ವದ ಸರ್ಕಾರ ಕೇವಲ ಪ್ರಚಾರವನ್ನು ಮಾತ್ರ ಮಾಡುತ್ತಿದೆ. ಕೆಲಸವನ್ನೇ ಮಾಡಿಲ್ಲ. ಭಾರತ ಉಳಿಯಬೇಕಾದರೆ ಸಂವಿಧಾನವನ್ನು ಉಳಿಸಿಕೊಳ್ಳಬೇಕಾದ ಹೊಣೆಗಾರಿಕೆ ನಮ್ಮೆಲ್ಲರ ಮೇಲಿದೆ ಎಂಬುವದನ್ನು ತಿಳಿದುಕೊಳ್ಳಬೇಕೆಂದು ಹೇಳಿದರು.




ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಚಿಕ್ಕೋಡಿ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಲಕ್ಷ್ಮಣರಾವ್ ಚಿಂಗಳೆ ಮಾತನಾಡಿ, ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ, ಸಂಸದೆ ಪ್ರಿಯಾಂಕಾ ಜಾರಕಿಹೊಳಿ, ಕರ್ನಾಟಕ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿ ಪ್ರಕಾಶ ಹುಕ್ಕೇರಿ ಸೇರಿದಂತೆ ಪಕ್ಷದ ಶಾಸಕರಿಂದ ಕಾಂಗ್ರೆಸ್ ಪಕ್ಷದ ಸಿದ್ಧಾಂತಗಳು ಮನೆ ಮನೆಗೆ ತಲುಪುತ್ತಿವೆ ಎಂದರು.

ಈ ಸಂದರ್ಭದಲ್ಲಿ ಕೆಪಿಸಿಸಿ ಪ್ರಚಾರ ಸಮಿತಿಯ ರಾಜ್ಯ ಪದಾಧಿಕಾರಿಗಳಾದ ರೋಹನ ಸಾಳ್ವೆ, ಶಂಭು ಶೆಟ್ಟಿ, ಚಿಕ್ಕೋಡಿ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಲಕ್ಷ್ಮಣರಾವ್ ಚಿಂಗಳೆ, ಮುನೀರ, ಮಲ್ಲಿಕಾರ್ಜುನ ರಾಶಿಂಗೆ, ರಮೇಶ ಪಾಟೀಲ, ಅನಿಲ ಮಾನೆ, ಪ್ರಭಾಕರ ಕೋರೆ, ರಾಮಕೃಷ್ಣ ಪಾನಬುಡೆ, ಕಿಶೋರ ಪವಾರ, ಭೀಮಸೇನ ಕಾಂಬಳೆ ಇತರರು ಇದ್ದರು.

## ವಿಜೇತರಿಗೆ ಪ್ರಶಸ್ತಿ ಫಲಕ

**ಬೆಳಗಾವಿ :** ಜೀವನದಲ್ಲಿ ಕಾಲೇಜು ಮೆಟ್ಟಿಲು ಹತ್ತದ ಬಸವರಾಜ ಕಟ್ಟೀಮನಿಯವರು, ಜಿಲ್ಲೆಯ ಎಲ್ಲ ಕಾಲೇಜುಗಳನ್ನು ಮುಟ್ಟಿರುವುದು ಒಂದು ಇತಿಹಾಸ ಎಂದು ಬೆಳಗಾವಿ ವಲಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ಕೆ. ಎಚ್. ಚೆನ್ನೂರ ಹೇಳಿದರು.

ಕರ್ನಾಟಕ ಸರ್ಕಾರದ ಬಸವರಾಜ ಕಟ್ಟೀಮನಿ ಪ್ರತಿಷ್ಠಾನವು ನಗರದ ಬಸವರಾಜ ಕಟ್ಟೀಮನಿ ಸಭಾ ಭವನದಲ್ಲಿ ಸೋಮವಾರ ಬೆಳಗಾವಿ ಜಿಲ್ಲಾ ಮಟ್ಟದ ಪದವಿಮತ್ತು ಶಿಕ್ಷಣ ಮಹಾವಿದ್ಯಾಲಯಗಳ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ಅಂತಿಮ ಹಂತದ ಕಟ್ಟೀಮನಿ ಕಥಿ ಹೇಳೂಣು ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರ ಮತ್ತು ನಗದು ಬಹುಮಾನ ವಿತರಿಸಿ ಮಾತನಾಡಿದರು.

ಪ್ರಥಮ ಸ್ಥಾನದಲ್ಲಿ ಬೈಲಹೊಂಗಲ ಸರ್ಕಾರಿ ಕಾಲೇಜಿನ ಸ್ಫೂರ್ತಿ ಕೊಟಗಿ; ದ್ವಿತೀಯ ಸ್ಥಾನದಲ್ಲಿ ನೇಸರಗಿ ಸರ್ಕಾರಿ ಕಾಲೇಜಿನ ವಿಜಯಲಕ್ಷ್ಮೀ ಮಾಳಣ್ಣವರ ಮತ್ತು ರಾಯಬಾಗದ ಸರ್ಕಾರಿ ಕಾಲೇಜಿನ ಲಕ್ಷ್ಮೀ ಸವದತ್ತಿ; ತೃತೀಯ ಸ್ಥಾನದಲ್ಲಿ ಕಾಗವಾಡ ಶಿವಾನಂದ ಮಹಾವಿದ್ಯಾಲಯದ ಕು. ಅನನ್ಯ ಕುಲಕರ್ಣಿ ಮತ್ತು ಖಾನಾಪುರ ಸರ್ಕಾರಿ ಕಾಲೇಜಿನ ಕು. ಅಕ್ಷತಾ ನಾಯ್ಕ ಹಾಗೂ ಸಂಕೇಶ್ವರದ ಎಸ್ ಡಿ ವಿ ಎಸ್ ಸಂಘದ ಪದವಿ ಕಾಲೇಜಿನ ಕು. ಚಂದನಾ ಖಾನಾಪುರಿ, ಚಿಕ್ಕೋಡಿಯ ಬಿ. ಸಿ. ಗಂಗಾಲ ಶಿಕ್ಷಣ ಮಹಾವಿದ್ಯಾಲಯದ ಕು. ಭಾವನಾ ಎಕ್ಕೇರಿಮಠ ಸಮಾಧಾನಕರ ಬಹುಮಾನ ಪಡೆದರು.

ಸ್ಪರ್ಧೆಯ ನ್ಯಾಯ ನಿರ್ಣಾಯಕರಾಗಿ ಡಾ. ರಾಮಕೃಷ್ಣ ಮರಾಠೆ, ಡಾ. ಸುಬ್ಬರಾವ್ ಎಂಟೆತ್ತಿನವರ, ಡಾ. ವೀಣಾ ಬಿರಾದಾರ್ ಕಾರ್ಯನಿರ್ವಹಿಸಿದರು. ಪ್ರತಿಷ್ಠಾನದ ಅಧ್ಯಕ್ಷ ಯಲ್ಲಪ್ಪ ಹಿಮ್ಮಡಿ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಸದಸ್ಯರಾದ ಡಾ. ಕೆ. ಆರ್. ಸಿದ್ದಗಂಗಮ್ಮ, ಹಮೀದಾ ಬೇಗಂ ದೇಸಾಯಿ, ಸೋಮನಾಥ ಚಿಕ್ಕನರಗುಂದ ಸೇರಿದಂತೆ ಹಲವರು ಇದ್ದರು.



## ದಿಗ್ಗೇವಾಡಿ: ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮ

**ರಾಯಬಾಗ:** ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ (ರಿ) ರಾಯಬಾಗ ವತಿಯಿಂದ ಸರ್ಕಾರಿ ಪ್ರೌಢಶಾಲೆ ದಿಗ್ಗೆವಾಡಿ ಸಹಯೋಗದೊಂದಿಗೆ ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮ ನಡೆಯಿತು.ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ನಿಡೋಣಿ , ರಾಯಬಾಗ ತಾಲೂಕಿನ ಜ್ಞಾನವಿಕಾಸ ಸಮನ್ವಯಾಧಿಕಾರಿ ಸುರೇಖಾ ಅಶೋಕ ಹೆಬ್ಬಳ್ಳಿ, ವರುಟೆ, ಕಬಾಡಗಿ , ಹೆರವಾಡೆ , ಪ್ರಜ್ಞಾ ಪೂಜೇರಿ ಸಮ್ಮುಖದಲ್ಲಿ ಕಾರ್ಯಕ್ರಮ ಉದ್ಘಾಟಿಸಲಾಯಿತು. ಸಂಪನ್ಮೂಲ ವ್ಯಕ್ತಿ ನಿಡೋಣಿ ಮಾತನಾಡಿ, ಮಕ್ಕಳಿಗೆ ಉತ್ತಮ ಆಹಾರ ಪದ್ದತಿ ಮತ್ತು ನಮ್ಮ ನಡೆ ನುಡಿ ಹಾಗೂ ಒಳ್ಳೆಯ ಸಂಸ್ಕಾರ ಕೊಡುವುದು ಅವಶ್ಯ ಎಂದರು.ಈ ಸಂದರ್ಭದಲ್ಲಿ ಸುರೇಖಾ, ಸೇವಾಪ್ರತಿನಿಧಿ ಐಶ್ವರ್ಯ ಚೌಗಲಾ, ಪ್ರೌಢಶಾಲೆಯ ಎಲ್ಲಾ ಶಿಕ್ಷಕ ವೃಂದದವರು, ಮುದ್ದು ಮಕ್ಕಳು ಉಪಸ್ಥಿತರಿದ್ದರು.

## ಡಾ. ಪುನೀತ್ ರಾಜಕುಮಾರ ಜನ್ಮದಿನ: ನೇತ್ರದಾನ ಅರಿವು

**ಬೆಳಗಾವಿ:** ಕರ್ನಾಟಕ ರತ್ನ ಡಾ. ಪುನೀತ್ ರಾಜಕುಮಾರ್ ಅವರ 51ನೇ ಜನ್ಮದಿನದ ಪ್ರಯುಕ್ತ ಬೆಳಗಾವಿಯ ಟಿಳಕವಾಡಿ ಪ್ರದೇಶದಲ್ಲಿರುವ ನೇತ್ರದರ್ಶನ್ ಸೂಪರ್ ಸ್ಪೆಷಾಲಿಟಿ ಕಣ್ಣಿನ ಆಸ್ಪತ್ರೆ ಯೂನಿಟ್ ಆಫ್ ಡಾ. ಅಗರವಾಲ್ಸ್ ಕಣ್ಣಿನ ಆಸ್ಪತ್ರೆಯಲ್ಲಿ ನೇತ್ರದಾನ ಅರಿವು ಕಾರ್ಯಕ್ರಮ ನಡೆಯಿತು.

ಸಮಾಜ ಸೇವಕರಾದ ಆಕಾಶ್ ಹಲಗೇಕರ್, ಉದಯ್ ಕೋಲಕರ್, ವಿಷ್ಣು ಇಂಗಳಿ, ಲಕ್ಷ್ಮೀ ಇಂಗಳಿ, ಶ್ವೇತಾ ಕೋಟ್ಯಾನ್, ಗಜಾನನ ಮೇತ್ರಿ, ಭಾವಕನ್ನಾ ಪಿರಗಾನೆ ಹಾಗೂ ಅವರ ಸ್ನೇಹಿತರು ಭಾಗವಹಿಸಿ ರೋಟರಿ ನೇತ್ರದರ್ಶನ್ ಕಣ್ಣಿನ ಬ್ಯಾಂಕ್ಗೆ ತಮ್ಮ ಕಣ್ಣುಗಳನ್ನು ದಾನ ಮಾಡುವದರ ಮೂಲಕ, ಪುನೀತ್ ರಾಜಕುಮಾರ್ ಅವರ ಜನ್ಮದಿನವನ್ನು ಸರಳವಾಗಿ ಹಾಗೂ ಅರ್ಥಪೂರ್ಣವಾಗಿ ಆಚರಿಸಿದರು.

ಪುನೀತ್ ರಾಜಕುಮಾರ್ ಅವರು, ತಮ್ಮ ಜೀವನಕಾಲದಲ್ಲಿಯೇ ಅನಾಥಾಶ್ರಮಗಳು, ವೃದ್ಧಾಶ್ರಮಗಳು ಹಾಗೂ ಗೋಶಾಲೆಗಳಿಗೆ ಸಹಾಯ ಮಾಡುವ ಮೂಲಕ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿದ್ದರು. ಅದೇ ರೀತಿ ಅವರು ತೀರಿಕೊಂಡ ನಂತರ ತಮ್ಮ ಕಣ್ಣುಗಳನ್ನು ದಾನ ಮಾಡುವ ಮೂಲಕ ನಾಲ್ಕು ಅಂಧರಿಗೆ ಬೆಳಕಾಗಿ, ಮಾನವೀಯತೆ ಮತ್ತು ಸೇವೆಯ ಆದರ್ಶವನ್ನು ತೋರಿಸಿದರು.

ಡಾ. ಸಚಿನ ಮಾಹುಲಿ, ಡಾ. ಅವಧೂತ ವಾಗ್ಲೆ, ಡಾ. ಅಲ್ಪೇಶ್ ಟೋಪರಾನಿ ಹಾಗೂ ವ್ಯವಸ್ಥಾಪಕರಾದ ಶ್ರೀ ಸೇತು ರಾಮಸ್ವಾಮಿ ಅವರು ಮಾತನಾಡಿದರು.

ಕಾರ್ಯಕ್ರಮದ ಅಂತ್ಯದಲ್ಲಿ ಪುನೀತ್ ರಾಜಕುಮಾರ್ ಅವರ ಸ್ಮರಣಾರ್ಥವಾಗಿ ಸಮಾಜ ಸೇವೆಯ ಪ್ರತಿಜ್ಞೆ ಕೈಗೊಳ್ಳಲಾಯಿತು. ಅವರ ಆದರ್ಶಗಳು ಮತ್ತು ಮಾನವೀಯ ಮೌಲ್ಯಗಳು ಮುಂದಿನ ಪೀಳಿಗೆಗೂ ದಾರಿದೀಪವಾಗಲಿ ಎಂಬ ಆಶಯವನ್ನು ಎಲ್ಲರೂ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ಆಸ್ಪತ್ರೆಯ ವೈದ್ಯರು, ಸಮಾಜ ಸೇವಕರು ಹಾಗೂ ಆಸ್ಪತ್ರೆಯ ಸಿಬ್ಬಂದಿ ವರ್ಗದವರು ಸೇರಿದಂತೆ ಇತರರು ಇದ್ದರು.




## ಮಾ.24ರಿಂದ ಬೆಲೆಕ್ಸ್ - 2026 ಬೃಹತ್ ಕೈಗಾರಿಕಾ ಪ್ರದರ್ಶನ

**ಬೆಳಗಾವಿ:** ಬೆಳಗಾವಿ ಚೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರೀಸ್ ವತಿಯಿಂದ ಮಾರ್ಚ್ 24, 25 ಹಾಗೂ 26, ರಂದು ಬೆಳಗಾವಿಯಲ್ಲಿ ಬೃಹತ್ ಕೈಗಾರಿಕಾ ಪ್ರದರ್ಶನ ಆಯೋಜಿಸಲಾಗಿದೆ.

ಬಿಸಿಸಿಐ ಅಧ್ಯಕ್ಷ ಪ್ರಭಾಕರ ನಾಗರಮುನೋಳಿ ಮತ್ತು ಇವೆಂಟ್ ಚೇರಮನ್ ಉದಯ ಜೋಶಿ ಪತ್ರಿಕಾಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದರು.

ಉದ್ಯಮಬಾಗ್ನ ಬೆಳಗಾವಿ ಫೌಂಡ್ರಿ ಕ್ಲಸ್ಟರ್‌ನಲ್ಲಿ ಬೆಲೆಕ್ಸ್ - 2026 ಹೆಸರಿನಲ್ಲಿ ಇಂಡಸ್ಟ್ರಿಯಲ್ ಮತ್ತು ಟ್ರೇಡ್ ಎಕ್ಸಿಬಿಷನ್ ಆಯೋಜಿಸಲಾಗುತ್ತಿದೆ.

ಈ ಪ್ರದರ್ಶನದ ಮೂಲಕ ಬೆಳಗಾವಿ ಹಾಗೂ ಉತ್ತರ ಕರ್ನಾಟಕದ ಉತ್ಪಾದನಾ, ವ್ಯಾಪಾರ, ಶಿಕ್ಷಣ, ಕೃಷಿ ಮತ್ತು ಆಹಾರ ಸಂಸ್ಕರಣಾ ಕ್ಷೇತ್ರಗಳ ಸಾಮರ್ಥ್ಯವನ್ನು ಹೆಚ್ಚು ವ್ಯಾಪಕವಾಗಿ ಪರಿಚಯಿಸುವ ಉದ್ದೇಶ ಹೊಂದಲಾಗಿದೆ ಎಂದು ಅವರು ತಿಳಿಸಿದರು.

ಅಲ್ಲದೆ, ನಮ್ಮ ಕೈಗಾರಿಕೆಗಳ ಶಕ್ತಿಯನ್ನು ಪ್ರದರ್ಶಿಸುವುದರ ಜೊತೆಗೆ ವಿವಿಧ ಉತ್ಪನ್ನಗಳು ಮತ್ತು ಸೇವೆಗಳನ್ನು ಈ ವೇದಿಕೆಯ ಮೂಲಕ ಪ್ರಚಾರ ಮಾಡುವ ಅವಕಾಶವನ್ನೂ ಕಲ್ಪಿಸಲಾಗಿದೆ. ಬೆಳಗಾವಿ ಅಲ್ಲದೆ ಗೋವಾ, ಕೊಲ್ಲಾಪುರ, ಹುಬ್ಬಳ್ಳಿ ಧಾರವಾಡ ಉದ್ಯಮಿಗಳನ್ನೂ ಆಹ್ವಾನಿಸಲಾಗಿದೆ ಎಂದರು.ಬೆಲೆಕ್ಸ್- 2026 ಒಂದು (ಬಿಸಿನೆಸ್-ಟು-ಬಿಸಿನೆಸ್) ಪ್ರದರ್ಶನವಾಗಿದ್ದು, ಬೆಳಗಾವಿಯ ಕೈಗಾರಿಕಾ ಪರಿಸರದ ಶಕ್ತಿಯನ್ನು ಪರಿಚಯಿಸುವುದರ ಜೊತೆಗೆ ಉದ್ಯಮಿಗಳಲ್ಲಿ ಜಾಗೃತಿ ಮೂಡಿಸುವುದು ಹಾಗೂ ಸ್ಥಳೀಯ ಕೈಗಾರಿಕೆಗಳ ಪುನರುಜ್ಜೀವನ ಮತ್ತು ಬೆಳವಣಿಗೆಯನ್ನು ಉತ್ತೇಜಿಸುವ ಉದ್ದೇಶವನ್ನು ಹೊಂದಲಾಗಿದೆ ಎಂದು ಅವರು ತಿಳಿಸಿದರು. ಬಿಸಿಸಿಐ ಹಾಗೂ ವ್ಯವಸ್ಥಾಪಕ ಸಮಿತಿಯ ಪರವಾಗಿ ಎಲ್ಲಾ ಕೈಗಾರಿಕೋದ್ಯಮಿಗಳು, ವ್ಯಾಪಾರಿಗಳು, ಉದ್ಯಮಿಗಳು, ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ಈ ಪ್ರದರ್ಶನಕ್ಕೆ ಭೇಟಿ ನೀಡಿ ಇದರ ಪ್ರಯೋಜನ ಪಡೆಯಬೇಕೆಂದು ವಿನಂತಿಸಿದರು.ಬಿಸಿಐ ಕಾರ್ಯದರ್ಶಿ ಸತೀಶ್ ಕುಲಕರ್ಣಿ, ಇವೆಂಟ್ ಉಪಾಧ್ಯಕ್ಷ, ವಿಕ್ರಮ ಜೈನ್, ಬಿಸಿಸಿಐ ಮಾಜಿ ಅಧ್ಯಕ್ಷ, ಎಫ್.ಕೆಸಿಸಿಐ ನಿರ್ದೇಶಕ ಸಂಜೀವ ಕತ್ತಿಶೆಟ್ಟಿ, ಬಿಸಿಸಿಐ ಹಿರಿಯ ಉಪಾಧ್ಯಕ್ಷ ಸ್ವಪ್ನಿಲ್ ಶಹ, ಜಂಟಿ ಕಾರ್ಯದರ್ಶಿ ಮನೋಜ ಮತ್ತಿಕೊಪ್ಪ, ಆಡಳಿತ ಮಂಡಳಿಯ ಸದಸ್ಯರಾದ ವೈಭವ ವೇರ್ಣೇಕರ್, ಸುಧೀರ ಚೌಗಲೆ, ಎಂ.ಕೆ.ಹೆಗಡೆ ಮೊದಲಾದವರಿದ್ದರು.

## ಸರ್ವ ಕ್ಷೇತ್ರದಲ್ಲೂ ಮಹಿಳೆ ಸಶಕ್ತವಾಗಲಿ

**ಕಕಮರಿ:** ಮಹಿಳೆಯರು ಎಲ್ಲ ವಿಧದಿಂದ ಸಶಕ್ತರಾಗಬೇಕು. ಅಂದಾಗ ಸಮಾಜ ಹಾಗೂ ದೇಶದ ಉನ್ನತಿ ಸಾಧ್ಯ ಎಂದು ಅಥಣಿ ಸಂಜೀವಿನಿ ಮಹಿಳಾ ಒಕ್ಕೂಟ ಅಧ್ಯಕ್ಷೆ ಎಮ್.ಎ.ಗಡಾಲೋಟಿ ಹೇಳಿದರು.


ಅವರು ಸ್ಥಳೀಯ ಸಂಜೀವಿನಿ ಮಹಿಳಾ ಒಕ್ಕೂಟದ ಕಾರ್ಯಾಲಯದಲ್ಲಿ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇಂದು ಮಹಿಳೆಯರು ಎಲ್ಲ ಕ್ಷೇತ್ರಗಳಲ್ಲಿ ತಮ್ಮದೇ ಆದ ಕೊಡುಗೆಗಳನ್ನು ನೀಡುತ್ತಲೇ ಇದ್ದಾರೆ. ಮಹಿಳೆಯರು ಅಬಲೆಯಲ್ಲ ಸಬಲೆ. ತನ್ನೊಟ್ಟಿಗೆ ತನ್ನ ಕುಟುಂಬವನ್ನು ತನ್ನ ಸಮಾಜವನ್ನು ಉನ್ನತಿಯ ಹಾದಿಗೆ ಕರೆದೊಯ್ಯುವ ಶಕ್ತಿಯನ್ನು ಹೊಂದಿದ್ದಾರೆ. ಮುಖ್ಯವಾಗಿ ಆರೋಗ್ಯ ಕ್ಷೇತ್ರದಲ್ಲಿ ವೈದ್ಯೆಯಾಗಿ ಶುಶ್ರೂಷಕಿಯಾಗಿ ತಂತ್ರಜ್ಞೆಯಾಗಿ ಹಾಗೂ ಇನ್ನಿತರ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತ ತನ್ನ ಸೇವೆಯ ಪರಾಕಾಷ್ಠೆಯನ್ನು ಮೆರೆದಿದ್ದಾರೆ. ಎಂದು ಹೇಳಲು ನಿಜಕ್ಕೂ ಹೆಮ್ಮೆ ಎನಿಸುತ್ತದೆ ಎಂದರು.



ಕಾಳಮ್ಮಾ ಬಡಿಗೇರ ಮಾತನಾಡಿದರು.

ಕಾರ್ಯಕ್ರಮದಲ್ಲಿ ಕಲಾವತಿ ಮಡಿವಾಳ, ಅಮ್ಮಜವ್ವ ದಾಶ್ಯಾಳ, ಭಾರತಿ ವಾಲಿ, ಸುಶೀಲಾ ನಾಟೀಕಾರ, ಶಕುಂತಲಾ ನಾವಿ, ಮುತ್ತವ್ವಾ ಪಠಾಣಿ, ಪ್ರಭಾವತಿ ಸಿಂದೂರ, ಚಂದ್ರವ್ವಾ ಕಾರಜನಗಿ, ಸುನಂದಾ ಮೈಗೂರ, ದೀಪಾ ಬಿಳ್ಳೂರ, ರಾಜಶ್ರೀ ಜನಗೌಡ, ಸವಿತಾ ಕಾಂಬಳೆ, ಶಾಂತವ್ವ ಕೋರಬು, ಕಮಲಾಕ್ಷಿ ನಾವಿ ಸೇರಿದಂತೆ ಮತ್ತಿತರರು ಇದ್ದರು.

## 28 ಶಾಲೆಗಳು ಕೇಂದ್ರದ 'ಪಿಎಂ-ಶ್ರೀ' ಯೋಜನೆಗೆ ಆಯ್ಕೆ: ಸಂಸದ ಕಡಾಡಿ




**ಮೂಡಲಗಿ :** ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಮಹತ್ವಾಕಾಂಕ್ಷೆಯ 'ಪಿಎಂ-ಶ್ರೀ' ಯೋಜನೆಯಡಿ ಬೆಳಗಾವಿ ಲೋಕಸಭಾ ಕ್ಷೇತ್ರದ 21 ಪ್ರಾಥಮಿಕ, 6 ಪ್ರೌಢ ಶಾಲೆಗಳು ಮತ್ತು 1 ಪದವಿ ಪೂರ್ವ ಸರ್ಕಾರಿ ಶಾಲೆಗಳನ್ನು ಅತ್ಯಾಧುನಿಕ ಹಾಗೂ ಮಾದರಿ ಶಾಲೆಗಳನ್ನಾಗಿ ಅಭಿವೃದ್ಧಿಪಡಿಸಲು ಕೇಂದ್ರ ಶಿಕ್ಷಣ ಸಚಿವಾಲಯವು ಆಯ್ಕೆ ಮಾಡಿದೆ ಎಂದು ರಾಜ್ಯಸಭಾ ಸಂಸದ ಈರಣ್ಣ ಕಡಾಡಿ ಅವರು ತಿಳಿಸಿದ್ದಾರೆ.

ನವದೆಹಲಿಯಲ್ಲಿ ನಡೆಯುತ್ತಿರುವ ಸಂಸತ್ತಿನ ಬಜೆಟ್ ಅಧಿವೇಶನದಲ್ಲಿ ಬೆಳಗಾವಿ ಲೋಕಸಭಾ ಕ್ಷೇತ್ರದಲ್ಲಿ ಪಿಎಂ-ಶ್ರೀ' ಯೋಜನೆಯ ಅನುಷ್ಠಾನದ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಕೇಂದ್ರ ಶಿಕ್ಷಣ ಸಚಿವಾಲಯದ ರಾಜ್ಯ ಸಚಿವ ಜಯಂತ್ ಚೌಧರಿ ಅವರು ಮೂಡಲಗಿ ತಾಲೂಕಿನ ಕಲ್ಲೋಳಿ, ಪಟಗುಂದಿ ಹಾಗೂ ಅರಳಿಮಟ್ಟಿ, ಗೋಕಾಕ ನಗರದ ಸರ್ಕಾರಿ ಪದವಿ ಪೂರ್ವ ಕಾಲೇಜು, ಬೆನಚಿನಮರಡಿ ಹಾಗೂ ಕೊಣ್ಣೂರ, ಸವದತ್ತಿ ತಾಲೂಕಿನ ಮರಕುಂಬಿ, ಆಲದಕಟ್ಟಿ, ಹಿರೇಕುಂಬಿ, ಹೂಲಿ, ಶಿರಸಂಗಿ, ಮುನವಳ್ಳಿ, ಮುಗಳಿಹಾಳ, ಯಡ್ರಾಂವಿ, ಬೈಲಹೊಂಗಲ ಇಂದಿರಾನಗರ, ಬೆಳವಡಿ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಬೈಲಹೊಂಗಲ ಹಾಗೂ ಬೆಳಗಾವಿ ತಾಲೂಕಿನ ಖಾನಗಾಂವ್ ಬಿ.ಕೆ., ಗುಲಗಂಜಿಕೊಪ್ಪ, ಮಚ್ಚೆ, ಉಚಗಾಂವ್, ಬಾಳೆಕುಂದ್ರಿ ಬಿ.ಕೆ. ಸಾಂಬ್ರಾ, ಮುತಗಾ ಮತ್ತು ಕರ್ನಾಟಕ ಪಬ್ಲಿಕ್ ಸ್ಕೂಲ್ , ವಡಗಾಂವ್ ಈ ಗ್ರಾಮಗಳ ಶಾಲೆಗಳು ಆಯ್ಕೆಯಾಗಿವೆ.

ಈಗಾಗಲೇ 6 ಸ್ಮಾರ್ಟ್ ಕ್ಲಾಸ್‌ರೂಮ್ ನಿರ್ಮಾಣಕ್ಕೆ 30.00 ಲಕ್ಷ ರೂ.ಗಳ ಅನುದಾನ ಮಂಜೂರಾಗಿದೆ. 3 ಸುಸಜ್ಜಿತ ವಿಜ್ಞಾನ ಪ್ರಯೋಗಾಲಯಗಳ ಸ್ಥಾಪನೆಗಾಗಿ 52.80 ಲಕ್ಷ ರೂ.ಗಳ ಅನುದಾನ ನೀಡಲಾಗಿದೆ. 11 ಪ್ರಾಥಮಿಕ ಶಾಲಾ ಗ್ರಂಥಾಲಯಗಳ ಅಭಿವೃದ್ಧಿಗಾಗಿ 52.80 ಲಕ್ಷ ರೂ.ಗಳ ಅನುದಾನ ನೀಡಲಾಗಿದೆ. 6 ಶಾಲೆಗಳಲ್ಲಿ ಸೌರಶಕ್ತಿ ಅಳವಡಿಕೆಗಾಗಿ 29.52 ಲಕ್ಷ ರೂ.ಗಳ ಬಿಡುಗಡೆ ಮಾಡಲಾಗಿದೆ.ಮಳೆನೀರು ಕೊಯ್ಲು, ತ್ಯಾಜ್ಯ ವಿಲೇವಾರಿ ಘಟಕ ಹಾಗೂ ಪ್ಲಾಸ್ಟಿಕ್ ಮುಕ್ತ ಆವರಣ ನಿರ್ಮಾಣದ ಮೂಲಕ ಇವುಗಳನ್ನು 'ಹಸಿರು ಶಾಲೆ'ಗಳನ್ನಾಗಿ ಪರಿವರ್ತಿಸಲಾಗುವುದು. ''ರಾಷ್ಟ್ರೀಯ ಶಿಕ್ಷಣ ನೀತಿ 2020 ರ ಅನ್ವಯ ಈ ಶಾಲೆಗಳನ್ನು ಜಿಲ್ಲೆಯ 'ಎಕ್ಸಲೆನ್ಸ್ ಸೆಂಟರ'ಗಳಾಗಿ ಬೆಳೆಸಲಾಗುವುದು. ಈ ಶಾಲೆಗಳು ಆಧುನಿಕ ತಂತ್ರಜ್ಞಾನದ ಜೊತೆಗೆ ಗುಣಮಟ್ಟದ ಶಿಕ್ಷಣ ನೀಡಿ, ಸುತ್ತಮುತ್ತಲಿನ ಗ್ರಾಮೀಣ ಭಾಗದ ಶಾಲೆಗಳಿಗೆ ದಾರಿ ದೀಪವಾಗಲಿವೆ'' ಎಂದು ಸಚಿವರು ಮಾಹಿತಿ ನೀಡಿದ್ದಾರೆಂದು ಸಂಸದ ಈರಣ್ಣ ಕಡಾಡಿ ಅವರು ತಿಳಿಸಿದ್ದಾರೆ.

## ಯೋಜನೆಗಳ ಯಶಸ್ಸಿಗೆ ಶ್ರಮವಹಿಸಿ

**ಅಡಹಳ್ಳಿ :** ಸರ್ಕಾರಿ ಶಾಲೆಗಳಲ್ಲಿ ಉನ್ನತ ಗುಣಮಟ್ಟದ ಶಿಕ್ಷಣ ದೊರೆಯಬೇನ್ನುವ ಉದ್ದೇಶದಿಂದ ಶಿಕ್ಷಣ ಇಲಾಖೆ ಸಾಕಷ್ಟು ಕಾರ್ಯಕ್ರಮ, ಯೋಜನೆ ರೂಪಿಸಿದ್ದು ಅವುಗಳ ಯಶಸ್ವಿ ಅನುಷ್ಠಾನಕ್ಕೆ ಶಿಕ್ಷಕರು ಮತ್ತು ಶಾಲಾಭಿವೃದ್ಧಿ ಸಮಿತಿ ಸದಸ್ಯರ ಕಾಳಜಿ ಬೇಕಿದೆ ಎಂದು ಅಡಹಳ್ಳಿ ಕ್ಲಸ್ಟರ್ ಮಟ್ಟದ ಸಮೂಹ ಸಂಪನ್ಮೂಲ ಸಂಯೋಜಕ ಎಸ್. ಕೆ. ಖೋತ ಹೇಳಿದರು.

ಅವರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಅಡಹಳ್ಳಿ ಕ್ಲಸ್ಟರ್ ಮಟ್ಟದ ಎಸ್‌ಡಿಎಂಸಿ ಪಧಾಽಕಾರಿಗಳ ತರಬೇತಿ ಕಾರ್ಯಾಗಾರದಲ್ಲಿ ಮಾತನಾಡಿ, ಎಸ್‌ಡಿಎಂಸಿ ಪದಾಽಕಾರಿಗಳು ತಮ್ಮ ಶಾಲೆಯ ಶಿಕ್ಷಕರು ವಿಧ್ಯಾರ್ಥಿಗಳ ಬಗ್ಗೆ ಕಾಳಜಿ ವಹಿಸಿ ಶಾಲೆಯ ಅಭಿವೃದ್ಧಿಯ ಕಡೆಗೆ ಗಮನ ಹರಿಸಬೇಕು. ಸದಸ್ಯರು ತಮ್ಮ ಕರ್ತವ್ಯ ಅರಿತು ಕ್ರೀಯಾ ಶೀಲತೆಯಿಂದ ಕಾರ್ಯನಿರ್ವಹಿಸಲು ಮುಂದಾದರೇ ಮಕ್ಕಳ ಭವಿಷ್ಯ ನಿರ್ಮಾಣದ ಕಾರ್ಯ ಸುಲಭವಾಗಲಿದೆ. ದಿನನಿತ್ಯ ಒಬ್ಬ ಸದಸ್ಯರಾದರೂ, ಶಾಲೆಯ ಬಿಸಿಯೂಟ, ವಿಧ್ಯಾರ್ಥಿಗಳ ಹಾಜರಾತಿ ಶಿಕ್ಷಕರ ಆಗಮನ ಕುರಿತು ಗಮನ ಹರಿಸಬೇಕೆಂದು ಹೇಳಿದರು.

ಎಸ್‌ಡಿಎಂಸಿ ಮಾಜಿ ಅಧ್ಯಕ್ಷ ಪ್ರಕಾಶ ಪೂಜಾರಿ ಮಾತನಾಡಿದರು. ಎಸ್‌ಡಿಎಂಸಿ ಅಧ್ಯಕ್ಷ ಹಣಮಂತ ಕೆಂಚಣ್ಣವರ ಅಧ್ಯಕ್ಷತೆ ವಹಿಸಿದರು. ಸೋಮಲಿಂಗ ಬಿದರೋಳ್ಳಿ, ಮುತ್ತು ನಾಗನೂರ, ಬಂದು ನಿಡೋಣಿ, ಮಹಾದೇವ ಕನಮಡಿ, ಎಸ್. ಪಿ. ಗುಡ್ಡಾಪೂರ, ಬಸಪ್ಪ ದಳವಾಯಿ, ಚಂದ್ರಕಾಂತ ಕದಂ, ಲಕ್ಷ್ಮಣ ಸಾತಣ್ಣವರ, ಬಿ. ಬಿ. ಚವ್ಹಾಣ, ಕಲ್ಮೇಶ ಪೂಜಾರಿ, ಎ. ಜೆ. ದೇಶಪಾಂಡೆ, ಎ. ಬಿ. ಕುಕಟೋಳಿ, ಎಸ್. ಕೆ. ಶಾಸ್ತ್ರಿ ಸೇರಿದಂತೆ ಎಸ್ ಡಿ ಎಂಸಿ ಸದಸ್ಯರು, ಶಿಕ್ಷಕರು ಉಪಸ್ಥಿತರಿದ್ದರು. ಖಿ. ಬಿ. ಪೂಜಾರಿ ನಿರೂಪಿಸಿ, ವಂದಿಸಿದರು.



## ಮಡಿವಾಳ ಸಮಾಜ ಮುಖ್ಯವಾಹಿನಿಗೆ ಬರಲಿ



**ರಾಯಬಾಗ :** ಮಡಿವಾಳ ಸಮಾಜ ಮುಖ್ಯವಾಹಿನಿಗೆ ಬರಲು ಎಲ್ಲರೂ ಸಹಾಯ ಸಹಕಾರ ಅತ್ಯಗತ್ಯ ಎಂದು ಮಡಿವಾಳ ಸಮಾಜದ ಮುಖಂಡರಾದ ಬಸವರಾಜ್ ಮಡಿವಾಳ ಹೇಳಿದರು.

ಪಟ್ಟಣದ ವಿಠಲ ಮಂದಿರದಲ್ಲಿ ಮಡಿವಾಳ ಜನಾಂಗದ ಅಭಿವೃದ್ಧಿ ಕುರಿತು ಹಾಗೂ ಮಡಿವಾಳ ಮಾಚಿದೇವ ಪೂಜಾ ಕಾರ್ಯಕ್ರಮದಲ್ಲಿ ಮಾತನಾಡಿದರು.

ಮಡಿವಾಳ ಜನಾಂಗವನ್ನು ಸರ್ಕಾರಗಳು ನಿರ್ಲಕ್ಷಿಸುತ್ತಿದ್ದು ಇದರಿಂದ ತುಂಬಾ ಬೇಸರವಾಗಿದೆ ಎಂದು ಮೋಹನ್ ಮಡಿವಾಳ ಅವರು ಪ್ರಾಸ್ತವಿಕವಾಗಿ ಮಾತನಾಡಿದರು.

ಈ ಕಾರ್ಯಕ್ರಮದಲ್ಲಿ ಕಲ್ಲಪ್ಪ ಮಡಿವಾಳ, ಅಣ್ಣಪ್ಪ ಪರಿಟ್, ರೇವಪ್ಪ ಪರಿಟ್, ರಾಜಕುಮಾರ್ ಮಡಿವಾಳ ಸಂಜು ಮಡಿವಾಳ, ವಿನೋದ ಮಡಿವಾಳ, ಗುಂಡುರಾವ್ ಪರಿಟ್, ಅಮಿತ್ ಪರೀಟ, ಮಾರುತಿ ಮಡಿವಾಳ, ವಿಜಯಾ ಪರಿಟ್, ರಮೇಶ್ ಪರಿಟ್, ಗಜಾನನ ಕೊರೇ, ಈರಪ್ಪ ಪರೀಟ್, ಸೋನಕ್ಕ ಮಡಿವಾಳ, ಕಲಾವತಿ ಮಡಿವಾಳ, ಸುಲೋಚನ ಮಡಿವಾಳ, ಗೀತಾ ಮಡಿವಾಳ, ಹಾಗೂ ಮಡಿವಾಳ ಸಮಾಜದ ಹಿರಿಯರು ಹಿರಿಯರು ಉಪಸ್ಥಿತರಿದ್ದರು.

## ಕಿರುಸುದ್ದಿ

## ಗ್ಯಾಸ್ ಸಿಲಿಂಡರ್ ಸ್ಫೋಟ: ಸಚಿವ ತಿಮ್ಮಾಪೂರ ಭೇಟಿ



**ಮುಧೋಳ:** ಇತ್ತೀಚೆಗೆ ತಾಲೂಕಿನ ಬೆಳಗಲಿ ಪಟ್ಟಣದಲ್ಲಿ ನಡೆದ ಗ್ಯಾಸ್ ಸಿಲಿಂಡರ್ ಸ್ಫೋಟದಿಂದ ಗಾಯಗೊಂಡವರ ಮನೆಗೆ ಅಬಕಾರಿ ಸಚಿವ ಆರ್.ಬಿ. ತಿಮ್ಮಾಪೂರ ಭೇಟಿ ನೀಡಿ ಆರೋಗ್ಯ ಹಾಗೂ ಯೋಗ ಕ್ಷೇಮ ವಿಚಾರಿಸಿದರು. ಸ್ಫೋಟದಿಂದ ಗಾಯಗೊಂಡವರ ಚಿಕಿತ್ಸೆಯ ಬಗ್ಗೆ ವಿಚಾರಿಸಿ, ಸಾಂತ್ವನ ಹೇಳಿ ತ್ವರಿತ ಗುಣಮುಖರಾಗಲೆಂದು ಕೋರಿದರು. ಸರ್ಕಾರದಿಂದ ಅಗತ್ಯ ಸಹಾಯ-ಸಹಕಾರ ನೀಡಲಾಗುವುದು ಎಂದು ಭರವಸೆ ನೀಡಿದರು. ಮುಧೋಳ ಹಾಗೂ ಲೋಕಾಪೂರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಸದುಗೌಡ ಪಾಟೀಲ್, ಅಶೋಕ್ ಕಿವಡಿ ವಕೀಲರು, ಮುಖಂಡರಾದ ಪ್ರವೀಣ ಪಾಟೀಲ್, ಸಂಗಪ್ಪ ಅಮಾತಿ, ಪ್ರಕಾಶ ಕೊಣ್ಣೂರ ಕಾಂಗ್ರೆಸ್ ಕಾರ್ಯಕರ್ತರು ಸ್ಥಳೀಯರು, ಅಧಿಕಾರಿಗಳು ಇದ್ದರು.

## ವಾಲಿದ ವಿದ್ಯುತ್ ಕಂಬ

**ಜಮಖಂಡಿ:** ನಗರದ ಮುಧೋಳ ರಸ್ತೆಯ ಹಿಂದು ರುದ್ರಭೂಮಿಯ ಹತ್ತಿರ ರಸ್ತೆಯ ದ್ವಿಭಾಜಕದಲ್ಲಿ



ಅಳವಡಿಸಲಾದ ವಿದ್ಯುತ್ ಕಂಬವು ಅಪರಿಚಿತ ವಾಹನ ಡಿಕ್ಕಿ ಹೊಡೆದಿದ್ದರಿಂದ ವಾಲಿಕೊಂಡಿದೆ. ಇದರಿಂದ ಭಾರೀ ಅಪಾಯವಾಗುವ ಸಂಭವ ಹೆಚ್ಚಾಗಿದ್ದು, ಸಂಬಂಧಪಟ್ಟ ಅಧಿಕಾರಿಗಳು ಶೀಘ್ರವೇ ಕ್ರಮ ಜರುಗಿಸಿ ವಿದ್ಯುತ್ ಕಂಬ ದುರಸ್ಥಿ ಮಾಡಬೇಕು ಎಂದು ಸ್ಥಳೀಯರು ಒತ್ತಾಯಿಸಿದ್ದಾರೆ. ಸದಾಶಿವ ಐರಾದ ರಾಜ್ಯ ಹೆದ್ದಾರಿಯಾದ ಈ ರಸ್ತೆಯಲ್ಲಿ ದಿನನಿತ್ಯ ಸಾವಿರಾರು ವಾಹನ ಮತ್ತು ನೂರಾರು ದ್ವಿಚಕ್ರ ವಾಹನಗಳು ಸಮೇತ ನೂರಾರು ಶಾಲಾ ವಾಹನಗಳೂ ಸಹ ಓಡಾಡುತ್ತವೆ. ಯಾವ ಕ್ಷಣದಲ್ಲಿ ಕುಸಿಯುತ್ತದೆಯೋ ಎನ್ನುವ ಭೀತಿಯಿಂದ ವಾಹನ ಸವಾರರು ಕೈಯಲ್ಲಿ ಜೀವ ಹಿಡಿದು ಸಂಚಾರ ಮಾಡುತ್ತಲೇ ಇದ್ದಾರೆ. ಈ ಕಂಬ ವಾಲಿ ಎಷ್ಟೋ ದಿನಗಳಾದರೂ ಸಹ ಅಧಿಕಾರಿಗಳು ಅದನ್ನು ದುರಸ್ಥಿ ಮಾಡುವ ಕ್ರಮ ಕೈಗೊಂಡಿಲ್ಲ, ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ತಕ್ಷಣವೇ ಸ್ಥಳಕ್ಕೆ ಭೇಟಿ ನೀಡಿ ವಾಲಿದ ವಿದ್ಯುತ್ ಕಂಬ ಸರಿಪಡಿಸಬೇಕೆಂದು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

## ಇಂದಿನಿಂದ ಎಸೆಸೆಲ್ಸಿ ಪರೀಕ್ಷೆ

**ಕಮತಗಿ :** ಪಟ್ಟಣದ ಶ್ರೀ ಹುಚ್ಚೇಶ್ವರ ಪ್ರೌಢಶಾಲಾ ಪರೀಕ್ಷಾ ಕೇಂದ್ರದಲ್ಲಿ ಇಂದು ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆ ನಡೆಯಲಿದ್ದು, ಈ ಪರೀಕ್ಷಾ ಕೇಂದ್ರದಲ್ಲಿ ಶಿವಶರಣೆ ಕಲ್ಯಾಣಮ್ಮ ಪ್ರೌಢ ಶಾಲೆ ಕಮತಗಿ, ಶ್ರೀ ಸೇವಾಲಾಲ್ ಪ್ರೌಢಶಾಲೆ ಕಮತಗಿ, ಶ್ರೀ ಮರಡಿ ಮಲ್ಲೇಶ್ವರ ಪ್ರೌಢಶಾಲೆ ಮುಗನೂರು, ಈ ನಾಲ್ಕು ಪ್ರೌಢ ಶಾಲೆಯ ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ. ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳ ಸಂಖ್ಯೆ ಗಂಡು 137, ಹೆಣ್ಣು 136, ಒಟ್ಟು :273 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ ಎಂದು ಕೇಂದ್ರ ಮುಖ್ಯ ಅಧೀಕ್ಷಕ ಎಚ್.ಎಂ. ಪಾಟೀಲ್ ತಿಳಿಸಿದ್ದಾರೆ.

## ಗೃಹ ಬಳಕೆ ಅನಿಲದ ಕೊರತೆಯಿಲ್ಲ

**ಮುಧೋಳ:** ಗೃಹ ಬಳಕೆ ಅನಿಲ(ಸಿಲಿಂಡರ್) ಅಥವಾ ವಾಣಿಜ್ಯ ಬಳಕೆಗೆ ಬೇಕಾದ ಅನಿಲದ ಕೊರತೆ ಆಗಿಲ್ಲ, ಈ ಕುರಿತು ಯಾರಿಂದಲೂ ದೂರು ಬಂದಿಲ್ಲ ಎಂದು ತಾಲೂಕಾ ಆಹಾರ ಇಲಾಖೆ ಅಧಿಕಾರಿ ಡಿ.ಬಿ. ದೇಶಪಾಂಡೆ ತಿಳಿಸಿದ್ದಾರೆ. ಮಂಗಳವಾರ ಹೋಟೇಲ್‌ಗಳಿಗೆ ಭೇಟಿ ನೀಡಿದ್ದ ಕಂದಾಯ ಇಲಾಖೆಯ ಅಧಿಕಾರಿಗಳು ನಾವು ಭೇಟಿ ನೀಡಿದ ಸಂದರ್ಭದಲ್ಲಿ ವಾಣಿಜ್ಯ ಅನಿಲ ಕೊರತೆ ಕಂಡು ಬಂದಿರುವುದಿಲ್ಲ ಮತ್ತು ಯಾವುದೇ ಬಗೆಯ ನಮ್ಮ ಇಲಾಖೆಗೆ ದೂರು ಬಂದಿಲ್ಲ. ನಾವು ಸಹ ಈ ಕುರಿತು ಖುದ್ದಾಗಿ ಪರಿಶೀಲಿಸುತ್ತಿದ್ದೇವೆ ಎಂದು ಅವರು ಪತ್ರಿಕೆಗೆ ತಿಳಿಸಿದರು. ಆಹಾರ ನೀರಿಕ್ಷಾ ಅಧಿಕಾರಿಗಳಾದ ರತ್ನಾ ಬಡಿಗೇರ, ಎಸ್.ಆರ್. ಬಡಿಗೇರ ಇದ್ದರು.

## ಎಚ್‌ಪಿವಿ ಲಸಿಕೆ ಅಭಿಯಾನ

**ಕೆರೂರ :** ಇತ್ತೀಚಿನ ದಿನಗಳಲ್ಲಿ ಮಹಿಳೆಯರಲ್ಲಿ ಹೆಚ್ಚುತ್ತಿರುವ ಗರ್ಭಕಂಠದ ಕ್ಯಾನ್ಸರ್‌ನ್ನು ತಡೆಯುವ ಸಲುವಾಗಿ 14 ವರ್ಷದ ಹೆಣ್ಣುಮಕ್ಕಳಿಗೆ ಕೇಂದ್ರ ಸರ್ಕಾರವು ದೇಶಾದ್ಯಂತ ಎಚ್‌ಪಿವಿ ಲಸಿಕಾ ಅಭಿಯಾನವನ್ನು ಜಾರಿಗೊಳಿಸಿದೆ ಎಂದು ಪಟ್ಟಣದ ಸಮುದಾಯ ಆರೋಗ್ಯದ ಮುಖ್ಯ ವೈದ್ಯಾಧಿಕಾರಿ ಡಾ.ಪ್ರಶಾಂತ ಬಾಬು ಹೇಳಿದರು. ಮಂಗಳವಾರ ಪಟ್ಟಣದ ಸಮುದಾಯ ಆರೋಗ ಕೇಂದ್ರದಲ್ಲಿ 14 ವರ್ಷದ ಹೆಣ್ಣುಮಕ್ಕಳಿಗೆ ಚ್‌ಪಿವಿ ಲಸಿಕೆಯನ್ನು ನೀಡುವ ಮೂಲಕ ಅಭಿಯಾನಕ್ಕೆ ಚಾಲನೆ ನೀಡಿದರು. ಹೆಣ್ಣು ಮಕ್ಕಳ ಸುರಕ್ಷಿತ ಆರೋಗ್ಯ ದೃಷ್ಟಿಯಿಂದ ಈ ಲಸಿಕೆಯನ್ನು ಉಚಿತವಾಗಿ ನೀಡುತ್ತಿದ್ದು,ಪಟ್ಟಣದ ಹಾಗೂ ಗ್ರಾಮೀಣ ಭಾಗದ ಹೆಣ್ಣುಮಕ್ಕಳು ಲಸಿಕೆ ಪಡೆದುಕೊಳ್ಳಬೇಕು ಎಂದರು. ಆರೋಗ್ಯ ಕೇಂದ್ರ ದಂತ ವೈದ್ಯಾಧಿಕಾರಿ ಡಾ.ಸವಿತಾ ಶೆಟ್ಟರ, ಫಾರ್ಮಾಸಿಸ್ಟ ರವಿ ಬೋರಣ್ಣವರ, ಸಿಬ್ಬಂದಿಗಳಾದ ಸುಮಿತ್ರಾ ಡಂಬೂರ, ರುಕ್ಮಿಣಿ ನವಲಗಾನ, ಸುರೇಶ ಹದ್ಲಿ, ಏಕನಾಥ ಇರಕಲ್, ಆಶಾ ಕಾರ್ಯಕರ್ತೆಯರು ಇದ್ದರು.



ಬಾಗಲಕೋಟೆ: ಬಿಟಿಡಿಎ ಅಧ್ಯಕ್ಷರನ್ನಾಗಿ ನೇಮಕ ಮಾಡಿದ ಪ್ರಯುಕ್ತ ಪ್ರಕಾಶ ತಪಶೆಟ್ಟಿಯವರು ಮುಖ್ಯಮಂತ್ರಿ ಸಿದ್ಧರಾಮಯ್ಯನವರನ್ನು ಭೇಟಿಯಾಗಿ ಸನ್ಮಾನಿಸಿದರು. ಕಾಂಗ್ರೆಸ್ ಜಿಲ್ಲಾಧ್ಯಕ್ಷ ಎಸ್.ಜಿ.ನಂಜಯ್ಯನಮಠ, ಮಾಜಿ ಸಚಿವ ಅಜಯಕುಮಾರ ಸರನಾಯಕ, ಕಾಂಗ್ರೆಸ್ ಮುಖಂಡ ಅಜಯಕುಮಾರ ಸರನಾಯಕ ಇದ್ದರು.

## ಇಂದಿನಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆ: ಶುಭ ಕೋರಿದ ಡಿಸಿ, ಸಿಇಒ





**ಬಾಗಲಕೋಟೆ:** ಮಾ.18ರಿಂದ ಪ್ರಾರಂಭವಾಗಲಿರುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಹಾಜರಾಗುವ ಎಲ್ಲಾ ವಿದ್ಯಾರ್ಥಿಗಳಿಗೆ ಜಿಲ್ಲಾಧಿಕಾರಿ ಸಂಗಪ್ಪ ಹಾಗೂ ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶಶಿಧರ ಕುರೇರ್ ಶುಭ ಹಾರೈಸಿದ್ದಾರೆ. ಪರೀಕ್ಷೆ ಜೀವನದ ಪ್ರಮುಖ ಹಂತವಾಗಿದ್ದು ವಿದ್ಯಾರ್ಥಿಗಳು ಯಾವುದೇ ಆತಂಕವಿಲ್ಲದೆ ಆತ್ಮವಿಶ್ವಾಸದಿಂದ ಪರೀಕ್ಷೆ ಬರೆಯಬೇಕು ಎಂದು ಅವರು ತಿಳಿಸಿದ್ದಾರೆ. ಈವರೆಗೆ ಮಾಡಿದ ಪರಿಶ್ರಮದ ಮೇಲೆ ವಿಶ್ವಾಸವಿಟ್ಟು ಶಾಂತ ಮನಸ್ಥಿತಿಯಲ್ಲಿ ಪ್ರಶ್ನೆಗಳಿಗೆ ಉತ್ತರಿಸಬೇಕು ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದ್ದಾರೆ. ಪೋಷಕರು ಹಾಗೂ ಶಿಕ್ಷಕರು ವಿದ್ಯಾರ್ಥಿಗಳಿಗೆ ಧೈರ್ಯ ತುಂಬುವ ಕೆಲಸ ಮಾಡಬೇಕು. ಪರೀಕ್ಷಾ ಅವಧಿಯಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲಕರ ವಾತಾವರಣ ಕಲ್ಪಿಸುವುದು ಎಲ್ಲರ ಜವಾಬ್ದಾರಿಯಾಗಿದೆ ಎಂದು ಹೇಳಿದರು. ಜಿಲ್ಲೆಯಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳು ಸುಗಮವಾಗಿ ಹಾಗೂ ಶಾಂತಿಯುತವಾಗಿ ನಡೆಯಲು ಅಗತ್ಯ ಸಕಲ ಸಿದ್ಧತೆಗಳನ್ನು ಜಿಲ್ಲಾಡಳಿತದಿಂದ ಕೈಗೊಳ್ಳಲಾಗಿದೆ. ವಿದ್ಯಾರ್ಥಿಗಳು ಸಮಯಕ್ಕೆ ಸರಿಯಾಗಿ ಪರೀಕ್ಷಾ ಕೇಂದ್ರಗಳಿಗೆ ಹಾಜರಾಗಿ ನಿಯಮಗಳನ್ನು ಪಾಲಿಸಿ ಪರೀಕ್ಷೆ ಬರೆಯಬೇಕು ಎಂದು ಡಿಸಿ ಹಾಗೂ ಸಿಇಒ ತಿಳಿಸಿದ್ದಾರೆ.



ಮುಧೋಳ: ಡಾ.ಪುನೀತರಾಜಕುಮಾರ (ಅಪ್ಪು) ಅವರ 51ನೇ ಹುಟ್ಟು ಹಬ್ಬದ ಪ್ರಯುಕ್ತ ನಗರದ ಬಸವೇಶ್ವರ ವೃತ್ತದಲ್ಲಿ ಅವರ ಅಭಿಮಾನಿಗಳಿಂದ ಅವರ ನೆಚ್ಚಿನ ಚಲನಚಿತ್ರದ ಹಾಡುಗಳನ್ನು ಹಾಕಿ ಸಾರ್ವಜನಿಕರ ಗಮನ ಸೆಳೆದು, ವೇದಿಕೆಗೆ ಆಗಮಿಸಿದ ಅಪ್ಪು ಅಭಿಮಾನಿಗಳಿಗೆ ಹಾಗು ಸಾರ್ವಜನಿಕರಿಗೆ ಸಿಹಿ ಪದಾರ್ಥ, ಆಹಾರ ವಿತರಿಸಿದರು.

### ನಾಡಕಚೇರಿ ಕಂಪ್ಯೂಟರ್ ಆಪರೇಟರ್ ಚುನಾವಣಾ ಕರ್ತವ್ಯಕ್ಕೆ ನಿಯೋಜನೆ

# ಆನ್‌ಲೈನ್ ಸೇವೆಗಳು ಸದ್ಯಕ್ಕೆ ಬಂದ್: ಸಾರ್ವಜನಿಕರ ಪರದಾಟ

ನಿತೀಶ ಪಾಟೀಲ



**ಕಲಾದಗಿ:** ರಾಜ್ಯದಲ್ಲಿರುವ ನಾಡಕಚೇರಿಗಳು ಸಾರ್ವಜನಿಕರಿಗೆ ಬಹುತೇಕ ಅತೀ ಅಗತ್ಯ ದಾಖಲೆಗಳನ್ನು ಪಡೆಯಲು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಸಹಕರಿಸುತ್ತಿವೆ ಆದರೆ ಕಲಾದಗಿಯ ನಾಡಕಚೇರಿಯ ಕಂಪ್ಯೂಟರ್‌ಆಪರೇಟರನನ್ನು ಬಾಗಲಕೋಟೆ ವಿಧಾನಸಭಾ ಮತಕ್ಷೇತ್ರದಲ್ಲಿ ಜರುಗಲಿರುವ ಉಪಚುನಾವಣೆಗಾಗಿ ಬಾಗಲಕೋಟೆ ತಹಶೀಲ್ದಾರ ಕಚೇರಿಯ ಚುನಾವಣಾಧಿಕಾರಿಗಳ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸಲು ಸಿಯೋಜಿಸಿದ ಹಿನ್ನೆಲೆ ಕಂಪ್ಯೂಟರ್ ಕೋಣೆಯನ್ನು ಕೀಲಿ ಹಾಕಿ ಆನ್‌ಲೈನ್ ಸೇವೆಗಳನ್ನು ಬಂದ್ ಮಾಡಿರುವುದರಿಂದ ಸಾರ್ವಜನಿಕರು ಪರದಾಡುವಂತಾ ಸ್ಥಿತಿ ನಿರ್ಮಾಣವಾಗಿದೆ.

ಮುಳುಗಡೆ ಗ್ರಾಮವೆಂಬ ಹಣೆಪಟ್ಟಿ ಹೊತ್ತಿರುವ ಕಲಾದಗಿ ಗ್ರಾಮ ಸದಾ ಒಂದಿಲ್ಲೊಂದು ಸಮಸ್ಯೆಯ ಸದ್ದು ಮಾಡುತ್ತಿದ್ದು ಸದ್ಯೆ ಗ್ರಾಮದ ನಾಡಕಚೇರಿಯಲ್ಲಿ ಕಂಪ್ಯೂಟರ್ ಆಪರೇಟರ್ ಇಲ್ಲದ ಕಾರಣ ಕಂಪ್ಯೂಟರ ಕೋಣೆಯ ಬಾಗಿಲನ್ನು ಮುಚ್ಚಿ ತಾತ್ಕಾಲಿಕವಾಗಿ ಆನ್‌ಲೈನ್ ಸೇವೆಗಳನ್ನು ಬಂದ ಮಾಡಲಾಗಿದ್ದು ನಾಡಕಚೇರಿ ವ್ಯಾಪ್ತಿಯ 32ಹಳ್ಳಿಗಳಿಂದಬರುವಸಾರ್ವಜನಿಕರುತಮ್ಮಭೂ ಹಿಡುವಳಿ ದಾಖಲಾತಿ, ಉತಾರಗಳು ಸೇರಿದಂತೆ ಅತೀ ಅವಶ್ಯವಿರುವ ದಾಖಲಾತಿ ಅರ್ಜಿಗಳನ್ನು ಈ ಕೇಂದ್ರಗಳಲ್ಲಿಯೇ ಹಾಕಲಾಗುತ್ತದೆ. ಹಾಗೂ ನಾಡಕಚೇರಿಯಲ್ಲಿನ ಆಧಾರ ಕೇಂದ್ರದ ಐಡಿ ಹಾಗೂ ಹೆಬ್ಬೆಟ್ಟಿನ ಗುರುತು ಸಹ ಇದೇ ಆಪರೇಟರನದ್ದೇ ಇರುವುದರಿಂದ ವಾಪಸ ಕಲಾದಗಿ ನಾಡಕಚೇರಿಗೆ ಕರ್ತವ್ಯಕ್ಕೆ ಹಾಜರಾಗುವವರೆಗೂ ಇದೇ ಸಮಸ್ಯೆ ಎದುರಾಗಲಿದೆ ಎಂದು ಹೆಸರು ಹೇಳಲಿಚ್ಚಿಸಿದ ಅಧಿಕಾರಿಯೊಬ್ಬರು ತಿಳಿಸಿದ್ದು ಸಾರ್ವಜನಿಕರು ತಮಗೆ ಬೇಕಾದ ಪ್ರಮಾಣ ಪತ್ರಗಳನ್ನು ಪಡೆಯಲು ಸರ್ಕಾರಿ ಶುಲ್ಕವು ಕಡಿಮೆ ಇದ್ದು ಹೆಚ್ಚಿನ ಆರ್ಥಿಕ ಹೊರೆಯು ಆಗದಿರುವುದರಿಂದ ಹೆಚ್ಚಾಗಿ ನಾಡಕಚೇರಿಗಳಲ್ಲಿಯೇ ಅರ್ಜಿಗಳನ್ನು ಹಾಕುತ್ತಾರೆ ಸದ್ಯ ಕಲಾದಗಿಯ ನಾಡಕಚೇರಿಯಲ್ಲಿ ಆನ್‌ಲೈನ್ ಸೇವೆ ಬಂದ ಮಾಡಿರುವುದರಿಂದ ದೂರದೂರುಗಳಿಂದ ಬರುವ ವೃದ್ದರು, ಮಹಿಳೆಯರು, ರೈತರು, ವಿದ್ಯಾರ್ಥಿಗಳು ಪರದಾಡುವಂತಾಗಿದ್ದು ಕಂಪ್ಯೂಟರ ಆಪರೇಟರ್ ಪುನಃ ಕರ್ತವ್ಯಕ್ಕೆ ಬರುವವರೆಗೆ ಶೀಘ್ರವೇ ತಾತ್ಕಾಲಿಕವಾಗಿಯಾದರೂ ಇನ್ನೊಬ್ಬ ಕಂಪ್ಯೂಟರ ಆಪರೇಟರನನ್ನು ನೇಮಿಸಿ ಅನೂಕೂಲ ಮಾಡಿಕೊಡಬೇಕೆಂದು ಸಾರ್ವಜನಿಕರ ಆಗ್ರಹವಾಗಿದೆ.

> ಕಲಾದಗಿಯ ನಾಡಕಚೇರಿಯಲ್ಲಿ ಕಂಪ್ಯೂಟರ್ ಆಪರೇಟರ್ ಸಿಬ್ಬಂದಿಯನ್ನು ಬಾಗಲಕೋಟೆ ತಹಶೀಲ್ದಾರ ಕಚೇರಿಯಲ್ಲಿ ಚುನಾವಣಾ ಕರ್ತವ್ಯಕ್ಕೆ ನಿಯೋಜಿಸಿದ್ದರಿಂದ ದೂರದೂರುಗಳಿಂದ ನಾಡಕಚೇರಿಗೆ ಬರುವ ಸಾರ್ವಜನಿಕರಿಗೆ, ವಯೋ ವೃದ್ಧರಿಗೆ ಸರ್ಕಾರಿ ದಾಖಲಾತಿಗಳಿಗಾಗಿ ಆನ್‌ಲೈನ್ ಸೌಲಭ್ಯದ ಸಮಸ್ಯೆಯಾಗುತ್ತಿದ್ದು ಶೀಘ್ರವೇ ಕಂಪ್ಯೂಟರ್ ಆಪರೇಟರ್‌ನನ್ನು ನೇಮಿಸಿ ಅನೂಕೂಲ ಮಾಡಿಕೊಡಬೇಕು.
> ■ ಬಸವರಾಜ ಬಿಲಕೇರಿ, ಅಂಕಲಗಿ ಗ್ರಾಮದ ರೈತ

> ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯ ತಯಾರಿಗಾಗಿ ಸಿಬ್ಬಂದಿಗಳ ಕೊರತೆಯಿದೆ. ವಿವಿಧ ಇಲಾಖೆಗಳ ಸಿಬ್ಬಂದಿ ಹಾಗೂ ಕೆಲವು ಕಂಪ್ಯೂಟರ್ ಆಪರೇಟರ್ ಗಳನ್ನು ಸಹ ಚುನಾವಣಾ ಕರ್ತವ್ಯಕ್ಕೆ ಬಳಸಿಕೊಳ್ಳಲಾಗುತ್ತಿದ್ದು, ಮುಂದಿನ 2-3 ದಿನದಲ್ಲಿ ಕಲಾದಗಿ ನಾಡಕಚೇರಿಗೆ ಪುನಃ ಸಿಬ್ಬಂದಿಯನ್ನು ನಿಯೋಜಿಸಲಾಗುವುದು.
> ■ ವಾಸುದೇವ.ವಿ.ಸ್ವಾಮಿ, ತಹಶೀಲ್ದಾರ ಬಾಗಲಕೋಟೆ.

## ಅಕ್ರಮ ತಡೆಗಟ್ಟಲು ವೆಬ್ ಕಾಸ್ಟಿಂಗ್ ವ್ಯವಸ್ಥೆ ಜಾರಿ

**ಬೀಳಗಿ:** ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆಯಲ್ಲಿ ನಕಲು ಹಾಗೂ ಅಕ್ರಮ ತಡೆಗಟ್ಟಲು ಕಳೆದ 2 ವರ್ಷಗಳಿಂದ ವೆಬ್ ಕಾಸ್ಟಿಂಗ್ ವ್ಯವಸ್ಥೆ ಜಾರಿಯಲ್ಲಿದ್ದು, ಪರೀಕ್ಷಾ ಕೇಂದ್ರದ ಕೊಠಡಿಗಳಿಗೆ ಅಳವಡಿಸಿರುವ ಸಿಸಿ ಕ್ಯಾಮರಾಗಳನ್ನು ಕೇಂದ್ರದ ಒಂದು ಕೊಠಡಿಯಲ್ಲಿರುವ ಮಾಸ್ಟರ್ ಕಂಪ್ಯೂಟರ್‌ಗೆ ಸಂಪರ್ಕ ಕಲ್ಪಿಸಲಾಗುತ್ತದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಆರ್. ಎಸ್. ಆದಾಪೂರ ಹೇಳಿದರು.

ಕಂಪ್ಯೂಟರ್‌ಪರದೆಯಲ್ಲಿ ಪ್ರತಿಕ್ಷಣದ ದೃಶ್ಯಾವಳಿಗಳನ್ನು ನಿಯೋಜಿತ ಸಿಬ್ಬಂದಿ ವೀಕ್ಷಿಸುತ್ತಾರೆ. ಬೀಳಗಿ ತಾಲೂಕಾ ಹಂತದಲ್ಲಿ ವೆಬ್ ಕಾಸ್ಟಿಂಗ್ ಕೇಂದ್ರ ಪ್ರಾರಂಭಿಸಿದ್ದು, ಪ್ರತಿ ಪರೀಕ್ಷಾ ಕೇಂದ್ರಕ್ಕೆ ಒಬ್ಬರನ್ನು ಶಾಲಾ, ತಾಲೂಕಾ ಹಂತದಲ್ಲಿ ನಿಯೋಜಿಸಲಾಗಿದೆ. ಪ್ರತಿ ದೃಶ್ಯಾವಳಿಗಳನ್ನು ಕೇಂದ್ರ ಹಂತದಲ್ಲಿ ಸಂರಕ್ಷಿಸುವುದಾಗಿದೆ. ಜಿಲ್ಲೆಯಲ್ಲಿಯೇ ಪಾರದರ್ಶಕ ಪರೀಕ್ಷೆ ನಡೆಸಲು ವ್ಯವಸ್ಥೆ ಮಾಡಿರುವುದು ವಿಶೇಷ ಎಂದರು.

ತಾಲೂಕಿನಲ್ಲಿರುವ ಸರ್ಕಾರಿ, ಅನುದಾನಿತ, ಅನುದಾನ ರಹಿತ, ವಸತಿ ಶಾಲೆ ಸೇರಿದಂತೆ ಒಟ್ಟು 50 ಪ್ರೌಢ ಶಾಲೆಗಳ 3413 ವಿದ್ಯಾರ್ಥಿಗಳು ಏಳು ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ಬರೆಯಲಿರುವರು. ಏಳು ಪರೀಕ್ಷಾ ಕೇಂದ್ರಗಳಾದ ಶ್ರೀ ಸಿದ್ದೇಶ್ವರ ಪ್ರೌಢ ಶಾಲೆ ಬೀಳಗಿ ಕೇಂದ್ರದಲ್ಲಿ 469, ಜಿ.ಎನ್.ಎನ್. ಸರಕಾರಿ ಪ್ರೌಢ ಶಾಲೆ ಬೀಳಗಿ ಕೇಂದ್ರದಲ್ಲಿ 582, ಸ್ವಾಮಿ ವಿವೇಕಾನಂದ ಇಂಗ್ಲೀಷ್ ಮಾಧ್ಯಮ ಪ್ರೌಢಶಾಲೆ ಬೀಳಗಿ 567, ಆದರ್ಶ ವಿದ್ಯಾಲಯ ಕೊಪ್ಪ (ಎಸ್.ಆರ್.) 496, ಶ್ರೀ ರಾಮಲಿಂಗೇಶ್ವರ ಪ್ರೌಢಶಾಲೆ ಕುಂದರಗಿ 435, ಕೆ.ಆರ್.ಸಿ.ಆರ್.ಎಸ್ ಬೂದಿಹಾಳ (ಎಸ್.ಎ.) 278, ನ್ಯೂ ಇಂಗ್ಲೀಷ್ ಪ್ರೌಢ ಶಾಲೆ ಗಲಗಲಿ 586 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆಂದು ಹೇಳಿದರು.

ತಾಲೂಕು ಜಾಗೃತದಳ 3 ತಂಡದಲ್ಲಿ 9, ಸ್ಥಾನಿಕ ಜಾಗೃತ ದಳದಲ್ಲಿ ಪ್ರತಿಕೇಂದ್ರಕ್ಕೆ 1, 224 ಕೊಠಡಿ ಮೇಲ್ವಿಚಾರಕರು, ಮುಖ್ಯ ಅಧೀಕ್ಷಕರು ಪ್ರತಿ ಕೇಂದ್ರಕ್ಕೆ 1, ಕಸ್ಟೋಡಿಯನ್ ಪ್ರತಿ ಕೇಂದ್ರಕ್ಕೆ 1, ವಿದ್ಯಾರ್ಥಿಗಳ ಸಂಖ್ಯೆ 350ಕ್ಕಿಂತ ಹೆಚ್ಚಿದ್ದರೆ ಹೆಚ್ಚುವರಿ ಉಪಮುಖ್ಯ ಅಧೀಕ್ಷಕರು, ಪ್ರತಿ ಕೇಂದ್ರಕ್ಕೆ ಓರ್ವ ಮೊಬೈಲ್ ಸ್ವಾಧೀನ ಅಧಿಕಾರಿ, ಪ್ರತಿ ಪರೀಕ್ಷಾ ಕೇಂದ್ರಕ್ಕೆ ಒಬ್ಬರನ್ನು ಸಿಸಿ ಕ್ಯಾಮೆರಾ ವೀಕ್ಷಕರು ಕಾರ್ಯನಿರ್ವಹಿಸುವರು. ಪರೀಕ್ಷಾ ಕೇಂದ್ರದ ಸುತ್ತಲು ಸೂಕ್ತ ಭದ್ರತಾ ವ್ಯವಸ್ಥೆಗಾಗಿ ಅಗತ್ಯ ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗಿದೆ ಎಂದರು.



## ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ: ಸಚಿವ ತಿಮ್ಮಾಪುರ

**ಮಹಾಲಿಂಗಪುರ:** ಇಂದಿನ ಮಕ್ಕಳು ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡಬೇಕು. ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗಾಗಿ ಎಲ್ಲ ರೀತಿಯ ಸೌಲಭ್ಯ ಹಾಗೂ ಹೆಚ್ಚಿನ ಆದ್ಯತೆ ನೀಡುತ್ತೇನೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ. ತಿಮ್ಮಾಪುರ ಹೇಳಿದರು.

ಸಮೀಪದ ಅಕ್ಕಿಮರಡಿ ಗ್ರಾಮದಲ್ಲಿ ಜಿಲ್ಲಾ ಪಂಚಾಯತಿ ಬಾಗಲಕೋಟೆ, ಶಾಲಾ ಶಿಕ್ಷಣ ಇಲಾಖೆ, ಪಂಚಾಯತಿ ರಾಜ್ಯ ಇಂಜನಿಯರಿಂಗ್ ಇಲಾಖೆ 2022-23ನೇ ಸಾಲಿನಸಮಗ್ರ ಶಿಕ್ಷಣ ಕರ್ನಾಟಕ ಯೋಜನೆಯ ಆರ್‌ಐಡಿಎಫ್ 28 ಅನುದಾನದಡಿ ಸರ್ಕಾರಿ ಪ್ರೌಢಶಾಲೆಯ(ಆರ್‌ಎಂಎಸ್‌ಎ) ನೂತನ ಕಟ್ಟಡದ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ನಮ್ಮ ಸರ್ಕಾರ ಶಿಕ್ಷಣಕ್ಕೆ ಅಷ್ಟೇ ಅಲ್ಲದೆ ಬಡ ಹಾಗೂ ದೀನದಲಿತರಿಗೆ ಸಹಕಾರಿಯಾಗುವ ಅನೇಕ ಯೋಜನೆಗಳನ್ನು ಜಾರಿಗೆ ತಂದಿದೆ. ಇದರಿಂದಾಗಿ ಹೆಚ್ಚಿನ ಸಂಖ್ಯೆಯ ಬಡವರಿಗೆ ಸಹಾಯವಾಗಿದೆ. ಜೊತೆಗೆ ರೈತರ ಮತ್ತು ಮಹಿಳೆಯರ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನಮ್ಮ ಸರ್ಕಾರ ನೀಡಿದೆ. ಬಡವರಿಗೆ ಶಕ್ತಿ ಕೊಡುವ ಮತ್ತು ಅಭಿವೃದ್ಧಿ ಕಾರ್ಯ ಮಾಡುವಲ್ಲಿ ಯಶಸ್ವಿಯಾಗಿದೆ ಎಂದರು.

ಜೊತೆಗೆ ಅಕ್ಕಿಮರಡಿ ರಸ್ತೆಯಿಂದ ಬೆಳಗಲಿ ರಸ್ತೆ, ಅಕ್ಕಿಮರಡಿಯಿಂದ ಮಹಾಲಿಂಗಪುರ ರಸ್ತೆಯಲ್ಲಿರುವ ಒತ್ತನೆವ್ವ ದೇವಸ್ಥಾನದವರೆಗೆ ರಸ್ತೆ ಸುಧಾರಣೆ, ಕನಕದಾಸ ಸಮುದಾಯ ಭವನ ನಿರ್ಮಾಣಕ್ಕೆ ಭೂಮಿಪೂಜೆ ಸಲ್ಲಿಸಿದರು. ಶಿರೂರದ ಪ.ಪೂ ಚಿನ್ಮಯಾನಂದ ಶ್ರೀಗಳು, ಮೆಟಗುಡ್ಡದ ಜ್ಯೋತಿಲಕ್ಕಪ್ಪ ಮಹಾರಾಜರು ಆಶೀರ್ವಚನನೀಡಿದರು. ಪ್ರೌಢಶಾಲಾ ಮುಖ್ಯ ಶಿಕ್ಷಕ ಎಸ್.ಎಂ ಸುತಾರ ಪ್ರಾಸ್ತಾವಿಕವಾಗಿ ಮಾತನಾಡಿದರು.

ಬಾಗಲಕೋಟೆ ಡಿವೈಪಿಸಿ ಪಿಎಸ್ ಬಳೋಲಮಟ್ಟಿ, ಕ್ಷೇತ್ರ ಶಿಕ್ಷಣಾಧಿಕಾರಿ ಎಸ್ ಎಂ ಮುಲ್ಲಾ, ನಾಗರಾಳ ಗ್ರಾಪಂ ಪಿಡಿಒ ರಂಜಿತಾ ಹಟ್ಟಿ, ಅಕ್ಕಿಮರಡಿ ಪ್ರೌಢ ಶಾಲಾ ಎಸ್ಡಿಎಂಸಿ ಅಧ್ಯಕ್ಷ ಶಿವಯ್ಯ ಲಗಳಿ, ಯಶವಂತ ಚೌವ್ಹಾಣ, ಮಲ್ಲಪ್ಪ ಅಣ್ಣೋಜಿ, ಮಡಿವಾಳಯ್ಯ ಕಂಬಿ, ಮಲ್ಲಪ್ಪ ಮಳಲಿ, ರಾಮಪ್ಪ ಕೊಣ್ಣೂರ, ಶಿವಾನಂದ ಮಠದ, ಭೀಮಪ್ಪ ಚಿಕ್ಕೂರ, ಕಾಡಪ್ಪ ಕೊಣ್ಣೂರ, ರಾಮಪ್ಪ ಚೌವ್ಹಾಣ, ಶಿವಾಜಿ ಚೌವ್ಹಾಣ, ಗೋಪಾಲ್ ಇಂಚಲ, ತಮ್ಮಣ್ಣ ಡಂಗಿ, ಆನಂದ ಹಟ್ಟಿ , ಸದುಗೌಡ ಪಾಟೀಲ, ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕ ಗೋಪಾಲ ಇರಗರ,ಶಿಕ್ಷಕ ಆನಂದ ರಾಠೋಡ ಸೇರಿದಂತೆ ಇತರರಿದ್ದರು. ಶಿಕ್ಷಕ ವಿಕ್ರಮ ಬಸನಗೌಡರ ನಿರೂಪಿಸಿ, ಶಿಕ್ಷಕರಾದ ಅರ್ಜುನ ಚವ್ಹಾಣ, ಮಂಜು ಮೊಕಾಶಿ ಸ್ವಾಗತಿಸಿ, ವಂದಿಸಿದರು.



## ರಮಜಾನ್ ಹಬ್ಬದ ದಿನಸಿ ಕಿಟ್ ವಿತರಣೆ

**ಕಮತಗಿ :** ಪಟ್ಟಣದ ಮುಸ್ಲಿಂ ಸಮುದಾಯದ ಕುಟುಂಬಗಳಿಗೆ ರಂಜಾನ್ ಹಬ್ಬದ ನಿಮಿತ್ತ ದಿನಸಿ ಆಹಾರದ ಕಿಟ್ ಹಾಗೂ ಸುರಕುಂಭಕ್ಕೆ ಬೇಕಾಗುವ ಸಾಮಗ್ರಿಗಳ ಕಿಟ್‌ನ್ನು ಹೊಳೆ ಹುಚ್ಚೇಶ್ವರ ಕೋ ಆಪ್ ಕ್ರೆಡಿಟ್ ಸೊಸೈಟಿ ಅಧ್ಯಕ್ಷ ಹಾಗೂ ಬಿಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ, ಕಾಂಗ್ರೆಸ್ ಹಿರಿಯ ಮುಖಂಡ ಮುರಗೇಶ ಐ. ಕಡ್ಲಿಮಟ್ಟಿ ವಿತರಿಸಿದರು.

ಪಟ್ಟಣದ ಜಾಲಿ ಓಣಿಯಲ್ಲಿ ಇರುವ ಮದಿನಾ ಮಸೀದಿ ಹತ್ತಿರ ಮುರುಗೇಶ ಐ. ಕಡ್ಲಿಮಟ್ಟಿ ಅವರ ಕುಟುಂಬದಿಂದ ಹಮ್ಮಿಕೊಂಡಿದ್ದ ರಂಜಾನ್ ಹಬ್ಬದ ನಿಮಿತ್ತ ಮುಸ್ಲಿಮರಿಗೆ ಆಹಾರ ದಿನಸಿ ಕಿಟ್ ವಿತರಿಸಿ ಮಾತನಾಡಿ, ಕಮತಗಿ ಪಟ್ಟಣ ಭಾವೈಕ್ಯತೆಗೆ ಹೆಸರುವಾಸಿಯಾಗಿದ್ದು, ಇಲ್ಲಿ ಹಿಂದು, ಮುಸ್ಲಿಂ ಸಮುದಾಯದವರು ಪ್ರತಿಯೊಂದು ಹಬ್ಬಗಳನ್ನು ಸಹೋದರತೆಯಂತೆ ಆಚರಿಸಿ ಸಮಾಜದಲ್ಲಿ ಸಮಾನತೆ, ಸಹೋದರತ್ವದ ಸಂದೇಶ ನೀಡಿದ್ದಾರೆ ಎಂದರು.

ಮುಸ್ಲಿಂ ಸಮಾಜದ ಹಿರಿಯ ಇಟ್ಬಾಲ್ ಸಾಬ ಫಣಿಬಂದ ಮಾತನಾಡಿ, ಇಂತಹ ಒಂದು ಕೊಡುಗೆಯನ್ನು ನಮ್ಮ ಸಮಾಜಕ್ಕೆ ಸತತವಾಗಿ ನಾಲ್ಕು ವರ್ಷಗಳಿಂದ ಕೊಡುತ್ತಿದ್ದು, ಇವರ ಕಾರ್ಯಕ್ಕೆ ನಮ್ಮ ಸಮಾಜದಿಂದ ಧನ್ಯವಾದ ತಿಳಿಸಿದರು. ಮಲ್ಲಪ್ಪ ಮೇದಾರ, ಹುಚ್ಚಪ್ಪ ಸಿಂಹಾಸನ, ರಮೇಶ ಜಮಖಂಡಿ,




ಕಮಲಪ್ಪ ಕಡ್ಲಿಮಟ್ಟಿ, ಹನುಮಂತ ಕಡಿವಾಲ, ಬಿ.ಜೆ. ರಾಠೋಡ, ಹಾಮೇಶ ಲಮಾಣಿ, ಮಲ್ಲಪ್ಪ ಲೆಕ್ಕದ, ಗುರಲಿಂಗಪ್ಪ ಪಾಟೀಲ, ಗಣೇಶ ಕ್ಯಾದಿಗ್ಗೇರಿ, ರೇವಣಕುಮಾರ ಭಾದ್ರಿ, ಮುಸ್ಲಿಂ ಸಮಾಜದ ಹಿರಿಯರಾದ ಯಾಸಿನ ಬಿಳೇಕುದರಿ, ವಾಯದ್ ಬಿಳೇಕುದರಿ, ಮಾಬಲಿ ಗಂಜಿಹಾಳ, ಯಾಸಿನ್ ಮಕಾನದಾರ, ಉಸಮಾನ ಉನಚಗಿ, ದಸಗಿರಸಾಬ ತಹಸೀಲ್ದಾರ, ಎನ್.ಎಂ. ತಹಶೀಲ್ದಾರ, ರಾಜೇಸಾಬ ಗುಬ್ಯಾಡಿ, ಬಾಷಾ ಇಳಕಲ್, ಬಂದು ಕೋಲಾರ, ರಜಾಕಸಾಬ ಕೋರಿಶೆಟ್ಟಿ, ದಾದು ಕೋಲಾರ. ಯಾಕೂಬ್ ಶಿರೂರ, ಅಬ್ದುಲ್ ಡೊಣ್ಣೆಗುಡ್ಡ, ಸಮಾಜದ ಗುರುಹಿರಿಯರು, ಯುವಕರು ಇದ್ದರು.

## ಎಸ್‌ಎಸ್‌ಎಲ್‌ಸಿ ಪರೀಕ್ಷೆ: ಸಿದ್ಧತೆ

**ಕಲಾದಗಿ:** 2025-26ನೇ ಸಾಲಿನ ಎಸ್ಸೆಸ್ಸೆಲ್ಸಿಯ ಪರೀಕ್ಷೆ ಮಾ.18ರಿಂದ ಪ್ರಾರಂಭವಾಗಲಿದ್ದು ಇಲ್ಲಿಯ ಶ್ರೀ ಗುರುಲಿಂಗೇಶ್ವರ ಪ್ರೌಢಶಾಲೆ ಹಾಗೂ ಹಣ್ಣು ಬೆಳೆಗಾರರ ವಿದ್ಯಾ ಸಂಸ್ಥೆ ಎರಡು ಪರೀಕ್ಷಾ ಕೇಂದ್ರಗಳ ಶಾಲೆಯ ಶಿಕ್ಷಕ ಬಳಗ ಮಂಗಳವಾರದಂದು ಪರೀಕ್ಷಾ ಕೊಠಡಿಗಳನ್ನು ಸಿದ್ದತೆ ಮಾಡಿಕೊಂಡು ಪರೀಕ್ಷಾ ಕೇಂದ್ರದ ಸಂಖ್ಯೆ, ಕೋಠಡಿ ಸಂಖ್ಯೆ, ರೋಲ್ ನಂ ಹಾಕಿದರು.

ದಿ.ಕರ್ನಾಟಕ ಪ್ರೌಢ ಶಾಲೆ, ಶ್ರೀ ಗುರುಲಿಂಗೇಶ್ವರ ಪ್ರೌಢ ಶಾಲೆ, ಹಣ್ಣು ಬೆಳೆಗಾರರ ವಿದ್ಯಾಸಂಸ್ಥೆ, ಮುರಾರ್ಜಿ ವಸತಿ ಶಾಲೆ, ಸರಕಾರಿ ಉರ್ದು ಪ್ರೌಢ ಶಾಲೆ, ಖಜ್ಜಿಡೋಣಿ ನೂತನ ವಿದ್ಯಾಲಯ ಪ್ರೌಢ ಶಾಲೆ, ತುಳಸಿಗೇರಿ ಪ್ರೌಢ ಶಾಲೆ, ಚಿಕ್ಕಶೆಲ್ಲಿಕೇರಿಯ ಸರಕಾರಿ ಪ್ರೌಢ ಶಾಲೆ ಒಟ್ಟು 8 ಪ್ರೌಢ ಶಾಲೆಯ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಪರೀಕ್ಷೆಎದುರಿಸಲಿದ್ದು, ಶ್ರೀ ಗುರುಲಿಂಗೇಶ್ವರ ಪ್ರೌಢ ಶಾಲಾ ಪರೀಕ್ಷಾ ಕೇಂದ್ರದಲ್ಲಿ 12 ಪರೀಕ್ಷಾ ಕೊಠಡಿಗಳಿದ್ದು 129 ವಿದ್ಯಾರ್ಥಿಗಳು, 142 ವಿದ್ಯಾರ್ಥಿನಿಯರು ಸೇರಿ ಒಟ್ಟು 271 ವಿದ್ಯಾರ್ಥಿಗಳು ಪರೀಕ್ಷೆ ಎದುರಿಸಲಿದ್ದಾರೆ ಎಂದು ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕ ಎಸ್ .ವಿ.ಲಮಾಣಿ ತಿಳಿಸಿದ್ದಾರೆ.



ಹಣ್ಣು ಬೆಳೆಗಾರರ ವಿದ್ಯಾ ಸಂಸ್ಥೆಯ ಪರೀಕ್ಷಾ ಕೇಂದ್ರದಲ್ಲೂ 13 ಪರೀಕ್ಷಾ ಕೊಠಡಿಗಳಿದ್ದು 188ವಿದ್ಯಾರ್ಥಿಗಳು, 107ವಿದ್ಯಾರ್ಥಿನಿಯರು ಸೇರಿ ಒಟ್ಟು 295ವಿದ್ಯಾರ್ಥಿಗಳು ಪರೀಕ್ಷೆ ಎದುರಿಸಲಿದ್ದಾರೆ ಪರೀಕ್ಷಾ ಕೇಂದ್ರ ಮುಖ್ಯ ಅಧೀಕ್ಷಕಿ ಗಿರಿಜಾ.ಎ.ನಾಗರಾಳ ತಿಳಿಸಿದ್ದಾರೆ. ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಭದ್ರತಾ ಕ್ರಮದ ಸಕಲ ಸಿದ್ದತೆಗಳನ್ನು ಎರಡೂ ಪರೀಕ್ಷಾ ಕೇಂದ್ರದಲ್ಲಿ ಮಾಡಿಕೊಂಡು ಪರಿಕ್ಷೆ ನಡೆಸಲು ಸಿದ್ದವಾಗಿವೆ.

## ಶ್ರೀದಯಾನಂದಪುರಿ ಶ್ರೀಗಳ ಪಟ್ಟಾಭಿಷೇಕ: ಜವಾಬ್ದಾರಿ ಹಂಚಿಕೆ

**ಬಾದಾಮಿ:** ಮುಂಬರುವ ಮೇ.1ರಂದು ಉತ್ತರ ಕರ್ನಾಟಕದಲ್ಲಿ ಜರುಗಲಿರುವ ಶ್ರೀದಯಾನಂದಪುರಿ ಮಹಾಸ್ವಾಮೀಜಿಯವರ 36ನೇ ಪಟ್ಟಾಭಿಷೇಕ ಹಾಗೂ ಅಖಿಲ ಭಾರತ ದೇವಾಂಗ ಜಾಗೃತಿ ಸಮಾವೇಶದ ಪೂರ್ವಭಾವಿ ಸಭೆಯು ಸುಕ್ಷೇತ್ರ ಹಂಪೆಯ ಶ್ರೀಗಾಯತ್ರಿಪೀಠ ಮಹಾಸಂಸ್ಥಾನ ಹೇಮಕೂಟ ಹಂಪೆಯ ಶಾಖಾಮಠ ಶ್ರೀಕ್ಷೇತ್ರ ಬನಶಂಕರಿಯ ಗಾಯತ್ರಿದೇವಿ ಮಂಟಪದಲ್ಲಿ ಕರ್ನಾಟಕ ರಾಜ್ಯ ದೇವಾಂಗ ಸಂಘದ ರಾಜ್ಯಾಧ್ಯಕ್ಷ, ಮುಖಂಡ ರವೀಂದ್ರ ಕಲಬುರ್ಗಿ ಅಧ್ಯಕ್ಷತೆಯಲ್ಲಿ ಜರುಗಿತು.

ಈ ವೇಳೆ ರವೀಂದ್ರ ಕಲಬುರ್ಗಿ ಮಾತನಾಡಿ, ಶ್ರೀದಯಾನಂದಪುರಿ ಶ್ರೀಗಳ 36ನೇ ಪಟ್ಟಾಭಿಷೇಕ ಹಾಗೂ ದೇವಾಂಗ ಜಾಗೃತಿ ಸಮಾವೇಶಕ್ಕಾಗಿ ರಚಿಸಿರುವ ಉಪ ಸಮಿತಿಗಳ ಆಯಾ ಅಧ್ಯಕ್ಷರು ಪದಾಧಿಕಾರಿಗಳ ಜೊತೆಗೆ ಸಮಾಜದ ಯುವಕರು ಕಂಕಣಬದ್ಧರಾಗಿ ಕಾಯಾ ವಾಚಾ ಮನಸಾದಿಂದ ಸಕ್ರಿಯವಾಗಿ ಪಾಲ್ಗೊಂಡು ಉತ್ತರ ಕರ್ನಾಟಕದಲ್ಲಿ ನಡೆಯಲಿರುವ ಈ ಅಭೂತಪೂರ್ವ ಅಖಿಲ ಭಾರತ ದೇವಾಂಗ ಜಾಗೃತಿ ಸಮಾವೇಶ ಮತ್ತು ಶ್ರೀಗಳವರ 36ನೇ ಪಟ್ಟಾಭಿಷೇಕಕಾರ್ಯಕ್ರಮ ಯಶಸ್ವಿಗೊಳಸಲು ಸಮಾಜ ಬಾಂಧವರು ಸನ್ನದ್ಧರಾಗಬೇಕೆಂದರು.



ಸಭೆಯಲ್ಲಿ ಹಣಕಾಸು ಊಟ, ವಸತಿ, ಸಾರಿಗೆ, ಪ್ರಚಾರ, ಮಹಿಳಾ ಸಮಿತಿ, ಯುವ ಸಮಿತಿ, ವೇದಿಕೆ, ಧಾರ್ಮಿಕ, ಅತಿಥಿ ಸತ್ಕಾರ, ಆರೋಗ್ಯ ಸೇರಿದಂತೆ ತುರ್ತು ಸಮಿತಿಗಳನ್ನು ರಚಿಸಿ ಇದನ್ನು ನಿಭಾಹಿಸುವ ಬಗ್ಗೆ ಸುದೀರ್ಘವಾಗಿ ಚರ್ಚಿಸಿದರು.

ಸಭೆಯ ಸೂಚನಾ ಪತ್ರ, ದೇವಾಂಗ ಜಾಗೃತಿ ಸಮಾವೇಶಕ್ಕೆ ಉಪಸಮಿತಿಗಳ ಪಟ್ಟಿ ಬಿಡುಗಡೆ, ಆಯಾ ಸಮಿತಿಗಳ ಅಧ್ಯಕ್ಷರು ಸದಸ್ಯರಗಳ ಪರಿಚಯ, ಪ್ರತಿ ಸಮಿತಿಗಳ ಕಾರ್ಯ ನಿರ್ವಹಣೆಯ ಜವಾಬ್ದಾರಿ, ಸಮಾವೇಶದ ಕಾರ್ಯಕ್ರಮಗಳ ರೂಪುರೇಶೆ, ಖರ್ಚು-ವೆಚ್ಚಗಳ ಮತ್ತು ಹಣಕಾಸು ಕ್ರೋಢಿಕರಣ ಬಗ್ಗೆ ಚರ್ಚಿಸಿದರು. ಮೇ.1ರಂದು ನಿಗಧಿಗೊಳಿಸಿದ್ದು, ಇದಕ್ಕೆ ಸಭೆಯಲ್ಲಿನ ಸಮಾಜ ಬಾಂಧವರು ಸಮ್ಮತಿಸಿದರು.

ಶ್ರೀದಯಾನಂದಪುರಿ ಶ್ರೀಗಳು ಆಶೀರ್ವಚನ ನೀಡಿದರು. ಇಲ್ಲಕಲ್ಲನ ಮುನಿಸ್ವಾಮಿ ದೇವಾಂಗಮಠ, ಕೆರೂರಿನ ರುದ್ರಮುನಿಸ್ವಾಮಿ ದೇವಾಂಗಮಠ, ಪ್ರದೀಪ ಗುರೂಜಿ ಸಾನಿಧ್ಯ ವಹಿಸಿದ್ದರು.

ರಾಜ್ಯ ಸಂಘದ ಕಾರ್ಯದರ್ಶಿ ಟಿ.ರಾಜೇಶ, ಮುಖಂಡರಾದಎ.ನಾರಾಯಣಸ್ವಾಮಿ, ಕೆ.ಸಿ.ತಿಮ್ಮಶೆಟ್ಟಿ, ಪ್ರೋ.ಧನಪಾಲ್, ದೇವಾಂಗ ದತ್ತಿ ಅಧ್ಯಕ್ಷ ಅಮಾತೆಪ್ಪ ಕೊಪ್ಪಳ, ಮಾಜಿ ನಿಗಮ ಮಂಡಳಿ ಅಧ್ಯಕ್ಷ ಗೋ.ತಿಪ್ಪೇಶ, ಜಿಲ್ಲಾ ದೇವಾಂಗ ಸಂಘದ ಅಧ್ಯಕ್ಷ ಸತೀಶ ಸಪ್ಪರದ, ಪ್ರಧಾನ ಕಾರ್ಯದರ್ಶಿ ಸಂಕಣ್ಣ ಕರಡಿಗುಡ್ಡ, ದಿನೇಶ ಗಿಡ್ನಂದಿ, ವಿರುಪಾಕ್ಷಪ್ಪ ಗೂಳಿ, ಉಮೇಶ ಕಂದಗಲ್ಲ, ಡಾ.ವೆಂಕಟೇಶ ಗೌಡರ, ಡಾ.ಸಂತೋಷ ಇಜೇರಿ, ಶಂಕ್ರಣ್ಣ ಮುರುಡಿ, ದಶರಥ ಕೊಳ್ಳಿ, ಚೂಡಾಮನಿ ಕೇಶವಮೂರ್ತಿ, ತಾರಾಮತಿ ವಾಸಪ್ಪನವರ, ರವಿ ಬಳಿಗೇರ, ಟಿ.ವಿ.ಮಧುಸೂಧನ, ಮುಖಂಡ ಮಹಾಂತೇಶ ಕರ್ಜಗಿ, ಡಾ.ಶ್ರೀದೇವಿ ಕರ್ಜಗಿ, ಆನಂದ ಹುಲಮನಿ, ಶಂಕ್ರಪ್ಪ ಜನಿವಾರದ, ಹನಮಂತ ಒಡ್ಡೊಡಗಿ, ನಾರಾಯಣ ರಾಮದುರ್ಗ, ರವೀಂದ್ರ ಮಿನಜಗಿ, ಪ್ರಭು ಭಾಪ್ರಿ, ಬಸವರಾಜ ಒಡ್ಡೊಡಗಿ, ವಿವಿಧ ಜಿಲ್ಲೆ ತಾಲೂಕಗಳಿಂದ ಸಮಾಜ ಬಾಂಧವರು ಆಗಮಿಸಿದ್ದರು.

## ಹಿಂದು ಸಮಾಜ ಒಗ್ಗೂಡಿದರೆ ಹಿಂದು ಶಕ್ತಿ ನಿರ್ಮಾಣ

**ಗುಳೇದಗುಡ್ಡ:** ಜಾತಿ ಹೆಸರಿನಲ್ಲಿ ವಿಘಟಿತವಾಗುತ್ತಿರುವ ಹಿಂದೂ ಸಮಾಜವನ್ನು ಸಂಘಟಿಸುವ ಕೆಲಸವಾಗಬೇಕು. ಹಿಂದೂ ಸಮಾಜ ಒಗ್ಗಟ್ಟಾದಾಗ ಮಾತ್ರ ಹಿಂದೂ ಶಕ್ತಿ ನಿರ್ಮಾಣವಾಗುತ್ತದೆ. ಆಗ ನಮ್ಮ ರಾಷ್ಟ್ರ ಹಿಂದೂರಾಷ್ಟ್ರವಾಗುತ್ತದೆ ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಪ್ರಾಂತಕಾರ್ಯಕಾರಣಿ ಸದಸ್ಯ ಗೋಪಿ ಹೇಳಿದರು.

ಪಟ್ಟಣದಲ್ಲಿ ನಡೆದ ಹಿಂದೂ ಸಂಚಾಲನಾ ಸಮಿತಿಯಿಂದ ಪಟ್ಟಣದ ಭಂಡಾರಿ ಕಾಲೇಜಿನ ಮೈದಾನದಲ್ಲಿ ನಡೆದ ಹಿಂದೂ ಸಮ್ಮೇಳನ ಕಾರ್ಯಕ್ರಮದಲ್ಲಿ ಮುಖ್ಯ ವಕ್ತಾರರಾಗಿ ಮಾತನಾಡಿ, ಜಗತ್ತಿಗೆ ಧರ್ಮ, ಸಂಸ್ಕೃತಿ, ಪುಣ್ಯದ ಕಲ್ಪನೆಯನ್ನು ಕೊಟ್ಟಿದ್ದೇ ಭಾರತ. ಮನುಷ್ಯ ಯಾವರೀತಿ ಬದುಕಬೇಕು ಎಂದು ಜಗತ್ತಿಗೆ ಹೇಳಿಕೊಟ್ಟ ದೇಶ ನಮ್ಮದು ಎಂದರು.

ಹಿಂದೂ ಜಾತಿ ಸೂಚಕವಲ್ಲ, ಹಿಂದೂ ಜೀವನ ಪದ್ಧತಿ. ಎಲ್ಲರನ್ನು ಆತ್ಮೀಯರನ್ನಾಗಿ, ಭಗವಂತನ ಅಂಶ ಎಂದು ಕಾಣುತ್ತಾನೋ ಅವನು ಹಿಂದೂ. ತನ್ನ ಬದುಕನ್ನು ಇಡೀ ಸಮಾಜಕ್ಕೆ, ಪ್ರಕೃತಿಗೆ ಮೀಸಲು ಎನ್ನುವುದು ಹಿಂದೂಗಳ ಗುಣ. ಬದುಕಿನಲ್ಲಿ ಸೇವೆ ಮತ್ತು ತ್ಯಾಗದ ಭಾವವಿಟ್ಟುಕೊಂಡು ಬದುಕುವವನು ಯಾವುದೇ ದೇಶದಲ್ಲಿರಲಿ ಅವನು ಹಿಂದೂ ಎಂದರು.

ಕಾಡಸಿದ್ದೇಶ್ವರ ಶ್ರೀಗಳು ಮಾತನಾಡಿ, ನಮ್ಮ ಸಂಸ್ಕೃತಿ, ಸಂಪ್ರದಾಯಗಳನ್ನು ಉಳಿಸಿ ಬೆಳೆಸಬೇಕು. ಈ ನಿಟ್ಟಿನಲ್ಲಿ ಹಿಂದೂಗಳು ಒಗ್ಗಟ್ಟಾಗಿ ನಮ್ಮ ಸಂಪ್ರದಾಯ, ಆಚರಣೆ, ಉತ್ಸವಗಳನ್ನು ಆಚರಿಸುವ ಮೂಲಕ ಮುಂದಿನ ಪೀಳಿಗೆಗೆ ನಮ್ಮ ಶ್ರೀಮಂತ ಸಂಸ್ಕೃತಿಯನ್ನು ತಲುಪಿಸಬೇಕು ಎಂದರು.

ಕೊಟೆಕಲ್ ಹೊಳೆಹುಚ್ಚೇಶ್ವರ ಶ್ರೀಗಳು, ಗುರುಸಿದ್ದೇಶ್ವರ ಬ್ರಹನ್ಮಠದ




ಬಸವರಾಜ ಪಟ್ಟದಾರ್ಯ ಶ್ರೀಗಳು ಮಾತನಾಡಿದರು.

ಹಿಂದೂ ಸಮ್ಮೇಳನ ಸಂಚಾಲನ ಸಮಿತಿಯ ಅಧ್ಯಕ್ಷ ಅಶೋಕ ಹೆಗಡೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮಾಜಿ ಶಾಸಕರಾದ ಎಂ.ಕೆ.ಪಟ್ಟಣಶೆಟ್ಟಿ, ರಾಜಶೇಖರ ಶೀಲವಂತ, ಜೆಡಿಎಸ್ ಜಿಲ್ಲಾಧ್ಯಕ್ಷ ಹನಮಂತ ಮಾವಿನಮರದ, ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ, ಸಂಪತಕುಮಾರ್ ರಾಠಿ, ರಂಗಪ್ಪ ಶೇಬಿನಕಟ್ಟಿ, ಪಿ.ಎನ್. ಪವಾರ, ಸಂಜಯ್ ಕಾರಕೂನ, ಮಲ್ಲಿಕಾರ್ಜುನ ಶೀಲವಂತ. ಅಮಾತೆಪ್ಪ ಕೊಪ್ಪಳ, ಮಧುಸೂಧನ ರಾಂದಡ, ವಿವೇಕಾನಂದ ದೇವಾಂಗಮಠ, ವಿಠ್ಠಲ ಪತ್ತಾರ, ರವಿ ಶೇಬಿನಕಟ್ಟಿ, ಬಸವರಾಜ ಕುಂಬಾರ, ಭುವನೇ ಪೂಜಾರ, ಸಂಗಣ್ಣ ಹುನಗುಂದ, ಶಂಕರಪ್ಪ ರೂಢಗಿ, ಮಹಾದೇವ ಜಗತಾಪ, ಶಿವು ಬಾದವಾಡಗಿ, ಶಿವಕುಮಾರ ಅಚನೂರ, ಈರಣ್ಣ ಬಂಡಿವಡ್ಡರ, ಈರಣ್ಣ ಬಂಡಿ, ಮಹೇಶ ಸೂಳಿಭಾವಿ, ಪ್ರಶಾಂತ ಜವಳಿ ಸೇರಿದಂತೆ ಸಮ್ಮೇಳನ ಸಂಚಲನ ಸಮಿತಿಯ ಸರ್ವ ಸದಸ್ಯರು, ಎಲ್ಲ ಸಮಾಜದ ಗಣ್ಯರು, ಹಿರಿಯರು, ಮುಖಂಡರು ಪಾಲ್ಗೊಂಡಿದ್ದರು.

## ಕಿರುಸುದ್ದಿ

### ಹಕ್ಕುಪತ್ರ ನೀಡಲು ಮನವಿ

**ನಾಲತವಾಡ:** ಪಟ್ಟಣ ಪಂಚಾಯತಿಯ ವ್ಯಾಪ್ತಿಯ ವಾರ್ಡ್ ನಂಬರ್ 1 ಮತ್ತು 2 ಜಗದೇವನಗರ ನಗರದ ಪ್ರದೇಶದಲ್ಲಿ ವಾಸಿಸುತ್ತಿರುವ ಜನತೆಗೆ ಸರ್ಕಾರ ನೀಡಿರುವ ಹಕ್ಕು ಪತ್ರದ ಪ್ರಕಾರ ಉತಾರಿ ನೀಡುವ ಸಲುವಾಗಿ ಪಟ್ಟಣ ಪಂಚಾಯಿತಿಯ ಮುಖ್ಯ ಅಧಿಕಾರಿಗೆ ಈರಣ್ಣ ಕೊನ್ನೂರ ಮನವಿ ಸಲ್ಲಿಸಿದರು. ನಮ್ಮ ಮನವಿಯನ್ನು ಪರಿಗಣಿಸಿ ಶೀಘ್ರದಲ್ಲಿ ಹಕ್ಕು ಪತ್ರಕ್ಕೆ ಸಂಬಂಧಿಸಿದಂತೆ ಉತಾರಿ ದಾಖಲೆಗಳನ್ನು ಪರಿಶೀಲಿಸಿ ಶೀಘ್ರವಾಗಿ ಉತಾರಿ ನೀಡುವಂತೆ ಮನವಿ ಮಾಡುತ್ತೇವೆ ಇಲ್ಲವಾದರೆ ಮುಂದಿನ ದಿನ ಮಾನಗಳಲ್ಲಿ ನಮ್ಮ ಸಂಘಟನೆಯಿಂದ ಜಗದೇವನಗರ ನಗರದ ಜನರ ಪರವಾಗಿ ಪಟ್ಟಣ ಪಂಚಾಯಿತಿ ಮುಂಭಾಗದಲ್ಲಿ ಉಗ್ರವಾಗಿ ಹೋರಾಟ ಮಾಡಬೇಕಾಗುತ್ತದೆ ಎಂದು ಈ ಮೂಲಕ ಯುವಜನ ಸೇನೆಯ ರಾಜ್ಯ ಅಧ್ಯಕ್ಷ ಶಿವಾನಂದ ವಾಲಿ ಹೇಳಿದರು. ಈ ಸಂದರ್ಭದಲ್ಲಿ ಪಪಂ ಮುಖ್ಯ ಅಧಿಕಾರಿ ಈರಣ್ಣ ಕೊನ್ನೂರ್, ಪಪಂ ಉಪಾಧ್ಯಕ್ಷ ಬಸವರಾಜ್ ಗಂಗನಗೌಡರ (ಗಡ್ಡಿ), ಪಪಂ ಸದಸ್ಯ ರಮೇಶ ಆಲಕೊಪ್ಪರ, ಬಾಬು ತಗ್ಗಿನಮನಿ, ಮಣಿಕಂಠ ಮಲ್ಲು ಗಂಗನಗೌಡ, ರಫೀಕ್ ತಗ್ಗಿನಮನಿ, ಗುರು ತಂಗಡಗಿ, ಚಂದ್ರು ಬಂಡಿವಡ್ಡರ, ಮುತ್ತಣ್ಣ ಭಜಂತ್ರಿ, ಮಹೇಶ್ ವಡ್ಡರ್ ಇದ್ದರು.

### ಸಿದ್ದಮ್ಮ, ಶೈಲಜಾ ಆಯ್ಕೆ

**ಸಿಂದಗಿ:** ನಗರದ ಶ್ರೀ ಪದ್ಮರಾಜ ಮಹಿಳಾ ಪದವಿ ಮಹಾವಿದ್ಯಾಲಯದ ವಿದ್ಯಾರ್ಥಿನಿಯರಾದ ಸಿದ್ದಮ್ಮ ಬಿರಾದಾರ ಹಾಗೂ ಶೈಲಜಾ ಪಾಟೀಲ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ಸಿಂದಗಿಯಲ್ಲಿ ಜರುಗಿದ ಖೋ-ಖೋ ತಂಡದ ಆಯ್ಕೆಯಲ್ಲಿ ಭಾಗವಹಿಸಿ, ವಿಶ್ವವಿದ್ಯಾಲಯ ಬ್ಲೂ ಆಗಿ ಆಯ್ಕೆಯಾಗಿದ್ದಾರೆ. ಈ ವಿದ್ಯಾರ್ಥಿನಿಯರು ಮಾ.30ರಂದು ದಾವಣಗೆರೆ ವಿಶ್ವವಿದ್ಯಾಲಯದಲ್ಲಿ ಜರುಗಲಿರುವ ಅಂತರ್ ವಿಶ್ವವಿದ್ಯಾಲಯಗಳ ಖೋ-ಖೋ ಪಂದ್ಯಾವಳಿಯಲ್ಲಿ ವಿಶ್ವವಿದ್ಯಾಲಯ ತಂಡವನ್ನು ಪ್ರತಿನಿಧಿಸಲಿದ್ದಾರೆ. ವಿದ್ಯಾರ್ಥಿನಿಯರ ಈ ಸಾಧನೆಗೆ ಸಂಸ್ಥೆಯ ಚೇರಮನ್ನರಾದ ಡಾ.ಪ್ರಭುಸಾರಂಗದೇವ ಶಿವಾಚಾರ್ಯರು, ಉತ್ತರಾಧಿಕಾರಿ ಡಾ.ವಿಶ್ವಪ್ರಭುದೇವ ಶಿವಾಚಾರ್ಯರು, ಕಾಲೇಜಿನ ಆಡಳಿತ ಮಂಡಳಿ, ಪ್ರಾಚಾರ್ಯರು ಸೇರಿದಂತೆ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಅಭಿನಂದಿಸಿದ್ದಾರೆ.





### ಡಾ. ಸತೀಶಗೆ ವೀರ ಗಣಾಚಾರಿ ಪ್ರಶಸ್ತಿ

**ದೇವರ ಹಿಪ್ಪರಗಿ:** ಶ್ರೀ ಮಡಿವಾಳ ಮಾಚಿದೇವ ಜನ್ಮಭೂಮಿ ಪ್ರತಿಷ್ಠಾನ, ಕಲೆ, ಸಾಹಿತ್ಯ, ಸಂಸ್ಕೃತಿ ವೇದಿಕೆ ದೇವರ ಹಿಪ್ಪರಗಿ ಇವರು ಕೊಡಮಾಡುವ ರಾಷ್ಟ್ರೀಯ ವೀರ ಗಣಾಚಾರಿ ಪ್ರಶಸ್ತಿಗೆ ಪಟ್ಟಣದ ಖ್ಯಾತ ಚಿಕ್ಕ ಮಕ್ಕಳ ತಜ್ಞ ಡಾ. ಸತೀಶ ನಾಡಗೌಡ ಆಯ್ಕೆಯಾಗಿದ್ದಾರೆ. ವೈದ್ಯಕೀಯ ಕ್ಷೇತ್ರದಲ್ಲಿಯ ಇವರ ಅನುಪಮ ಸೇವೆಯನ್ನು ಪರಿಗಣಿಸಿ 2025/26ನೇ ಸಾಲಿನ ರಾಷ್ಟ್ರೀಯ ವೀರ ಗಣಾಚಾರಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದ್ದು ಮಾ.22ರಂದು ದೇವರ ಹಿಪ್ಪರಗಿ ಪಟ್ಟಣದ ಶ್ರೀ ಕಲ್ಮೇಶ್ವರ ಮಂಗಲ ಕಾರ್ಯಾಲಯದಲ್ಲಿ ಏರ್ಪಡಿಸಿರುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ನೀಡಿ ಗೌರವಿಸಲಾಗುವುದೆಂದು ಶ್ರೀ ಮಡಿವಾಳ ಮಾಚಿದೇವ ಜನ್ಮಭೂಮಿ ಪ್ರತಿಷ್ಠಾನ ಕಲಾ ಸಾಹಿತ್ಯ ಸಂಸ್ಕೃತಿ ವೇದಿಕೆ ಅಧ್ಯಕ್ಷ ಬಿ.ಎಂ .ಪಾಟೀಲ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



### ಇಂದಿನಿಂದ ಎಸೆಸೆಲ್ಸಿ ಪರೀಕ್ಷೆ

**ಇಂಡಿ:** ಮಾ.18 ರಿಂದ ಏ.2ರವರೆಗೆ ತಾಲೂಕಿನಲ್ಲಿ ನಡೆಯುವ 2025 –26 ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ. ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಸಯಿದಾ ಮುಜಾವರ ಹೇಳಿದರು. ಅವರು ನಗರದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಇಂಡಿ ತಾಲೂಕಿನಲ್ಲಿ ಕನ್ನಡ, ಇಂಗ್ಲೀಷ್ ಮತ್ತು ಉರ್ದು ಮಾಧ್ಯಮದಲ್ಲಿ ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ. ಪ್ರಸ್ತುತ ಒಟ್ಟು 4706 ವಿದ್ಯಾರ್ಥಿಗಳು ಪರೀಕ್ಷೆ ಬರೆಯುತ್ತಿದ್ದು ಅದರಲ್ಲಿ 2481 ವಿದ್ಯಾರ್ಥಿಗಳು ಮತ್ತು 2225 ವಿದ್ಯಾರ್ಥಿನಿಯರು ಪರೀಕ್ಷೆ ಬರೆಯುತ್ತಿದ್ದಾರೆ ಎಂದರು. ಒಟ್ಟು 19 ಪರೀಕ್ಷಾ ಕೇಂದ್ರಗಳಿದ್ದು ಚೀಫ್ ಕಸ್ಟಡಿ 38 ಜನ, ಪ್ರತಿ ಪರೀಕ್ಷಾ ಕೇಂದ್ರಕ್ಕೆ ಒಬ್ಬರಂತೆ ಮೊಬೈಲ್ ಸ್ವಾಧೀನ ಅಧಿಕಾರಿಗಳನ್ನು ನೇಮಿಸಲಾಗಿದೆ. ಅದರಲ್ಲಿ ಇಂಡಿ ನಗರದಲ್ಲಿ ಒಂಬತ್ತು ಮತ್ತು ಗ್ರಾಮೀಣ ಪ್ರದೇಶದಲ್ಲಿ 10 ಕೇಂದ್ರಗಳಿವೆ ಎಂದರು. ಪರೀಕ್ಷೆ ಸೂಸುತ್ರವಾಗಿ ನಡೆಯಲು ಜಾಗೃತದಳಗಳನ್ನು ರಚಿಸಲಾಗಿದೆ. ಅದರಲ್ಲಿ ಮೂರು ಜಾಗೃತದಳ ನಿಯೋಜನೆ ಮಾಡಲಾಗಿದೆ. ಅದಲ್ಲದೆ ಪ್ರತಿ ಕೇಂದ್ರಕ್ಕೆ ಒಬ್ಬರು ಸ್ಥಾನಿಕ ಜಾಗೃತದಳವಿದ್ದು ಅವರು ಪ್ರತಿದಿನ ಬೇರೆ ಬೇರೆ ಕೇಂದ್ರದಲ್ಲಿ ಕಾರ್ಯ ನಿರ್ವಹಿಸುವರು. ಪ್ರತಿ ಪರೀಕ್ಷಾ ಕೇಂದ್ರದಲ್ಲಿ ಸಿ.ಸಿ.ಕ್ಯಾಮೇರಾ ವ್ಯವಸ್ಥೆ ಇದ್ದು ಕೇಂದ್ರದಲ್ಲಿ ಐದು ಗಂಟೆ ಬ್ಯಾಟರಿ ವ್ಯವಸ್ಥೆ ಇದ್ದು ಸಿ.ಸಿ. ಕ್ಯಾಮೇರಾ ಪರೀಕ್ಷಾ ವೇಳೆ ಚಾಲನೆಯಲ್ಲಿರುತ್ತವೆ. ಪರೀಕ್ಷಾ ಕೇಂದ್ರದಲ್ಲಿ ಆರೋಗ್ಯ ಇಲಾಖೆ, ಸಾರಿಗೆ, ಭದ್ರತೆಗಾಗಿ ಪೊಲೀಸ ಇಲಾಖೆಗೆಳಿಗೆ ಪತ್ರ ಬರೆಯಲಾಗಿದೆ. ಆಶಾ ಕಾರ್ಯಕರ್ತೆಯರು ಪೋಲಿಸ ಸಿಬ್ಬಂದಿಗಳು ಇರುವರು ಎಂದರು. ಎಸ್ಸೆಸ್ಸೆಲ್ಸಿ ಪರೀಕ್ಷೆ ನೋಡಲ್ ಅಧಿಕಾರಿ ಎ.ಒ ಹೂಗಾರ ಮಾತನಾಡಿದರು.



ನಾಲತವಾಡ: ಪಟ್ಟಣ ಪಂಚಾಯತಿಯ ವ್ಯಾಪ್ತಿಯ ವಾರ್ಡ್ ನಂಬರ್ 1 ಮತ್ತು 2 ಜಗದೇವನಗರ ನಗರದ ಪ್ರದೇಶದಲ್ಲಿ ವಾಸಿಸುತ್ತಿರುವ ಜನತೆಗೆ ಸರ್ಕಾರ ನೀಡಿರುವ ಹಕ್ಕು ಪತ್ರದ ಪ್ರಕಾರ ಉತಾರಿ ನೀಡುವ ಸಲುವಾಗಿ ಪಪಂ ಮುಖ್ಯ ಅಧಿಕಾರಿಗೆ ಈರಣ್ಣ ಕೊನ್ನೂರ ಮನವಿ ಸಲ್ಲಿಸಿದರು. ಈ ಸಂದರ್ಭದಲ್ಲಿ ಪಪಂ ಮುಖ್ಯ ಅಧಿಕಾರಿ ಈರಣ್ಣ ಕೊನ್ನೂರ್, ಪಪಂ ಉಪಾಧ್ಯಕ್ಷ ಬಸವರಾಜ್ ಗಂಗನಗೌಡರ (ಗಡ್ಡಿ), ಪಪಂ ಸದಸ್ಯ ರಮೇಶ ಆಲಕೊಪ್ಪರ, ಬಾಬು ತಗ್ಗಿನಮನಿ, ಮಣಿಕಂಠ ಮಲ್ಲು ಗಂಗನಗೌಡ, ರಫೀಕ್ ತಗ್ಗಿನಮನಿ, ಗುರು ತಂಗಡಗಿ ಇದ್ದರು.

## ವಿಜಯಪುರ ಭಾವೈಕ್ಯತೆಗೆ ಹೆಸರಾಗಿದೆ: ಎಂಬಿಪಾ

**ವಿಜಯಪುರ:** ಬಸವಣ್ಣನವರ ಜನ್ಮಭೂಮಿ, ಸೂಫಿ ಸಂತರು ನಡೆದಾಡಿದ ವಿಜಯಪುರ ಜಿಲ್ಲೆ ಭಾವೈಕ್ಯತೆಗೆಹೆಸರಾಗಿದೆಎಂದುಜಿಲ್ಲಾಉಸ್ತುವಾರಿಸಚಿವಎಂ.ಬಿ.ಪಾಟೀಲಹೇಳಿದರು. ನಗರದಲ್ಲಿ ಕೆ.ಸಿ. ಮಾರುಕಟ್ಟೆ ವ್ಯಾಪಾರಸ್ಥರ ಸಂಘ ಪವಿತ್ರ ರಂಜಾನ್ ನಿಮಿತ್ತ ಆಯೋಜಿಸಿದ್ದ ಇಫ್ತಿಯಾರ್ ಕೂಟದಲ್ಲಿ ಮಾತನಾಡಿ, ಜಿಲ್ಲೆಯಲ್ಲಿ ಬಸವಾದಿ ಶರಣರು ಸಮಸಮಾಜಕ್ಕಾಗಿ ಶ್ರಮಿಸಿದ್ದಾರೆ. ಆದಿಲ್ ಶಾಹಿ ಬಾದಷರು ಅಭಿವೃದ್ಧಿ ಮಾಡಿದ್ದಾರೆ. ಸೌಹಾರ್ದತೆ ಮತ್ತು ಭಾವೈಕ್ಯತೆಗೆ ಜಿಲ್ಲೆ ಹೆಸರಾಗಿದೆ. ಈ ಬಾರಿ ಯುಗಾದಿ ಮತ್ತು ರಂಜಾನ್ ಜೊತೆಗೆ ಬಂದಿವೆ. ಎಲ್ಲರಿಗೂ ದೇವರು ಒಳಿತನ್ನು ಮಾಡಲಿ ಎಂದರು. ಧರ್ಮಗುರು ತನ್ವೀರ್ ಪೀರಾ ಹಾಶ್ಮಿ ಮಾತನಾಡಿ, ಕರ್ನಾಟಕ ಮತ್ತು ವಿಜಯಪುರ ಜಿಲ್ಲೆ ಶರಣರು, ಸೂಫಿ ಸಂತರ ನಾಡಾಗಿವೆ. ಯುಗಾದಿ ಮತ್ತು ರಂಜಾನ್ ಒಟ್ಟಿಗೆ ಬಂದಿರುವುದರಿಂದ ಎಲ್ಲರೂ ಸೇರಿ ಆಚರಿಸೋಣ ಎಂದರು. ಕಾಂಗ್ರೆಸ್ ಮುಖಂಡ ಅಬ್ದುಲ್ ಹಮೀದ್ ಮುಶ್ರಿಫ್ ಮಾತನಾಡಿ, ಪ್ರತಿವರ್ಷ ಕೆ.ಸಿ. ಮಾರುಕಟ್ಟೆಯಲ್ಲಿ ಇಫ್ತಿಯಾರ್ ಕೂಟ ಆಯೋಜಿಸುತ್ತಿದೆ ಎಂದರು. ವಿಜಯಪುರ ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಡಾ. ಗಂಗಾಧರ ಸಂಬಣ್ಣಿ, ಮಾಜಿ ಅಧ್ಯಕ್ಷ ಕನ್ನಾನ್ ಮುಶ್ರಿಫ್, ಮಾಜಿ ಮೇಯರ್ ಸಜ್ಜಾದೆ ಪೀರಾ ಮುಶ್ರಿಫ್, ಮುಖಂಡರಾದ ಆಜಾದ್ ಪಟೇಲ್, ಎಸ್.ಎಂ. ಪಾಟೀಲ ಗಣಿಹಾರ, ಮಹಾದೇವ ಪವಾರ, ಅಶ್ಫಾಕ್ ಮನಗೂಳಿ, ಚಾಂದಸಾಬ ಗಡಗಲಾವ, ಅಬ್ದುಲ್ ರಜಾಕ್ ಹೊರ್ತಿ, ರಫೀಕ್ ಟಪಾಲ್, ಮೈನುದ್ದೀನ್ ಬೀಳಗಿ, ಶಕೀಲ್ ಸುತಾರ, ಜಮೀರ್ ಉಸ್ತಾದ, ಶಕೀಲ ಬಾಗಮಾರೆ, ಜಮೀರ್ ಭಕ್ಷಿ, ಶಬ್ಬೀರ ಜಹಾಗೀರದಾರ, ದಿನೇಶ ಹಳ್ಳಿ ಇದ್ದರು.



ವಿಜಯಪುರ: ನಗರದಲ್ಲಿ ಕೆ.ಸಿ. ಮಾರುಕಟ್ಟೆ ವ್ಯಾಪಾರಸ್ಥರ ಸಂಘ ಪವಿತ್ರ ರಂಜಾನ್ ನಿಮಿತ್ತ ಆಯೋಜಿಸಿದ್ದ ಇಫ್ತಿಯಾರ್ ಕೂಟದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲ ಭಾಗವಹಿಸಿದ್ದರು. ಕಾಂಗ್ರೆಸ್ ಮುಖಂಡ ಅಬ್ದುಲ್ ಹಮೀದ್ ಮುಶ್ರಿಫ್, ವಿಜಯಪುರ ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಡಾ. ಗಂಗಾಧರ ಸಂಬಣ್ಣಿ, ಮಾಜಿ ಅಧ್ಯಕ್ಷ ಕನ್ನಾನ್ ಮುಶ್ರಿಫ್, ಮಾಜಿ ಮೇಯರ್ ಸಜ್ಜಾದೆ ಪೀರಾ ಮುಶ್ರಿಫ್ ಸೇರಿದಂತೆ ಇತರರಿದ್ದರು.

### ಎಬಿವಿಪಿ ಕಾರ್ಯಕರ್ತರಿಂದ ಪ್ರತಿಭಟನೆ | ಜಿಲ್ಲಾಧಿಕಾರಿಗೆ ಮನವಿ

# ಸರ್ಕಾರಿ ಹುದ್ದೆಗಳ ನೇಮಕಾತಿಗೆ ಆಗ್ರಹ

**ವಿಜಯಪುರ:** ಕರ್ನಾಟಕ ರಾಜ್ಯದಲ್ಲಿ ಸರಕಾರಿ ಹುದ್ದೆಗಳ ನೇಮಕಾತಿ ಮಾಡುವಂತೆ ಆಗ್ರಹಿಸಿ ಹಾಗೂ ವಿದ್ಯಾರ್ಥಿಗಳ ಶೈಕ್ಷಣಿಕ ಸಮಸ್ಯೆಗಳನ್ನು ಸರಿಪಡಿಸುವಂತೆ ಆಗ್ರಹಿಸಿ ನಗರದಲ್ಲಿ ಎಬಿವಿಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿ, ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಈ ವೇಳೆ ಎಬಿವಿಪಿಯ ಕೇಂದ್ರೀಯ ಕಾರ್ಯಸಮಿತಿ ಸದಸ್ಯ ಸಚಿನ ಕುಳಗೇರಿ ಮಾತನಾಡಿ, ರಾಜ್ಯದಲ್ಲಿ ಕಳೆದ 5-6 ವರ್ಷಗಳಿಂದ ವಿದ್ಯಾರ್ಥಿಗಳ ಪರಿಸ್ಥಿತಿ ಶೋಚನೀಯವಾಗಿದೆ. ವಿದ್ಯಾರ್ಥಿಗಳ ಸಮಸ್ಯೆಗಳಿಗೆ ಸ್ಪಂದಿಸಿ ವಿದ್ಯಾರ್ಥಿಗಳ ಜೊತೆಗೆ ನಿಲ್ಲಬೇಕಾದ ಸರ್ಕಾರ ಕುಂಭನಿದ್ರೆಗೆ ಜಾರಿದೆ. ಸರಕಾರದ ಹತ್ತಿರ ಯಾವುದೇ ದೂರದೃಷ್ಟಿಯ ಯೋಜನೆಗಳು ಇಲ್ಲದೆ ಸಮಸ್ಯೆಗಳು ಬಂದಾಗ ಅವುಗಳಿಗೆ ತೇಪೆ ಹಚ್ಚುವ ಕಾರ್ಯ ನಡೆಯುತ್ತಿದೆ ಎಂದರು.

ಖಾಲಿ ಇರುವ ಸರಕಾರಿ ಹುದ್ದೆಗಳ ನೇಮಕಾತಿ. ಕರ್ನಾಟಕ ರಾಜ್ಯದಲ್ಲಿ ಖಾಲಿ ಇರುವ ಸರ್ಕಾರಿ ಹುದ್ದೆಗಳ ನೇಮಕಾತಿಯನ್ನ ಮಾಡಿಕೊಳ್ಳುತ್ತೇವೆ ಎಂದು ಪ್ರಣಾಳಿಕೆಯಲ್ಲಿ ಅಧಿಕಾರಕ್ಕೆ ಬಂದ ಸರ್ಕಾರ ಕಳೆದ ಮೂರು ವರ್ಷಗಳಿಂದ ಯಾವುದೇ ನೇಮಕಾತಿಗಳನ್ನು ಮಾಡದೆ ವಿದ್ಯಾರ್ಥಿಗಳಿಗೆ ಮೋಸ ಮಾಡಿದೆ, ರಾಜ್ಯದಲ್ಲಿ ಒಟ್ಟು 43 ಇಲಾಖೆಗಳಲ್ಲಿ 2,84,881 ಹುದ್ದೆಗಳು ಖಾಲಿ ಇದೆ, ಲಕ್ಷಾಂತರ ಅಭ್ಯರ್ಥಿಗಳು ಕಳೆದ ಐದಾರು ವರ್ಷಗಳಿಂದ ಸರ್ಕಾರ ನೇಮಕಾತಿಗಳನ್ನ ಮಾಡುತ್ತೆ ಎಂಬ ನಂಬಿಕೆಯೊಂದಿಗೆ ಪ್ರತಿ ತಿಂಗಳು ಹಣವನ್ನು ಖರ್ಚು ಮಾಡಿಕೊಂಡು ತರಬೇತಿಯನ್ನು ಪಡೆಯುತ್ತಾ ಸರಕಾರಿ ಸೇವೆಯನ್ನು ಮಾಡಬೇಕು ಆಸೆಯನ್ನು ಇಟ್ಟುಕೊಂಡು ಅಧ್ಯಯನ ಮಾಡುತ್ತಿದ್ದಾರೆ, ಆದರೆ ಅಂತಹ ಸಾವಿರಾರು ಅಭ್ಯರ್ಥಿಗಳ ವಯಸ್ಸು ಕೂಡಾ ಮೀರುತ್ತಿದೆ. ಆದರೆ ಸರಕಾರಕ್ಕೆ ಈ ಯಾವುದೇ ತೊಂದರೆಗಳನ್ನು ಗಮನಿಸದೆ ಬಡ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳ ಜೀವನದ ಜೊತೆ ಚೆಲ್ಲಾಟವಾಡುತ್ತಿದೆ ಎಂದರು.




ಎಬಿವಿಪಿಯಜಿಲ್ಲಾಸಂಚಾಲಕಸಂದೀಪಅರಳಗುಂಡಿ ಮಾತನಾಡಿ, ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದಂತಹ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯಲ್ಲಿ 79,694 ಹುದ್ದೆಗಳು, ಉನ್ನತ ಶಿಕ್ಷಣ ಇಲಾಖೆಯಲ್ಲೂ 13,599 ಹುದ್ದೆಗಳು ಖಾಲಿ ಇದ್ದು ಇದರಿಂದ ರಾಜ್ಯದ ವಿದ್ಯಾರ್ಥಿಗಳ ಶಿಕ್ಷಣದ ಗುಣಮಟ್ಟದ ಮೇಲೆ ಪರಿಣಾಮ ಬೀರುತ್ತದೆ. ಸರಿಯಾಗಿ ತರಗತಿಗಳು ನಡೆಯುತ್ತಿಲ್ಲ, ಸರ್ವರಿಗೂ ಶಿಕ್ಷಣ ನೀಡಬೇಕಾದದ್ದು ಸರಕಾರಗಳ ಕರ್ತವ್ಯ ಆದರೆ ಸರಕಾರಿ ಶಾಲಾ ಕಾಲೇಜುಗಳಿಗೆ ಹೋಗುವ ವಿದ್ಯಾರ್ಥಿಗಳ ಸರ್ಕಾರ ಅನ್ಯಾಯ ಮಾಡುತ್ತಿದೆ ಎಂದರು.

ಎಬಿವಿಪಿಯ ಕಾನೂನು ವಿದ್ಯಾರ್ಥಿಗಳ ಪ್ರಮುಖ ಮಂಜುನಾಥ ಹಳ್ಳಿ ಮಾತನಾಡಿ, ರಾಜ್ಯದ ವಿಶ್ವವಿದ್ಯಾಲಯಗಳ ಸ್ಥಿತಿಗತಿ ಶೋಚನೀಯವಾಗಿದೆ. ಕರ್ನಾಟಕ ರಾಜ್ಯದ ವಿಶ್ವವಿದ್ಯಾಲಯಗಳ ಸ್ಥಿತಿಗತಿ ಶೋಚನೀಯವಾಗಿದೆ. ಕರ್ನಾಟಕ ರಾಜ್ಯ ಮೊದಲು ಉನ್ನತ ಶಿಕ್ಷಣಕ್ಕೆ ಹೆಸರುವಾಸಿ ಆದ ರಾಜ್ಯ, ಪ್ರತಿಷ್ಠಿತ ವಿವಿಗಳು ಸಾವಿರಾರು ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡಿ ಅವರ ಜೀವನ ರೂಪಿಸಿಕೊಳ್ಳಲು ಸಹಕಾರಿಯಾಗಿವೆ. ಆದರೆ ಇತ್ತೀಚಿನ ದಿನಗಳಲ್ಲಿ ರಾಜ್ಯದ ವಿವಿಗಳನ್ನು ಸರಕಾರ ಕಡೆಗಣಿಸಿದೆ. ವಿವಿಗಳಿಗೆ ಯಾವುದೇ ಅನುದಾನ ನೀಡದೇ ಅವುಗಳನ್ನು ಕೇವಲ ವಿದ್ಯಾರ್ಥಿಗಳಶುಲ್ಕದಮೇಲೆನಡೆಸುವಂತೆಮಾಡುತ್ತಿದೆ. ಹಿಂದಿನ ಸರ್ಕಾರ ಸ್ಥಾಪಿಸಿದ 9 ವಿಶ್ವ ವಿದ್ಯಾಲಯಗಳು ಮುಚ್ಚುವ ಸ್ಥಿತಿಯನ್ನು ಸರಕಾರ ನಿರ್ಮಾಣ ಮಾಡುತ್ತಿದೆ ಎಂದು ಆರೋಪಿಸಿದರು. ಎಬಿವಿಪಿಯ ವಿಭಾಗ ಸಂಘಟನಾ ಕಾರ್ಯದರ್ಶಿ ಹರ್ಷ ನಾಯಕ, ಶಶಿಕಾಂತ ರಾಕ್ಲೆ, ಚೇತನ ಕೋರವಾರ, ದುಂಡಪ್ಪ ನಿಲೋಗಿ, ಬಾಲಾಜಿ ಬಿರಾದಾರ, ಬಸನಗೌಡ ಕೋನರಡ್ಡಿ, ಕಾರ್ತಿಕ ಬಿರಾದಾರ, ಅಜಯ, ಶಿಲ್ಪಾ ಪೂಜಾರಿ, ನಿಖಿತಾ ರೂಡಿ, ಅಜಯ ಸೋಲಂಕಿ, ಶಶಿಕುಮಾರ ಪಾಟೀಲ, ಸಾಯಿ ಬಿರಾದಾರ, ಇತರರು ಭಾಗವಹಿಸಿದ್ದರು.

## ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ಜಿಲ್ಲಾಡಳಿತ ಸಂಪೂರ್ಣ ಸಜ್ಜು

**ವಿಜಯಪುರ:** ಜಿಲ್ಲೆಯಾದ್ಯಂತ ಒಟ್ಟು 137 ಪರೀಕ್ಷಾ ಕೇಂದ್ರಗಳಲ್ಲಿ ಇದೇ ಮಾ.18ರಿಂದ ಎಸ್ ಎಸ್ಎಲ್‌ಸಿ ಪರೀಕ್ಷೆ ಆರಂಭಗೊಳ್ಳಲಿದ್ದು, ನಕಲು ಮುಕ್ತ ಹಾಗೂ ಪಾರದರ್ಶಕ ಪರೀಕ್ಷೆ ನಡೆಸಲು ಜಿಲ್ಲಾಡಳಿತ ಸಕಲ ಸಿದ್ಧತೆ ಮಾಡಿಕೊಂಡಿದೆ.

ಏ.2ರವರೆಗೆ ನಡೆಯಲಿರುವ ಎಸ್ ಎಸ್ಎಲ್‌ಸಿ ಪರೀಕ್ಷೆಗಳು ಜಿಲ್ಲೆಯ 7 ಕ್ಷೇತ್ರ ಶಿಕ್ಷಣಾಧಿಕಾರಿಗಳು, ಎಸ್‌ಎಸ್‌ಎಲ್‌ಸಿ ಪರೀಕ್ಷೆ ನೋಡಲ್ ಅಧಿಕಾರಿಗಳ ಮೇಲ್ವಿಚಾರಣೆಯಲ್ಲಿ ಪರೀಕ್ಷೆ ಸುಸೂತ್ರವಾಗಿ ನಡೆಯುವ ನಿಟ್ಟಿನಲ್ಲಿ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಡಾ ಆನಂದ ಕೆ. ತಿಳಿಸಿದರು.

ತಾಲೂಕುವಾರು ಮಾರ್ಗಗಳನ್ನು ನಿಗದಿಪಡಿಸಿ ಪ್ರಶ್ನೆಪತ್ರಿಕೆಗಳನ್ನು ಮಾರ್ಗಾಧಿಕಾರಿಗಳ ಮೂಲಕ ಪರೀಕ್ಷಾ ಕೇಂದ್ರಗಳಿಗೆ ನಿಗದಿತ ಅವಧಿಯಲ್ಲಿ, ಸುರಕ್ಷಿತವಾಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿದೆ ಎಂದರು.

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿಯ ಮಾರ್ಗಸೂಚಿ ಅಧಿಸೂಚನೆಯಂತೆ ಜಿಲ್ಲಾಧಿಕಾರಿಗಳು, ಜಿಪಂ ಸಿಇಒ ಮಾರ್ಗದರ್ಶನ ಹಾಗೂ ಸೂಚನೆಗಳನ್ನು ಪರೀಕ್ಷೆಗೆ ನಿಯೋಜಿತ ಅಧಿಕಾರಿಗಳು, ಸಿಬ್ಬಂದಿ ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದರು.

**ವೆಬ್ ಕಾಸ್ಟಿಂಗ್ ವ್ಯವಸ್ಥೆ :** ಪರೀಕ್ಷೆಯನ್ನು ನಕಲು ಮುಕ್ತ ಪಾರದರ್ಶಕವಾಗಿ ನಡೆಸಲು ಜಿಲ್ಲಾ ಮಟ್ಟದಲ್ಲಿ ಒಟ್ಟು 137 ಪರೀಕ್ಷಾ ಕೇಂದ್ರಗಳ ಸಿಸಿ ಕ್ಯಾಮರಾ ಅಳವಡಿಸಲಾಗಿದೆ. ಪ್ರತಿ ಪರೀಕ್ಷಾ ಕೇಂದ್ರದ ಪ್ರತಿಯೊಂದು ಕೊಠಡಿಯನ್ನು ಒಂದು ಪರೀಕ್ಷಾ ಕೇಂದ್ರಕ್ಕೆ ಒಬ್ಬರು ವೀಕ್ಷಕರಂತೆ ವೆಬ್‌ಕಾಸ್ಟಿಂಗ್ ವ್ಯವಸ್ಥೆಯನ್ನು ಜಿಪಂ ಸಭಾ ಭವನದಲ್ಲಿ ವ್ಯವಸ್ಥೆ ಮಾಡಲಾಗಿದೆ.

**ಬಿಗಿ ಪೊಲೀಸ್ ಬಂದೋಬಸ್ತ್:** ಜಿಲ್ಲೆಯಾದ್ಯಂತ ವಿದ್ಯಾರ್ಥಿಗಳು ಭಯಮುಕ್ತ ವಾತಾವರಣದಲ್ಲಿ ಪರೀಕ್ಷೆ ಬರೆಯಲು ಪ್ರಶ್ನೆ ಪತ್ರಿಕೆ ಸಾಗಾಣಿಕೆಗೆ ಹಾಗೂ ಪರೀಕ್ಷಾ ಕೇಂದ್ರಗಳ ಸುತ್ತ ಸೂಕ್ತ ಪೊಲೀಸ್ ಭದ್ರತೆಯ ವ್ಯವಸ್ಥೆಯನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ನೇತೃತ್ವದಲ್ಲಿ ಮಾಡಲಾಗಿದೆ. ಪರೀಕ್ಷಾ ಕಾರ್ಯದಲ್ಲಿ ತೊಡಗಿರುವ ಸಿಬ್ಬಂದಿಗೆ ಮೊಬೈಲ್ ನಿಷೇಧಿಸಲಾಗಿದೆ. ಪರೀಕ್ಷಾ ಕೇಂದ್ರದ 200 ಮಿ ವ್ಯಾಪ್ತಿಯಲ್ಲಿ ಪರೀಕ್ಷೆ ನಡೆಯುವ ದಿನ ಬೆಳಗ್ಗೆ 8.30 ರಿಂದ ಪರೀಕ್ಷೆ ಮುಕ್ತಾಯದವರೆಗೆ ನಿಷೇಧಿತ ಪ್ರದೇಶ ಎಂದು ಘೋಷಿಸಲಾಗಿದೆ. ಪರೀಕ್ಷಾ ಕೇಂದ್ರದ 200 ಮೀ. ವ್ಯಾಪ್ತಿಯಲ್ಲಿನ ಝರಾಕ್ಸ್ ಅಂಗಡಿಗಳು, ಸೈಬರ್ ಕೆಫೆಗಳು, ಕೋಚಿಂಗ್ ಸೆಂಟರ್‌ಗಳನ್ನು ಪರೀಕ್ಷೆ ಮುಗಿಯುವವರೆಗೆ ಮುಚ್ಚುವಂತೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ.

ವಿದ್ಯಾರ್ಥಿಗಳು ಯಾವುದೇ ಆತಂಕಕ್ಕೆ ಒಳಗಾಗದೇ ಭಯ ಮುಕ್ತರಾಗಿ ಧೈರ್ಯದಿಂದ ಪರೀಕ್ಷೆಯನ್ನು ಬರೆಯಬಹುದಾಗಿದೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪನಿರ್ದೇಶಕ ವೀರಯ್ಯ ಸಾಲಿಮಠ, ಎಸ್ ಎಸ್ಎಲ್‌ಸಿ ನೋಡಲ್ ಅಧಿಕಾರಿ ಟಿ. ಎಸ್. ಕೊಲಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



## 22ನೇ ದಿನಕ್ಕೆ ಮುಂದುವರಿದ ಧರಣಿ ಸತ್ಯಾಗ್ರಹ

**ತಾಳಿಕೋಟೆ:** ತಾಲೂಕಿನ ಮೇಲೆಶ್ವರ ಗ್ರಾಮದ ಹತ್ತಿರ ಪ್ರಜಾಸೌಧ ಕಟ್ಟಡ ನಿರ್ಮಾಣಕ್ಕೆ ಗುರುತಿಸಲಾದ ಸ್ಥಳವನ್ನು ವಿರೋಧಿಸಿ, ತಾಳಿಕೋಟಿ ಪಟ್ಟಣದಲ್ಲಿಯೇ ಪ್ರಜಾಸೌಧ ನಿರ್ಮಿಸಬೇಕು ಎಂದು ಆಗ್ರಹಿಸಿ ನಡೆಯುತ್ತಿರುವ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹವು 22ನೇ ದಿನಕ್ಕೆ ಮುಂದುವರಿದಿದೆ.


ಪಟ್ಟಣದ ಬಸವೇಶ್ವರ ವೃತ್ತದ ಬಳಿ ನಡೆಯುತ್ತಿರುವ ಈ ಸತ್ಯಾಗ್ರಹಕ್ಕೆ ಬಸವೇಶ್ವರ ಮಾರ್ಕೆಟ್ ಯಾರ್ಡ್ ಹಮಾಲರ ಸಂಘವು ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದೆ. ಮಂಗಳವಾರ ನಡೆದ 21ನೇ ದಿನದ ಸತ್ಯಾಗ್ರಹದಲ್ಲಿ ಹಮಾಲರ ಸಂಘದ ಸದಸ್ಯರು ಭಾಗವಹಿಸಿ ಹೋರಾಟಕ್ಕೆ ಕೈಜೋಡಿಸಿದರು.

ಹೋರಾಟ ಸಮಿತಿಯ ಪ್ರಧಾನ ಕಾರ್ಯದರ್ಶಿ ಕಾಶೀನಾಥ ಮುರಾಳ ಮಾತನಾಡಿ, ಈಗಾಗಲೇ ಪ್ರಜಾಸೌಧಕ್ಕೆ ನಿಗದಿಪಡಿಸಿರುವ ಸ್ಥಳವು ಪಟ್ಟಣದಿಂದ ಬಹಳ ದೂರವಾಗಿದ್ದು, ನಿರ್ಜನ ಪ್ರದೇಶದಲ್ಲಿದೆ. ಇದು ಮಹಿಳೆಯರಿಗೆ ಮತ್ತು ವಿದ್ಯಾರ್ಥಿನಿಯರ ಸುರಕ್ಷತೆಗೆ ಅನುಕೂಲಕರವಲ್ಲ. ಆದ್ದರಿಂದ ಸಾರ್ವಜನಿಕರಿಗೆ ಅನುಕೂಲವಾಗುವಂತೆ ತಾಳಿಕೋಟಿ ಪಟ್ಟಣದಲ್ಲಿಯೇ ಲಭ್ಯವಿರುವ ಸರ್ಕಾರಿ ಜಾಗದಲ್ಲಿ ಪ್ರಜಾಸೌಧ ನಿರ್ಮಿಸಬೇಕು ಎಂದು ಒತ್ತಾಯಿಸಿದರು.

ಈಗಾಗಲೇ ನಿಗದಿಪಡಿಸಿರುವ ಸ್ಥಳವನ್ನು ಕೂಡಲೇ ರದ್ದುಪಡಿಸಬೇಕು. ಜಿಲ್ಲಾಡಳಿತಕ್ಕೆ ಹಲವು ಬಾರಿ ಮನವಿ ಮಾಡಿದರೂ ಯಾವುದೇ ಕ್ರಮ ಕೈಗೊಳ್ಳಲಾಗಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಜಾಗ ನೀಡಿದವರಲ್ಲಿ ಸ್ವಹಿತಾಸಕ್ತಿ ಇದೆ ಎಂದು ಆರೋಪಿಸಿದ ಅವರು, ರಾಜ್ಯ ಹೆದ್ದಾರಿಯಿಂದ 18 ಮೀಟರ್ ಅಂತರದಲ್ಲಿರುವ ಜಾಗ ನೀಡುವುದಾಗಿ ಹೇಳಿ, ವಾಸ್ತವವಾಗಿ ಸುಮಾರು 900 ಮೀಟರ್ ಒಳಗಿನ ಜಾಗವನ್ನು ನೀಡಿ ಸರ್ಕಾರ ಮತ್ತು ಸಾರ್ವಜನಿಕರನ್ನು ಮೋಸ ಮಾಡಿ ತಪ್ಪುದಾರಿಗೆಳೆದುಕೊಂಡಿದ್ದಾರೆ ಎಂದರು.

ಈ ಹೋರಾಟಕ್ಕೆ ಪಟ್ಟಣದ ಎಲ್ಲಾ ಸಮುದಾಯದ ಹಿರಿಯರು ಪ್ರತಿದಿನ ಭಾಗವಹಿಸಿ ಬೆಂಬಲ ಸೂಚಿಸುತ್ತಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಹಮಾಲರ ಸಂಘದ ಅಧ್ಯಕ್ಷ ಪತ್ತೆಖಾನ್ ಸೋಪಿ, ಶರಣಪ್ಪ ಪೂಜಾರಿ, ಯಮನಪ್ಪ ಬರದೇನಾಳ, ದೇವಪ್ಪ ಅಲ್ಲಾಪುರ, ಬೀರಪ್ಪ ಪೂಜಾರಿ, ಮಲ್ಲಪ್ಪ ಕಟ್ಟಿಮನಿ, ಲಕ್ಷ್ಮಣ ತಳವಾರ, ಭೀಮಾಶಂಕ ಅಂಬಿಗೇರ, ಭೀಮಣ್ಣ ತಳವಾರ, ಹೋರಾಟ ಸಮಿತಿಯ ಅಧ್ಯಕ್ಷ ದಶರತಸಿಂಗ್ ಮನಗೂಳಿ, ಎಸ್.ಬಿ. ಕಟ್ಟಿಮನಿ, ಮುತ್ತಪ್ಪ ಚಮಲಾಪುರ, ಮೆಹಬೂಬ ಚೋರಗಸ್ತಿ, ಕಾಶೀನಾಥ ಮುರಾಳ, ಮುರಿಗೆಪ್ಪ ಸರಶೆಟ್ಟಿ, ದತ್ತು ಹೆಬಸೂರ, ಪರಶುರಾಮ ತಂಗಡಗಿ, ವಿಜಯಸಿಂಗ್ ಹಜೇರಿ, ಬಸವರಾಜ ಕಶೆಟ್ಟಿ, ಸಿದ್ದನಗೌಡ ಪಾಟೀಲ, ಪಟ್ಟಣದ ಗಣ್ಯರು ಇದ್ದರು.



## ಒಗ್ಗಟ್ಟಾಗಿ ಹಬ್ಬ ಆಚರಿಸಲು ತೀರ್ಮಾನ

**ಮುದ್ದೇಬಿಹಾಳ:** ನಗರದ ಹಿಂದೂ ಸಮಾಜದ ಸರ್ವ ಸಮಾಜಗಳ ಗುರು ಹಿರಿಯರು ಯುವಕರು ಕೂಡಿಕೊಂಡು ಹಬ್ಬಗಳನ್ನು ಒಗ್ಗಟ್ಟಿನಿಂದ ಮತ್ತು ವಿಜೃಂಭಣೆಯಿಂದ ಆಚರಿಸುವ ಕುರಿತು ಸ್ಥಳೀಯ ಖಾಸಗತೇಶ್ವರ ಮಠದಲ್ಲಿ ಸಭೆಯನ್ನು ಮಾಡಿ ಗುರುವಾರ ಮಾ. 19 ರಂದು ಬೆಳಿಗ್ಗೆ 10 ಘಂಟೆಗೆ ದುರ್ಗಾದೇವಿ ದೇವಸ್ಥಾನದ ಆವರಣದಲ್ಲಿ ಯುಗಾದಿ ಕಾರ್ಯಕ್ರಮವನ್ನು ಮಾಡಲು ತೀರ್ಮಾನಿಸಲಾಗಿದೆ.

ಸಮಾಜ ಬಾಂದವರು ಕೂಡಿಕೊಂಡು ಹೊಸ ವರ್ಷದ ಯುಗಾದಿ ಅಬ್ಬದ ಪ್ರಯುಕ್ತ ದೇವಿಗೆ ಪೂಜೆ ಸಲ್ಲಿಸುವ ಮುಕಾಂತರ ಬೇವು ಸವೆಯುವದು ಯುಗಾದಿ ಹಬ್ಬವನ್ನು ವಿಶೇಷವಾಗಿ ಆಚರಿಸಲು ತೀರ್ಮಾನಿಸಿದ್ದಾರೆ ಆದ ಕಾರಣ ಎಲ್ಲಾ ನನ್ನ ಸಮಾಜ ಬಾಂದವರು ಪೂಜಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಸಹಕಾರ ನೀಡಬೇಕೆಂದು ವಿನಂತಿಸಿದ್ದಾರೆ.

ಈ ನಿಮಿತ್ತ ತಮ್ಮ ತಮ್ಮ ಮನೆ ಹತ್ತಿರ ಇರುವ ಹಿಂದೂ ದೇವಾಲಯಗಳಿಗೆ ಭೇಟಿ ಕೊಟ್ಟು ದೇವಾಲಯಗಳ ಸುತ್ತಮುತ್ತ ಸ್ವಚ್ಛತೆಗೊಳಿಸು ಕಾರ್ಯ ಮಾಡುವುದು. ಗಿಡ ಕಂಠಿಗಳು ಬೆಳದು, ಕಸಗಳು ಇದ್ದರೆ ಸ್ವಚ್ಛತೆ ಮಾಡುವುದು. ಸಾಧ್ಯವಿಲ್ಲವಾದರೆ ದೇವಾಲಯ ಸುತ್ತ ಮುತ್ತಲಿನ ಫೋಟೋ ತೆಗೆದು ಮಾಹಿತಿ ಕೊಟ್ಟು ಕಾರ್ಯಕರ್ತರು, ಪುರಸಭೆ ಅಧಿಕಾರಿಗಳ ಜೊತೆ ಮಾತನಾಡಿ ವ್ಯವಸ್ಥೆಯನ್ನು ಮಾಡಲಾಗುತ್ತದೆ ಎಂದು ಸಂಘಟಕರು ಕೋರಿದ್ದಾರೆ.

ಸಭೆಯಲ್ಲಿ ಮುಖಂಡರಾದ ಅಶೋಕ ನಾಡಗೌಡ ಪ್ರಭು ಕಡಿ, ಸಂಗಣ್ಣ ನಾಶಿ, ಮಾಣಿಕ ದಂಡಾವತಿ, ವೆಂಕನಗೌಡ ಪಾಟೀಲ, ಬಸವರಾಜ ನಾಲತವಾಡ, ಶಿವಾನಂದ ಬಿರಾದಾರ್, ಶ್ರೀಕಾಂತ ಹಿರೇಮಠ, ಚಂದ್ರು ಕಲಾಲ, ಮಹಾಂತೇಶ ಬೂದಿಹಾಳಮಠ, ಶರಣು ದೇಗಿನಾಳ, ಜಗದೀಶ್ ಲಕ್ಷಟ್ಟಿ, ಆನಂದ ತುಪ್ಪದ, ಪ್ರಭುಲಿಂಗ ನಂದಪ್ಪನವರ ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು.



# ಲೋಕ ಅದಾಲತ್: 23997 ಪ್ರಕರಣಗಳು ಇತ್ಯರ್ಥ

**ಬಸವನಬಾಗೇವಾಡಿ:** ನ್ಯಾಯಾಲಯಗಳ ಸಂಕೀರ್ಣದಲ್ಲಿ ತಾಲೂಕು ಕಾನೂನು ಸೇವಾ ಸಮಿತಿ ವತಿಯಿಂದ ರಾಷ್ಟ್ರೀಯ ಲೋಕ ಅದಾಲತನ್ನು ಏರ್ಪಡಿಸಲಾಗಿತ್ತು. ಲೋಕ ಅದಾಲತನಲ್ಲಿ ನಾಲ್ಕು ನ್ಯಾಯಾಲಯಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ಒಟ್ಟು 8246 ಬಾಕಿ ಇರುವಪ್ರಕರಣಗಳಲ್ಲಿ 1643ಪ್ರಕರಣಗಳನ್ನು ಕೈಗೆತ್ತಿಕೊಳ್ಳಲಾಗಿತ್ತು.

ಸದರಿ ಪ್ರಕರಣಗಳಲ್ಲಿ ಒಟ್ಟು 915 ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ಇತ್ಯರ್ಥಪಡಿಸಲಾಗಿದೆ. ಅದರಲ್ಲಿ ಅಪರಾಧ ಪ್ರಕರಣಗಳು, ಎಂವ್ಹಿಸಿ ಪ್ರಕರಣಗಳು, ಚೆಕ್ ಬೌನ್ಸ್ ಪ್ರಕರಣಗಳು, ಮೆಂಟೇನೆನ್ಸ್ ಪ್ರಕರಣಗಳು, ಪಾಲುವಾಟ್ನಿ ದಾವೆಗಳು, ಎಲ್.ಎ.ಸಿ ಇಪಿ ಪ್ರಕರಣಗಳು, ಎಮ್.ವ್ಹಿ.ಸಿ, ಇಪಿ ಪ್ರಕರಣಗಳು ಅಪರಾಧ ದಂಡ ಪ್ರಕರಣಗಳನ್ನು ರಾಜಿ ಸಂಧಾನ ಮೂಲಕ ಇತ್ಯರ್ಥ ಪಡಿಸಲಾಯಿತು. ಮತ್ತು ಪೂರ್ವದಾವೆ ಪ್ರಕರಣಗಳಲ್ಲಿ, ಟ್ರಾಫಿಕ್ ಚಲನ್ ಪ್ರಕರಣಗಳು, ಕಂದಾಯ ಇಲಾಖೆ ಕಂದಾಯ ಅದಾಲತ್ ಪ್ರಕರಣಗಳು, ಬ್ಯಾಂಕಿನ ಪ್ರಕರಣಗಳು ಹಾಗೂ ಹೆಸ್ಕಾಂ ವಿಭಾಗದ ವಿದ್ಯುತ್ ಬಾಕಿ ಪಾವತಿ ಪ್ರಕರಣಗಳು ಸೇರಿ ಒಟ್ಟು 104556 ಪ್ರಕರಣಗಳಲ್ಲಿ 23997 ಪ್ರಕರಣಗಳು ರಾಜಿ ಸಂಧಾನದ ಮೂಲಕ ಇತ್ಯರ್ಥಗೊಂಡಿವು.

ಸದರಿ ಪ್ರಕರಣಗಳನ್ನು ಪ್ರಧಾನ ಹಿರಿಯ ಸಿವ್ಹಿಲ್ ನ್ಯಾಯಾಧೀಶರು ಹಾಗೂ ತಾಲೂಕು ಕಾನೂನು ಸೇವಾ ಸಮಿತಿಯ ಅಧ್ಯಕ್ಷರಾದ ಶಶಿಧರಗೌಡ, 1ನೇ ಹೆಚ್ಚುವರಿ ಹಿರಿಯ ಸಿವ್ಹಿಲ್ ನ್ಯಾಯಾಧೀಶ ಈಶ್ವರ ಮುಸಲ್ಮಾರಿ, ಸದಸ್ಯ ಕಾರ್ಯದರ್ಶಿ ಅಮಿತ ಘಟ್ಟಿ, 1ನೇ ಹೆಚ್ಚುವರಿ ಸಿವ್ಹಿಲ್ ನ್ಯಾಯಾಧೀಶ ಈರಪ್ಪ ಢವಳೇಶ್ವರ ರಾಜೀ ಸಂಧಾನದ ಮೂಲಕ ಇತ್ಯರ್ಥ್ ಪಡಿಸಿದರು. ಸದರಿ ಲೋಕ ಅದಾಲತ್ ನಲ್ಲಿ ಸಂಧಾನಕಾರರಾಗಿ ವಕೀಲರಾದ ಬಿ.ಪಿ.ಪತ್ತಾರ, ಐ.ಎ. ಪರಮಗೊಂಡ, ಸಮೀರ ಕೊರಬು, ವಾಯ್.ಎಲ್.ಲಂಕೇನ್ನವರ, ವ್ಹಿ.ಬಿ.ಮರ್ತುರ, ಆರ್.ಬಿ.ಗಣಕುಮಾರ, ಮನೋಜ ಕದಂ, ಮಲ್ಲಿಕಾರ್ಜುನ ದೇವರಮನಿ, ಸಂಗಮೇಶ ಕೋಳೂರ, ಸಂಗಮೇಶ ಹಗ್ಗದ, ಗೋವಿಂದ ಪವಾರ, ತಾಲೂಕಾ ಕಾನೂನು ಸೇವಾ ಸಮಿತಿಯ ಆಡಳಿತ ಸಹಾಯಕರು, ನ್ಯಾಯಾಲಯ ಸಿಬ್ಬಂದಿ, ಬ್ಯಾಂಕ್ ಸಿಬ್ಬಂದಿ, ಪೊಲೀಸ್ ಇಲಾಖೆಯ ಸಿಬ್ಬಂದಿ, ನ್ಯಾಯವಾದಿಗಳು ಇದ್ದರು.



## ಸೈದ್ಧಾಂತಿಕ, ವೈಚಾರಿಕ ಚಿಂತನೆಯಿಂದ ಬದುಕಿ

**ಇಂಡಿ:** ಮೇಲು ಕೀಳು ಎಂಬ ಭಾವನೆ ಬದಿಗಿಟ್ಟು, ಸೈದ್ಧಾಂತಿಕ, ವೈಚಾರಿಕ ಚಿಂತನೆ ಇಟ್ಟುಕೊಂಡು ಬದುಕುಸಾಗಿಸಬೇಕು. ಬುದ್ಧ, ಬಸವ, ಅಂಬೇಡ್ಕರ ತಳಹದಿಯ ಮೇಲೆ ಆಡಳಿತ ನಡೆಸುವ ಸಿಎಂ ಸಿದ್ದರಾಮಯ್ಯ ಶೋಷಿತ ಸಮುದಾಯ ಏಳಿಗೆಗಾಗಿ ಶ್ರಮಿಸುತ್ತಿದ್ದಾರೆ ಎಂದು ಶಾಸಕ ಯಶವಂತರಾಯಗೌಡ ಪಾಟೀಲ ಹೇಳಿದರು.

ನಗರದ ಗುರುಭವನದಲ್ಲಿ ರಾಜ್ಯ ಎಸ್ಸಿ,ಎಸ್ಟಿ ನೌಕರರ ಸಮನ್ವಯ ಸಮಿತಿ ಇಂಡಿ ತಾಲೂಕು ಶಾಖೆ ಹಮ್ಮಿಕೊಂಡ ತಾಲೂಕು ಮಟ್ಟದ ನೌಕರರ ಸಮಾವೇಶ ಹಾಗೂ ನೂತನವಾಗಿ ಆಯ್ಕೆಯಾದ ಪದಾಧಿಕಾರಿಗಳಿಗೆ ಅಭಿನಂದನಾ ಮತ್ತು ನಿವೃತ್ತ ನೌಕರರಿಗೆ ಗೌರವ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿ, ನೌಕರರು ಸಮರ್ಪಣಾಭಾವದಿಂದ ಕೆಲಸ ನಿರ್ವಹಿಸಿದರೇ ದೇಶಕ್ಕೆ ಒಳ್ಳೆಯದಾಗುತ್ತದೆ. ನೌಕರರ ಸಮಸ್ಯೆಗಳಿಗೆ ಸ್ಪಂದಿಸುವ ಕೆಲಸ ಆಗಬೇಕು. ನನ್ನ ಅಧಿಕಾರವಧಿಯಲ್ಲಿ ಸರ್ವ ಸಮುದಾಯಕ್ಕೆ ಸಾಮಾಜಿಕ ನ್ಯಾಯದಡಿಯಲ್ಲಿ ಅವಕಾಶ ನೀಡಿದ್ದೇನೆ. ಮುಂದೆಯೂ ನೀಡುತ್ತೇನೆ ಎಂದರು.

ಸಮಿತಿ ತಾಲೂಕು ಅಧ್ಯಕ್ಷ ಬಿ.ಎಂ. ವಠಾರ ಅಧ್ಯಕ್ಷತೆ ವಹಿಸಿದ್ದರು. ರಾಜ್ಯಾಧ್ಯಕ್ಷ ಡಿ.ಶಿವಶಂಕರ, ಉಪಾಧ್ಯಕ್ಷ ಮೋಹನ, ರಾಜ್ಯ ಪ್ರಧಾನ ಕಾರ್ಯದರ್ಶಿ ಡಾ. ವಿಜಯಕುಮಾರ, ಕಾರ್ಯದರ್ಶಿ ಎಂ.ಬಿ.ಶಿವಕುಮಾರ, ಜಿಲ್ಲಾಧ್ಯಕ್ಷ ಬಿ.ಎಚ್.ನಾಡಗಿರಿ ಮಾತನಾಡಿದರು.

ಪುರಸಭೆ ಮಾಜಿ ಅಧ್ಯಕ್ಷೆ ಬುದ್ದವ್ವ ಕಾಳೆ, ಪ್ರಶಾಂತ ಕಾಳೆ, ಎಸ್.ಆರ್.ನಡುಗಡ್ಡಿ, ಬಸವರಾಜ ರಾವೂರ, ಎಸ್.ವಿ.ಹರಳಯ್ಯ, ಎ.ಎಸ್.ಪಾಟೀಲ, ಡಿ.ಸಿ.ಹರಿಜನ, ಡಾ.ಕಾಂತು ಇಂಡಿ, ವಿ.ಜಿ.ಕಲ್ಮನಿ, ನಿಜಣ್ಣ ಕಾಳೆ, ಹುಚ್ಚಪ್ಪ ಶಿವಶರಣ, ಉಮೇಶ ಬಜಂತ್ರಿ, ವಿಜಯಕುಮಾರ ಪೊಳ, ಸದಾನಂದ ಈರನಕೇರಿ, ಸುಭಾಷ ಲಮಾಣಿ, ಪಿ.ಬಿ.ಪೂಜಾರಿ, ದತ್ತು ದೇವರಮನಿ, ಎಸ್.ಎನ್. ಕೋಳಿ, ದುಂಡಪ್ಪ ಹರಿಜನ, ಚಂದ್ರು ರಾಠೋಡ, ಮಂಜುನಾಥ ನಾಯೋಡಿ, ಚಂದ್ರಕಲಾ ಕಾಳೆ, ಚೌಡಮ್ಮ ತೊರವಿ ಇದ್ದರು.



## ಸೈಬರ್ ಸೆಕ್ಯೂರಿಟಿ ವಿಷಯದಲ್ಲಿ ವಿದ್ಯಾರ್ಥಿಗಳ ಸಾಧನೆ

**ಬಸವನಬಾಗೇವಾಡಿ:** ಪಟ್ಟಣದ ಬಿಎಲ್‌ಡಿಇ ಸಂಸ್ಥೆಯ ಬಸವೇಶ್ವರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದ ವಿದ್ಯಾರ್ಥಿಗಳು 2025-26ನೇ ಸಾಲಿನ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ ನಡೆಸುವ 5ನೇ ಸೆಮಿಸ್ಟರ್ ವಾರ್ಷಿಕ ಪರೀಕ್ಷೆಯಲ್ಲಿ ಗಣಕಯಂತ್ರ ವಿಭಾಗದಿಂದ ಸೈಬರ್ ಸೆಕ್ಯೂರಿಟಿ ವಿಷಯದಲ್ಲಿ ವಿದ್ಯಾರ್ಥಿಗಳು ನೂರಕ್ಕೆ ನೂರು ಅಂಕ ಪಡೆದು ಸಾಧನೆ ಮಾಡಿದ್ದಾರೆ.

ಯಶೋದಾ ಅಲ್ಲಿಪುರ, ಅಕ್ಷತಾ ಕರಾಡೆ, ಚಂದನಾ ಸಾರಂಗಮಠ, ಸವಿತಾ ದಿನ್ನಿ, ಶಿಫಾ ಸಾಧಿಕಾ ಜಹಾಗೀರದಾರ, ಐಶ್ವರ್ಯ ಬಿರಾದಾರ, ದೇವೇಂದ್ರ ಕಲ್ಬುರ್ಗಿ, ಸುದೀಪ ಮೂಲಿಮನಿ, ಹನುಮಂತ ರೆಡ್ಡಿ, ಚಂದ್ರಶೇಖರ ರೆಡ್ಡಿ, ಪೃಥ್ವಿರಾಜ ನಂದ್ಯಾಳ.

ಸಂಖ್ಯಾಶಾಸ್ತ್ರ ವಿಷಯದಲ್ಲಿ ಮೊದಲನೇ ಸೆಮಿಸ್ಟರ್‌ನಲ್ಲಿ ಚೇತನ ಕುಮಾರ ರಜಪೂತ ಅಕ್ಷತಾ ಇಂಗಳೇಶ್ವರ ಹಾಗೂ ಮೂರನೇ ಸೆಮಿಸ್ಟರ್‌ನಲ್ಲಿ ಸುಮಂತ ಗುಂಡಳ್ಳಿ, ರಕ್ಷಿತಾ ಮಾಲಗಾರ, ಶ್ರೀದೇವಿ ಹೂಗಾರ ಇವರು ನೂರಕ್ಕೆ ನೂರು ಅಂಕಗಳನ್ನು ಪಡೆದು ಉತ್ತಮ ಸಾಧನೆ ಮಾಡಿ ಮಹಾವಿದ್ಯಾಲಯದ ಹಾಗೂ ಸಂಸ್ಥೆಗೆ ಕೀರ್ತಿ ತಂದಿದ್ದಾರೆ.



ಈ ಹಿನ್ನೆಲೆಯಲ್ಲಿ ಸಂಸ್ಥೆಯ ಆಡಳಿತಾಧಿಕಾರಿ ವ್ಹಿ.ಎಸ್. ಬಗಲಿ ಪ್ರಾಚಾರ್ಯರಾದ ಡಾ. ಎ.ವಿ.ಸೂರ್ಯವಂಶಿ, ಕಂಪ್ಯೂಟರ್ ಸೈನ್ಸ್ ವಿಭಾಗದ ಪ್ರಾಧ್ಯಾಪಕಿ ರೇಖಾ ರಾಠೋಡ, ಸಂಖ್ಯಾ ಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಪಿ.ಎಸ್.ಹೊರಕೇರಿ ಸೇರಿ ಎಲ್ಲ ಸಿಬ್ಬಂದಿಗಳು ಹರ್ಷ ವ್ಯಕ್ತಪಡಿಸಿ ಅಭಿನಂದನೆ ಸಲ್ಲಿಸಿದ್ದಾರೆ.

## ಜಿಲ್ಲಾ ಮಟ್ಟದ ಪ್ರತಿಭಟನಾ ಸಮಾವೇಶ

**ವಿಜಯಪುರ:** ಸಾವಿತ್ರಿಬಾಯಿ ಫುಲೆ ಹೆಣ್ಣು ಮಕ್ಕಳ, ಶೋಷಿತರ ಶಿಕ್ಷಣಕ್ಕಾಗಿ ದುಡಿದವರು. ಅಂತಹವರ ಆಶಯಗಳನ್ನು ಸಾಕಾರಗೊಳಿಸುವ ಬದಲಾಗಿ, ಸರ್ಕಾರಗಳು ಇಂದು ಬಡವರಿಂದ ಶಿಕ್ಷಣ ಕಿತ್ತುಕೊಳ್ಳುತ್ತಿವೆ ಎಂದು ಎಐಡಿಎಸ್‌ಒ ರಾಜ್ಯ ಕಚೇರಿ ಕಾರ್ಯದರ್ಶಿ ಮಹಾಂತೇಶ ಬಬಲೇಶ್ವರ್ ಬೀಳೂರ್ ಹೇಳಿದರು.

ನಗರದ ಅಂಬೇಡ್ಕರ್ ಭವನದಲ್ಲಿ ಎಐಡಿಎಸ್‌ಒ ಮತ್ತು ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿ ನೇತೃತ್ವದಲ್ಲಿ ಸೋಮವಾರ ಹಮ್ಮಿಕೊಂಡ ನಮ್ಮೂರ ಸರ್ಕಾರಿ ಶಾಲೆ ಉಳಿಸಲು ಜಿಲ್ಲಾ ಮಟ್ಟದ ಪ್ರತಿಭಟನಾ ಸಮಾವೇಶದಲ್ಲಿ ಮಾತನಾಡಿ, ರಾಜ್ಯ ಸರ್ಕಾರ ತಂದಿರುವ ನೀತಿ ಕೆಪಿಎಸ್ ಮ್ಯಾಗ್ನೆಟ್ ಯೋಜನೆ. ಇತ್ತೀಚಿಗೆ ರಾಜ್ಯ ಬಜೆಟ್‌ನಲ್ಲಿ, ಉನ್ನತ ಶಿಕ್ಷಣದ ಪರಿವರ್ತನೆ ಮತ್ತು ಗುಣಮಟ್ಟದ ಕಲಿಕೆ ಎಂಬ ಆಕರ್ಷಕ ಪದಗಳ ಹೆಸರಿನಲ್ಲಿ ಶಿಕ್ಷಣವನ್ನು ಕೇಂದ್ರೀಕೃತಗೊಳಿಸುವ ಒಂದು ವ್ಯವಸ್ಥಿತ ಸಂಚಾಗಿದೆ ಎಂದರು.




ಹಿರಿಯಸಾಹಿತಿಹ.ಮ.ಪೂಜಾರಿ ಮಾತನಾಡಿ, ಗ್ರಾಮೀಣ ಭಾಗದ ಶಾಲೆಗಳನ್ನು ಮುಚ್ಚುವುದನ್ನು ನಾವು ಖಂಡಿಸುತ್ತೇವೆ. ಎಲ್ಲೆಲ್ಲಿ ಶಾಲೆಗಳನ್ನು ಮುಚ್ಚುತ್ತಾರೆಯೋ ಅಲ್ಲಲ್ಲಿ ಜನ ಹೋರಾಟ ಮಾಡಬೇಕು. ನೆಗಡಿ ಬಂದಾಗ ಅದಕ್ಕೆ ಔಷಧಿ ನೀಡಬೇಕು ಅದನ್ನು ಬಿಟ್ಟು ಮೂಗನ್ನೇ ಕತ್ತರಿಸುವುದಲ್ಲ ಎಂದರು.

ಹಿರಿಯ ಪತ್ರಕರ್ತ ಅನಿಲ್ ಹೊಸಮನಿ, ರೈತ ಹೋರಾಟಗಾರ ಅರವಿಂದ ಕುಲಕರ್ಣಿ ಮಾತನಾಡಿದ್ರು.

ಸಂಘಟನೆ ಜಿಲ್ಲಾ ಕಾರ್ಯದರ್ಶಿ ಕಾವೇರಿ ರಜಪೂತ ಅಧ್ಯಕ್ಷತೆ ವಹಿಸಿದ್ದರು.

ಮುಖಂಡರಾದಮಲ್ಲಿಕಾರ್ಜುನ ಎಚ್.ಟಿ., ಶಿವಬಾಳಮ್ಮ ಕೊಂಡಗೂಳಿ, ಸಿದ್ದರಾಮಯ್ಯ ಹಿರೇಮಠ, ಸುಭಾಷ್ ಬೆಟ್ಟದಕೊಪ್ಪ, ಹಯ್ಯಾಳಪ್ಪ, ಪೂಜಾ, ಶಶಿಕಲಾ, ಸಿದ್ದಲಿಂಗ ಬಾಗೇವಾಡಿ, ಬೆಳವಾಡಿ ನಂಜುಂಡಸ್ವಾಮಿ, ದಿವಾಕರ್ ಎಸ್., ಕೆಲ್ಲಹಳ್ಳಿ ಲಲಿತಮ್ಮ, ಹುಸ್ಕೂರು ಪ್ರದೀಪ್, ರಾಂಪುರ ವಿನೋದ್ ಕುಮಾರ್ ಇದ್ದರು.

## ಕಿರುಸುದ್ದಿ

### ಗುರುಗಳು ಕಲಿಸಿದ ವಿದ್ಯೆ ಶಾಶ್ವತ: ಪಾಟೀಲ



**ಕುಷ್ಟಗಿ:** ತಾಲೂಕಿನ ನವಲಹಳ್ಳಿ ಗ್ರಾಮ ವಿದ್ಯೆ ಕಲಿಸಿದ ಗುರುಗಳು ವರ್ಗಾವಣೆಯಾಗಿ ಹೋದರು ಸಹ ಅವರು ಕಲಿಸಿದ ವಿದ್ಯೆ ಜೀವನದಲ್ಲಿ ಉನ್ನತ ಶಿಕ್ಷಣದಲ್ಲಿ ಬೆಳೆಯುತ್ತಾ ಇರುತ್ತದೆ. ನಮಗೆ ಕಲಿಸಿದ ವಿದ್ಯೆ ಶಾಶ್ವತವಾಗಿ ಉಳಿದು ಹೆಮ್ಮರವಾಗುವುದು ಎಂದು ಚನ್ನಬಸನಗೌಡ ಗ್ರಾಮೀಣಾಭಿವೃದ್ಧಿ ಮತ್ತು ಶಿಕ್ಷಣ ಸಂಸ್ಥೆ ಅಧ್ಯಕ್ಷ ದೊಡ್ಡಬಸವ ಪಾಟೀಲ ಹೇಳಿದರು.

ನವಲಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕಿ ಪಾರ್ವತೆಮ್ಮ ನಿಡಶೇಸಿ ವರ್ಗಾವಣೆಗೊಂಡ ಹಿನ್ನೆಲೆ ಶುಕ್ರವಾರ ಏರ್ಪಡಿಸಿದ್ದ ಬೀಳ್ಕೊಡುಗೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ನಂತರ ಕರವೇ ಜಿಲ್ಲಾಧ್ಯಕ್ಷ ಮಲ್ಲಿಕಾರ್ಜುನ ಬಂಡೇರ, ಶರಣಪ್ಪ ಗುರಿಕಾರ, ಶರಣಪ್ಪ ಮುದಗಲ್ ಮಾತನಾಡಿದರು.ವರ್ಗಾವಣೆಗೊಂಡ ಮುಖ್ಯ ಶಿಕ್ಷಕಿ ಪಾರ್ವತಿ ನಿಡಶೇಸಿ ಅವರನ್ನು ಗೌರವಿಸಿ ಸನ್ಮಾನಿಸಿ ಬೀಳ್ಕೊಡಲಾಯಿತು. ನಂತರ ವಿದ್ಯಾರ್ಥಿಗಳು ಅನಿಸಿಕೆ ಹಂಚಿಕೊಂಡರುಎಸ್ಡಿಎಂಸಿ ಅಧ್ಯಕ್ಷೆ ಶಿಲ್ಪಾ ಕನಕಗಿರಿ, ಸಾವಿತ್ರಿ ಕಡೆಕೊಪ್ಪ, ಹಿರಿಯರಾದ ಶರಣೆಗೌಡ ಪಾಟೀಲ, ಯಲ್ಲಪ್ಪ ತುರ್ವಿಹಾಳ, ಗ್ರಾಪಂ ಮಾಜಿ ಸದಸ್ಯ ಬಸವರಾಜ ಮ್ಯಾದರಡೊಕ್ಕಿ, ಗಂಗಮ್ಮ , ಮತ್ತು ಪ್ರಮುಖರಾದ ನಿಂಗಪ್ಪ ಗುಂಡೂರು, ಹಿರೇಮುದಕಪ್ಪ ಬಂಡೇರ್, ಪಕೀರಸಾಬ, ಮಲ್ಲಪ್ಪ ಬಂಡೇರ, ದೇವಪ್ಪ ಮನ್ನಾಪುರ, ಕಾರ್ಯಕರ್ತೆಯರಾದ ಅಂಗನವಾಡಿ ಸರೋಜಮ್ಮ ಹಿರೇಮಠ, ಶರಣಮ್ಮ ಈರಮ್ಮ ಇತರರಿದ್ದರು.

### ಅಧ್ಯಕ್ಷರಾಗಿ ಹಸೇನಪ್ಪ ಸೂಲಂಗಿ ಆಯ್ಕೆ



**ಸಿಂಧನೂರು:** ಬಿಜೆಪಿ ಸಿಂಧನೂರು ವಿಧಾನಸಭಾ ಕ್ಷೇತ್ರದ ನಗರ ಮಂಡಲ ಅಧ್ಯಕ್ಷ ಸಿದ್ರಾಮೇಶ ಮನ್ನಾಪುರ ಅವರ ಆದೇಶದ ಮೇರೆಗೆ ಪರಿಶಿಷ್ಟ ಜಾತಿ (ಎಸ್ಸಿ) ಮೋರ್ಚಾದ ನಗರ ಮಂಡಲದ ಅಧ್ಯಕ್ಷರನ್ನಾಗಿ ಹಸೇನಪ್ಪ ಎಚ್.ಸೂಲಂಗಿ ಅವರನ್ನು ಆಯ್ಕೆ ಮಾಡಲಾಗಿದೆ. ಹಸೇನಪ್ಪ ಸೂಲಂಗಿ ಅವರು ಈಗಿನಿಂದಲೇ ಪಕ್ಷದ ಸಂಘಟನೆಯಲ್ಲಿ ತೊಡಗಿಕೊಳ್ಳಬೇಕು ಪಕ್ಷವನ್ನು ಬಲಪಡಿಸಿ ಮುಂದಿನ ದಿನಗಳಲ್ಲಿ ಬಿಜೆಪಿ ಪಕ್ಷವನ್ನು ಅಧಿಕಾರಕ್ಕೆ ತರಲು ಪ್ರಾಮಾಣಿಕ ಪ್ರಯತ್ನ ಮಾಡಬೇಕು ಎಂದು ನೇಮಕ ಮಾಡಿ ಆದೇಶಿಸಲಾಗಿದೆ.

### ಧರೆಗೆ ತಂಪೆರೆದ ವರುಣ

**ಮಸ್ಕಿ:** ಕಳೆದ ಕೆಲ ದಿನಗಳಿಂದ ಬಿಸಿಲ ಬೇಗೆಗೆ ಸುಸ್ತಾಗಿದ್ದ ಜನತೆಗೆ ಜಿಲ್ಲೆಯ ಹಲವೆಡೆ ಇಂದು ಆಲಿಕಲ್ಲು ಮಳೆಯಾಗಿದೆ. ತಾಲೂಕಿನ, ಪಾಮನಕಲ್ಲೂರು, ವಟಗಲ್, ಅಮಿನಗಡ, ಕವಿತಾಳಗ್ರಾಮಗಳಲ್ಲಿ ಆಲಿಕಲ್ಲು ಮಳೆ ಸುರಿದಿದೆ.ಗುಡುಗು, ಮಿಂಚು ಸಹಿತ ಜೋರಾಗಿ ಮಳೆ ಸುರಿದಿದ್ದು, ಬಿಸಿಲಿನಿಂದ ಬೇಸತ್ತಿದ್ದ ಜನರಿಗೆ ತಂಪು ನೀಡಿದೆ. ಆಲಿಕಲ್ಲು ಮಳೆಯಾಗಿದ್ದರಿಂದ ಗ್ರಾಮೀಣ ಭಾಗದಲ್ಲಿ ಅಚ್ಚರಿ ಮೂಡಿಸಿದೆ.ಇಂದು ಮಧ್ಯಾಹ್ನ ವೇಳೆ ಸುಮಾರು ಒಂದು ಗಂಟೆಗೂ ಹೆಚ್ಚು ಕಾಲ ಮಳೆಯಾಗಿದೆ. ಏಕಾಏಕಿ ಮಳೆ ಸುರಿದಿದ್ದರಿಂದ ಬಸ್ ಸ್ಟಾಪ್ ಸೇರಿ ಸಾರ್ವಜನಿಕ ಸ್ಥಳಗಳಲ್ಲಿ ಕೆಲಕಾಲ ಜನರು ಪರದಾಡುವಂತಾಗಿತ್ತು.

## ನಿಧನ ಸುದ್ದಿ

### ಕಟುಗುಳಿ ರಂಗಪ್ಪ

**ಹಗರಿಬೊಮ್ಮನಹಳ್ಳಿ:** ತಾಲೂಕಿನ ಮಾಲವಿ ಗ್ರಾಮದ ಕಟುಗುಳಿ ರಂಗಪ್ಪ (73) ಅವರು ಮಂಗಳವಾರ ನಿಧನರಾಗಿದ್ದಾರೆ. ಮೃತರಿಗೆ ಪತ್ನಿ ಐವರು ಪುತ್ರರು ಅಪಾರ ಬಂಧು ಬಾಂಧವರು ಇದ್ದಾರೆ. ಮೃತರ ಅಂತ್ಯ ಸಂಸ್ಕಾರ ಮಾಲವಿ ಗ್ರಾಮದಲ್ಲಿ ಮಂಗಳವಾರ ಸಂಜೆ ಜರುಗಿತು.





ಯಲಬುರ್ಗಾ: ಜರುಕುಂಟಿ ಗ್ರಾಮದ ಸಿಡಿಲು ಬಡಿದು ಮೃತಪಟ್ಟ ಬಾಲಕ ಮಂಜುನಾಥ್ ಅವರ ಮನೆಗೆ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶೇಖರ್‌ಗೌಡ ಜಿ ರಾಮತ್ನಾಳ್ ಅವರು ಭೇಟಿ ನೀಡಿ ಸಾಂತ್ವನ ಹೇಳಿದರು. ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ರಕ್ಷಣಾಧಿಕಾರಿ (ಸಾಂಸ್ಥಿಕ) ರವಿಕುಮಾರ್ ಪವಾರ, ದೇವರಾಜ್ ತಿಲಗರ, ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರಾದ ರಮೇಶ್ ಕಲಾಲ್ ಬಂಡಿ ಇದ್ದರು.

## ಡಾ.ಪುನೀತ್ ರಾಜಕುಮಾರ ಜನ್ಮದಿನಾಚರಣೆ

**ಯಲಬರ್ಗಾ:** ಪಟ್ಟಣದ ಕನ್ನಡ ಕ್ರಿಯಾ ಸಮಿತಿ ವೃತ್ತದಲ್ಲಿ ಮಂಗಳವಾರ ಕನಾಟಕ ರತ್ನ ಡಾ.ಪುನೀತ್‌ರಾಜ್‌ಕುಮಾರ ಅವರ 51ನೇ ಜನ್ಮದಿನವನ್ನು ಅಭಿಮಾನಿಗಳ ಬಳಗದವರು ಅತ್ಯಂತ ಸಂಭ್ರಮದಿಂದ ಆಚರಿಸಿದರು.

ಬಳಿಕ ಆರ್‌ಡಿಸಿಸಿ ಬ್ಯಾಂಕ್ ನಿರ್ದೇಶಕ ಶೇಖರಗೌಡ ಉಳ್ಳಾಗಡ್ಡಿ ಹಾಗೂ ತಾಪಂ ಮಾಜಿ ಸದಸ್ಯ ಶರಣಪ್ಪ ಇಳಗೇರ ಮಾತನಾಡಿ, ಕರ್ನಾಟಕ ರತ್ನ ಡಾ.ಪುನೀತ್‌ರಾಜ್‌ಕುಮಾರ ಅವರು ನಮಗೆಲ್ಲ ಸ್ಫೂರ್ತಿ ಚಿಲುಮೆಯಾಗಿದ್ದು, ನಮ್ಮನ್ನು ಬಿಟ್ಟು ಅಗಲಿರಬಹುದು. ಆದರೆ ಅವರು ಮಾಡಿದ ಸಮಾಜಮುಖಿ ಕಾರ್ಯಗಳು ಎಲ್ಲರ ಕಣ್ಮುಂದೆ ಪುನೀತವರು ಇದ್ದಾರೆ ಎನ್ನುವ ಅಪಾರ ಅಭಿಮಾನಿಗಳ ಬಳಗ ನಂಬಿಕೊಂಡು ಅವರ ಹುಟ್ಟುಹಬ್ಬವನ್ನು ಸಂಭ್ರದಿಂದ ಆಚರಿಸುತ್ತಿದ್ದಾರೆ ಎಂದರು.

ಪಪಂ ಮಾಜಿ ಅಧ್ಯಕ್ಷ ಸುರೇಶಗೌಡ ಶಿವನಗೌಡ್ರ, ಕನ್ನಡಕ್ರಿಯಾ ಸಮಿತಿ ಅಧ್ಯಕ್ಷ ಮಂಜುನಾಥ ಅಧಿಕಾರಿ, ಗಣ್ಯರಾದ ಸಂಗಣ್ಣ ಟೆಂಗಿನಕಾಯಿ ಹಾಗೂ ಎಂ.ಎಫ್.ನದಾಫ್ ಮಾತನಾಡಿದರು.ಪುನೀತ ಅಭಿಮಾನಿಗಳ ತಾಲೂಕಾಧ್ಯಕ್ಷ ವಿಜಯ ಜಕ್ಕಲಿ, ಬಾಬು ಟೆಂಗಿನಕಾಯಿ, ಶಂಕರ ಉಳ್ಳಾಗಡ್ಡಿ, ಎಚ್.ಎಚ್.ಕುರಿ, ಅಶೋಕ ಅರಕೇರಿ, ರೇವಣೆಪ್ಪ ಹಿರೇಕುರಬರ, ಮೇಘರಾಜ ಹುಬ್ಬಳ್ಳಿ, ವಿಕಾಶ ಉಳ್ಳಾಗಡ್ಡಿ, ಸುಧಾಕರ ದೇಸಾಯಿ, ಶರಣಪ್ಪ ಅರಕೇರಿ, ಮಲ್ಲಿಕಾರ್ಜುನ ಪೊಲೀಸ್‌ಪಾಟೀಲ, ಅಶೋಕ ಮಾಲಿಪಾಟೀಲ, ಖಾಜಾಮೈನುದ್ದೀನ್ ವಣಗೇರಿ, ಶಿವು ಬಣಕಾರ, ನಾರಾಯಣಿ ಗೊಂದಳೆ, ಶಶಿಧರ ಹೊಸ್ಮನಿ, ಪ್ರವೀಣ ವಡ್ಡರ್ ಮತ್ತಿತರರು ಇದ್ದರು.



ಯಲಬರ್ಗಾ: ಪಟ್ಟಣದ ಕನ್ನಡ ಕ್ರಿಯಾ ಸಮಿತಿ ವೃತ್ತದಲ್ಲಿ ಮಂಗಳವಾರ ಕನಾಟಕ ರತ್ನ ಡಾ.ಪುನೀತ್‌ರಾಜ್‌ಕುಮಾರ ಅವರ 51ನೇ ಜನ್ಮದಿನವನ್ನು ಅಭಿಮಾನಿಗಳ ಬಳಗದವರು ಅತ್ಯಂತ ಸಂಭ್ರಮದಿಂದ ಆಚರಿಸಿದರು. ಆರ್‌ಡಿಸಿಸಿ ಬ್ಯಾಂಕ್ ನಿರ್ದೇಶಕ ಶೇಖರಗೌಡ ಉಳ್ಳಾಗಡ್ಡಿ ಹಾಗೂ ತಾಪಂ ಮಾಜಿ ಸದಸ್ಯ ಶರಣಪ್ಪ ಇಳಗೇರ,ಪಪಂ ಮಾಜಿ ಅಧ್ಯಕ್ಷ ಸುರೇಶಗೌಡ ಶಿವನಗೌಡ್ರ, ಕನ್ನಡಕ್ರಿಯಾ ಸಮಿತಿ ಅಧ್ಯಕ್ಷ ಮಂಜುನಾಥ ಅಧಿಕಾರಿ, ಗಣ್ಯರಾದ ಸಂಗಣ್ಣ ಟೆಂಗಿನಕಾಯಿ ಹಾಗೂ ಎಂ.ಎಫ್.ನದಾಫ್ ಇತರರು ಇದ್ದರು.

### ಸಂವಾದ, ಪತ್ರಕರ್ತರಿಗೆ ಹೆಲ್ಮೆಟ್ ವಿತರಣೆ | ಡಾ.ಶರಣಪ್ಪ ಸಲಹೆ

# ಸಂಚಾರಿ ನಿಯಮ ಪಾಲಿಸಿ

**ಕಲಬುರಗಿ:** ಸಮಾಜದಲ್ಲಿ ಒಗ್ಗಟ್ಟಿನಿಂದ ಸಕಾರಾತ್ಮಕ ಬದಲಾವಣೆಗಾಗಿಹಾಗೂಇನ್ನೊಬ್ಬರಿಗೆ ಮಾದರಿಯಾಗಲು ಸಂಚಾರಿ ನಿಯಮಗಳನ್ನು ಪಾಲಿಸುವುದರ ಜೊತೆಗೆ ಅಪಘಾತದ ಸಂದರ್ಭದಲ್ಲಿ ಅಮೂಲ್ಯ ಜೀವ ರಕ್ಷಣೆ ಹಾಗೂ ನಿಮ್ಮ ಕುಟುಂಬದ ಸುಖ-ಸಂತೋಷಕ್ಕಾಗಿ ಹೆಲ್ಮೆಟ್ ಧರಿಸುವುದು ಅನಿವಾರ್ಯ ಎಂದು ನಗರ ಪೊಲೀಸ್ ಆಯುಕ್ತ ಡಾ. ಶರಣಪ್ಪ ಎಸ್.ಡಿ.ತಿಳಿಸಿದರು.

ನಗರಪೊಲೀಸ್‌ಆಯುಕ್ತಾಲಯದ ವ್ಯಾಪ್ತಿಯ ಟ್ರಾಫಿಕ್ ಘಟಕ-1 ಹಾಗೂ ಯುನೈಟೆಡ್ ಆಸ್ಪತ್ರೆ ವತಿಯಿಂದ ಮಂಗಳವಾರ ಹಮ್ಮಿಕೊಂಡಿದ್ದ ಸಂವಾದ ಹಾಗೂ ಪತ್ರಕರ್ತರಿಗೆ ಹೆಲ್ಮೆಟ್ ವಿತರಣಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ನಗರದಲ್ಲಿ ದಶಕಗಳಿಂದಲೂ ಸಂಚಾರಿ ನಿಯಮಗಳ ಪಾಲನೆ ಸರಿಯಾಗಿ ಆಗುತ್ತಿಲ್ಲ. ಪ್ರತಿದಿನ 300 ರಿಂದ 350 ಸಂಚಾರಿ ನಿಯಮ ಉಲ್ಲಂಘನೆ ಪ್ರಕರಣಗಳು ದಾಖಲಾಗುತ್ತಿದ್ದರೂ ಸಾರ್ವಜನಿಕರಲ್ಲಿ ಬದಲಾವಣೆ ಕಂಡುಬರುತ್ತಿಲ್ಲ. ಕಳೆದ ವರ್ಷದ ಅಪಘಾತಗಳ ಅಂಕಿ-ಅಂಶಗಳನ್ನು ಗಮನಿಸಿ, ಸಾವು- ನೋವು ತಗ್ಗಿಸುವ ಗುರಿಯೊಂದಿಗೆ ಹೆಲ್ಮೆಟ್ ಕಡ್ಡಾಯಗೊಳಿಸಲಾಗುತ್ತಿದೆ ಎಂದರು.

ನಾವೆಲ್ಲರೂ ನಮ್ಮ ಜವಾಬ್ದಾರಿಯನ್ನು ಅರಿತು ಸಮಾಜದಲ್ಲಿ ಬದಲಾವಣೆ ತರುವ ಪ್ರಯತ್ನ ಮಾಡೋಣ.ನಮ್ಮ ವಿವೇಚನೆ ಬದಲಾದಾಗ ಮಾತ್ರ ಸಮಾಜದಲ್ಲಿ ಬದಲಾವಣೆ ಸಾಧ್ಯವಿದೆ.ಹೆಲ್ಮೆಟ್ ಧರಿಸುವುದರಿಂದ ಆರೋಗ್ಯದ ಮೇಲೆ ಯಾವುದೇ ದುಷ್ಪರಿಣಾಮ ಬೀರದು ಎಂದು ಪರಿಣಿತ ವೈದ್ಯರು ಸಲಹೆ ನೀಡಿದ್ದಾರೆ.ಹೀಗಾಗಿ ಸಾರ್ವಜನಿಕರು ಯಾವುದೇ ಆತಂಕವಿಲ್ಲದೆ ಸುರಕ್ಷತಾ ನಿಯಮ ಪಾಲಿಸಬೇಕು. ಸಮಾಜದಲ್ಲಿ ಬದಲಾವಣೆ ತರಲು ಮಾಧ್ಯಮದವರು ಪೊಲೀಸರೊಂದಿಗೆ ಕೈಜೋಡಿಸಬೇಕು ಎಂದು ಅವರು ಮನವಿ ಮಾಡಿದರು.

ಡಿಸಿಪಿ ಪ್ರವೀಣ್ ಕುಮಾರ್ ನಾಯಕ್, ಟ್ರಾಫಿಕ್ ಘಟಕ-1ರ ಸಿಪಿಐ ಶಕೀಲ್ ಅಂಗಡಿ, ಜಿಲ್ಲಾ ಪತ್ರಕರ್ತರ ಸಂಘದ ಉಪಾಧ್ಯಕ್ಷ ಹಣಮಂತರಾವ್ ಭೈರಮಡಗಿ, ಕಾರ್ಯದರ್ಶಿ ಭೀಮಾಶಂಕರ್ ಫಿರೋಜಬಾದ,ಡಾ. ಗುರು ಪಾಟೀಲ್, ಡಾ.ಲವ್ ಕುಮಾರ್,. ವಿಜಯ್, ಡಾ.ಅನಿಲ್ ಕುಮಾರ್, ಡಾ.ಶಶಾಂಕ್ ರಾಮದುರ್ಗ, ಡಾ.ಶಿವಕುಮಾರ್ ಅವರು ಹೆಲ್ಮೆಟ್ ಧರಿಸುವುದು ವೈದ್ಯಕೀಯವಾಗಿ ಎಷ್ಟು ಮುಖ್ಯ ಎಂಬುದನ್ನು ವಿವರಿಸಿದರು.




**ಒಂದು ಕೈಯಿಂದ ಚಪ್ಪಾಳೆ ಸಾಧ್ಯವಿಲ್ಲ.ಎಲ್ಲರ ಸಹಕಾರ ಅಗತ್ಯ.ಕುಟುಂಬದ ರಕ್ಷಣೆಯ ಹೊಣೆ ನಮ್ಮ ಮೇಲಿದೆ.ಹೀಗಾಗಿ ಸಂಚಾರಿ ನಿಯಮ ಜೊತೆಗೆ ಕಡ್ಡಾಯ ಹೆಲ್ಮೆಟ್ ಧರಿಸೋಣ.**

■ ಡಾ.ಶರಣಪ್ಪ ಢಗೆ, ಕಮಿಷನರ್

**ಅಪಘಾತ ಸಂಭವಿಸಿದಾಗ ಅತಿ ಹೆಚ್ಚು ಸಾವುಗಳು ಸಂಭವಿಸುವುದು ತಲೆಗೆ ಪೆಟ್ಟು ಬೀಳುವುದರಿಂದ. ಹೆಲ್ಮೆಟ್ ಧರಿಸುವುದು ಕೇವಲ ನಿಯಮವಲ್ಲ, ಅದು ಜೀವ ರಕ್ಷಕ ಕವಚ. ಜನರು ಯಾವುದೇ ಅಳುಕಿಲ್ಲದೆ ಇದನ್ನು ರೂಢಿಸಿಕೊಳ್ಳಬೇಕು.**

■ ಡಾ.ವಿಕ್ರಂ ಸಿದ್ದರೆಡ್ಡಿ, ಮುಖ್ಯಸ್ಥ ಯುನೈಟೆಡ್ ಆಸ್ಪತ್ರೆ

### ಶೀಘ್ರ ಐಟಿಎಂಎಸ್ ಯೋಜನೆ ಜಾರಿಗೆ

ನಗರದಲ್ಲಿ ಶೀಘ್ರವೇ ಐಟಿಎಂಎಸ್ ಯೋಜನೆ ಜಾರಿಗೆ ಬರಲಿದೆ. ಕೆಕೆಆರ್‌ಡಿಬಿ ಅನುದಾನದಲ್ಲಿ ನಡೆಯುತ್ತಿರುವ ಈ ಹೈಟೆಕ್ ಕಣ್ಗಾವಲು ಯೋಜನೆಯಿಂದಾಗಿ ಸಂಚಾರಿ ನಿಯಮ ಉಲ್ಲಂಘಿಸಿ ಪೊಲೀಸರಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಮುಂದಿನ ಒಂದು ತಿಂಗಳಲ್ಲಿ ಇದು ಸಂಪೂರ್ಣ ಜಾರಿಯಾಗಲಿದ್ದು, ದಿನಕ್ಕೆ ಸುಮಾರು 20 ರಿಂದ 25 ಸಾವಿರ ಕೇಸ್‌ಗಳು ದಾಖಲಾಗುವ ಸಾಧ್ಯತೆಯಿದೆ ಎಂದು ಆಯುಕ್ತರು ಎಚ್ಚರಿಸಿದರು.

## ರೈತರು ಬಂಡೇಳುವ ಕಾಲ ದೂರವಿಲ್ಲ

**ಕೊಪ್ಪಳ:** 20 ಕಾರ್ಖಾನೆ ಬಾಧಿತ ಹಳ್ಳಿಯ 50 ಸಾವಿರ ಜನರ ಜೀವ, ಆರೋಗ್ಯ ಉಳಿಸಬೇಕು, ಬಸಾಪುರ ಕೆರೆ ಸಾರ್ವಜನಿಕರಿಗೆ ಮುಕ್ತಗೊಳಿಸಬೇಕು. ತುಂಗಭದ್ರಾ ವಿಷಗೊಳಿಸುವ ಕಾರ್ಖಾನೆಗಳನ್ನು ಸೀಜ್ ಮಾಡಬೇಕು ಎಂದು ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷ ನಜೀರ್ ಸಾಬ್ ಮೂಲಿಮನಿ ಆಗ್ರಹಿಸಿದರು.

**ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷ ನಜೀರ್ ಸಾಬ್ ಮೂಲಿಮನಿ ಹೇಳಿಕೆ**

ನಗರಸಭೆ ಆವರಣದಲ್ಲಿ ನಡೆದ 138ನೇ ದಿನದ ಬಲ್ಡೋಟ ತೊಲಗಲಿ ಎಂಬ ಹೋರಾಟಕ್ಕೆ ಬೆಂಬಲ ಸೂಚಿಸಿ ಮಾತನಾಡಿದ ಅವರು, ಮಾ.22 ರಂದು ಸಂಜೆ 7 ಗಂಟೆಗೆ ಹಂಪಿ ಎಕ್ಸ್ ಪ್ರೆಸ್ ಮೂಲಕ ಕೊಪ್ಪಳ ರೈಲ್ವೆ ನಿಲ್ದಾಣದಿಂದ ಬೆಂಗಳೂರು ಚಲೋ ಸತ್ಯಾಗ್ರಹದಲ್ಲಿ ಪಾಲ್ಗೊಳ್ಳಲು ಮುಂದಾಗಬೇಕೆಂದು ಎಲ್ಲಾ ಹಂತದ ಘಟಕಗಳು ರೈತರನ್ನು ತರಲು ಕರೆ ನೀಡಿದರು.

ಮುಂದೊಂದು ಈಗಾಗಲೇ ತುಂಗಭದ್ರಾ ಅಣೆಕಟ್ಟು ಪ್ರದೇಶದಲ್ಲಿ ರೈತರು ಒಂದೆ ಬೆಳೆ ಬೆಳೆಯುವ ಸ್ಥಿತಿ ನಿರ್ಮಾಣವಾಗಿದೆ. ಕಾರ್ಖಾನೆ ಮಾಲೀಕರು ನಿರ್ಭೀತಿಯಿಂದ ಮಿತಿ ಇಲ್ಲದೆ ನೀರು ಬಳಸಿ ಇಲ್ಲದ ಮಳೆ ಕೊರತೆ, ಹೂಳು ತುಂಬಿದೆ, ಕ್ರಸ್ಟ್ ಗೇಟ್ ಮುರಿದಿದೆ ಎಂದು ಹೇಳುವುದು ಕೇವಲ ನೆಪ ವಾಗಿದೆ. ಇದಕ್ಕೆ ರೈತರು ಒಗ್ಗಿಕೊಳ್ಳಲಿ ಎಂದು ರೂಢಿ ಮಾಡಿಸುತ್ತಿದ್ದಾರೆ ಮುಂದೊಂದು ದಿನ ಇದರ ವಿರುದ್ಧ ರೈತರು ಬಂಡೇಳುವ ಕಾಲ ದೂರವಿಲ್ಲ ಎಂದರು.

ಧರಣಿ ನೇತೃತ್ವ ವಹಿಸಿದ್ದ ಪ್ರಧಾನ ಸಂಚಾಲಕರಾದ ಅಲ್ಲಮಪ್ರಭು ಬೆಟ್ಟದೂರು ಅವರು ಹೇಳಿಕೆ ನೀಡಿ ಇದೆ 22 ರಂದು ಬೆಂಗಳೂರು ಚಲೋ ಸತ್ಯಾಗ್ರಹ ಯಶಸ್ವಿಗೊಳಿಸಲು ಮುನ್ನಡೆಯಿರಿ ಎಂದು ಕರೆ ನೀಡಿದರು. ನವಚೇತನ ಶಾಲೆ ಮುಖ್ಯೋಪಾಧ್ಯಾಯ ಹನುಮಂತಪ್ಪ ಎಂ. ಕಡದಳ್ಳಿ ಮಾತನಾಡಿ, ಬಲ್ಡೋಟ ಲಕ್ಷಗಟ್ಟಲೆ ಜನರ ಆರೋಗ್ಯ ಹಾಳು ಮಾಡಲು ಬರುತ್ತಿರುವುದು ದುರಂತ ಸಂಗತಿ. ಇಲ್ಲಿನ ಹಿರಿಯರು ತಪಸ್ಸಿನ ರೀತಿ ಹೋರಾಟ ಮಾಡುತ್ತಿದ್ದಾರೆ. ಇವರಿಗೆ ನಮ್ಮ ಮಕ್ಕಳು ಚಿರ ರುಣಿಯಾಗಿರಬೇಕು ಎಂದು ಇದು ನಿಮ್ಮ ಭವಿಷ್ಯದ ಬೆಳಕಿಗಾಗಿ ನಡೆದ ಹೋರಾಟದಲ್ಲಿ ಶುದ್ಧ ಗಾಳಿ, ಶುದ್ಧ ನೀರು, ಶುದ್ಧ ಪರಿಸರ ಪಡೆಯೋಣ ಎಂದರು.

ಸಂಚಾಲಕರಾದ ಮಲ್ಲಿಕಾರ್ಜುನ ಬಿ.ಗೋನಾಳ, ಮಂಜುನಾಥ ಜಿ. ಗೊಂಡಬಾಳ, ನಿವೃತ್ತ ಪ್ರಾಚಾರ್ಯ ಎಸ್ .ಬಿ.ರಾಜೂರು ಇದ್ದರು.



## ವಿಕಸಿತ ಭಾರತಕ್ಕೆ ಉದ್ಯಮಶೀಲತೆ ಮುಖ್ಯ

**ಕಲಬುರಗಿ:** ವಿಕಸಿತ ಭಾರತವನ್ನು ಸಾಧಿಸಲು ಉದ್ಯಮಿತ್ವ ಅತ್ಯಂತ ಮುಖ್ಯವಾಗಿದೆ. ಎಂಬಿಎ ಉದ್ಯಮಿತ್ವ ವಿಶೇಷೀಕರಣವನ್ನು ಪ್ರಾರಂಭಿಸುವುದು ಸರಿಯಾದ ಹೆಜ್ಜೆ.ಅಕ್ಯುತಾ ಮೊದಲಾದ ಕಾರ್ಯಕ್ರಮಗಳು ವಿದ್ಯಾರ್ಥಿಗಳಿಗೆ ನಿರ್ವಹಣಾ ಮತ್ತು ಉದ್ಯಮಿತ್ವ ಕೌಶಲ್ಯಗಳನ್ನು ಕಲಿಯುವ ಅವಕಾಶ ನೀಡುತ್ತವೆ ಎಂದು ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಬಟ್ಟು ಸತ್ಯನಾರಾಯಣ ತಿಳಿಸಿದರು.

ಸಿಯುಕೆಯಲ್ಲಿ ಅಕ್ಯುತಾ 2ಕೆ26 ಮ್ಯಾನೇಜ್ಮೆಂಟ್ ಫೆಸ್ಟ್ ಹಾಗೂ ಎಂಬಿಎ ಉದ್ಯಮಿತ್ವ ವಿಶೇಷೀಕರಣ ಪ್ರಾರಂಭ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು,ಭಾರತವು ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಗಳಲ್ಲಿ ಒಂದಾಗಿದ್ದು, ನಾಲ್ಕನೇ ಅತಿದೊಡ್ಡ ಆರ್ಥಿಕತೆಯಾಗಿರುವುದರಿಂದ ಉದ್ಯಮಿಗಳಿಗೆ ಸಾಕಷ್ಟು ಅವಕಾಶಗಳನ್ನು ಒದಗಿಸುತ್ತಿದೆ. ಭಾರತದಲ್ಲಿ ಉದ್ಯಮಶೀಲ ಪರಿಸರ ವ್ಯವಸ್ಥೆಯು ಬಹಳಷ್ಟು ಸುಧಾರಿಸಿದೆ. ತಂತ್ರಜ್ಞಾನ ವಿಶೇಷವಾಗಿ ಆರ್ಥಿಕ ಭೂದೃಶ್ಯವನ್ನು ಬದಲಾಯಿಸುತ್ತಿದೆ ಎಂದರು.

ಕೃಷಿಎಂದರೆಕೇವಲಸಮಸ್ಯೆಗಳುಎಂದುಅನೇಕ ಜನರು ಭಾವಿಸುತ್ತಾರೆ. ಅದನ್ನು ಉದ್ಯಮದಂತೆ ನಿರ್ವಹಿಸಿದರೆ ಮತ್ತು ಸಂಪೂರ್ಣ ಪೂರೈಕೆ ಸರಪಳಿಯ ಮೇಲೆ ನಿಮಗೆ ನಿಯಂತ್ರಣವಿದ್ದರೆ ನೀವು ಅತ್ಯುತ್ತಮ ಕೃಷಿ ಆಧಾರಿತ ಕೈಗಾರಿಕೆಗಳನ್ನು ನಿರ್ಮಿಸಬಹುದು. ಯಶಸ್ವಿ ಉದ್ಯಮಿಯಾಗಲು ತಾವು ನವೀನತೆಯನ್ನು ರೂಢಿಸಿಕೊಳ್ಳಬೇಕು ಮತ್ತು ಸಾಮಾಜಿಕ-ಆರ್ಥಿಕ ಸಮಸ್ಯೆಗಳಿಗೆ ಪರಿಹಾರಗಳನ್ನು ಹುಡುಕಬೇಕು ಎಂದು ಹೇಳಿದರು.

**ಭಾರತದಲ್ಲಿ ಜಿಡಿಪಿಯ 30% ಮತ್ತು ಒಟ್ಟು ರಫ್ತಿನ 45% ರಫ್ತಿರುವ 6.5 ಕೋಟಿ ಎಂಎಸ್‌ಎಂಇಗಳಿವೆ. ಈ ಉದ್ಯಮಗಳು 2047 ರ ವೇಳೆಗೆ ವಿಕಸಿತ ಭಾರತದ ದೃಶ್ಯೀಕರಣದಲ್ಲಿ ಪ್ರಮುಖ ಪಾತ್ರವಹಿಸುತ್ತವೆ.**

■ ಪ್ರೊ.ಆರ್.ಆರ್. ಬಿರಾದಾರ್. ಕುಲಸಚಿವ,ಸಿಯುಕೆ

ಕುಲಸಚಿವ ಪ್ರೊ.ಆರ್.ಆರ್.ಬಿರಾದಾರ್ ಮಾತನಾಡಿ, ಜಾಗತೀಕರಣದ ನಂತರ ವ್ಯಾಪಾರ ಅವಕಾಶಗಳು ತ್ವರಿತಗತಿಯಲ್ಲಿ ವಿಸ್ತರಿಸಿವೆ. ಅಮೇರಿಕಾ ಮತ್ತು ಚೀನಾ ನಂತರ 2.07 ಲಕ್ಷ ಸ್ಟಾರ್ಟ್‌ಅಪ್‌ಗಳೊಂದಿಗೆ ಭಾರತ ವಿಶ್ವದ ಮೂರನೇ ಅತಿದೊಡ್ಡ ದೇಶವಾಗಿ ಹೊರಹೊಮ್ಮುತ್ತಿದೆ ಎಂದರು.

ಡಾ.ಸಫಿಯಾ ಪರ್ವೀನ್ ಅಕ್ಯುಥ ಫೆಸ್ಟ್ ಬಗ್ಗೆ ವಿವರಿಸಿದರು. ವ್ಯವಹಾರ ಅಧ್ಯಯನ ವಿಭಾಗದ ಮುಖ್ಯಸ್ಥ ಪ್ರೊ.ವಿಜಯಕುಮಾರ ಮಾತನಾಡಿದರು. ಕಾರ್ಯಕ್ರಮದ ಸಂಯೋಜಕಿ ಡಾ.ಸುಷ್ಮಾ ಸ್ವಾಗತಿಸಿದರು. ಡಾ.ಗಣಪತಿ ಬಿ ಸಿನ್ನೂರ್, ಡಾ.ಶಿವಕುಮಾರ ಬೆಳ್ಳಿ, ಡಾ.ಶೈಲಜಾ ಕೊನೆಕ್, ಡಾ.ನಿರಂಜನ ಪೂಜಾರ, ಡಾ.ಜೈಪಾಲ್, ಡಾ.ವಾಣಿ, ಡಾ.ಶ್ರೀಲಕ್ಷ್ಮಿ, ಡಾ.ಕವಿತಾ ಸಂಗೋಳಗಿ ಇದ್ದರು.



## ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಕಲ್ಮಠ ಶ್ರೀಪ್ರಶಸ್ತಿ ಪ್ರದಾನ

**ಮಾನ್ವಿ:** ಪಟ್ಟಣದ ಕಲ್ಮಠ ಪ್ರಾಥಮಿಕ ಶಾಲೆಯಲ್ಲಿ ಕಲ್ಮಠ ಲಿಂ. ಡಾ.ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಮೂರನೇ ಪುಣ್ಯಾರಾಧನೆ ಅಂಗವಾಗಿ ಹಮ್ಮಿಕೊಳ್ಳಲಾದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಕಲ್ಮಠ ಶ್ರೀಪ್ರಶಸ್ತಿ ಪ್ರದಾನ ಸಮಾರಂಭ ಕಾರ್ಯಕ್ರಮವನ್ನು ಕಲ್ಮಠ ವಿದ್ಯಾಸಂಸ್ಥೆಯ ಅಧ್ಯಕ್ಷ ವಿರೂಪಾಕ್ಷ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಸಮಯ ಪಾಲನೆಗೆ ಹೆಚ್ಚಿನ ಮಹಾತ್ವವನ್ನು ನೀಡುವುದನ್ನು ಬೆಳೆಸಿಕೊಳ್ಳಬೇಕು ಹಾಗೂ ವಿದ್ಯಾರ್ಥಿ ಜೀವನದಲ್ಲಿ ಶಿಸ್ತನ್ನು ರೂಡಿಸಿಕೊಳ್ಳುವ ಮೂಲಕ ಸಮಾಜದಲ್ಲಿ ಉತ್ತಮ ಪ್ರಜೆಗಳಾಗಿ ಬಾಳಬೇಕು ಎಂದು ತಿಳಿಸಿದರು.

ಸರ್ವೋದಯ ಶಿಕ್ಷಣ ಸಂಸ್ಥೆಯ ಆಡಳಿತಾಧಿಕಾರಿ ದತ್ತಾತ್ರೇಯ ಮೇಟಿ ಮಾತನಾಡಿ ವಿದ್ಯಾರ್ಥಿಗಳು ಸದಾ ಓದಿನಲ್ಲಿ ಮಗ್ನರಾಗಿ, ಕ್ರಿಯಾಶೀಲರಾಗುವ ಮೂಲಕ ಕಲ್ಮಠ ಲಿಂ. ಡಾ.ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಆಶಯವನ್ನು ಈಡೇರಿಸಬೇಕು ಎಂದು ತಿಳಿಸಿದರು.

ಕಲ್ಮಠ ಪ್ರೌಢಶಾಲೆಯ ಶಿಕ್ಷಕರಾದ ಎಂ.ಎಂ.ಹಿರೇಮಠ್ 'ಕಲ್ಮಠ ಶ್ರೀಗಳ ಜೀವನ ಮತ್ತು ಸಾಧನೆ' ಕುರಿತು ಉಪನ್ಯಾಸ ನೀಡಿದರು. ಏಳನೇ ತರಗತಿಯ ಪ್ರತಿಭಾನ್ವಿತ ವಿದ್ಯಾರ್ಥಿಗಳಾದ ಕಾವೇರಿ ಬಸವರಾಜ್, ಕೃಷ್ಣ ವೆಂಕಟೇಶ್, ಮನೋಹರ ವೀರಭದ್ರಪ್ಪ ರವರಿಗೆ ಕಲ್ಮಠ ಶ್ರೀವಿದ್ಯಾರತ್ನ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ಶಿಕ್ಷಣ ಸಂಯೋಜಕರಾದ ರಾಚಮ್ಮ, ಪ್ರಾಥಮಿಕ ಶಾಲೆಯ ಮುಖ್ಯಗುರುಗಳಾದ ಮಂಜುನಾಥ ಕಮತರ್,ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯರಾದ ಎಸ್.ಎಸ್.ಪಾಟೀಲ, ಪದವಿ ಕಾಲೇಜಿನ ಪ್ರಾಚಾರ್ಯರಾದ ಸಿದ್ದನಗೌಡ ಪಾಟೀಲ್, ಕಲ್ಮಠ ಪ್ರೌಢಶಾಲೆ ಮುಖ್ಯೋಪಾಧ್ಯಾಯರಾದ ಪ್ರಭಯ್ಯಸ್ವಾಮಿ, ದೈಹಿಕ ಶಿಕ್ಷಕರಾದ ಕೆಮ್ಯಾನಾಯ್ಕ ಇದ್ದರು.



## ಅಡುಗೆ ಅನಿಲ ಕೊರತೆ ಆತಂಕ: ನೂಕುನುಗ್ಗಲು

**ರಾಯಚೂರು:** ಮಧ್ಯಪ್ರಾಚ್ಯದ ಯುದ್ಧದ ಹಿನ್ನಲೆಯಲ್ಲಿ ಜಿಲ್ಲೆಯ ಕೆಲವೆಡೆ ಅಡುಗೆ ಅನಿಲದ ಕೊರತೆ ಆಗುತ್ತದೆ ಎಂಬ ಆತಂಕದಲ್ಲಿ ಸಿಲಿಂಡರ್ ಪಡೆಯುವುದಕ್ಕೆ ಜನತೆ ವಿತರಕರು, ಏಜೆನ್ಸಿಗಳ ಅಂಗಡಿಗಳ ಮುಂದೆ ಸರತಿಯಲ್ಲಿ ನಿಂತು ನೂಕುನುಗ್ಗಲು ಉಂಟಾದ ಘಟನೆ ನಡೆದಿದೆ.

ನಗರದ ಆಝಾದ್ ನಗರದಲ್ಲಿನ ಎಚ್‌ಪಿ ಗ್ಯಾಸ್ ವಿತರಣಾ ಕೇಂದ್ರ ವಿಜಯಾ ಗ್ಯಾಸ್ ಏಜೆನ್ಸಿಯಲ್ಲಿ ಬೆಳಿಗ್ಗೆ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಅಡುಗೆ ಅನಿಲ ಪಡೆದುಕೊಳ್ಳುವುದಕ್ಕೆ ಸಾಲುಗಟ್ಟಿ ನಿಂತಿದ್ದರು. ಏಜೆನ್ಸಿಯವರು ಸಾರ್ವಜನಿಕರನ್ನು ಸರತಿ ಸಾಲಿನಲ್ಲಿ ನಿಲ್ಲಿಸಿ ಕಚೇರಿ ಒಳಗಡೆ ಹತ್ತು ಹದಿನೈದು ಜನರನ್ನು ಮಾತ್ರ ಬಿಡುತ್ತಿದ್ದರು.

ಒಳಗಿದ್ದವರು ಸಿಲಿಂಡರ ಬುಕ್ ಮಾಡಿದ ನಂತರ ಇಲ್ಲವೆ ಸಿಲೆಂಡರ ಪಡೆದುಕೊಳ್ಳುವುದಕ್ಕೆ ರಸೀದಿಯನ್ನು ಪಡೆದುಕೊಂಡು ಹೊರಗೆ ಬರುತ್ತಿದ್ದರು.

ಕೆಲ ಹೋಟೆಲ್, ರೊಟ್ಟಿ ಕೇಂದ್ರಗಳು ಮತ್ತು ಖಾನಾವಳಿಗಳಲ್ಲಿ ಸಿಲಿಂಡರ ದೊರೆಯುತ್ತಲ್ಲರಿ ಎಂದು ಆತಂಕವನ್ನು ಹೊರಹಾಕುತ್ತಿದ್ದರು. ಕೆಲವರು ಸಿಲೆಂಡರ ದೊರೆಯುತ್ತದೆ ವಿನಾಕಾರಣ ಜನತೆ ಸಿಲಿಂಡರ್ ಪಡೆಯುವುದಕ್ಕೆ ದುಂಬಾಲು ಬೀಳುತ್ತಿದ್ದಾರೆ ಎನ್ನುವುದು ಕೇಳಿ ಬಂದ ಮಾತುಗಳು.

ಅಡುಗೆ ಅನೀಲದ ಅಭಾವವಿಲ್ಲ. ಜಿಲ್ಲೆಗೆ ಅಗತ್ಯಕ್ಕೆ ತಕ್ಕಷ್ಟು ಸಿಲೆಂಡರಗಳು ಪೂರೈಕೆ ಆಗುತ್ತಿವೆ. ಸಾರ್ವಜನಿಕರು ಆತಂಕ ಪಡುವ ಅವಶ್ಯಕತೆ ಇಲ್ಲ. ಎರಡೆರಡು ಸಿಲಿಂಡರ ಇದ್ದವರು ಅನಗತ್ಯವಾಗಿ ತುಂಬಿದ ಸಿಲಿಂಡರನ್ನು ಸಂಗ್ರಹಿಸಿಟ್ಟುಕೊಳ್ಳಬೇಡಿ ಎಂದು ಜಿಲ್ಲಾಧಿಕಾರಿ ನಿತೀಶ ಕೆ. ಜನತೆಯಲ್ಲಿ ಕೇಳಿಕೊಂಡಿದ್ದರೂ ಸಹ ಜನತೆ ಮಾತ್ರ ಸಿಲೆಂಡರ ಪಡೆದಿಕೊಳ್ಳುವುದಕ್ಕೆ ದುಂಬಾಲು ಬೀಳುವುದನ್ನು ಮಾತ್ರ ನಿಲ್ಲಿಸಿಲ್ಲ.




## ಬಡವರ ಫ್ರಿಡ್ಜ್‌ಗೆ ಹೆಚ್ಚಿದ ಬೇಡಿಕೆ: ಕುಂಬಾರರ ಮೊಗದಲ್ಲಿ ಮಂದಹಾಸ

ಶಿವಮೂರ್ತಿ ಇಟಗಿ

ದಿಗಂತ ವಿಶೇಷ

**ಯಲಬುರ್ಗಾ:** ಬಿಸಿಲಿನ ಪ್ರಖರತೆಗೆ ಬೇಸತ್ತ ಜನ ತಂಪಾದ ನೀರಿನಿಂದ ದಾಹ ಇಂಗಿಸಿಕೊಳ್ಳಲು ಬಡವರ ಫ್ರಿಡ್ಜ್ ಎಂದೆ ಖ್ಯಾತಿ ಪಡೆದ ಕುಂಬಾರರ ಮೊಗದಲ್ಲಿ ಮಂದಹಾಸ ಮೂಡಿಸಿದೆ ಎನ್ನಬಹುದು.

**ಉಸ್ಸಪ್ಪ......ಉಸ್ ಬಿಸಿಲಿನ ಶಕೆ:** ಮಹಾಶಿವರಾತ್ರಿಯಿಂದಲೇ ಪ್ರಾರಂಭಗೊಂಡಿರುವ ಬಿಸಿಲಿನ ಝಳ, ಈಗ ದಿನದಿಂದ ದಿನಕ್ಕೆ ಬಿಸಿಲಿನ ತಾಪ ಏರುತ್ತಲೇ ಇದೆ ಹೊರತು, ಕಡಿಮೆಯಾಗುತ್ತಿಲ್ಲ. ಇದರಿಂದ ಇಲ್ಲಿಯ ನಾಗರಿಕರು ಈ ರಣ ಬಿಸಿಲಿನ ತಾಪಕ್ಕೆ ಬೇಸತ್ತು ಅಬ್ಬಬ್ಬಾ ಎಂತಾ ಬಿಸಿಲು ಐತರ್ರೀ, ಮಹಾರಾತ್ರಿ ಹಬ್ಬದಾಗ ಶಿವನ ಸ್ಮರಣೆ ಮಾಡದೆ ಇರದ ನಾವು ಇವತ್ತು ಬಿಸಿಲಿನ ತಾಪಕ್ಕೆ ಈಗ ಶಿವಾ ಶಿವಾ ಎಂತಾ ಏನ್ ಬಿಸಲರ್ರೀ ಎಲ್ಲಿ ಕುಳಿತರು, ನಿಂತರು, ತಂಪಾದ ನೀರು ಕುಡಿದರೂ ಸಮಾಧಾನವಿಲ್ಲ ಎಂದು ರೋದಿಸುತ್ತಿರುವ ಇಲ್ಲಿಯ ನಾಗರಿಕರು ಶಕೆಗೆ ತಾಳಲಾರದೆ ಉಸ್ಸಪ್ಪ......ಉಸ್ ಸಾಕಾಗಿದೆ. ಈ ಬಿಸಿಲಿನ ಶಕೆ ತಾಳಲಾರೆ, ಸಾಕಪ್ಪ ಸಾಕು ಎನ್ನುವಂತ ಪರಿಸ್ಥಿತಿ ಇಲ್ಲಿಯ ಜನರ ಸ್ಥಿತಿಯಾಗಿದೆ.

**ಕುಂಬಾರರ ಬದುಕು ಅತಂತ್ರ:** ಪಟ್ಟಣದಲ್ಲಿ ಕುಂಬಾರ ಮನೆತನಗಳು ಸುಮಾರು 15-ರಿಂದ 20 ಕುಟುಂಬಗಳು ಇದ್ದು, ಇದೇ ಕುಲ ಕಸಬು ಮಾಡುತ್ತ ತಮ್ಮ ಜೀವನ ಸಾಗಿಸುತ್ತಿದ್ದಾರೆ. ಇಲ್ಲಿ ತಯಾರಾದ ಮಡಿಕೆಗಳು, ಹೂಲಿಗಳು, ಹರವಿ, ಗಡಗಿ ಸೇರಿದಂತೆ ಮತ್ತಿತರ ಮಣ್ಣಿನ ಮಡಿಕೆಗಳು ಸುತ್ತಮುತ್ತಲಿನ ಗ್ರಾಮಗಳಿಗೆ ಜನರು ಬಾರಿ ಉತ್ಸಾಹದಿಂದ ಕೊಂಡು ಹೊಯ್ಯುತ್ತಿರುವುದು ಸಾಮಾನ್ಯವಾಗಿದೆ. ಇತರೆ ತಾಲೂಕಿನಲ್ಲಿ ಈ ಭಾಗದ ಮಣ್ಣಿನ ಮಡಿಕೆಗಳಿಗೆ ಎಲ್ಲಿಲ್ಲದ ಬೇಡಿಕೆ ಇರುವುದರಿಂದ ಕುಂಬಾರರ ಮೊಗದಲ್ಲಿ ಮಂದಹಾಸ ಮೂಡಿ ಬರುತ್ತಿದೆ.

ಈ ಕುರಿತು ಕೆಂಚಮ್ಮ ಸಣ್ಣಪ್ಪ ಕುಂಬಾರ ಎನ್ನುವರು ಪತ್ರಿಕೆಯೊಂದಿಗೆ ಮಾತನಾಡಿ, ನಮ್ಮ ಹಿರಿಯರ ಕಾಲದಿಂದ ಈ ಕುಲ ಕಸಬನ್ನೇ ನಂಬಿಕೊಂಡು ನಾವುಗಳು ಸುಮಾರು ವರ್ಷಗಳಿಂದ ಈ ಮಣ್ಣಿನ ಮಡಿಕೆಗಳನ್ನು ತಯಾರಿಸುವುದನ್ನೇ ಕುಲಕಸಬನ್ನಾಗಿ ಜೀವಂತವಾಗಿ ಉಳಿಸಿಕೊಂಡು ಬಂದಿದ್ದೇವೆ. ನಮ್ಮ ಕುಲಕಸಬಿನಲ್ಲಿ ನಮಗೆ ಲಾಭ ಸಿಗಲಿಲ್ಲ ಅಂದರೂ ಚಿಂತಿಯಿಲ್ಲ, ಈ ಮಡಿಕೆ ತಯಾರಿಕೆಯಲ್ಲಿ ತೃಪ್ತಿ ಐತ್ರಿ ಎಂದು ಕೆಂಚಮ್ಮ ಕುಂಬಾರ ತನ್ನ ಮನದಾಳದ ಮಾತನ್ನು ಪತ್ರಿಕೆಯೊಂದಿಗೆ ಹಂಚಿಕೊಂಡರು.



### ಎಲ್ಲರಿಗೂ ಬೇಕು ಮಡಿಕೆ

ಒಂದು ಕಡೆ ವಿಪರೀತ ಬಿಸಿಲು, ಮತ್ತೊಂದು ಕಡೆ ಶಕೆ ಇದರ ನಡುವೆ ಮನುಷ್ಯ ತಾಳಲಾರದೆ ಫ್ಯಾನ್‌ನಿನ ನೆರವಿಗೆ ಹೋದರೆ, ಜೊತೆಗೆ ತಂಪಾದ ಪಾನೀಯ, ನೀರು ಕುಡಿದು ದಾಹ ಇಂಗಿಸಿಕೊಳ್ಳಬೇಕಾದರೆ, ವಿದ್ಯುತ್ತಿನ ಸಮಸ್ಯೆಯಿಂದ ನಿತ್ಯ ಗೋಳಾಡುವಂತಾಗಿದೆ. ತಮ್ಮ ದಾಹವನ್ನು ಹಿಂಗಿಸಿಕೊಳ್ಳಲು ಈಗ ಶ್ರೀಮಂತ, ಬಡವ ಬಲ್ಲಿಗ ಎನ್ನದೆ ಈಗ ಎಲ್ಲರ ಚಿತ್ತ ಬಡವರ ಫ್ರೀಜ್ ಎಂದೆ ಹೆಸರು ಪಡೆದುಕೊಂಡಿರುವ ಮಣ್ಣಿನ ಮಡಿಕೆಗಳು ಇನ್ನೂ ತಂಪು- ಛಾಪು ಉಳಿಸಿಕೊಂಡಿದೆ ಎಂಬುದಕ್ಕೆ ಭರ್ಜರಿ ಮಾರಾಟ ನಿದರ್ಶನವಾಗಿದೆ.

## ಎಸೆಸೆಲ್ಸಿ ಪರೀಕ್ಷೆ: ಸಕಲ ಸಿದ್ಧತೆ ಕೈಗೊಂಡ ಶಿಕ್ಷಣ ಇಲಾಖೆ

**ಕುಷ್ಟಗಿ:** ತಾಲೂಕಿನಾದ್ಯಂತ ಎಸ್ಸೆಸ್ಸೆಲ್ಸಿ ಪರೀಕ್ಷೆಯು ಮಾ.18ರಿಂದ ಏಪ್ರಿಲ್ 2ರವರೆಗೂ ನಡೆಯಲಿದ್ದು ಶಿಕ್ಷಣ ಇಲಾಖೆ ಪರೀಕ್ಷೆಗಳನ್ನು ಪಾರದರ್ಶಕತೆಯಿಂದ ನಡೆಸಲು ಸಕಲ ಸಿದ್ಧತೆ ಕೈಗೊಂಡಿದೆ.

ಪಟ್ಟಣ ಸೇರಿದಂತೆ ತಾಲೂಕಿನಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆಗೆ 15 ಕೇಂದ್ರಗಳು, 199 ಕೊಠಡಿಗಳನ್ನು ಗುರುತಿಸಲಾಗಿದೆ. ಸರ್ಕಾರಿ, ಅನುದಾನಿತ, ಅನುದಾನ ರಹಿತ ಪ್ರೌಢಶಾಲೆಗಳ ಬಾಲಕಿಯರು 2320, ಬಾಲಕರು 2223, ಒಟ್ಟು 4774 ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಣಿಯಾಗಿದ್ದಾರೆ.

ಆ ಪೈಕಿ ಸರ್ಕಾರಿ ಪ್ರೌಢಶಾಲೆಯ 3722 ಅನುದಾನಿತ 369 ಹಾಗೂ ಅನುದಾನರಹಿತ 369 ವಿದ್ಯಾರ್ಥಿಗಳು ಇದ್ದಾರೆ. 4461 ಹೊಸ ವಿದ್ಯಾರ್ಥಿಗಳು, 151 ಪುನರಾವರ್ತಿತ ವಿದ್ಯಾರ್ಥಿಗಳು, 147 ಖಾಸಗಿ ಅಭ್ಯರ್ಥಿಗಳು, 15 ಖಾಸಗಿ ಪುನರಾವರ್ತಿತ ವಿದ್ಯಾರ್ಥಿ ಸೇರಿದಂತೆ ಒಟ್ಟು 4774 ಅಭ್ಯರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ.

ಸಿಸಿ ಕ್ಯಾಮೆರಾ ಅಳವಡಿಕೆ: ಎಸ್ಸೆಸ್ಸೆಲ್ಸಿ ಪರೀಕ್ಷೆಯ 15 ಕೇಂದ್ರಗಳ 199 ಕೊಠಡಿಗಳಿಗೆ 215 ಸಿಸಿ ಕ್ಯಾಮೆರಾ ಅಳವಡಿಕೆ ಕಾರ್ಯ ನಡೆಸಲಾಗಿದೆ.




ಎಲ್ಲ ಕೇಂದ್ರಗಳಲ್ಲೂ ವೆಬ್ ಕಾಸ್ಟಿಂಗ್ ವ್ಯವಸ್ಥೆ ಮಾಡಲಾಗಿದೆ. ಈಗಾಗಲೇ ಪರೀಕ್ಷಾ ಕೇಂದ್ರಗಳ ಮುಖ್ಯಸ್ಥರು, ಕಸ್ಟೋಡಿಯನ್ನರು, ಸ್ಥಾನಿಕ ಜಾಗೃತದಳ ಅಧಿಕಾರಿಗಳು, ಮೊಬೈಲ್ ಸ್ವಾಧಿನಾಧಿಕಾರಿಗಳು, ಕೊಠಡಿ ಮೇಲ್ವಿಚಾರಕರು, ಹೆಚ್ಚುವರಿ ಸಿಬ್ಬಂದಿ ಒಟ್ಟು 300 ಜನ ಸಿಬ್ಬಂದಿ ನಿಯೋಜಿಸಲಾಗಿದೆ.

15 ಪರೀಕ್ಷಾ ಕೇಂದ್ರಗಳು: ಕುಷ್ಟಗಿ ನಗರದಲ್ಲಿ-2, ಹನುಮಸಾಗರದಲ್ಲಿ-02, ಹನುಮನಾಳದಲ್ಲಿ-02, ತಾವರಗೇರಾದಲ್ಲಿ-02, ಕಬ್ಬರಗಿ-01, ದೋಟಿಹಾಳ-01, ಮುದೇನೂರು-01, ತಳುವಗೇರಾ-01, ಚಳಗೇರಿ-01 ನವಲಹಳ್ಳಿ-01, ಜಹಗಿರ ಗುಡದೂರ-01 ಈ ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿವೆ. ಈ ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ವಿದ್ಯಾರ್ಥಿಗಳು ಪರೀಕ್ಷೆಯನ್ನು ಬರೆಯಲು ಸೂಕ್ತವಾದ ಆಸನಗಳ ವ್ಯವಸ್ಥೆ ಮಾಡಲಾಗಿದೆ. ಈ ಕೊಠಡಿಗಳಲ್ಲಿ ಕುಡಿಯುವ ನೀರು, ಗಾಳಿ, ಬೆಳಕು ಇರುವಂತೆ ವ್ಯವಸ್ಥೆ ಮಾಡಲಾಗಿದೆ.

**ಮಾ.18ರಿಂದ ನಡೆಯುವ ಎಸ್ಸೆಸ್ಸೆಲ್ಸಿ ಪರೀಕ್ಷೆ ಪಾರದರ್ಶಕವಾಗಿ ನಡೆಸಲು ಎಲ್ಲ ಸಿದ್ಧತೆ ಕೈಗೊಂಡಿದೆ. ಪೊಲೀಸ್ ಬಂದೋಬಸ್ತ್, ಸಿ.ಸಿ ಕ್ಯಾಮೆರಾ, ವೆಬ್ ಕಾಸ್ಟಿಂಗ್ ವ್ಯವಸ್ಥೆ ಮಾಡಿದೆ. ಪ್ರಶ್ನೆ ಪತ್ರಿಕೆ ವಿತರಿಸುವ ವಾಹನಗಳಿಗೆ ಪೊಲೀಸ್ ಭದ್ರತೆ ಒದಗಿಸಲಾಗಿದೆ.**

■ ಉಮಾದೇವಿ ಬಸಾಪೂರು, ಬಿಇಒ

**ಕುಷ್ಟಗಿ ತಾಲೂಕಿನಲ್ಲಿ ಒಟ್ಟು 15 ಪರೀಕ್ಷಾ ಕೇಂದ್ರಗಳಲ್ಲಿ ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ ತೊಂದರೆಯಾಗದಂತೆ ಸಕಲ ವ್ಯವಸ್ಥೆಯನ್ನು ಮಾಡಿಕೊಳ್ಳಲಾಗಿದೆ. ಪಾರದರ್ಶಕವಾಗಿ ಪರೀಕ್ಷೆಗಳು ನಡೆಯಲಿವೆ.**

■ ಜಗದೀಶಪ್ಪ ಎಂ., ಕ್ಷೇತ್ರಸಮನ್ವಯಾಧಿಕಾರಿ

## ಕಿರುಸುದ್ದಿ

### ಮಾ.20ಕ್ಕೆ ವಿದ್ಯುತ್ ಗ್ರಾಹಕರ ಕುಂದುಕೊರತೆ ಸಭೆ



**ಹಗರಿಬೊಮ್ಮನಹಳ್ಳಿ:** ಹೊಸಪೇಟೆಯ ಕಾರ್ಯ ಮತ್ತು ಪಾಲನೆ ನಗರ ವಿಭಾಗದ ಕಚೇರಿಯಲ್ಲಿ ಬಳ್ಳಾರಿಯ ಜೆಸ್ಕಾಂ ಕಾರ್ಯ ಮತ್ತು ಪಾಲನೆ ವಲಯ ಕಚೇರಿಯ ಮುಖ್ಯ ಅಭಿಯಂತರರ ಅಧ್ಯಕ್ಷತೆಯಲ್ಲಿ ಮಾ.20ರಂದು ಎಚ್.ಟಿ ಮತ್ತು ಇಎಚ್‌ಟಿ ಗ್ರಾಹಕರ ಕುಂದುಕೊರತೆ ಸಭೆಯನ್ನು ಆಯೋಜಿಸಲಾಗಿದೆ ಎಂದು ಹಗರಿಬೊಮ್ಮನಹಳ್ಳಿಯ ಜೆಸ್ಕಾಂ ಕಾರ್ಯ ಮತ್ತು ಪಾಲನಾ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರರಾದ (ವಿದ್ಯುತ್) ಕೆ.ಸತೀಶ್ ತಿಳಿಸಿದ್ದಾರೆ.ಹಗರಿಬೊಮ್ಮನಹಳ್ಳಿಯ ಜೆಸ್ಕಾಂ ಗ್ರಾಮೀಣ ವಿಭಾಗದ ವ್ಯಾಪ್ತಿಯಲ್ಲಿ ಬರುವ ಎಚ್.ಟಿ. ಮತ್ತು ಇಎಚ್‌ಟಿ ಗ್ರಾಹಕರು ಹೆಚ್ಚಿನ ಸಂಖ್ಯೆಯಲ್ಲಿ ಸಭೆಯಲ್ಲಿ ಭಾಗವಹಿಸಿ ತಮ್ಮ ಕುಂದುಕೊರತೆಗಳನ್ನು ಬಗೆಹರಿಸಿಕೊಳ್ಳಬೇಕೆಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಸಾರ್ವಜನಿಕರಲ್ಲಿ ಆತಂಕ ಬೇಡ: ತಹಶೀಲ್ದಾರ್



**ಕುರುಗೋಡು:** ತಾಲೂಕಿನ ಸಿಲಿಂಡರ್ ಕೇಂದ್ರಗಳಲ್ಲಿ ದಾಸ್ತಾನು ಹೆಚ್ಚಿದ್ದು, ಸಮಸ್ಯೆ ಆಗದಂತೆ ವಿತರಣೆ ಮಾಡಲು ಸೂಚನೆ ನೀಡಲಾಗಿದ್ದು, ಸಾರ್ವಜನಿಕರು ಆತಂಕ ಪಡುವ ಅಗತ್ಯವಿಲ್ಲ ಎಂದು ತಹಶೀಲ್ದಾರ್ ನರಸಪ್ಪ ಹೇಳಿದರು.ಪಟ್ಟಣದ ಬಳ್ಳಾರಿ ರಸ್ತೆಯಲ್ಲಿರುವ ಅಪ್ಪಾಜಿ ಸಿಲಿಂಡರ್ ವಿತರಣೆ ಕೇಂದ್ರ ಹಾಗೂ ಕೋಳೂರಿನ ಕಿರಣ್ ಭಾರತ್ ಗ್ಯಾಸ್ ಕೇಂದ್ರಗಳಿಗೆ ಮಂಗಳವಾರ ಭೇಟಿ ನೀಡಿ ಪರಿಶೀಲನೆ ನಡೆಸಿ ಸಿಬ್ಬಂದಿ ಅವರೊಂದಿಗೆ ಚರ್ಚಿಸಿ ವಿತರಣೆಯಲ್ಲಿ ಯತ ಸ್ಥಿತಿ ಕಾಯುವಂತೆ ಸಲಹೆ ನೀಡಿದರು.ಉಪತಹಶೀಲ್ದಾರ್ ಮಲ್ಲೇಶಪ್ಪ ಹಾಗೂ ಆಹಾರ ಇಲಾಖೆ ಅಧಿಕಾರಿ ಮಲ್ಲಿಕಾರ್ಜುನ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ವ್ಯಾಪ್ತಿಯಲ್ಲಿ ಕಳೆದ ವಾರದಿಂದ ತಲೆದೂರಿದ್ದ ಸಿಲಿಂಡರ್ ಸಮಸ್ಯೆ ಸಾರ್ವಜನಿಕರಲ್ಲಿ ಬಾರಿ ಸಮಸ್ಯೆ ಆಗಿದ್ದು ಸದ್ಯ ಸೋಮವಾರ ಮತ್ತು ಮಂಗಳವಾರ ಲೋಡ್ ಬಂದಿದೆ ಎನ್ನಲಾಗಿದ್ದು ಕಡ್ಡಾಯವಾಗಿ ಒಟಿಪಿ ಆನ್‌ಲೈನ್ ಮೂಲಕ ದಾಖಲಿಕರಣ ಮಾಡುವುದು ಸಾರ್ವಜನಿಕರಲ್ಲಿ ಕೆಲವು ಕಡೆ ಗೊಂದಲಕ್ಕಿಡು ಮಾಡಿದ್ದು ಸಿಲಿಂಡರ್ ಆಟೋ ಬಳಿ ತೆರಳಿ ಬುಕ್ ಮಾಡಿದರೆ ಸಂದೇಶ ಬರುತ್ತಿಲ್ಲ ಎನ್ನುವುದು ಅಭಿಪ್ರಾಯವಾಗಿದೆ.

### ಎಸೆಸೆಲ್ಸಿ ಪರೀಕ್ಷೆಗೆ ಸಕಲ ಸಿದ್ಧತೆ: ಬಿಇಒ ಮಹೇಶ

**ಹೂವಿನಹಡಗಲಿ:** 2026 ಮಾರ್ಚ್-ಏಪ್ರಿಲ್‌ನಲ್ಲಿ ನಡೆಯಲಿರುವ ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ಶಾಲಾ ಶಿಕ್ಷಣ ಇಲಾಖೆ ಸಕಲ ಸಿದ್ಧತೆ ಮಾಡಿಕೊಂಡಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಮಹೇಶ ಪೂಜಾರ ತಿಳಿಸಿದ್ದಾರೆ.

ಮಾ.18ರಿಂದ ಏಪ್ರಿಲ್ 2ರವರೆಗೆ ಪರೀಕ್ಷೆಗಳು ನಡೆಯಲಿವೆ. ಈ ಬಾರಿ ಪರೀಕ್ಷೆಗೆ 1556 ಬಾಲಕರು 1486 ಬಾಲಕಿಯರು ಸೇರಿದಂತೆ ಒಟ್ಟು 3042 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗುವರು.

**9 ಪರೀಕ್ಷಾ ಕೇಂದ್ರಗಳು:** ಪಟ್ಟಣದ ಜಿಪಿಜಿ, ಎಸ್ ಕೆಜಿಜಿ, ಇಟಗಿ ಸರ್ಕಾರಿ ಪ್ರೌಢಶಾಲೆ, ಹೊಳಲು ಸರ್ಕಾರಿ ಪ್ರೌಢಶಾಲೆ, ಸರ್ಕಾರಿ ಪ್ರೌಢಶಾಲೆ ಪ್ರೌಢಶಾಲೆ ಹಿರೇಹಡಗಲಿ, ಸರ್ಕಾರಿ ಪ್ರೌಢಶಾಲೆ ಬೂದನೂರು, ಸರ್ಕಾರಿ ಪ್ರೌಢಶಾಲೆ ಉತ್ತಂಗಿ, ಸರ್ಕಾರಿ ಪ್ರೌಢಶಾಲೆ ನಾಗತಿ ಬಸಾಪುರ, ಎಂಎಂಜಿ ಸೋವೇನಹಳ್ಳಿ ಅನುದಾನಿತ ಪ್ರೌಢಶಾಲೆ, ಪ್ರೌಢಶಾಲೆಗಳಲ್ಲಿ ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ ಎಂದು ತಿಳಿಸಿದರು.

**ಮೂಲಭೂತ ಸೌಕರ್ಯ:** ವಿದ್ಯಾರ್ಥಿಗಳಿಗೆ ಕುಡಿಯುವ ಶುದ್ಧ ನೀರು,ಶೌಚಾಲಯ ಆರೋಗ್ಯ ವ್ಯವಸ್ಥೆ ಸೇರಿದಂತೆ ಇತರೆ ಮೂಲಭೂತ ಸೌಕರ್ಯ ಕಲ್ಪಿಸಲಾಗಿದೆ. ಗ್ರಾಮೀಣ ವಿದ್ಯಾರ್ಥಿಗಳಿಗೆ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ವತಿಯಿಂದ ಉಚಿತ ಬಸ್ ಸೌಲಭ್ಯ ಒದಗಿಸಲಾಗಿದೆ. ಎಸ್ ಎಸ್ ಎಲ್ ಸಿ ವಿದ್ಯಾರ್ಥಿಗಳು ಯಾವುದೇ ಭಯವಿಲ್ಲದೆ ಮುಕ್ತವಾಗಿ ಪರೀಕ್ಷೆ ಬರೆಯಲು ಮಂಡಳಿ ನಿಯಮಾನುಸಾರ ಸಕಲ ಸಿದ್ಧತೆ ಮಾಡಲಾಗಿದೆ ಎಂದು ಹೇಳಿದರು.

## ನಿಧನ ಸುದ್ದಿ

### ಎಸ್.ಇಸ್ಮಾಯಿಲ್



**ಹೂವಿನಹಡಗಲಿ:** ಪಟ್ಟಣದ ಕೆಎಚ್‌ಬಿ ಕಾಲೋನಿ ನಿವಾಸಿ ನಿವೃತ್ತ ಕಾರ್ಯನಿರ್ವಾಹಕ ಅಧಿಕಾರಿ ಎಸ್.ಇಸ್ಮಾಯಿಲ್ (64) ಮಂಗಳವಾರ ನಿಧನರಾಗಿದ್ದಾರೆ ಮೃತರಿಗೆ ಇಬ್ಬರು ಪುತ್ರರು ಮತ್ತು ಪತ್ನಿ ಇದ್ದಾರೆ.



ಬಳ್ಳಾರಿ: ನಗರದ 22ನೇ ವಾರ್ಡ್ ಆಕುಲಚಲಮಯ ಬೀದಿಯಲ್ಲಿ ಗಾಂಧಿನಗರ ಪೊಲೀಸ್ ಸ್ಟೇಷನ್ ವತಿಯಿಂದ ಜನ ಸಂಪರ್ಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ವಾರ್ಡ್ ಸದಸ್ಯ ಕೆ.ಹನುಮಂತಪ್ಪ, ಪೊಲೀಸ್ ಠಾಣೆಯ ಅಧಿಕಾರಿಗಳು, ಸಿಬ್ಬಂದಿ, ವಾರ್ಡ್‌ನ ನಾಗರಿಕರು, ವಿವಿಧ ಗಣ್ಯರು ಭಾಗವಹಿಸಿದ್ದರು.

## ನಾಟಕದ ಮೂಲಕ ಆರೋಗ್ಯ ಜಾಗೃತಿ

**ಗಾದಿಗನೂರು:** ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಪ್ರಾಥಮಿಕ ಆರೋಗ್ಯ ಕೇಂದ್ರ, ಗ್ರಾಪಂ ಕಾರ್ಯಾಲಯ ಬೈಲುವದ್ದಿಗೇರಿ ವ್ಯಾಪ್ತಿಯ ಕಾಕುಬಾಳು ಗ್ರಾಮದಲ್ಲಿ ನಾಟಕದ ಮೂಲಕ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಲಾಯಿತು.

ಆರೋಗ್ಯ ನಿರೀಕ್ಷಣಾಧಿಕಾರಿ ರಾಜೀವ್ ಗಾಂಧಿ ಕೆ.ಪಿ. ಹಾಗೂ ಆಯುಷ್ ವೈದ್ಯಧಿಕಾರಿಗಳು ಡಾ.ಆರತಿ ಹಿರೇಮಠ ತಮಟೆ ಭರಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಡಾ.ಆರತಿ ಹಿರೇಮಠ ಮಾತನಾಡಿ, ಯೋಗ, ಧ್ಯಾನದಿಂದ ಆರೋಗ್ಯ ಕಾಪಡಿಕೊಳ್ಳಬಹುದು, ಖಾಯಿಲೆಗಳು ಬಗ್ಗೆ ಭಯಪಡದೆ ಮುಂಜಾಗ್ರತೆ ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು.

ರಾಜೀವ್ ಗಾಂಧಿ ಆರೋಗ್ಯ ನಿರೀಕ್ಷಣಾಧಿಕಾರಿಗಳು ಮಾತನಾಡಿ, ಸಾಂಕ್ರಾಮಿಕ ರೋಗಗಳಾದ ಮಲೇರಿಯಾ, ಡೆಂಗ್ಯೂ, ಚಿಕನ್ ಗುನ್ಯಾ, ಕುಷ್ಟರೋಗ, ವಾಂತಿ-ಬೇಧಿ ಪ್ರಕರಣಗಳು, ಕ್ಷಯ ರೋಗ, ನಿಕ್ಷಯ್ ಪೋಷಣೆ ಯೋಜನೆ, ನಿಕ್ಷಯ್ ಮಿತ್ರ ಬಗ್ಗೆ ಹಾಗೂ ಬೇಸಿಗೆ ಬಿಸಿಲಿನ ಬೇಗೆಯಿಂದ ಪಾರಾಗುವ ಮುಂಜಾಗ್ರತೆ ಕ್ರಮಗಳ ಬಗ್ಗೆ ತಿಳಿಸಿದರು.

ಗುಂಡಿ ರಮೇಶ್ ಕಲಾ ತಂಡದವರು ನಾಟಕದ ಮೂಲಕ ರಾಷ್ಟ್ರೀಯ ಕಾರ್ಯಕ್ರಮಗಳಾದ ತಾಯಿ-ಮಕ್ಕಳ ಆರೋಗ್ಯ, ಗರ್ಭಿಣಿ ತಪಾಸಣೆ, ಸ್ನೇಹ ಕ್ಲಿನಿಕ್, ಬಾಲ್ಯ ವಿವಾಹದಿಂದ ಆಗುವ ತೊಂದರೆಗಳು, ನಾಯಿ ಕಡಿತ, 108 ಆಂಬ್ಯುಲೆನ್ಸ್, ಕಿಲ್ಕಾರಿ ಕರೆ ಬಗ್ಗೆ, ಮಾನಸಿಕ ಖಾಯಿಲೆಗಳು, ಕ್ಷಯ ರೋಗ ಬಗ್ಗೆ ಮನಮುಟ್ಟುವಂತೆ ಸವಿಸ್ತಾರವಾಗಿ ತಿಳಿಸಿದರು. ಆರೋಗ್ಯ ಇಲಾಖೆಯ ಸಿಬ್ಬಂದಿ ಹಾಗೂ ಗ್ರಾಮದ ಸಾರ್ವಜನಿಕರು ಭಾಗವಹಿಸಿದ್ದರು.



ಗಾದಿಗನೂರು: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಪ್ರಾಥಮಿಕ ಆರೋಗ್ಯ ಕೇಂದ್ರ, ಗ್ರಾಪಂ ಕಾರ್ಯಾಲಯ ಬೈಲುವದ್ದಿಗೇರಿ ವ್ಯಾಪ್ತಿಯ ಕಾಕುಬಾಳು ಗ್ರಾಮದಲ್ಲಿ ನಾಟಕದ ಮೂಲಕ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಲಾಯಿತು.

# ಇಂದಿನಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆ

**ಯಾದಗಿರಿ:** ಯುಪಿಎಸ್‌ಸಿ ಪರೀಕ್ಷೆಯಲ್ಲಿ ಇದೇ ಮೊದಲ ಬಾರಿಗೆ ಗಿರಿಜಿಲ್ಲೆಯಿಂದ ನಾಲ್ಕು ಜನ ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದು ಈ ಸಾಧನೆ ಇಮ್ಮಡಿಗೊಳಿಸಿದ ಖುಷಿಯೊಂದಿಗೆ, ಬುಧವಾರದಿಂದ ಆರಂಭಗೊಳ್ಳುವ ಎಸ್ಸೆಸ್ಸೆಲ್ಸಿ ಪರೀಕ್ಷೆ ಎದುರಿಸಲು ವಿದ್ಯಾರ್ಥಿಗಳು ಸರ್ವ ಸನ್ನದ್ಧರಾಗಿದ್ದಾರೆ.

ಯಾದಗಿರಿ ಜಿಲ್ಲೆಯಾಗಿ 16 ವರ್ಷ ಕಳೆದರೂ ಯುಪಿಎಸ್‌ಸಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಲಿಲ್ಲ, ಆದರೆ, ಈ ಬಾರಿ ನಾಲ್ಕು ಜನ ಪಾಸ್ ಆಗುವ ಮೂಲಕ ಜಿಲ್ಲೆಯ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಲ್ಲಿ ಹೊಸ ಭರವಸೆ ಮೂಡಿಸಿದ್ದಾರೆ.

ಮಾ.18ರಿಂದ ಏ.2ರವಗೆ ನಡೆಯಲಿರುವ ಈ ಪರೀಕ್ಷೆಗಾಗಿ ಜಿಲ್ಲೆಯಲ್ಲಿ 18277 ವಿದ್ಯಾರ್ಥಿಗಳು ನೊಂದಣಿ ಮಾಡಿಕೊಂಡಿದ್ದಾರೆ. ಜಿಲ್ಲಾದ್ಯಂತ ಒಟ್ಟು 61 ಪರೀಕ್ಷಾ ಕೇಂದ್ರಗಳು ಸ್ಥಾಪಿಸಲಾಗಿದೆ. ಪರೀಕ್ಷಾ ಮೇಲ್ವಿಚಾರಕರು ಸೇರಿದಂತೆ ವಿವಿಧ ಹಂತ ಒಟ್ಟು 136 ಅಧಿಕಾರಿ, ಸಿಬ್ಬಂದಿಯನ್ನು ಪರೀಕ್ಷಾ ಕರ್ತವ್ಯಕ್ಕೆ ನಿಯೋಜಿಸಲಾಗಿದೆ.

ಪ್ರತಿ ಪರೀಕ್ಷಾ ಕೇಂದ್ರ ಬಳಿ ಎಚ್‌ಸಿ, ಪಿಸಿ, ಹೋಂಗಾರ್ಡ್ ಸೇರಿ ನಾಲ್ವರನ್ನು ಸೂಕ್ತ ಬಂದೋಬಸ್ತಿಗೆ ಹಾಕಲಾಗಿದೆ ಎಂದು ಎಸ್ಪಿ ಪೃಥ್ವಿಕ್ ಶಂಕರ್ ತಿಳಿಸಿದ್ದಾರೆ.

ಈ ಪರೀಕ್ಷೆ ಹಿನ್ನೆಲೆಯಲ್ಲಿ ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಹೊರಡಿಸಿ ಜಿಲ್ಲಾಧಿಕಾರಿ ಹರ್ಷಲ್ ಬೋಯರ್ ಆದೇಶ ಹೊರಡಿಸಿದ್ದಾರೆ. ಪರೀಕ್ಷಾ ಕೇಂದ್ರಗಳ ಸುತ್ತಮುತ್ತಲೂ ಇರುವ ಬೆರಳಚ್ಚು ಕೇಂದ್ರ, ಝುರಾಕ್ಸ್ ಮಳಿಗೆ ಹಾಗೂ ಪುಸ್ತಕದ ಮಳಿಗೆಗಳನ್ನು ಮುಚ್ಚಲು ಸೂಚಿಸಲಾಗಿದೆ ಎಂದಿದ್ದಾರೆ.



ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ಜಿಲ್ಲಾಡಳಿತದಿಂದ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ. ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ಸಾರಿಗೆ ಬಸ್ ವ್ಯವಸ್ಥೆ ಮಾಡಲಾಗಿದೆ. ಈ ಬಾರಿ ಫಲಿತಾಂಶ ಉತ್ತಮವಾಗಿ ಬರುವ ನಿರೀಕ್ಷೆ ಹೊಂದಲಾಗಿದೆ.
■ ಸಿ.ಎಸ್.ಮುದೋಳ್, ಡಿಡಿಪಿಐ

### ಶುಭ ಹಾರೈಸಿದ ಸಚಿವರು, ಅಧಿಕಾರಿಗಳು

ಇನ್ನೂ ಪರೀಕ್ಷೆ ಎದುರಿಸುವ ವಿದ್ಯಾರ್ಥಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಶರಣಬಸಪ್ಪ ದರ್ಶನಾಪುರ ಆತ್ಮಸ್ಥೈರ್ಯ ತುಂಬಿಸಿದ್ದಾರೆ. ಈ ಕುರಿತು ಪ್ರತ್ಯೇಕ ಪ್ರಕಟಣೆ ಹೊರಡಿಸಿರುವ ಅವರು, ಧೈರ್ಯದಿಂದ ಎದುರಿಸಿ, ಕಳವಳ, ಆತಂಕಕ್ಕೆ ಒಳಗಾಗದೇ ಶಾಂತಚಿತ್ತದಿಂದ ಪ್ರಶ್ನೆಗಳಿಗೆ ಉತ್ತರಿಸಿ. ವರ್ಷವಿಡಿ ಓದಿದ್ದನ್ನು ಮನನ ಮಾಡಿಕೊಂಡು ಪ್ರಶ್ನೆಗಳನ್ನು ಸರಿಯಾಗಿ ಅರ್ಥಮಾಡಿಕೊಂಡು ಉತ್ತರ ಬರೆಯಿರಿ ಎಂದು ಶುಭ ಹಾರೈಸಿದ್ದಾರೆ. ಶಾಲೆಯಲ್ಲಿ ಶಿಕ್ಷಕರು, ಮನೆಯಲ್ಲಿ ಪಾಲಕರು ಹೇಳಿದ್ದನ್ನು ನೆನಪಿಸಿಕೊಳ್ಳಿ. ಹಿಂದುಳಿದ ಜಿಲ್ಲೆ ಮಕ್ಕಳು ನಾವು ಎಂಬುವುದನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳದೇ ಜಿಲ್ಲೆಯ ನಾಲ್ವರು ಯುಪಿಎಸ್‌ಸಿ ಸಾಧಕರನ್ನು ಮಾದರಿಯಾಗಿ ಇಟ್ಟುಕೊಂಡು ಎಲ್ಲ ವಿಷಯಗಳ ಪರೀಕ್ಷೆಗಳನ್ನು ಗಟ್ಟಿಮನಸ್ಸಿನಿಂದ ಎದುರಿಸಿರಿ ಎಂದು ಡಿಸಿ ಹರ್ಷಲ್ ಭೋಯರ್, ಜಿಪಂ ಸಿಇಒ ಲವೀಶ ಓರಡಿಯಾ ಸಲಹೆ ನೀಡಿದ್ದಾರೆ.

### ಎಸ್ಸೆಸ್ಸೆಲ್ಸಿ ಪರೀಕ್ಷೆ: ನಿಷೇಧಾಜ್ಞೆ ಜಾರಿ

ಬಳ್ಳಾರಿ: ಜಿಲ್ಲೆಯಾದ್ಯಂತ 65 ಕೇಂದ್ರಗಳಲ್ಲಿ ಮಾ.18ರಿಂದ ಏ.2ರವರಗೆ ಎಸ್ಸೆಸ್ಸೆಲ್ಸಿ ಪರಿಕ್ಷೆ -1 ನಡೆಯಲಿದೆ. ಪರೀಕ್ಷಾ ದಿನದಂದು ಅವ್ಯವಹಾರಗಳನ್ನು ತಡೆಗಟ್ಟಲು ಹಾಗೂ ಪರೀಕ್ಷೆಯ ಸಮಯದಲ್ಲಿ ಪರೀಕ್ಷಾ ಕೇಂದ್ರಗಳ ವ್ಯಾಪ್ತಿಯಲ್ಲಿ ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡಿಕೋಳ್ಳುವ ಹಿತದೃಷ್ಟಿಯಿಂದ ಪರೀಕ್ಷಾ ಕೇಂದ್ರಗಳ ಸುತ್ತ 200 ಮೀಟರ್ ಆವರಣವನ್ನು ಭಾರತೀಯ ನಾಗರಿಕ ಸುರಕ್ಷಾ ಸಂಹಿತಾ 2023ರ ಕಲಂ 163ರ ಅಡಿ ಮೇರೆಗೆ ನಿರ್ಬಂಧಿತ ಪ್ರದೇಶವೆಂದು ಘೋಷಿಸಿ ಜಿಲ್ಲಾ ದಂಡಾಧಿಕಾರಿ, ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್ ಕೆ. ಆದೇಶಿಸಿದ್ದಾರೆ. ಪರಿಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ಆವರಣದಲ್ಲಿನ ಜೆರಾಕ್ಸ್ ಸೆಂಟರ್ ಮತ್ತು ಇಂಟರ್ ನೆಟ್ ಸೆಂಟರ್‌ಗಳನ್ನು ಕಾರ್ಯನಿರ್ವಹಿಸದಂತೆ ಪ್ರತಿಬಂಧಿಸಲಾಗಿದೆ.
ಆ ಪ್ರದೇಶದಲ್ಲಿ ಅನಧಿಕೃತ ವ್ಯಕ್ತಿ ಮತ್ತು ವ್ಯಕ್ತಿಗಳ ಗಂಪುಗಳಿಗೆ ಪ್ರವೇಶವನ್ನು ನಿಷೇಧಿಸಿದೆ ಎಂದು ಆದೇಶ ಹೊರಡಿಸಿದ್ದಾರೆ.

## ಜಿ.ಕೆ.ಸ್ವಾಮಿ ಕಟೌಟ್ ತೆರವು: ಆಕ್ರೋಶ



**ಬಳ್ಳಾರಿ:** ಸಮಾಜ ಮುಖಿ ಕೆಲಸಗಳನ್ನು ಮಾಡುವ ಮೂಲಕ ಜನಮನ್ನಣೆ ಪಡೆದಿರುವ ಜಿ.ಕೆ. ಸ್ವಾಮಿ ಫೌಂಡೇಶನ್ ಸಂಸ್ಥಾಪಕ ಅಧ್ಯಕ್ಷ ಜಿ.ಕೆ.ಸ್ವಾಮಿ ಅವರ ಕಟೌಟ್ ಏಕಾಏಕಿ ತೆರವುಗೊಳಿಸಿ ಪ್ರಕರಣ ದಾಖಲಿಸಿರುವುದು ಅತ್ಯಂತ ಖಂಡನೀಯ ಎಂದು ಜಿ.ಕೆ. ಸ್ವಾಮಿ ಫೌಂಡೇಶನ್ ಕೋರ್ ಕಮಿಟಿ ಸದಸ್ಯ ಕರಾಟೆ ಕಟ್ಟೆಸ್ವಾಮಿ ಅವರು ಆಕ್ರೋಶ ವ್ಯಕ್ತಪಡಿಸಿದರು.

ನಗರದ ಪತ್ರಿಕಾ ಭವನದಲ್ಲಿ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸರ್ಕಾರದ ನಿಯಮಗಳನ್ನು ಉಲ್ಲಂಘಿಸಿಲ್ಲ, ಎಲ್ಲಿಂದರಲ್ಲಿ ಕಟೌಟ್, ಬ್ಯಾನರ್ ಅಳವಡಿಕೆ ಮಾಡಿಲ್ಲ, ಜಿ.ಕೆ.ಸ್ವಾಮಿ ಅವರ ಅಭಿಮಾನಿಗಳು ಅವರ ಜನ್ಮದಿನದಂದು ಸಾರ್ವಜನಿಕ ಸ್ಥಳದಲ್ಲಿ ಅಲ್ಲ, ತಮ್ಮ ಸ್ಥಳದಲ್ಲೇ ಅಳವಡಿಸಿದ್ದಾರೆ, ನಿದ್ರೆಗೆ ಜಾರಿದ್ದ ಮಹಾನಗರ ಪಾಲಿಕೆ ಅಧಿಕಾರಿಗಳು ಯಾವುದೇ ನೋಟಿಸ್ ನೀಡದೆ, ಏಕಾಏಕಿ ಸ್ಥಳಕ್ಕೆ ಆಗಮಿಸಿ, ಕಟೌಟ್ ತೆರವುಗೊಳಿಸುವ ಮುನ್ನವೇ ನಗರದ ಎಪಿಎಂಸಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ. ಇದು ಅತ್ಯಂತ ಖಂಡನೀಯ.

ಈ ಕುರಿತು ಪಾಲಿಕೆ ಅಧಿಕಾರಿಗಳನ್ನು ಪ್ರಶ್ನಿಸಿದರೆ ನಮಗೆ ಮೇಲಿಂದ ಒತ್ತಡ ಬಂತು, ಅದಕ್ಕೆ ತೆರವುಗೊಳಿಸಿದ್ದೇವೆ ಎನ್ನುತ್ತಿದ್ದಾರೆ. ಅನೇಕ ಜನ ಬಡವರಿಗೆ ತಮ್ಮ ಫೌಂಡೇಶನ್ ಕಡೆಯಿಂದ ಸಾಕಷ್ಟು ಸೇವೆ ಸಲ್ಲಿಸುತ್ತಿದ್ದಾರೆ. ಬಡಮಕ್ಕಳ ಶಿಕ್ಷಣಕ್ಕೆ ಸಾಕಷ್ಟು ಕೊಡುಗೆಗಳನ್ನು ನೀಡುವ ಮೂಲಕ ಇತರರಿಗೆ ಮಾದರಿಯಾಗಿದ್ದಾರೆ, ನಿರ್ಗತಿಕರಿಗೆ ಆರ್ಥಿಕ ನೆರವು, ಸಹಾಯ ಹಸ್ತ ನೀಡುವ ಮೂಲಕ ಇಡೀ ಬಳ್ಳಾರಿಯ ಗಮನಸೆಳೆದಿದ್ದಾರೆ ಎಂದರು.

ಶಿವ ಸ್ವಾಮಿ ಮಾತನಾಡಿ, ಸಮಾಜ ಸೇವೆ ಮಾಡುವ ಮೂಲಕ ನಮ್ಮ ಜಿ.ಕೆ. ಸ್ವಾಮಿ ಅವರು ಬೆಳೆಯುತ್ತಿರುವುದು ಕೆಲವರಿಗೆ ಸಾಗಿಸಲಾಗುತ್ತಿಲ್ಲ, ಉದ್ದೇಶ ಪೂರ್ವಕವಾಗಿಯೇ ಪ್ರಕರಣ ದಾಖಲಿಸಲಾಗಿದೆ. ಕಟೌಟ್ ಕೆಳಗಡೆ ನಂದು ಹಾಗೂ ಶೀನ ಎನ್ನುವರ ಹೆಸರಿದೆ, ನಮ್ಮ ಮೇಲೆ ಕೇಸ್ ಹಾಕಬೇಕಿತ್ತು. ಅದನ್ನು ಬಿಟ್ಟು ಜಿ.ಕೆ. ಸ್ವಾಮಿ ಅವರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ, ಇದು ಖಂಡನೀಯ ಎಂದರು.

ಜಿ.ಕೆ.ಸ್ವಾಮಿ ಅಭಿಮಾನಿಗಳಿದ್ದರು.

## ಪೊಲೀಸರಿಗೆ ಯೋಗ ತರಬೇತಿ ಅಗತ್ಯ: ಎಸ್ಪಿ




**ವಿಜಯನಗರ:** ಯೋಗ, ಧ್ಯಾನ ಮನಸ್ಸು, ಶರೀರಕ್ಕೆ ಬಹಳ ಅಗತ್ಯವಾಗಿದ್ದು, ನಿತ್ಯ ಒತ್ತಡದಲ್ಲೇ ಕರ್ತವ್ಯ ನಿರ್ವಹಿಸುವ ಪೊಲೀಸರಿಗೂ ಇದು ಬೇಕೇ ಬೇಕು. ಪತಂಜಲಿ ಯೋಗ ಸಮಿತಿಯವರು ಪೊಲೀಸರಿಗೆ ವಿಶೇಷ ಯೋಗ ಶಿಬಿರ ನಡೆಸುವ ಮೂಲಕ ಸಮಾಜದ ರಕ್ಷಕರ ಆರೋಗ್ಯ ಸುಧಾರಣೆಗೆ ನೆರವಾಗಬೇಕು ಎಂದು ಎಸ್ಪಿ ಎಸ್.ಜಾಹ್ನವಿ ಹೇಳಿದರು.

ಮಹಿಳಾ ಪತಂಜಲಿ ಯೋಗ ಸಮಿತಿ, ಪತಂಜಲಿ ಯೋಗ ಸಮಿತಿಗಳ ಆಶ್ರಯದಲ್ಲಿ ಹೊಸಪೇಟೆ ಕೊಟ್ಟೂರುಸ್ವಾಮಿ ಮಠದ ಆವರಣದಲ್ಲಿ ಭಾನುವಾರ ಸಂಜೆ ನಡೆದ ವಿಶ್ವ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ತಮ್ಮ ದೈನಂದಿನ ಕೆಲಸ ಮಾಡುತ್ತಲೇ ಆರೋಗ್ಯದ ಬಗ್ಗೆಯೂ ಕಾಳಜಿ ವಹಿಸುವ ಮಹಿಳೆಯರು ಪತಂಜಲಿ ಸಮಿತಿಯಲ್ಲಿ ಇದ್ದು, ಅವರು ಸಮಾಜಕ್ಕೆ ಆದರ್ಶರಾಗಿದ್ದಾರೆ. ಪೊಲೀಸರಿಗೆ ಸಹ ಇವರ ಸೇವೆ ಲಭಿಸಬೇಕಾಗಿದೆ ಎಂದರು.

ಪತಂಜಲಿ ಯೋಗ ಸಮಿತಿಯ ರಾಜ್ಯ ಪ್ರಭಾರಿ ಭವರ್‌ಲಾಲ್ ಆರ್ಯ ಮಾತನಾಡಿ, ಸದ್ಯದ ಜಾಗತಿಕ ಕ್ಷೋಭೆಗೆ ಯೋಗ ಉತ್ತಮ ಪರಿಹಾರ ಎಂದರು.

ಮಹಿಳಾ ಪತಂಜಲಿ ಯೋಗ ಸಮಿತಿಯ ರಾಜ್ಯ ಪ್ರಭಾರಿ ಶ್ರೀದೇವಿ ಅಶೋಕ್‌ಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಪ್ರಭಾರಿ ಗೌರಮ್ಮ ಬ್ಯಾಳಿ ಅವರು ಯೋಗದಿಂದ ತಮ್ಮ ಅನಾರೋಗ್ಯ ಮೆಟ್ಟಿನಿಂತಿದ್ದನ್ನು ಹಾಗೂ ತಮ್ಮ ಪಿಂಚಣಿ ದುಡ್ಡನ್ನು ಸಂಪೂರ್ಣ ಯೋಗ ಸಂಬಂಧಿತ ಕೆಲಸಗಳಿಗೇ ಮೀಸಲಿಟ್ಟಿದ್ದನ್ನು ತಿಳಿಸಿದರು.

ಇದೇ ವೇಳೆ ಹಲವು ವರ್ಷಗಳಿಂದ ಯೋಗವನ್ನು ಬೋಧಿಸುತ್ತ, ಸಾವಿರಾರು ಮಂದಿಗೆ ಯೋಗದ ಗುಟ್ಟು ಹೇಳಿಕೊಟ್ಟ ಮಹಿಳಾ ಯೋಗ ಸಾಧಕರಾದ ಉಮಾ ವಿಶ್ವನಾಥ್, ದಾಕ್ಷಾಯಿಣಿ ಶಿವಕುಮಾರ್, ರೇಣುಕಾ ಪಾಟೀಲ, ರೇಣುಕಾ ಪರಗಿ, ಗೌರಮ್ಮ ಬ್ಯಾಳಿ ಮತ್ತು ಮಂಗಳಮ್ಮ ಅವರನ್ನು ಸನ್ಮಾನಿಸಲಾಯಿತು. ಜತೆಗೆ ಹಲವು ಯೋಗ ಕೇಂದ್ರಗಳಲ್ಲಿ ಸಕ್ರಿಯರಾಗಿರುವ ಮಹಿಳೆಯರನ್ನು ಗೌರವಿಸಲಾಯಿತು. ಯೋಗ ನೃತ್ಯ ಸಹಿತ ಹಲವು ಸಾಂಸ್ಕೃತಿಕ ಕಾರ್ಯಕ್ರಮಗಳು ಮನರಂಜಿಸಿದವು.

ಅನಂತ ಜೋಶಿ ಸ್ವಾಗತಿಸಿದರು. ಪ್ರೊ.ಎಫ್.ಟಿ.ಹಳ್ಳಿಕೇರಿ ಪ್ರಾಸ್ತಾವಿಕ ಮಾತನಾಡಿದರು. ರಾಘವೇಂದ್ರ ಜಮಖಂಡಿಕರ್ ವಂದಿಸಿದರು. ಶೈಲಜಾ ಕಳಕಪ್ಪ ನಿರೂಪಿಸಿದರು. ಪತಂಜಲಿ ಯೋಗ ಸಮಿತಿಯ ಅಜೀವ ಸದಸ್ಯರು, ಯೋಗ ಸಾಧಕರಾದ ಕಿರಣ್ ಕುಮಾರ್, ಬಾಲಚಂದ್ರ ಶರ್ಮಾ, ರಾಜೇಶ್ ಕಾರ್ವಾ, ವಿಠೋಬಣ್ಣ, ವೀರೇಶ್ ಇತರರು ಇದ್ದರು.

## ಶಾಲೆಗೆ ಬಂತು ಗ್ಯಾಸ್: ಮಕ್ಕಳಲ್ಲಿ ಸಂತಸ



ದಿಗಂತ ವರದಿ ಪರಿಣಾಮ

**ಕುರುಗೋಡು:** 'ಶಾಲೆಯಲ್ಲಿ ಬಿಸಿಯೂಟಕ್ಕೆ ಸೌದೆ ಒಲೆಯೇ ಗತಿ' ಎಂದು ಶಿರ್ಷಿಕೆಯಡಿ ಸೋಮವಾರ ವರದಿಗೆ ಬೆನ್ನಲೇ ಶಿಕ್ಷಣ ಇಲಾಖೆ ಹಾಗೂ ಅಕ್ಷರದಾಸೋಹದ ಅಧಿಕಾರಿಗಳು ಎಚ್ಚೆತ್ತು ಶಾಲೆಗೆ ಗ್ಯಾಸ್ ಪೂರೈಸಿದರು.

ತಾಲೂಕಿನ ಎಚ್. ವೀರಾಪುರ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಮಂಗಳವಾರ ಮಕ್ಕಳ ಪಾಲಕರು ಹಾಗೂ ಶಿಕ್ಷಣ ಪ್ರೇಮಿಗಳು ಸಂತಸ ವ್ಯಕ್ತಪಡಿಸಿದ್ದಾರೆ.

ಈ ವರದಿಗೆ ತಾಲೂಕು ಅಕ್ಷರದಾಸೋಹದ ಸಹಾಯಕ ನಿರ್ದೇಶಕ ಶಿವನಾಯಕ್ ಹಾಗೂ ಕುರುಗೋಡು ಬಿಒ ಟಿ.ಎಂ. ಸಿದ್ದಲಿಂಗಮೂರ್ತಿ ವರದಿಗೆ ಸ್ಪಂದಿಸಿದ್ದಾರೆ.

## ತುಂಗಭದ್ರಾ ಎಲ್‌ಎಲ್‌ಸಿ ಕಾಲುವೆಗೆ ನೀರು ಹರಿಸಿ

**ಬಳ್ಳಾರಿ:** ಲಕ್ಷಾಂತರ ರೈತರ ಜೀವನಾಡಿ ತುಂಗಭದ್ರಾ ಜಲಾಶಯದಿಂದ ಬಲದಂಡೆಯ ಕೆಳಮಟ್ಟದ ಕಾಲುವೆ (ಎಲ್‌ಎಲ್‌ಸಿ)ಗೆ ನೀರು ಬಿಡುಗಡೆ ಮಾಡಿಸಬೇಕು ಎಂದು ಒತ್ತಾಯಿಸಿ ಇಲ್ಲಿನ ತುಂಗಭದ್ರಾ ರೈತ ಸಂಘದ ಪದಾಧಿಕಾರಿಗಳು ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ ಅವರಿಗೆ ಮಂಗಳವಾರ ಮನವಿ ಸಲ್ಲಿಸಿದರು.

ಸಂಘದ ಸಂಸ್ಥಾಪಕ ಅಧ್ಯಕ್ಷ ಡಾ.ಜಿ.ಪುರುಷೋತ್ತಮ ಗೌಡ ಅವರು ಮಾತನಾಡಿ, ಕಳೆದ ನ.14ರಂದು ಬೆಂಗಳೂರಿನ ವಿಧಾನಸೌಧದಲ್ಲಿ ನಡೆದ ನೀರಾವರಿ ಸಲಹಾ ಸಮಿತಿ ಸಭೆಯಲ್ಲಿ, ಜಲಾಶಯಕ್ಕೆ ಹೊಸ ಗೇಟ್‌ಗಳನ್ನು ಅಳವಡಿಸುವ ಹಿನ್ನೆಲೆಯಲ್ಲಿ ಬೇಸಿಗೆ ಬೆಳೆಗಳಿಗೆ ನೀರು ನೀಡಲು ಸಾಧ್ಯವಿಲ್ಲ ಎಂದು ತಿಳಿಸಲಾಗಿತ್ತು. ಆದರೆ, ಕುಡಿಯುವ ನೀರಿಗಾಗಿ 20.03.2026ರಿಂದ ಎಲ್ಲ ಕಾಲುವೆಗಳಿಗೆ ನೀರು ಬಿಡುವ ತೀರ್ಮಾನ ಕೈಗೊಳ್ಳಲಾಗಿದೆ. ಸಭೆಯ ತೀರ್ಮಾನಕ್ಕಿಂತ ಮುಂಚೆ ಮಾ.16 ರಂದು ಎಡದಂಡೆ ಕಾಲುವೆಗೆ ಮಾತ್ರ ನೀರು ಬಿಡುಗಡೆ ಮಾಡಲಾಗಿದೆ. ಆದರೆ, ಬಲದಂಡೆಯ ಕೆಳಮಟ್ಟದ ಕಾಲುವೆ ವ್ಯಾಪ್ತಿಯ ಕಂಪ್ಲಿ, ಕುರುಗೋಡು, ಸಿರುಗುಪ್ಪ ಹಾಗೂ ಬಳ್ಳಾರಿ ತಾಲ್ಲೂಕುಗಳಲ್ಲಿ ತೀವ್ರ ನೀರಿನ ಅಭಾವ ಉಂಟಾಗಿದೆ ಎಂದು ಹೇಳಿದರು. ವಿವಿಧ ರೈತ ಮುಖಂಡರಿದ್ದರು.

## ಇಂದಿನಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆ-1: ಕಟ್ಟೆಚ್ಚರ

**ಕಲಬುರಗಿ:** ಪ್ರಸಕ್ತ 2025-26ನೇ ಶೈಕ್ಷಣಿಕ ಎಸ್ಸೆಸ್ಸೆಲ್ಸಿ ಪರೀಕ್ಷೆ-1 ಇಂದಿನಿಂದ ಏಪ್ರಿಲ್ 2ರ ವರೆಗೆ ಕಲಬುರಗಿ ಜಿಲ್ಲೆಯ 141 ಪರೀಕ್ಷಾ ಕೇಂದ್ರಗಳಲ್ಲಿ ಜರುಗಲಿದ್ದು, ಪರೀಕ್ಷೆ ಮೇಲೆ ತೀವ್ರ ಕಟ್ಟೆಚ್ಚರ ವಹಿಸುವ ಮೂಲಕ ಪರೀಕ್ಷೆ ಸುಸೂತ್ರವಾಗಿ ಮತ್ತು ಯಾವುದೇ ರೀತಿಯ ನಕಲು ಮತ್ತು ಚಟುವಟಿಕೆಗಳಿಗೆ ಮಾಡಲು ಅವಕಾಶ ನೀಡದಂತೆ ಜಿಲ್ಲಾಡಳಿತ ಸಕಲ ಸಿದ್ಧತೆ ಮಾಡಿಕೊಂಡಿದೆ.

ಜಿಲ್ಲಾದ್ಯಂತ ಒಟ್ಟು 51,744 ವಿದ್ಯಾರ್ಥಿಗಳು ಎಸ್ಸೆಸ್ಸೆಲ್ಸಿ ಪರೀಕ್ಷೆ-1 ಬರೆಯಲಿದ್ದು, ಎಲ್ಲಿಯೂ ನಕಲು ಪ್ರಕರಣ ವರದಿಯಾದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಅಧಿಕಾರಿಗಳಿಗೆ ಎಚ್ಚರಿಕೆ ನೀಡಲಾಗಿದೆ. ಪರೀಕ್ಷೆ ಸುಗಮವಾಗಿ ನಡೆಯುವ ಸಂಬಂಧ 141 ಪರೀಕ್ಷಾ ಕೇಂದ್ರಕ್ಕೆ ತಲಾ ಒಬ್ಬರಂತೆ ಸ್ಥಳೀಯ ಜಾಗೃತ ಸದಸ್ಯರನ್ನು ನೇಮಿಸಲಾಗಿದೆ. ಪ್ರಶ್ನೆ ಪತ್ರಿಕೆ ಸರಬರಾಜಿಗೆ 53 ಜನ ಅಧಿಕಾರಿಗಳನ್ನು ಮಾರ್ಗಾಧಿಕಾರಿಯನ್ನಾಗಿ ನೇಮಿಸಿದೆ.

ಪರೀಕ್ಷೆ ಹಿನ್ನೆಲೆಯಲ್ಲಿ ಕೇಂದ್ರದ 200 ಮೀಟರ್ ಸುತ್ತ ನಿಷೇಧಾಜ್ಞೆ ಜಾರಿ ಮಾಡಲಾಗಿದೆ. ಝುರಾಕ್ಸ್-ಪುಸ್ತಕ ಅಂಗಡಿ ಮುಚ್ಚುವಂತೆ ಆದೇಶಿಸಲಾಗಿದೆ. ಒಟ್ಟಾರೆಯಾಗಿ ಪರೀಕ್ಷೆಯು ಸುಸೂತ್ರವಾಗಿ ನಡೆಯುವಂತೆ ಎಲ್ಲಾ ಪರೀಕ್ಷೆಗೆ ಸಂಬಂದಿಸಿದ ಅಧಿಕಾರಿ-ಸಿಬ್ಬಂದಿಗಳು ಎಚ್ಚರಿಕೆಯಿಂದ ಕಾರ್ಯ ನಿರ್ವಹಿಸಬೇಕೆಂದು ಸಂಬಂಧ ಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

ಆತ್ಮವಿಶ್ವಾಸ, ಸಂಯಮದಿಂದ ಹಾಗೂ ಆರೋಗ್ಯ ಮತ್ತು ಮಾನಸಿಕ ಸಮತೋಲನ ಕಾಯ್ದುಕೊಂಡು ಪರೀಕ್ಷೆಯನ್ನು ಹಬ್ಬದಂತೆ ಭಾವಿಸಿ, ಪೂರ್ವ ಸಿದ್ಧತೆಯೊಂದಿಗೆ ಅಗತ್ಯ ವಸ್ತುಗಳ ಪ್ರವೇಶ ಪತ್ರಿಕೆಯೊಂದಿಗೆ ಪ್ರಸನ್ನಚಿತ್ತರಾಗಿ ಪರೀಕ್ಷೆ ಬರೆದು ಬನ್ನಿ, ಎಲ್ಲ ಪ್ರೀತಿಯ ವಿದ್ಯಾರ್ಥಿಗಳಿಗೆ ನನ್ನ ಶುಭ ಹಾರೈಕೆಗಳು.
■ ಫೌಜಿಯಾ ತರನ್ನುಮ್, ಜಿಲ್ಲಾಧಿಕಾರಿ

ಪರೀಕ್ಷೆಸುಸೂತ್ರವಾಗಿ ನಡೆಯುವ ನಿಟ್ಟನಲ್ಲಿ ಪರೀಕ್ಷಾ ಕೇಂದ್ರದಲ್ಲಿ ಮೊಬೈಲ್ ಸೇರಿದಂತೆ ಎಲ್ಲಾ ರೀತಿಯ ಎಲೆಕ್ಟ್ರಾನಿಕ್ ಸಾಧನಗಳ ಬಳಕೆ ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಪ್ರತಿ ಕೇಂದ್ರದಲ್ಲಿ ಸಿಸಿಟಿವಿ ಕಣ್ಗಾವಲಿನಲ್ಲಿ ಪರೀಕ್ಷೆ ನಡೆಯಲಿದ್ದು, ವಿಶೇಷವಾಗಿ ಜಿಲ್ಲಾ ಕೇಂದ್ರದಿಂದ ವೆಬ್‌ಕಾಸ್ಟಿಂಗ್ ಮೂಲಕ ಪರೀಕ್ಷೆ ಮೇಲ್ವಿಚಾರಣೆ ಮಾಡಲಾಗುತ್ತಿದೆ. ಇದಕ್ಕಾಗಿ 25 ತಂಡಗಳನ್ನು ರಚಿಸಿ ಪರೀಕ್ಷಾ ಕೇಂದ್ರಗಳನ್ನು ಹಂಚಿಕೆ ಮಾಡಲಾಗಿದೆ ಎಂದು ಅಪರ ಜಿಲ್ಲಾಧಿಕಾರಿಗಳು ತಿಳಿಸಿದರು.

## ಅಕ್ರಮ ಗೋವು ಸಾಗಾಟ ತಡೆಗೆ ಆಗ್ರಹಿಸಿ ಮನವಿ



**ಹಗರಿಬೊಮ್ಮನಹಳ್ಳಿ:** ಅಕ್ರಮ ಗೋವುಗಳ ಸಾಗಾಟ ಮತ್ತು ಗೋಹತ್ಯೆ ತಡೆಯಲು ಆಗ್ರಹಿಸಿ ಹಿಂದೂ ಜನ ಜಾಗೃತಿ ಸಮಿತಿಯ ವತಿಯಿಂದ ರಾಜ್ಯ ಗೃಹ ಸಚಿವರಿಗೆ ತಲುಪಿಸಲು ಉಪ ತಹಶೀಲ್ದಾರ್ ಶಿವಕುಮಾರ್‌ಗೌಡ ಅವರಿಗೆ ಮನವಿ ಸಲ್ಲಿಸಲಾಯಿತು.

ಹಿಂದೂ ಜನ ಜಾಗೃತಿ ಸಮಿತಿಯ ಸಂಚಾಲಕಿ ಪೂಜಾ ಶ್ರೀಕಾಂತ್ ಮಾತನಾಡಿ, ಹಿಂದೂ ಧರ್ಮದ ಪರಂಪರೆಯ ಪ್ರಕಾರ ಹಸುವನ್ನು ಗೋಮಾತೆ ಎಂದು ಪೂಜಿಸಲಾಗುತ್ತದೆ. ಗೋವುಗಳನ್ನು ಧಾರ್ಮಿಕವಾಗಿ ದೇವತೆಯ ಸ್ವರೂಪವೆಂದು ಗೌರವಿಸಲಾಗುತ್ತದೆ. ಭಗವಾನ್ ಶ್ರೀಕೃಷ್ಣನು ಸಹ ಗೋಮಾತೆಯ ರಕ್ಷಣೆಗೆ ಹಾಗೂ ಪಾಲನೆಗೆ ಮಹತ್ವ ನೀಡಿದ್ದಾನೆ. ಇದರ ಜೊತೆಗೆ ಗೋವುಗಳು ಕೃಷಿ ಹಾಗೂ ಗ್ರಾಮೀಣ ಆರ್ಥಿಕ ವ್ಯವಸ್ಥೆಯ ಪ್ರಮುಖ ಆಧಾರವಾಗಿವೆ. ಆದ್ದರಿಂದ ಗೋಹತ್ಯೆ ತಡೆಗೆ ಕ್ರಮವಹಿಸಲು ಒತ್ತಾಯಿಸಿದರು.

ಅಕ್ಕಿ ಬಸವರಾಜ ಮಾತನಾಡಿ, ರಂಜಾನ್ ಹಬ್ಬಗಳ ಸಮಯದಲ್ಲಿ, ರಾಜ್ಯದ ವಿವಿಧ ಭಾಗಗಳಲ್ಲಿ ಅಕ್ರಮವಾಗಿ ಗೋವು ಸಾಗಾಟ ಮತ್ತು ಗೋಹತ್ಯೆ ನಡೆಯುತ್ತಿರುವುದಾಗಿ ವರದಿಗಳು ಹಾಗೂ ಸುದ್ದಿಗಳ ಮೂಲಕ ತಿಳಿದು ಬರುತ್ತಿದೆ. ಕೆಲವು ಸ್ಥಳಗಳಲ್ಲಿ ರಸ್ತೆ ಬದಿಗಳಲ್ಲಿ ಅಥವಾ ಸಾರ್ವಜನಿಕ ಸ್ಥಳಗಳಲ್ಲಿ ಪ್ರಾಣಿಗಳ ವಧೆ ನಡೆಯುವುದು ಕಂಡುಬಂದಿದ್ದು, ಇದರಿಂದ ಸಾರ್ವಜನಿಕ ಆರೋಗ್ಯ, ಪರಿಸರ ಹಾಗೂ ಕಾನೂನು-ಸುವ್ಯವಸ್ಥೆಗೆ ಸಂಬಂಧಿಸಿದ ಸಮಸ್ಯೆಗಳು ಉಂಟಾಗುವ ಸಾಧ್ಯತೆ ಇದೆ ಗೋಹತ್ಯೆ ನಿಷೇಧ ಕಾಯ್ದೆ ಅಡಿ ಗೋಹತ್ಯೆ ನಿಷೇಧಕ್ಕೆ ಕ್ರಮ ವಹಿಸಬೇಕು ಎಂದು ಒತ್ತಾಯಿಸಿದರು.

ವೈ.ವೀರಪ್ಪ ಸೋಗಿ ಮಾತನಾಡಿ, ರಾಜ್ಯ ಸರ್ಕಾರ ಈಗಾಗಲೇ ಗೋಹತ್ಯೆಯನ್ನು ತಡೆಯಲು ಕಾನೂನುಗಳನ್ನು ಜಾರಿಗೆ ತಂದಿದೆ. ಆದಾಗ್ಯೂ ಅಕ್ರಮ ಚಟುವಟಿಕೆಗಳನ್ನು ಸಂಪೂರ್ಣವಾಗಿ ತಡೆಯಲು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವುದು ಅಗತ್ಯವಾಗಿದೆ ಎಂದು ಆಗ್ರಹಿಸಿದರು.

ಎ.ಎಂ.ಪೂರ್ಣಯ್ಯ, ಎಸ್.ತಿಪ್ಪೇಸ್ವಾಮಿ, ನಾಗಭೂಷಣ ಗದ್ದಿಕೇರಿ, ಪ್ರಮೋದ ಎಸ್.ಮೇಘರಾಜ, ಮಾಲವಿ ಮಲ್ಲಿಕಾರ್ಜುನ, ಹಿರಾಳು ಶರಣಪ್ಪ, ಆರ್.ಬಿ.ಚೆನ್ನಬಸಪ್ಪ, ರಾಮಪ್ಪ, ಮಲ್ಲಿಕಾರ್ಜುನ, ಚಂದ್ರಮೌಳಿ, ಶಿವರಾಜ, ಮಲ್ಲಪ್ಪ, ಶಿವಪುತ್ರಪ್ಪ, ತೋಟಪ್ಪ ಕರಣಿ, ಅರವಿಂದ ಇತರರಿದ್ದರು.

## ಗುತ್ತಿಗೆದಾರರ ಬಾಕಿ ಬಿಲ್ ಪಾವತಿಗೆ ಮನವಿ

**ಬೀದರ್:** ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವಿವಿಧ ಯೋಜನೆಗಳಡಿ ಕೈಗೊಂಡಿರುವ ಕಾಮಗಾರಿಗಳ ಬಾಕಿ ಬಿಲ್‌ಗಳನ್ನು ಶೀಘ್ರ ಪಾವತಿಸಲು ಕ್ರಮ ಕೈಗೊಳ್ಳುವಂತೆ ಮಹಾನಗರ ಪಾಲಿಕೆ ಗುತ್ತಿಗೆದಾರರ ಸಂಘದ ವತಿಯಿಂದ ಪೌರಾಡಳಿತ ಹಾಗೂ ಹಜ್ ಸಚಿವ ರಹೀಂ ಖಾನ್ ಅವರಿಗೆ ಮನವಿ ಸಲ್ಲಿಸಲಾಯಿತು.

ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಗುತ್ತಿಗೆದಾರರು ವಿವಿಧ ಯೋಜನೆಗಳಡಿ ಕಾಮಗಾರಿಗಳನ್ನು ಸಂಪೂರ್ಣವಾಗಿ ಪೂರ್ಣಗೊಳಿಸಿ ಸುಮಾರು ಒಂದು ವರ್ಷ ಕಳೆದಿದ್ದರೂ ಸಹ ಸಂಬಂಧಿಸಿದ ಬಿಲ್‌ಗಳು ಇನ್ನೂ ಪಾವತಿಯಾಗಿಲ್ಲ, ಸಣ್ಣ ಗುತ್ತಿಗೆದಾರರು ಸಾಲ ಪಡೆದು ಕಾಮಗಾರಿಗಳನ್ನು ಪೂರ್ಣಗೊಳಿಸಿರುವುದರಿಂದ ಬಿಲ್ ಪಾವತಿಯಲ್ಲಿ ವಿಳಂಬವಾಗುತ್ತಿರುವುದು ಆರ್ಥಿಕ ಸಂಕಷ್ಟಕ್ಕೆ ಕಾರಣವಾಗಿದೆ ಎಂದು ಮನವಿಯಲ್ಲಿ ತಿಳಿಸಲಾಗಿದೆ.

ಸಂಘದ ಅಧ್ಯಕ್ಷ ಬುದ್ಧ ಪ್ರಕಾಶ ಭಾವಿಕಟ್ಟಿ, ಪ್ರಧಾನ ಕಾರ್ಯದರ್ಶಿ ಮೊಹ್ಮದ್ ಅನ್ವರ್, ಗೌರವಾಧ್ಯಕ್ಷರಾದ ಶಿವಾನಂದ ಕೆ.ಪಾಟೀಲ ಮತ್ತು ಖಾಜಾ ಶೇಖ್ ಸಲೀಮ್, ಮಹದೇವ ಸ್ವಾಮಿ, ಮಹೇಶ ಚಿಂತಾಮಣಿ, ಕಾನೂನು ಸಲಹೆಗಾರ ಎಂಡಿ ಲೈಕ್ ಇಮ್ರಾನ್ (ವಕೀಲರು), ಮತ್ತು ಸಹ ಕಾರ್ಯದರ್ಶಿ ಅಬ್ದುಲ್ ಹಮೀದ್, ಸೇರಿದಂತೆ ಸಂಘದ ಸದಸ್ಯರು ಉಪಸ್ಥಿತರಿದ್ದರು.



## ಬಸವಣ್ಣ ಜಗತ್ತಿನ ಶ್ರೇಷ್ಠ ದಾರ್ಶನಿಕ: ಶ್ರೀಗಳು



**ಕೊಟ್ಟೂರು:** ಇಡೀ ಜಗತ್ತಿನ ಸರ್ವ ಶ್ರೇಷ್ಠ ದಾರ್ಶನಿಕರಲ್ಲಿ ವಿಶ್ವಗುರು ಬಸವಣ್ಣನವರು ಅಗ್ರಪಂಕ್ತಿಯಲ್ಲಿ ನಿಲ್ಲುತ್ತಾರೆ ಎಂದು ಶ್ರೀಕಟ್ಟಿಮನಿ ಹಿರೇಮಠದ ಯೋಗಿರಾಜೇಂದ್ರ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಕೊಟ್ಟೂರಿನ ಭೂತ ಭುಜಂಗ ಸ್ವಾಮಿ ಮಠದಲ್ಲಿ ಕೊಟ್ಟೂರು ತಾಲೂಕು ಶರಣ ಸಾಹಿತ್ಯ ಪರಿಷತ್ ವತಿಯಿಂದ ನಡೆದ ಲಿಂಗೈಕ್ಯ ಶ್ರೀಭದ್ರ ಶೆಟ್ಟಿ ಕೊಟ್ರಬಸಪ್ಪ ಮತ್ತು ಲಿಂಗೈಕ್ಯ ಭದ್ರಶೆಟ್ಟಿ ಶಾರದಮ್ಮ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿದರು.

ಶರಣ ಸಾಹಿತ್ಯ ಪ್ರಸಾರ ಮತ್ತು ಪ್ರಚಾರ ಮಾಡಲು ಸುತ್ತೂರು ಶ್ರೀಗಳು ಸ್ಥಾಪಿಸಿದ ಶರಣ ಸಾಹಿತ್ಯ ಪರಿಷತ್ ನಡೆಸುತ್ತಿರುವ ಸಮಾಜಮುಖಿ ಕಾರ್ಯಕ್ರಮಗಳು ಇಂದಿನ ಸಮಾಜಕ್ಕೆ ಪ್ರಸ್ತುತವಾಗಿವೆ ಎಂದರು.

ಉದ್ಘಾಟನೆ ನೆರವೇರಿಸಿ ಮಾತನಾಡಿದ ವಿಜಯನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಪ್ರಧಾನ ಕಾರ್ಯದರ್ಶಿಗಳಾದ ಎನ್.ಎಂ.ರವಿಕುಮಾರ್ ಅವರು ಶರಣ ಸಾಹಿತ್ಯ ಪ್ರಸಾರ ಪ್ರಚಾರಕ್ಕೆ ದತ್ತಿ ದಾಸೋಹಿಗಳ ಕೊಡುಗೆ ಅಪೂರ್ವವಾದದು, ಹಾಗಾಗಿ ಪರಿಷತ್ತು ಅವರನ್ನು ಸದಾ ಸ್ಮರಿಸುತ್ತದೆ. ಇಂದಿನ ಪೀಳಿಗೆಗೆ ಶರಣ ಸಾಹಿತ್ಯ ಪ್ರಸಾರ ಮಾಡಲು ಇಂತಹ ದತ್ತಿ ಕಾರ್ಯಕ್ರಮಗಳು ಪ್ರಯೋಜನಕಾರಿಯಾಗಿವೆ ಎಂದರು.

ಯುವ ಉದ್ಯಮಿ ಅಂಗಡಿ ಪಂಪಾಪತಿ, ನಮ್ಮ ದುಡಿಮೆಯ ಒಂದು ಭಾಗವನ್ನು ಇಂತಹ ಶರಣ ಸಾಹಿತ್ಯ ಪ್ರಸಾರ ಪ್ರಚಾರಕ್ಕೆ ಬಳಸಿದ್ದೆ ಆದರೆ ನಮ್ಮ ಜೀವನ ಸಾರ್ಥಕತೆ ಹೊಂದುತ್ತದೆ, ನಾವೆಲ್ಲರೂ ಶರಣ ಮಾರ್ಗದಲ್ಲಿ ನಡೆದಾಗ ನೆಮ್ಮದಿಯುತ ಜೀವನ ನಮ್ಮದಾಗುತ್ತದೆ ಎಂದರು.

'ಜೇಡರ ದಾಸಿಮಯ್ಯನವರ ವಚನಗಳ ಚಿಂತನೆಗಳು' ಕುರಿತು ಶಿಕ್ಷಕ ಕೋಡಿಹಳ್ಳಿ ವೀರಭದ್ರಪ್ಪ ಉಪನ್ಯಾಸ ನೀಡಿದರು.

ತಾಲೂಕು ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ದೇವರಮನಿ ಕರಿಯಪ್ಪ, ತಾಲೂಕು ಕದಳಿ ಮಹಿಳಾ ವೇದಿಕೆ ಅಧ್ಯಕ್ಷ ಎಂ.ಸುಜಾತಾ, ತಾಲೂಕು ಯುವ ಘಟಕದ ಅಧ್ಯಕ್ಷ ಜೆ.ಎಂ.ಸುಧೀಂದ್ರ ಮಾತನಾಡಿದರು.

ದತ್ತಿ ದಾಸೋಹಿಗಳಾದ ಭದ್ರ ಶೆಟ್ಟಿ ಅಕ್ಕಮಹಾದೇವಿ, ಜೀವನ ಗೌಡ, ಭದ್ರ ಶೆಟ್ಟಿ ರಾಜೇಶ್ವರಿ, ವಾಮದೇವಪ್ಪ, ಭದ್ರಶೆಟ್ಟಿ ಚನ್ನವೀರೇಶ ಉಪಸ್ಥಿತರಿದ್ದರು. ಕಾರ್ಯದರ್ಶಿ ಹೊಂಬಾಳೆ ಮಂಜುನಾಥ್ ನಿರ್ವಹಿಸಿದರು.